ಡಿ . ವಿ . ಗುಂಡಪ್ಪ

29



ಜ್ಞಾಪಕಚಿತ್ರಶಾಲೆ – ೫

ವೈದಿಕಧರ್ಮ ಸಂಪ್ರದಾಯಸ್ಥರು

ಮುಖಪುಟ

ಜ್ಞಾಪಕಚಿತ್ರಶಾಲೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

e-Book
029v1.0.0
Date: October 10, 2018
ISBN: 9788193777947
Created by: Sriranga Digital Software Technologies Private Limited
srirangadigital.com

ಅರಿಕೆ

ನಮ್ಮ ಸಮಾಜದ ಒಂದು ಅಳಿದುಹೋಗುತ್ತಿರುವ ಭಾಗವು ಹೇಗೆ ಬದುಕಿ ಬಾಳಿತು ಎಂಬುದನ್ನು ಗುರುತುಮಾಡಿಕೊಡುವ ಪ್ರಯತ್ನ ಈ ಮುಂದಣ ಪುಟಗಳದು.

ಬಡತನದಲ್ಲಿ ಭಾಗ್ಯವಂತಿಕೆಯನ್ನು ಅನುಭವಿಸುತ್ತಿದ್ದದ್ದು ಆ ಸಮಾಜಭಾಗದ ಮುಖ್ಯ ಲಕ್ಷಣ. ಆ ಭಾಗ್ಯ ಬ್ಯಾಂಕುಗಳ ಲೆಕ್ಕಕ್ಕೆ ಸಿಕ್ಕುವುದಲ್ಲ. ಧನಕನಕಗಳನ್ನು ಎಣಿಸಲೊಲ್ಲದ್ದು ಆ ಶ್ರೀಮಂತಿಕೆ. ಅದು ಅಂತರಾತ್ಮದ ಶ್ರೀಮಂತಿಕೆ. ಒಳಸಂಪತ್ತಿನ ನೆಮ್ಮದಿಯಲ್ಲಿ ಹೊರಸಂಪತ್ತಿನ ಕೊರತೆಯನ್ನು ಮರೆತಿದ್ದವರು ಆ ಜನ.

ನಮ್ಮ ದೇಶಕ್ಕೆ ಬಂದ ಪರದೇಶದ ಕ್ರಿಶ್ಚಿಯನ್ ಪಾದರಿಗಳು ನಮ್ಮವರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಬೇಕೆಂಬ ಉದ್ದೇಶವುಳ್ಳವರಾಗಿ, ನಮ್ಮ ಮತ ಸಂಪ್ರದಾಯಗಳನ್ನು 'ಪುರೋಹಿತರ ಕೈವಾಡ' (Priestcraft,) 'ಮೂಢವಿಶ್ವಾಸ' (Superstition)ಎಂದು ಮೊದಲಾಗಿ ಹಳಿದು ಹಾಸ್ಯಮಾಡಿದ್ದು ಸ್ವಾಭಾವಿಕವಾಯಿತಷ್ಟೆ. ಅವರನ್ನು ಅನುಕರಿಸಿಕೊಂಡು ನಮ್ಮವರೇ ಆದ ಹಲವರರು ವಿದ್ಯೋನ್ನತರು ವೈದಿಕರನ್ನು ಅಸಡ್ಡೆಯಿಂದ ಕಂಡರು. ವೈದಿಕ ಜನದ ವಿಷಯದಲ್ಲಿ ಇನ್ನೊಂದು ದೃಷ್ಟಿ ಸಾಧ್ಯವಿದೆ. ಅವರಿಂದಲೂ ಸಮಾಜಕ್ಕೆ ಉಪಯೋಗವಾಗಿದೆ-ಎಂಬುದು ಇಲ್ಲಿಯ ತಾತ್ಪರ್ಯ.

ಈ ಲೇಖನಮಾಲೆ ಮೊದಲು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಪ್ರಕಟವಾಯಿತು. ನಮ್ಮ ಕಾಲದಲ್ಲಿ ಇಂಥ ಹಳೆಯ ಕಂದಾಚಾರದ ಕಥೆಯನ್ನು ಓದಬೇಕೆಂದು ಅಪೇಕ್ಷೆಪಡುವ ಜನ ನಮ್ಮಲ್ಲಿ ಇನ್ನೂ ಇದ್ದಾರೆಂದರೆ ಅದು ನನಗೆ ಸೋಜಿಗದ ಸಂಗತಿ, ಮತ್ತು ಸಂತೋಷಕರವಾದ ಸೋಜಿಗ ಅದು. 'ಕನ್ನಡ ಪ್ರಭ' ಪತ್ರಿಕೆಯ ಸಂಪಾದಕರು ಇದಕ್ಕೆ ಆಶ್ರಯಕೊಟ್ಟದ್ದರಿಂದ ಈ ವಿಷಯದಲ್ಲಿ ಕುತೂಹಲವುಳ್ಳ ಜನ ಕೆಲಮಂದಿಯಾದರೂ ಇದ್ದಾರೆಂದು ನಾನು ಊಹಿಸಿಕೊಂಡು ಸಂತೋಷಪಟ್ಟಿದ್ದೇನೆ. ಆ ಸಂಪಾದಕರಿಗೆ ಕೃತಜ್ಞನಾಗಿದ್ದೇನೆ.

ನಮ್ಮ ಚಿರಂಜೀವಿ ಶ್ರೀ ಎಸ್. ಆರ್. ರಾಮಸ್ವಾಮಿ ಈ ಸಣ್ಣ ಪ್ರಬಂಧಗಳನ್ನು ಬರಹಮಾಡಿ ಪರಿಷ್ಕರಿಸಿ ಅಣಿಮಾಡಿಕೊಟ್ಟಿದ್ದಾನೆ.

ಈ ಪುಸ್ತಕದಲ್ಲಿ ಎಲ್ಲವೂ ಎಲ್ಲರಿಗೂ ಸಮಾನವಾಗಿ ಇಷ್ಟವಾದೀತೆಂದು ಅಂದುಕೊಂಡಿಲ್ಲ. ಕೆಲಕೆಲವರಿಗೆ ಕೆಲಕೆಲವು ಅಂಶ ಕೊಂಚಕೊಂಚ ಹೊತ್ತು ಇಷ್ಟವಾಗಬಹುದು.

ವಾಕ್ಯಶೈಲಿಯ ವಿಷಯದಲ್ಲಿ ಒಂದು ಮಾತು. ಚಿ ॥ ರಾಮಸ್ವಾಮಿ ಬರೆಯಲು ಕುಳಿತುಕೊಂಡಾಗ ನನ್ನ ಬಾಯಿಗೆ ಯಾವ ಮಾತು ಸಿದ್ಧವಾಗಿ ಸಿಕ್ಕಿತೋ ಅದೇ ಮಾತು; ವಾಕ್ಯ ಆ ಹೊತ್ತಿನಲ್ಲಿ ಹೇಗೆಹೇಗೆ ತಿರುಗಿಕೊಂಡಿತೋ ಅದೇ ವಾಕ್ಯರಚನೆ. ಒಂದು ಹೆಚ್ಚಿನ ಜಾಗರೂಕತೆಯಾಗಲಿ ಅಲಂಕಾರವಾಗಲಿ ಈ ಬರವಣಿಗೆಯಲ್ಲಿ ಕಾಣಲಾರದು. ವಸ್ತು ಹೇಗೋ ವಾಕ್ಯವೂ ಹಾಗೆ ಸ್ವಾಭಾವಿಕ.

ಈ ಪುಸ್ತಕದಲ್ಲಿಯ ಚಿತ್ರಗಳನ್ನು ಬಹು ಕುತೂಹಲದಿಂದ ಸಂಪಾದಿಸಿದ್ದಾಗಿದೆ. ಕೆಲವು ಚಿತ್ರಗಳಿಗಾಗಿ ಹೆಚ್ಚು ಶ್ರಮ ಪಡಬೇಕಾಯಿತು. ನನ್ನ ಹುಟ್ಟೂರಾದ ಮುಳಬಾಗಲಿಗೆ ಸಂಬಂಧಪಟ್ಟ ಚಿತ್ರಗಳಲ್ಲಿ ಏಳೆಂಟನ್ನು ಬಹುಕುಶಲತೆಯಿಂದ ತೆಗೆದುಕೊಟ್ಟವರು ಶ್ರೀ ಕೆ. ಜಿ. ಸೋಮಶೇಖರ್ ಅವರು. ಅವರು ತಮ್ಮ ಕಲೆಯಲ್ಲಿ ನಿಪುಣರು. ಇನ್ನು ಕೆಲವು ಚಿತ್ರಗಳು ಸಂಪಾದನೆಯಾದದ್ದು ಚಿ ॥ ರಾಮಸ್ವಾಮಿಯ ವಿಶೇಷ ಪ್ರಯತ್ನದಿಂದ. ಈ ಎಲ್ಲ ಸ್ನೇಹಿತರಿಗೂ ಭಗವಂತ ಕರುಣೆ ತೋರಲಿ.

ಇಂಥ ಪುಸ್ತಕಕ್ಕೆ ಗಿರಾಕಿ ಹೆಚ್ಚಾಗಿರುತ್ತದೆಂದು ನಾನು ಎಣಿಸಲಾರೆ. ಯಾರಿಗೆ ಬೇಕು ವೈದಿಕರ ಗೊಡ್ಡುಕಥೆ! ಹೀಗೆ ನನಗೆ ನಿರುತ್ಸಾಹವಾಗಿದ್ದರೂ ಶ್ರೀ ಕೂಡಲಿ ಚಿದಂಬರಂ ಅವರು ಸ್ನೇಹದ ಭರದಲ್ಲಿ ಇದರ ಪ್ರಕಟನೆಯ ಭಾರವನ್ನು ಹೊತ್ತುಕೊಂಡಿದ್ದಾರೆ-ಈ ದುಬಾರಿ ಖರ್ಚಿನ ಕಾಲದಲ್ಲಿ. ನಮ್ಮ ಮಹಾಜನರು ಈ ಸಂಗತಿಯನ್ನು ಉಪೇಕ್ಷಿಸಲಾರರು ಎಂದು ನಂಬಿ ನಾನು ಅವರ ಪ್ರೋತ್ಸಾಹವನ್ನು ಬೇಡುತ್ತೇನೆ. ಇಂತು ಸರ್ವಂ ಶಿವಂ.

ಡಿ.ವಿ.ಜಿ.

ಮೇ ೧೯೭೨

೧ ವೈದಿಕರ ಜೀವನರೀತಿ

ಪೀಠಿಕೆ

ನಮ್ಮ ಲೋಕದಲ್ಲಿ ಭಾರತೀಯ ಸಂಸ್ಕೃತಿಯೆಂಬ ಒಂದು ವಿಶೇಷವಾದ ಜೀವನ ಮಾರ್ಗ ಉಂಟಷ್ಟೆ? ಆ ಸಂಸ್ಕೃತಿಯ ಸ್ವರೂಪ ಲಕ್ಷಣಗಳನ್ನು ಅಷ್ಟಿಷ್ಟು ಕಾಣಬೇಕೆನ್ನುವವರಿಗೆ ಈ ಮುಂದಿನ ನನ್ನ ಜ್ಞಾಪಕಚಿತ್ರಗಳು ಇಷ್ಟವಾಗಬಹುದು.

ಸಂಸ್ಕೃತಿಯೆಂಬುದನ್ನು ಇಂಗ್ಲಿಷಿನಲ್ಲಿ Way of Life, Way of Living ಎಂದು ಹೇಳುವುದುಂಟು. ಜೀವನದ ಮುಖ್ಯಧ್ಯೇಯವೇನು, ಆ ಧ್ಯೇಯಕ್ಕಾಗಿ ಮನುಷ್ಯನು ಅಳವಡಿಸಿಕೊಳ್ಳುವ ಸಾಧನಗಳು ಏನೇನು, ಆ ಸಾಧನಗಳಿಂದ ಸಂಸ್ಕಾರ ಪಡೆದವನ ಬದುಕಿನಲ್ಲಿ ವಿಶೇಷವೇನು–ಇವು ಜೀವನಮಾರ್ಗವೆಂಬುದರ ಮುಖ್ಯಾಂಶಗಳು. ಮಾರ್ಗವೆಂದರೆ ದಾರಿಯಷ್ಟೆ? ಅದಕ್ಕೆ ಒಂದು ಗುರಿಯುಂಟಷ್ಟೆ? ಆ ಗುರಿಯನ್ನು ಮುಟ್ಟುವುದರಲ್ಲಿ ಕೆಲವು ನಿರೀಕ್ಷೆಗಳುಂಟಷೆ? ಇವೆಲ್ಲ “ಜೀವನಮಾರ್ಗ”, “ಸಂಸ್ಕೃತಿ” ಎಂಬ ಪದಗಳಲ್ಲಿ ಅಡಕವಾಗಿವೆ.

ಪ್ರಪಂಚದಲ್ಲಿ ಜನ ಜನಾಂಗಗಳು ಹತ್ತಾರಿವೆ. ಆ ಹತ್ತಾರೂ ಕೆಲಕೆಲವು ವಿಷಯಗಳಲ್ಲಿ ಬೇರೆಬೇರೆಯಾಗಿವೆ. ಅನ್ನವಸ್ತ್ರಾದಿ ದೈಹಿಕ ವ್ಯಾಪಾರಗಳು ಎಲ್ಲ ಮನುಷ್ಯ ಜಾತಿಗೂ ಸಾಮಾನ್ಯ. ಆದರೆ ಬುದ್ಧಿವ್ಯಾಪಾರಗಳೂ ಮನಸ್ಸಿನ ಪ್ರವೃತ್ತಿಗಳೂ ಒಂದೊಂದು ದೇಶದ ಜನಕ್ಕೆ ಒಂದೊಂದು ಬಗೆಯಾಗಿರುತ್ತವೆ. ಈ ನಾನಾ ಪ್ರವೃತ್ತಿಗಳು ಎಲ್ಲ ಅಂಶಗಳಲ್ಲೂ ಬೇರೆಬೇರೆಯಲ್ಲ. ಹಾಗೆ ಸಂಪೂರ್ಣವಾಗಿ ಬೇರೆಯಾಗಿದ್ದಿದ್ದರೆ ಜನ ಜನಾಂಗಗಳ ಸಂಪರ್ಕವಾಗುತ್ತಿರಲಿಲ್ಲ. ಕೆಲವು ಅಂಶಗಳಲ್ಲಿ ಸರ್ವಸಾಮಾನ್ಯವಾಗಿ, ಕೆಲವು ಅಂಶಗಳಲ್ಲಿ ಪ್ರತ್ಯೇಕವಾಗಿ ಇರುವುದರಿಂದ ಒಂದು ದೇಶದ ಜನ ಇನ್ನೊಂದು ದೇಶದ ಜನರೊಡನೆ ವ್ಯವಹಾರ ಬೆಳಸುವುದು ಸಾಧ್ಯವಾಗಿದೆ; ಜನ ಜನಾಂಗಗಳ ಸಂಪರ್ಕಕ್ಕೆ ಪ್ರೇರಣೆಯೂ ಆ ವಿಶೇಷತೆಗಳಲ್ಲಿರುತ್ತವೆ.

ಜೀವನರೀತಿಯ ವೈಶಿಷ್ಟ್ಯ

ಇಂಥ ಜನ ಜನಾಂಗಗಳ ಪರಸ್ಪರ ಸಂಪರ್ಕದಲ್ಲಿ ಮುಖ್ಯವಾಗಿ ಗಣ್ಯವಾಗಬೇಕಾದದ್ದು ಆ ಒಂದೊಂದು ಜನಾಂಗಕ್ಕೂ ಇರುವ ಜೀವನರೀತಿಯ ವೈಶಿಷ್ಟ್ಯ. ಒಂದು ಜನಾಂಗ ಆಹಾರ ಪಾಕಗಳಲ್ಲಿ ಇತರ ಕೆಲವು ಜನಾಂಗಗಳಿಗಿಂತ ಮೇಲೆನಿಸಿಕೊಂಡಿರುತ್ತದೆ. ಇನ್ನೊಂದು ಜನಾಂಗ ಬಟ್ಟೆಯ ತಯಾರಿಯಲ್ಲಿ ಮೇಲಾಗಿರುತ್ತದೆ. ಮತ್ತೊಂದು ಜನಾಂಗ ವಾಸ್ತುಶಿಲ್ಪದಲ್ಲಿ, ಮಗದೊಂದು ಯಂತ್ರಶಿಲ್ಪದಲ್ಲಿ, ಬೇರೊಂದು ವಿಜ್ಞಾನ ಶಾಸ್ತ್ರದಲ್ಲಿ, ಇನ್ನೊಂದು ಲಲಿತಕಲೆಗಳಲ್ಲಿ. ಹೀಗೆ ಒಂದೊಂದು ಜನಾಂಗ ಒಂದೊಂದು ಬಗೆಯ ಮಾನುಷ ಸಂಪತ್ತಿನಲ್ಲಿಯೂ ಒಂದೊಂದು ಬಗೆಯ ಮಾನುಷ ಸಾಧನೆಯಲ್ಲಿಯೂ ಮೇಲ್ಮೈಯಾಗಿರುತ್ತದೆ. ಇಂಥ ಗುಣವಿಶೇಷ ಶಕ್ತಿವಿಶೇಷಗಳು ಭಾರತೀಯ ಜನಕ್ಕೂ ಉಂಟು. ಮಿಕ್ಕ ಜನಾಂಗಗಳಿಂದ ಪ್ರತ್ಯೇಕವಾದ ಒಂದು ಸಂಸ್ಕೃತಿವಿಶೇಷ ಇಂಡಿಯದ ಜನಾಂಗಕ್ಕುಂಟು. ಈ ಸಂಸ್ಕೃತಿವಿಶೇಷವೇ ಭಾರತೀಯ ಜನತೆಯ ಜೀವಾಳ. ಆ ಜೀವಾಳ ನಷ್ಟವಾದರೆ ಭಾರತೀಯರ ಭಾರತೀಯತೆ ನಷ್ಟವಾಗುತ್ತದೆ.

ಈ ಭಾರತೀಯ ಸಂಸ್ಕೃತಿ ಎಂಬುದರ ಮುಖ್ಯ ಲಕ್ಷಣಗಳೇನು? ದೇಹಜೀವನದಲ್ಲಿ ಭಾರತೀಯರು ಮಿಕ್ಕವರಂತೆಯೇ ಇದ್ದರು. ಅವರಿಗೂ ಹಸಿವಿತ್ತು, ಬಾಯಾರಿಕೆಯಿತ್ತು. ಚಿವುಟಿದರೆ ಅವರಿಗೂ ನೋವಾಗುತ್ತಿತ್ತು. ಮುಳ್ಳು ಚುಚ್ಚಿದರೆ ಅವರಿಗೂ ರಕ್ತ ಬರುತ್ತಿತ್ತು. ಅವರಿಗೂ ಸುಖದುಃಖಗಳಿದ್ದವು. ಸಂತೋಷವಾದಾಗ ನಗುತ್ತಿದ್ದರು; ನೋವಾದಾಗ ಅಳುತ್ತಿದ್ದರು. ಅನ್ನ ಬಟ್ಟೆಗಳ ಚಿಂತೆಯೂ ಪ್ರೀತಿ ವಿಯೋಗಗಳ ಚಿಂತೆಯೂ ಅವರಿಗೂ ಇದ್ದವು. ಆದರೆ ಒಂದು ವಿಶೇಷ: ಎಲ್ಲ ಲೌಕಿಕ ವ್ಯಾಪಾರಗಳ ನಡುವೆಯೂ ಒಂದು ಪಾರಮಾರ್ಥಿಕತೆ, ಎಲ್ಲ ಐಹಿಕ ಪ್ರವೃತ್ತಿಗಳಲ್ಲಿಯೂ ಒಂದು ಮನಶ್ಶಾಂತಿಯ ಬಯಕೆ, ಎಲ್ಲ ಸಂಸಾರ ಸಂಬಂಧಗಳಲ್ಲಿಯೂ ಒಂದು ಪರಿಶುದ್ಧಿ–ಇವು ಭಾರತೀಯ ಸಂಸ್ಕೃತಿಯ ಮುಖ್ಯಲಕ್ಷಣಗಳು. ಅಂತರಾತ್ಮ ಹಿತದೃಷ್ಟಿ, ನಿರುಪಾಧಿಕತೆ, ಶುಚಿತೆ–ಈ ಮೂರನ್ನೂ ಜೀವನದ ಉತ್ಕೃಷ್ಟಧ್ಯೇಯಗಳನ್ನಾಗಿ ಅಂಗೀಕರಿಸುವುದು ಭಾರತೀಯರಿಗೆ ಪೂರ್ವಕಾಲದಿಂದ ಬಂದಿರುವ ಪ್ರವೃತ್ತಿ. ಬಡತನದಲ್ಲಿ ಸಿರಿತನವನ್ನು ಅನುಭವಿಸುವುದು, ಗದ್ದಲದ ನಡುವೆ ನೆಮ್ಮದಿಯನ್ನರಸುವುದು, ಕೊಳಕಿನ ನಡುವೆ ಚೊಕ್ಕಟಕ್ಕಾಗಿ ಶ್ರಮಿಸುವುದು- ಇದು ಭಾರತೀಯತೆ.

ಸರಳತೆ-ಸಂತೃಪ್ತಿ

ಈ ಮುಂದಣ ಚಿತ್ರಗಳಲ್ಲಿ ಅದ್ಭುತವೂ ವೀರವೂ ಆದದ್ದು ಕಾಣಲಾರದು. ಅಟ್ಟಹಾಸವೂ ವಿಜೃಂಭಣೆಯೂ ಕಾಣಲಾರವು. ಲೋಕದ ಕಣ್ಣನ್ನೂ ಕಿವಿಯನ್ನೂ ಆಕರ್ಷಣೆ ಮಾಡಿಕೊಳ್ಳಬಲ್ಲ ಸಂಗತಿಗಳು ಇಲ್ಲಿಲ್ಲ. ನಾನು ವರ್ಣಿಸುವ ವ್ಯಕ್ತಿಗಳು ಒಂದು ದೃಷ್ಟಿಯಿಂದ ಬಡವರು. ಅವರು ಸರಳಜೀವಿಗಳು, ಸಂಪತ್ಸಮೃದ್ಧರಾದವರಲ್ಲ; ಆಡಂಬರ ಆಟೋಪಗಳಿದ್ದವರೂ ಅಲ್ಲ. ಆದರೆ ತಮ್ಮಷ್ಟಕ್ಕೆ ತಾವು ಸಂತೃಪ್ತರಾಗಿದ್ದ ಜೀವಿಗಳು. ಸರಳತೆಯಲ್ಲಿಯೂ ಸಂತೃಪ್ತಿಯಲ್ಲಿಯೂ ಶಾಂತಿಯಲ್ಲಿಯೂ ಜೀವನಸೌಂದರ್ಯವುಂಟೆಂದು ಭಾವಿಸಿರುವವರಿಗೆ ಈ ಚಿತ್ರಮಾಲೆ ಕುತೂಹಲವನ್ನುಂಟುಮಾಡೀತು.

ವೈದಿಕರು, ಶಾಸ್ತ್ರಪಾಠಕರು, ಪುರಾಣಿಕರು, ಹರಿದಾಸರು–ಇಂಥವರ ಜೀವನದಲ್ಲಿ ಅತಿಶಯವೇನಿದ್ದೀತು? ಅದು ಸಣ್ಣಸಣ್ಣ ಗ್ರಾಮಗಳ ಜೀವನ. ಅದು ಸಣ್ಣ ಹೊಳೆಯ ಹರಿವು; ಉಬ್ಬರವಿಲ್ಲ, ಇಳತವಿಲ್ಲ, ಮೊನ್ನೆಯಿದ್ದಂತೆ ನಿನ್ನೆ; ಈಹೊತ್ತಿನಂತೆ ನಾಳೆ. ಎಲ್ಲ ಸಮ, ಎಲ್ಲ ಸೌಮ್ಯ. ಇಂಥಾದ್ದು ಆ ಜನದ ಅನುದಿನದ ಜೀವನ. ಆಹ್ನಿಕ, ಪಾಠ, ಪೂಜೆ, ಪುರಾಣ. ಸಾಹಸದ ಸುಳಿವಿಲ್ಲ. ಚೋದ್ಯದ ಸೆಲೆಯಿಲ್ಲ. ಉದ್ರೇಕಾವಕಾಶ ಎಲ್ಲಿಯೂ ಕಾಣಸಿಗದು. ಅವರನ್ನು ನಾವು ಅನಾಗರಿಕರೆಂದೇ ಹೇಳಬಹುದು. ಬಹುಮಂದಿ ರೈಲುಗಾಡಿಯನ್ನು ಕಂಡವರೇ ಅಲ್ಲ; ಕಂಡವರೂ ದೂರದಿಂದ ಕಂಡಿದ್ದವರೇ ಹೊರತು ಗಾಡಿಯೊಳಗೆ ಎಂದೂ ಕುಳಿತಿದ್ದವರಲ್ಲ. ಆದರೂ ಅವರೆಲ್ಲ ಜೀವನದಲ್ಲಿ ಸ್ವಾರಸ್ಯ ಕಂಡಿದ್ದವರು, ಮತ್ತು ನೆರೆಹೊರೆಯವರಿಗೆ ಜೀವನದಲ್ಲಿ ಸ್ವಾರಸ್ಯಕಾರಕರಾದವರು. ಅಂಥವರ ಕಥೆಯಲ್ಲಿ ರುಚಿ ಕಾಣಬಲ್ಲವರು ಈ ನಾಗರಿಕ ಯುಗದಲ್ಲಿಯೂ ಇದ್ದಾರೆಂದರೆ ಅವರಿಗಾಗಿ ಈ ವ್ಯಕ್ತಿಚಿತ್ರಸರಣಿ.

ಸರಳ ಕೋಮಲ ಜೀವನದ ಕಡೆಗೆ ನಮ್ಮ ಜನದ ಮನಸ್ಸನ್ನು ಸಾಧ್ಯವಿರುವಷ್ಟು ತಿರುಗಿಸಬೇಕೆಂಬ ಉದ್ದೇಶವೂ ನನ್ನ ಮನಸ್ಸಿನಲ್ಲುಂಟು.

೨ ಪುಣ್ಯಶ್ಲೋಕ ವೆಂಕಟರಾಮಭಟ್ಟರು

ನನ್ನ ಜೀವನದಲ್ಲಿ ಒಳ್ಳೆಯದೇನಾದರೂ ಇದ್ದರೆ ಅದಕ್ಕೆ ಕಾರಣರಾದವರಲ್ಲಿ ಒಬ್ಬ ಮುಖ್ಯರಾದವರು ವೇದಮೂರ್ತಿ ವೆಂಕಟರಾಮಭಟ್ಟರವರು. ಇವರು ನನಗೆ ಅಜ್ಜಂದಿರಿಗೆ ಸಮಾನರಾದವರು.

ಅನ್ನಂಭಟ್ಟರೂ ಅವರ ಮಗ ವೆಂಕಟರಾಮಭಟ್ಟರೂ ನನ್ನ ಮುತ್ತಜ್ಜ, ಅಜ್ಜ, ನನ್ನ ತಂದೆ– ಈ ಮೂರು ತಲೆಮಾರಿಗೂ ಪುರೋಹಿತರು ಮಾತ್ರವಲ್ಲ, ಗುರುಗಳು ಮಾತ್ರವಲ್ಲ, ಆಪ್ತ ಬಂಧುಪ್ರಾಯರು. ನನ್ನ ಮುತ್ತಜ್ಜನ ಹೆಸರನ್ನೇ ನನಗೂ ಇಟ್ಟಿದ್ದಾರೆ. ಆ ಮಹಾನುಭಾವರು ದೇವನಹಳ್ಳಿ ಪ್ರಾಂತದಲ್ಲಿ ಹುಟ್ಟಿದವರು. ಸರಕಾರಿ ಉದ್ಯೋಗದ ಮೇಲೆ ಮುಳಬಾಗಲಿಗೆ ಹೋಗಿ ನೆಲಸಿದವರು–ಬಹುಶಃ ನೂರಿಪ್ಪತ್ತು ನೂರಿಪ್ಪತ್ತೈದು ವರ್ಷಗಳ ಹಿಂದೆ.

ಆಗ ಮೈಸೂರು ದೇಶವನ್ನು ಬ್ರಿಟಿಷ್ ಸರಕಾರದವರು ತಮ್ಮ ಆಡಳಿತಕ್ಕೆ ತೆಗೆದುಕೊಂಡಿದ್ದರು. ಆಗ ಬೆಂಗಳೂರಿಗೂ ಮದರಾಸಿಗೂ ಸೈನ್ಯ ಹದಿನೈದಿಪ್ಪತ್ತು ದಿನಕ್ಕೊಂದು ಸಾರಿ ಹೋಗಿ ಬರುವ ನಿಯಮವಿತ್ತು, ಅದು ಪದಾತಿ ಸೈನ್ಯ. ಆದದ್ದರಿಂದ ಸೈನ್ಯ ಅಲ್ಲಲ್ಲಿ ಒಂದು ರಾತ್ರಿ ತಂಗಿ ಮುಂದೆ ಸಾಗುತ್ತಿತ್ತು. ಮುಳಬಾಗಲು ಬೆಂಗಳೂರಿನಿಂದ ಸರಿಯಾಗಿ ಅರವತ್ತು ಮೈಲಿ. ಆದದ್ದರಿಂದ ಸೈನ್ಯದ ಮಜಲಿಗೆ ಅದು ತಕ್ಕ ಸ್ಥಳವೆಂದು ಗೊತ್ತುಮಾಡಿ ಸೈನ್ಯದ ಕ್ಯಾಂಪಿಗೆ ಬೇಕಾದ ವಸ್ತುಗಳನ್ನು ಸರಬರಾಯಿ ಮಾಡಿಸಿ ನಿರ್ವಹಿಸಲಿಕ್ಕಾಗಿ ಗುಂಡಪ್ಪನವರನ್ನು ಅಲ್ಲಿಗೆ ಕಮಿಸೇರಿಯಟ್ ಆಫೀಸರ್ ಎಂಬ ಶೇಕ್‌ದಾರ್ ಹುದ್ದೆಯ ಮೇಲೆ ಸರಕಾರದವರು ನಿಯಮಿಸಿದರು-೧೮೫೦ರ ಸುಮಾರಿನಲ್ಲಿ.

ಆದರೆ ಗುಂಡಪ್ಪನವರು ಬೃಹಚ್ಚರಣವೆಂಬ ದ್ರಾವಿಡ ಬ್ರಾಹ್ಮಣ ಜನಾಂಗಕ್ಕೆ ಸೇರಿದವರು. ಮುಳಬಾಗಲು ಪ್ರಾಂತದಲ್ಲಿ ಈ ಜನ ಯಾರೂ ಆ ವೇಳೆಗೆ ನೆಲಸಿರಲಿಲ್ಲ, ಆ ಊರಿನಲ್ಲಿ ಪ್ರಸಿದ್ಧರಾದ ಬ್ರಾಹ್ಮಣರು ಅನ್ನಂಭಟ್ಟರು. ಆದದ್ದರಿಂದ ಆಗಿನ ಗುಂಡಪ್ಪನವರು ಅನ್ನಂಭಟ್ಟರ ಸ್ನೇಹವನ್ನು ಸಂಪಾದಿಸಬೇಕಾಯಿತು.

ಗುಂಡಪ್ಪನವರ ದೂರದ ಪೂರ್ವಿಕರು ತಾವೇ ವೈದಿಕರಂತೆ. ಅವರು ಶ್ಯಾಮಭಟ್ಟರು. ಅಥವಾ ಶಾಂಭಟ್ಟರು. ಅವರು ಜೀವಿಕಾವೃತ್ತಿಗಾಗಿ ಮೈಸೂರು ಪ್ರಾಂತಕ್ಕೆ ಬಂದಿದ್ದ ದ್ರಾವಿಡ ಜನಾಂಗ. ಮೈಸೂರು ರಾಜ್ಯದಲ್ಲಿ ಅವರು ಶಾನುಭೋಗಿಕೆ, ಪಟೇಲಿ ಮೊದಲಾದ

ಉದ್ಯೋಗಗಳನ್ನು ಸಂಪಾದಿಸಿಕೊಂಡ ಮೇಲೆ ಕೊಂಚಕೊಂಚವಾಗಿ ವೈದಿಕದಿಂದ ಲೌಕಿಕಕ್ಕೆ ತಿರುಗಿದರು. ಮೇಲೆ ಹೇಳಿದ ಶಾಂಭಟ್ಟರು ಹೊಸಕೋಟೆ ಬೆಟ್ಟ ಹಲಸೂರು ಪ್ರಾಂತಗಳಲ್ಲಿ ಶಾನುಭೋಗಿಕೆ ಸಂಪಾದಿಸಿದ ಮೇಲೆ ಸರಕಾರದ ಕಛೇರಿಗೆ ಹೋಗಿಬರಬೇಕಾದ ಆವಶ್ಯಕತೆಯುಂಟಾಯಿತು. ಅದಕ್ಕಾಗಿ ರುಮಾಲು ಧಾರಣೆ. ಹೀಗೆ ಅವರಿಗೆ "ರುಮಾಲೆ ಶಾಂಭಟ್ಟ" ಎಂದು ಹೆಸರಾಯಿತು. ಈ ಸಂತತಿಯಲ್ಲಿ ಹುಟ್ಟಿದವರು ಶೇಕ್‌ದಾರ್ ಗುಂಡಪ್ಪನವರು.

ಸ್ನೇಹ-ಸಹಾಯ

ಅಂದಿನ ಕಾಲದಲ್ಲಿ ಬ್ರಾಹ್ಮಣರು ಈಗಿನವರಿಗಿಂತ ಹೆಚ್ಚಾಗಿ ಆಚಾರನಿಷ್ಠೆಯನ್ನೂ ಕರ್ಮಶ್ರದ್ಧೆಯನ್ನೂ ಇರಿಸಿಕೊಂಡಿದ್ದವರೆಂದು ತೋರುತ್ತದೆ. ಹೀಗೆ ಶೇಕ್‌ದಾರ್ ಗುಂಡಪ್ಪನವರಿಗೆ ವೈದಿಕರ ಸಹಾಯ ಅವಶ್ಯವಾಗಿ ಅವರು ಅನ್ನಂಭಟ್ಟರ ಸ್ನೇಹ ಮಾಡಿಕೊಂಡಿರಬೇಕು.

ಇಬ್ಬರ ಮನೆಗಳೂ ಎದುರುಬದುರಾಗಿದ್ದವು. ಅನ್ನಂಭಟ್ಟರ ಮನೆ ನಮ್ಮದಕ್ಕಿಂತ ಪುರಾತನವಾದದ್ದು. ವರ್ಷ ಕಳೆದಂತೆಲ್ಲಾ ಆ ಎರಡು ಮನೆಗಳೂ ಎರಡು ಬೇರೆ ಬೇರೆ ಕುಟುಂಬದವರದು ಎನ್ನುವುದಕ್ಕಿಂತ ಅವು ಒಂದೇ ಕುಟುಂಬದ ಎರಡು ಶಾಖೆಗಳು ಎಂದು ಹೇಳಬಹುದಾದಷ್ಟು ಪರಸ್ಪರ ಸ್ನೇಹವುಳ್ಳವುಗಳಾದವು. ಹಬ್ಬ ಹರಿದಿನಗಳಲ್ಲಿಯೂ ದಿನಗಟ್ಟಲೆಯ ನೆರೆಹೊರೆ ವ್ಯವಹಾರದಲ್ಲಿಯೂ ಎರಡು ಕುಟುಂಬಗಳೂ ಒಂದೇ ಎಂಬಂತೆ ಗಣನೆ. ಇಲ್ಲಿ ಅಡಿಗೆಯಾದದ್ದರ ಪಾಲು ಅಲ್ಲಿ, ಅಲ್ಲಿ ಅಡಿಗೆಯಾದದ್ದರ ಪಾಲು ಇಲ್ಲಿ.

ಅನ್ನಂಭಟ್ಟರನ್ನು ನಾನು ಕಂಡವನಲ್ಲ. ವೆಂಕಟರಾಮಭಟ್ಟರು ಕೂಡ ನನಗೆ ತಿಳಿವಳಿಕೆ ಬರುವ ವಯಸ್ಸಿಗೆ ಸುಮಾರು ಅರವತ್ತು ವಯಸ್ಸಿನವರಾಗಿದ್ದರು. ಅವರ ಅಕ್ಕಂದಿರು ಅನ್ನಮ್ಮ (ಅನ್ನ ಪೂರ್ಣಮ್ಮ), ಅಮ್ಮಣ್ಣಮ್ಮ-ಎಂಬ ಇಬ್ಬರಿದ್ದರು. ಇಬ್ಬರೂ ಮಡಿ ಹೆಂಗಸರು. ಅವರಲ್ಲಿ ಹಿರಿಯಾಕೆ ನಾನು ಹುಟ್ಟಿದ ಹತ್ತು ದಿವಸಗಳೊಳಗಾಗಿ ತೀರಿಕೊಂಡರಂತೆ; ನಾನು ಹುಟ್ಟಿದ ವರ್ತಮಾನ ಕೇಳಿ ಆಕೆ "ಮಾಮಯ್ಯ ಪುಟ್ಟಿ" (ಮಾವಯ್ಯನು ಹುಟ್ಟಿದ) ಎಂದು ನುಡಿದರಂತೆ. ಅದೇ ನನ್ನ ನಾಮಕರಣ.

ನನ್ನ ಮುತ್ತಜ್ಜ ಗುಂಡಪ್ಪನವರನ್ನು ಆ ಅಕ್ಕತಂಗಿಯರಿಬ್ಬರೂ "ಮಾಮಯ್ಯ" ಎಂದು ಕರೆಯುತ್ತಿದ್ದರಂತೆ. ಅಮ್ಮಣ್ಣಮ್ಮನವರು ನನ್ನ ಬಾಲ್ಯದಲ್ಲಿ ಬದುಕಿದ್ದರು. ಅವರು ನನ್ನನ್ನು

"ಮಾಮಯ್ಯ" ಎಂದೇ ಕರೆಯುತ್ತಿದ್ದರು.

ಕನ್ಯಾ–ವರ ನಿಷ್ಕರ್ಷೆ

ವೆಂಕಟರಾಮಭಟ್ಟರವರಲ್ಲಿ ಹಳ್ಳಿಯ ಜನ ಬಂದು ವಿವಾಹ ವಿಷಯವಾಗಿ ಜಾತಕ ಹೊಂದುತ್ತದೆಯೆ? ಎಂದು ಸರಿಯಾದ ಲಗ್ನ? ಮೊದಲಾಗಿ ಕೇಳುತ್ತಿದ್ದರು. ಅವರಲ್ಲಿ ಅನೇಕರಿಗೆ ಜಾತಕಗಳಿರಲಿಲ್ಲ. ಅವರು ಓದು ಬರಹ ಬಂದ ಜನವಲ್ಲ. ಇಂಥವರು ಬಂದಾಗ ವೆಂಕಟರಾಮಭಟ್ಟರು ಗಂಡು ಹೆಣ್ಣುಗಳ ಹೆಸರುಗಳನ್ನು ಕೇಳುವರು. ಹೆಸರಿನ ಮೊದಲಿನ ಅಕ್ಷರದಿಂದ ನಕ್ಷತ್ರವನ್ನು ಗೊತ್ತು ಮಾಡುವರು: "ಚೀಚೇಚೋಲಾ ಅಶ್ವಿನಿ, ಲೀಲೇಲೋಲಾ ಭರಣಿ" – ಹೀಗೆ. ನಕ್ಷತ್ರ ಗೊತ್ತಾದ ಮೇಲೆ ದಾಂಪತ್ಯಯೋಗವನ್ನು ನಿಶ್ಚಯ ಮಾಡಬೇಕಲ್ಲ? ಆಗ ನಕ್ಷತ್ರಗಳಿಗಿರುವ ಸಂಕೇತ ಮೃಗಗಳು. ನನ್ನ ನಕ್ಷತ್ರ ಮೂಲ. ಆದದ್ದರಿಂದ ನಾನು ನಾಯಿ. ಈ ನಕ್ಷತ್ರಕ್ಕೆ ಇಲಿಯ ಸಂಕೇತವುಳ್ಳ ನಕ್ಷತ್ರದ ಕನ್ಯೆ ಒಪ್ಪುತ್ತದೆ. ಹೀಗೆ ಕನ್ಯಾ-ವರ ನಿಷ್ಕರ್ಷೆ.

ವೆಂಕಟರಾಮಭಟ್ಟರು ಮನೆಯಲ್ಲಿಲ್ಲದಾಗ ಜನ ಬಂದರೆ ಅವರ ಪ್ರಶ್ನೆಗೆ ಮೇಲಿನ ಸೂತ್ರವನ್ನು ಅನ್ವಯಿಸಿ ಅವರ ಅಕ್ಕಂದಿರಾದ ಅನ್ನಮ್ಮ ಅಮ್ಮಣ್ಣಮ್ಮನವರೇ ಲಗ್ನ ಕಟ್ಟಿಕೊಟ್ಟು ಕಳುಹಿಸುತ್ತಿದ್ದರು.

ಶ್ರುತಿಪರಿಚಯ

ಅನ್ನಮ್ಮ ಅಮ್ಮಣ್ಣಮ್ಮನವರು ಇಷ್ಟನ್ನೇ ಅಲ್ಲ; ಅಧ್ಯಯನವನ್ನೂ ಮಾಡಿಸುತ್ತಿದ್ದರು. ವೆಂಕಟರಾಮಭಟ್ಟರು ಮನೆಯಲ್ಲಿಲ್ಲದಾಗ ಶಿಷ್ಯರು ವೇದಪಾಠ ಪುನರಾವರ್ತನೆ ಮಾಡುತ್ತಿದ್ದರು. ಆ ವಿದ್ಯಾರ್ಥಿಗಳು ಆಗ ಅಕ್ಷರಸ್ಖಾಲಿತ್ಯವನ್ನೋ ಸ್ವರಪ್ರಮಾದವನ್ನೋ ಮಾಡಿದರೆ ಅಧ್ಯಯನವನ್ನು ಕೇಳುತ್ತಲೇ ಇದ್ದ ಅನ್ನಮ್ಮನವರಾಗಲಿ ಅಮ್ಮಣ್ಣಮ್ಮನವರಾಗಲಿ ವಿದ್ಯಾರ್ಥಿಯನ್ನು ಕೂಗಿ (ತೆಲುಗಿನಲ್ಲಿ) "ಎಲಾ, ಸ್ವರ ತಪ್ಪುತ್ತಿದ್ದೀ. ಅದನ್ನು ನಾನು ತಿದ್ದಬಾರದು-ವೇದವನ್ನು ನನ್ನ ಬಾಯಿಂದ ನುಡಿಯತಕ್ಕದ್ದಲ್ಲ. ನೀನೇ ತಿದ್ದಿಕೋ. ನನ್ನ ತಮ್ಮ ಮನೆಗೆ ಬಂದಮೇಲೆ ಅವನಿಗೆ ಹೇಳುತ್ತೇನೆ" –ಎನ್ನುವರು. ಹೀಗೆ ವಿದ್ಯಾರ್ಥಿಗಳಿಗೆ ಅನ್ನಮ್ಮ ಅಮ್ಮಣ್ಣಮ್ಮನವರುಗಳ ತಿದ್ದಿಕೆಯ ಭಯವಿತ್ತು. ಆ ಹೆಂಗಸರಿಬ್ಬರೂ ಮನೆಯಲ್ಲಿ ದಿನದಿನವೂ ಅಹೋರಾತ್ರಿಗಳಲ್ಲಿಯೂ ವೇದಪಾಠ ಕೇಳಿ ಕೇಳಿ ಪಾಠಕ್ರಮಕ್ಕೆ ಅಧಿಕಾರಿಗಳಾಗಿದ್ದರು.

***

ವೆಂಕಟರಾಮಭಟ್ಟರು ಮುಲಕನಾಡು ಎಂಬ ಬ್ರಾಹ್ಮಣ ಪಂಗಡದವರು. ಅವರ ಮನೆಮಾತು ತೆಲುಗು. ಅವರ ಕುಲವೃತ್ತಿ ಪೌರೋಹಿತ್ಯ. ಅನ್ನಂಭಟ್ಟರ ಕಾಲಕ್ಕೆ ಆ ಕುಟುಂಬ ಅನುಕೂಲದಶೆಯಲ್ಲಿತ್ತು. ಹದಿನಾಲ್ಕು ಗ್ರಾಮಗಳ ಪೌರೋಹಿತ್ಯ, ಜಮೀನು, ತೋಟ-ಇವೆಲ್ಲ ಇತ್ತು. ಅವರ ಮನೆ ವಿಶಾಲವಾದದ್ದು; ಪೂರ್ವಾಭಿಮುಖವಾಗಿದ್ದು, ಉತ್ತರದಿಂದ ದಕ್ಷಿಣಕ್ಕೆ ಸುಮಾರು ನೂರು ಗಜಗಳಿಗೆ ಹೆಚ್ಚಾಗಿಯೇ ಇತ್ತು. ಅಡಿಗೆ ಮನೆ, ಉಗ್ರಾಣ, ಮೊದಲಾದ ಅನುಕೂಲಗಳಲ್ಲದೆ ಸೊಗಸಾದ ಮೊಗಸಾಲೆ ಇತ್ತು. ಅದರ ಮುಂದೆ ವಿಶಾಲವಾದ ಅಂಗಳ, ಕಲ್ಲುಚಪ್ಪಡಿ ಹಾಸಿ ಚೊಕ್ಕಟವಾಗಿತ್ತು. ಅದರಿಂದಾಚೆ ಬಚ್ಚಲುಮನೆ, ದನದ ಕೊಟ್ಟಿಗೆ, ಒಂದು ಆಕಳು, ಎರಡು ಎಮ್ಮೆ, ಅವುಗಳ ಕರುಗಳು. ಅಲ್ಲಿಂದಾಚೆಗೆ ಎರಡು ಕುದುರೆ ಲಾಯ. ಅಲ್ಲಿಂದಾಚೆಗೆ ದೊಡ್ಡ ಬಯಲು. ಅದರಲ್ಲೊಂದು ಸಣ್ಣಮನೆ, ಮನೆಗೆಲಸ ಮಾಡುವ ಮುನಿವೆಂಕಟಮ್ಮ ಎಂಬ ಹೆಂಗಸು ವಾಸಮಾಡುತ್ತಿದ್ದದ್ದು. ಅಲ್ಲಿಂದಾಚೆಗೆ ಒಂದು ಸೇದುವ ಬಾವಿ. ಅದರಿಂದಾಚೆಗೆ ರಾಜ ಪುರೋಹಿತ ಸುಬ್ಬಾಭಟ್ಟರ ಮನೆ. ಮನೆಯ ಹೊರಗಡೆ ಉದ್ದವಾದ ಜಗಲಿ. ಮಧ್ಯಾಹ್ನಾನಂತರ ಅಲ್ಲಿ ನೆರಳಾಗಿರುತ್ತಿದ್ದದ್ದರಿಂದ ಸಂಜೆಸಂಜೆಯೂ ಅಲ್ಲಿ ಒಂದು ಗೋಷ್ಠಿ. ನನ್ನ ಚಿಕ್ಕತಾತಂದಿರಾದ ರಾಮಣ್ಣನವರು ಆ ಗೋಷ್ಠಿಯಲ್ಲಿ ಮುಖ್ಯರು. ಅತ್ತಿಕುಂಟೆ ಶ್ರೀಪತಿರಾಯರು, ಅರ್ಚಕ ಹನುಮಪ್ಪನವರು, ಸಾಹುಕಾರ್ ಪೆದ್ದವರದಯ್ಯ

ಶೆಟ್ಟರು ಮುಂತಾದವರ ಕಛೇರಿ ಅಲ್ಲಿ. ಕಾವ್ಯ, ಶಾಸ್ತ್ರ, ಪುರಾಣ, ರಾಜಕೀಯ, ಲೋಕಪರಿಸ್ಥಿತಿ–ಇವೆಲ್ಲ ಅಲ್ಲಿ ವಿಮರ್ಶೆಯಾಗುತ್ತಿದ್ದವು. ಉತ್ತರದ ಕಡೆ ಇದ್ದ ಪಕ್ಕದ ಮನೆಯ ಗೋಡೆ ಸುಮಾರು ಎಂಟು ಹತ್ತು ಅಡಿಯಷ್ಟು ಮುಂದಕ್ಕೆ ಚಾಚಿತ್ತು. ಇದರ ಮೇಲೆ ಅಮ್ಮಣ್ಣಮ್ಮನವರು ಬೆರಣಿ ತಟ್ಟುತ್ತಿದ್ದರು. ನಾನು ಬೆಳಗ್ಗೆ ಸ್ಕೂಲಿನಿಂದ ಮನೆಗೆ ಬರುತ್ತಿದ್ದದ್ದನ್ನು ಕಂಡ ಕೂಡಲೆ "ಮಾಮಯ್ಯ ಬಂದ. ಇನ್ನು ಸ್ನಾನಕ್ಕೆ ಹೊತ್ತಾಯಿತು" ಎಂದು ಹೇಳಿ ಬೆರಣಿ ತಟ್ಟುವುದನ್ನು ನಿಲ್ಲಿಸಿ ಸ್ನಾನಕ್ಕೆ ಹೋಗುತ್ತಿದ್ದರು.

ವಿದ್ಯಾರ್ಥಿಗಳು

ವೆಂಕಟರಾಮಭಟ್ಟರವರ ಮನೆಯಲ್ಲಿ ಯಾವಾಗಲೂ ನಾಲ್ಕೈದು ಮಂದಿ ವಿದ್ಯಾರ್ಥಿಗಳಿರುತ್ತಿದ್ದರು. ಮುಡಿಯನೂರು, ಹೆಬ್ಬಣಿ, ಗುಡಿಪಲ್ಲಿ, ನಂಗಲಿ ಮೊದಲಾದ ಆ ತಾಲ್ಲೂಕಿನ ಗ್ರಾಮಗಳಿಂದ ಮಾತ್ರವೇ ಅಲ್ಲದೆ ಮದನಪಲ್ಲಿ, ಪುಂಗನೂರು ಮೊದಲಾದ ಕಡೆಗಳಿಂದಲೂ ಬಂದವರು ಆ ವಿದ್ಯಾರ್ಥಿಗಳು. ಅವರಿಗೆ ಪ್ರಯೋಗ, ಜ್ಯೋತಿಶ್ಯಾಸ್ತ್ರ, ಧರ್ಮಶಾಸ್ತ್ರ, ಕೊಂಚ ಸಂಸ್ಕೃತ ಸಾಹಿತ್ಯ–ಇಷ್ಟನ್ನು ವೆಂಕಟರಾಮಭಟ್ಟರು ಕಲಿಸುತ್ತಿದ್ದರು. ಕೆಲಮಂದಿಗೆ ಯಜುರ್ವೇದದ ಸಂಹಿತೆ ಬ್ರಾಹ್ಮಣ ಭಾಗಗಳನ್ನೂ ಆರಣ್ಯಕವನ್ನೂ ಹೇಳಿಕೊಡುತ್ತಿದ್ದರು. ಅವರು ಅನ್ನದಾನಿಗಳೆಂದೂ ಅಧ್ಯಾಪಕರೆಂದೂ ಹೆಸರಾಗಿದ್ದವರು. ಆ ಮನೆ ಅನ್ನದಾನಕ್ಕೆ ಪ್ರಸಿದ್ಧವಾಗಿದ್ದದ್ದರಿಂದಲೇ ಅನ್ನಂಭಟ್ಟರು, ಅನ್ನಪೂರ್ಣಮ್ಮ ಎಂಬ ಹೆಸರುಗಳು ಆ ವಂಶದುದ್ದಕ್ಕೂ ಬಂದಿವೆ.

***

ವೆಂಕಟರಾಮಭಟ್ಟರ ಪೂರ್ವಿಕರು ರೇವಣೂರು, ರೇಣೂರು, ಅಥವಾ ರೋಣೂರು ಎಂಬ ಸ್ಥಳದವರು. ಆ ಊರು ಎಲ್ಲಿದೆಯೋ ವೆಂಕಟರಾಮಭಟ್ಟರಿಗೇ ಗೊತ್ತಿರಲಿಲ್ಲ. ರೇಣೂರು ಎಂಬ ಹೆಸರಿನ ಊರುಗಳು ಅನೇಕ ಇವೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಒಂದು ಹಳ್ಳಿಯಿದೆ. ಆದರೆ ಇದು ನಮ್ಮ ವಿಷಯಕ್ಕೆ ಸಂಬಂಧಪಟ್ಟದ್ದಲ್ಲ.

ನಿವೃತ್ತಿ ತಿಪ್ಪಾಭಟ್ಟರು

ವೆಂಕಟರಾಮಭಟ್ಟರ ಪತ್ನಿ ಮಾತೃಶ್ರೀ ಅಕ್ಕಯ್ಯಮ್ಮನವರು ಮುಡಿಯನೂರಿನವರು. ಮುಡಿಯನೂರೆಂಬುದು ಅಗ್ರಹಾರ-ಮುಲುಕನಾಡು ವೈದಿಕ ಬ್ರಾಹ್ಮಣರ ಅಗ್ರಹಾರ. ಒಂದಾನೊಂದು ಕಾಲದಲ್ಲಿ ಅದು ವಿದ್ವಾಂಸರಿಂದ ತುಂಬಿದ್ದದ್ದೆಂದು ತೋರುತ್ತದೆ. ಅಲ್ಲಿಯ ಮನೆತನಗಳ ಹೆಸರುಗಳೇ ಇದನ್ನು ತೋರಿಸುತ್ತದೆ. “ಶ್ರೀಧರಂವಾರು”, “ನೈಷಧಂವಾರು”, “ಪುರಾಣಂವಾರು”, “ಪಾರಾಯಣಂವಾರು”, “ನಿವೃತ್ತಿವಾರು” – ಹೀಗೆ ಹೆಸರುಗಳು. ಅಕ್ಕಯ್ಯಮ್ಮನವರು ನಿವೃತ್ತಿ ತಿಪ್ಪಾಭಟ್ಟರವರ ತಂಗಿ. ತಿಪ್ಪಾಭಟ್ಟರು ವಿದ್ವಾಂಸರು. ವೇದಾಧ್ಯಯನ ಮಾಡಿದ್ದದ್ದಲ್ಲದೆ ಸಾಹಿತ್ಯದಲ್ಲಿಯೂ ಪರಿಶ್ರಮ ಮಾಡಿದ್ದರು. ಶ್ರಾದ್ಧಾದಿ ಸಂದರ್ಭಗಳಲ್ಲಿ ಭೋಜನಕ್ಕೆ ಕುಳಿತಾಗ ವ್ಯಾಖ್ಯಾನಕ್ಕೋ ವಾಕ್ಯಾರ್ಥಕ್ಕೋ ಪ್ರಾರಂಭಿಸುವರು. ಇದನ್ನು ಅವರ ಭಾವಮೈದ ವೆಂಕಟರಾಮಭಟ್ಟರು “ತಿಪ್ಪಯ್ಯ ತಕರಾರ್ಲು” ಎಂದು ಹಾಸ್ಯ ಮಾಡುತ್ತಿದ್ದರು. “ತಿಪ್ಪಯ್ಯನ ತಕರಾರು” ಗಳಿಗೆ ಕೊನೆಯೇ ಇಲ್ಲ.

ನಿವೃತ್ತಿ ತಿಪ್ಪಾಭಟ್ಟರ ತಮ್ಮ ಗಂಗಾಧರ ಶಾಸ್ತ್ರಿಗಳು ವೇದಾಧ್ಯಯನಸಂಪನ್ನರು, ಕರ್ಮನಿಷ್ಠರು. ನಮ್ಮ ಮನೆಯಲ್ಲಿ ಅವರು ಒಂದು ಮಂಡಲ ಸೂರ್ಯ ನಮಸ್ಕಾರ ಮಾಡಿದ್ದರಂತೆ. ನನ್ನನ್ನು ನೋಡಿದಾಗಲೆಲ್ಲ ಅವರು ಮೈಮೇಲಿದ್ದ ಒಂದು ಧೋತ್ರವನ್ನು ತೋರಿಸಿ “ಇದು ನಿನ್ನ ತಾತ ಕೊಟ್ಟದ್ದು. ಹೇಗಿದೆ ನೋಡು ಅಂಚು ಇಷ್ಟು ದಿನವಾದರೂ. ನೀನು ಸೂರ್ಯಪ್ರಸಾದದಿಂದ ಹುಟ್ಟಿದವನು. ಆದದ್ದರಿಂದ ನೀನು ಬಹಳ ಶುಚಿಯಾಗಿ ಭಕ್ತಿಯಿಂದ ಇರಬೇಕು” ಎನ್ನುತ್ತಿದ್ದರು. ಅವರು ಶಿವರಾತ್ರಿಯ ಸಂದರ್ಭಗಳಲ್ಲೂ ಕಾರ್ತಿಕ ಸೋಮವಾರಗಳಲ್ಲೂ ನಮ್ಮ ಮನೆಯಲ್ಲಿ ರುದ್ರಾಭಿಷೇಕ ಮಾಡಿಸಲು ಬರುತ್ತಿದ್ದರು. ಮಹಾನ್ಯಾಸದಲ್ಲಿ ಅವರು “ಕಂಖಂಗಂಘಂಙ” ಇತ್ಯಾದಿಯಾಗಿ ಹೇಳುತ್ತಿದ್ದಾಗ ಅದೇನೋ ಬಾಲಪಾಠ ಹೇಳುತ್ತಿದ್ದಾರೆನ್ನಿಸುತ್ತಿತ್ತು ನನಗೆ.

ತಿಪ್ಪಾಭಟ್ಟರ ಸಂಪಾದನೆ

ಪ್ರಸ್ತಾವ ಬಂದಾಗ ಆ ವೈದಿಕ ಬ್ರಾಹ್ಮಣರ ಜೀವನಸ್ಥಿತಿಯನ್ನು ಕುರಿತು ಒಂದು ಮಾತು ಹೇಳಲೇಬೇಕೆನಿಸುತ್ತದೆ.

ಮುಡಿಯನೂರು ಅಗ್ರಹಾರವೆಂದು ಹೇಳಿದೆ. ಅಲ್ಲಿದ್ದ ಬ್ರಾಹ್ಮಣರೆಲ್ಲ ವೃತ್ತಿದಾರರು. ಎಂದರೆ ಯಾರೋ ಪೂರ್ವದ ಮಹಾರಾಜ ವೇದಶಾಸ್ತ್ರಾಭಿವೃದ್ಧಿಗೆಂದು ದತ್ತಿಯಾಗಿ ಬಿಟ್ಟಿದ್ದ ಜಮೀನಿನಲ್ಲಿ ಭಾಗಸ್ಥರು. ಆ ಜಮೀನುಗಳಿಂದ ಬರುತ್ತಿದ್ದ ಬತ್ತ ರಾಗಿಗಳೇ ಈ ವೈದಿಕ ಬ್ರಾಹ್ಮಣರ ಜೀವನಾಧಾರ. ಅವರು ಹಳೆಯ ಕಾಲದ ಮಣ್ಣುಮಾಳಿಗೆಯ ಮನೆಗಳಲ್ಲಿದ್ದುಕೊಂಡು ಬ್ರಹ್ಮದಾಯ ಜಮೀನಿನ ಉತ್ಪತ್ತಿಯಿಂದ ಜೀವನ ಸಾಗಿಸುತ್ತಿದ್ದರು. ಅವರಿಗೆ ಹಣದ, ಎಂದರೆ ನಾಣ್ಯದ ಅವಶ್ಯಕತೆ ಬಹು ಕೊಂಚವಾಗಿತ್ತು. ತಿಂಗಳಿಗೆ ಸರಾಸರಿ ಆರು ದಿನ ಅವರಿಗೆ ಸಂಪಾದನೆ. ಶನಿವಾರ ಮಧ್ಯಾಹ್ನ ನಾಲ್ಕು ಘಂಟೆಗೆ ಹೊರಟು ಸಂಜೆ ಆರು-ಆರೂವರೆ ಘಂಟೆಯ ವೇಳೆಗೆ ಮುಳಬಾಗಲಿನಲ್ಲಿ ಶ್ರೀ ಆಂಜನೇಯ ಸ್ವಾಮಿ ಗುಡಿಯಲ್ಲಿ ಕೂಡುವರು. ತಿಪ್ಪಾಭಟ್ಟರದು ಸ್ಥೂಲ ದೇಹ. ಎತ್ತರವಾದ ಆಳು. ನಡಿಗೆ ಮಂದ. ಶನಿವಾರ ಸಂಜೆ ವೈಶ್ಯ ಮಹಾಜನರು ಆಂಜನೇಯನ ಗುಡಿಗೆ ಬಂದು ಸ್ವಾಮಿಯ ದರ್ಶನ ಮಾಡಿದ ಬಳಿಕ ಬ್ರಾಹ್ಮಣರಿಗೆ ತಲಾ ಒಂದೊಂದು ದಮ್ಮಡಿ ದಾನ ಮಾಡುವರು. ಹೀಗೆ ತಿಪ್ಪಯ್ಯನ ಸಂಪಾದನೆ ವಾರಕ್ಕೆ ಸುಮಾರು ಹತ್ತು ಕಾಸು; ತಿಂಗಳಿಗೆ ನಲವತ್ತೈವತ್ತು ಕಾಸು.

ಇದರ ಜೊತೆಗೆ ತಿಂಗಳಿಗೆ ಎರಡು ಏಕಾದಶಿ. ಅಂದು ಸಂಜೆಯೂ ಸಂಪಾದನೆ ಎಂಟು ಹತ್ತು ಕಾಸು. ಮಾರನೆಯ ದಿನ ವೈಶ್ಯರಲ್ಲಿ ದ್ವಾದಶಿ ಕಟ್ಟಲೆ ಕೊಡುವರು–ಒಂದೊಂದು ಮನೆಯಲ್ಲಿ ಆರಾರು ಕಾಸಿನಂತೆ. ನಾಲ್ಕೈದು ಮನೆ ಸೇರಿದರೆ ಇಪ್ಪತ್ತೈದು ಮೂವತ್ತು ಕಾಸು. ಹೀಗೆ ಒಟ್ಟು ಎಂಭತ್ತೈದು, ತೊಂಭತ್ತು ಕಾಸು. ಇದು ಅವರ ನಗದು ಸಂಪಾದನೆ.

ಇದರ ಮೇಲೆ ಶ್ರಾದ್ಧಾದಿಗಳಲ್ಲಿ ಬಂದ ದಕ್ಷಿಣೆ. ಅದು ಸರಾಸರಿ ವರ್ಷಕ್ಕೆ ಒಂದೆರಡು ರೂಪಾಯಿ.

ಹೀಗೆ ವರ್ಷದ ನಗದು ಸಂಪಾದನೆ ಹನ್ನೆರಡು ರೂಪಾಯಿ-ಬಹಳ ಧಾರಾಳವಾಗಿ ಲೆಕ್ಕ ಮಾಡಿದರೆ.

ಹೀಗಿದ್ದರೂ ತಿಪ್ಪಾಭಟ್ಟರು ತೃಣೀಕೃತಪುರಂದರರಾಗಿದ್ದರು. ಯಾರಿಗೂ ತಲೆ ತಗ್ಗಿಸಿದ್ದಿಲ್ಲ. ಮುಖ ಕಹಿ ಮಾಡಿದ್ದಿಲ್ಲ. ತಾವು ನಗುತ್ತ ಇತರರನ್ನು ನಗಿಸುತ್ತ ಸಂತೋಷದಿಂದ ಆಯುಷ್ಯವನ್ನು ಕಳೆದರು. ಅವರ ಕುಟುಂಬ ದೊಡ್ಡದಾಗಿತ್ತು. ಗಂಡು ಮಕ್ಕಳು ಹೆಣ್ಣು ಮಕ್ಕಳು ಬಂಧು ಬಳಗ ಎಲ್ಲರೂ ಇದ್ದರು. ಒಂದು ದಿವಸವೂ ತಿಪ್ಪಾಭಟ್ಟರು ಕಿರಿಕಿರಿ ಪಟ್ಟವರಲ್ಲ. ಆ ಜನಕ್ಕೆ ಬಡತನವೆಂಬುದರ ಅರಿವೇ ಇರಲಿಲ್ಲವೆನ್ನಿಸುತ್ತದೆ.

ಅಕ್ಕಯ್ಯಮ್ಮನವರ ಪಾಕಪರಿಣತಿ

ಅಡಿಗೆಯಲ್ಲಿ ಅಕ್ಕಯ್ಯಮ್ಮನವರು ಎತ್ತಿದ ಕೈ. ಅವರು ಬಗೆಬಗೆಯ ಪಾಕಗಳನ್ನು ಮಾಡುತ್ತಿದ್ದರು. ಅದರಲ್ಲಿ ಮೊದಲು ಹೇಳಬೇಕಾದದ್ದು ಕಜ್ಜಾಯ, ಒಬ್ಬಟ್ಟು, ಮಾವಿನ ಕಾಯಿ ಹುಳಿ. ಕಜ್ಜಾಯ ಮಾಡುವುದು ಕಷ್ಟದ ಕೆಲಸ. ಮೊದಲು ಅಕ್ಕಿ ಒಳ್ಳೆಯದಾಗಿರಬೇಕು. ಅಕ್ಕಿಯನ್ನು ನೆನೆಹಾಕಬೇಕು. ಹದವರಿತು ಅದನ್ನು ನೆರಳಿನಲ್ಲಿ ಆರಹಾಕಬೇಕು. ಮುಪ್ಪಾಗ ಮವ್ವೀಸ ಪಾಲು ಆರಿದ ಮೇಲೆ ಅದನ್ನು ಕಲ್ಲಿನ ಒರಳಿನಲ್ಲಿ ಮರದ ಒನಕೆಯಿಂದ ಕುಟ್ಟಬೇಕು. ಕುಟ್ಟಿ ಹಿಟ್ಟು ಮಾಡಬೇಕು. ಇದು ಮೊದಲನೆಯ ಘಟ್ಟ. ಈ ಕಾಲದ ಫ್ಲೋರ್ಮಿಲ್ ಯಂತ್ರದಲ್ಲಿ ಅಕ್ಕಿ ಬೀಸಿಸಿ ಮಿಕ್ಸರ್ ಯಂತ್ರದಲ್ಲಿ ದಿಢೀರ್ ಹಿಟ್ಟು ಮಾಡುವ ಜನಕ್ಕೆ ರಟ್ಟೆ ಬಿದ್ದು ಹೋದೀತು ಆ ಕ್ರಮದಿಂದ. ಈಗ ಆ ಪ್ರಯಾಸವೂ ಇಲ್ಲ, ಆ ಘಮಲೂ ಇಲ್ಲ. ಬಲಿತ ತೆಂಗಿನಕಾಯಿ ತುರಿ, ಹುರಿದ ಎಳ್ಳು, ಮನೆಯಲ್ಲಿ ಆದ ಹೈನಿನ ತುಪ್ಪ–ಇವುಗಳಿಂದ ಕಜ್ಜಾಯಕ್ಕೆ ಬರುತ್ತಿದ್ದ ಘಮಲು ವರ್ಣಿಸಲಾಗದ್ದು. ಈಗ ನಾವು ಸಿಹಿಯನ್ನು ಕಾಣುತ್ತೇವೆ. ಬೆಲ್ಲ ಹಾಕಿದ್ದೆಲ್ಲ ಸಿಹಿಯಾಗಿರುತ್ತದೆ. ಆದರೆ ಪದಾರ್ಥಗಳ ಹದದಿಂದ ಬರತಕ್ಕದ್ದು ಘಮಲು. ಹದ ತಿಳಿದುಕೊಳ್ಳಬೇಕು ಅಕ್ಕಯ್ಯಮ್ಮನವರಿಂದ.

ಮಾವಿನಕಾಯಿ ಹುಳಿ ಎಂಬುದು ಈಗ ಬಹು ಅಪರೂಪ. ಮೂವತ್ತು ನಲವತ್ತು ವರ್ಷಗಳಿಂದ ನಾನು ಅದನ್ನು ಕಂಡಿಲ್ಲ. ಮುಳಬಾಗಲಿನಲ್ಲಿ ಕಸಿಮಾವಿನಕಾಯಿಯೂ ಇರಲಿಲ್ಲ. ಅಕ್ಕಯ್ಯಮ್ಮನವರು ಹಿಂದಿನ ನಾಡುಕಾಯನ್ನು ಅದು ಮುಪ್ಪಾಗ ಪಾಲು ಬಲಿತಿರುವಾಗ ಮೆತ್ತಗಾಗುವುದಕ್ಕೆ ಮುಂಚೆ-ದೋರಗಾಯನ್ನು ಹೇಗೋ, ಅದರ ಹುಳಿ ಮುರಿಸಿ ಬೆಲ್ಲ ಸೇರಿಸಿ ಮಾಡುತ್ತಿದ್ದರು. ಅದು ಅನ್ನಕ್ಕೆ ಅನುಪಾನವಾದ ಹುಳಿ ಎಂದರೆ ಹುಳಿ; ಇಲ್ಲ ಪಾಯಸವೆಂದರೆ ಪಾಯಸ. ಆ ಹುಳಿ ಸಿಹಿಗಳ ಬೆರಕೆ ಒಂದು ವಿಧವಾದ ಮಧು.

ದಿಲ್ಲಿ ಬಾದ್ ಷಾ ಓರಂಗಜೇಬನ ತಂಗಿ ಜೇಬ್ ಉನ್ನಿಸಾ ಎಂಬಾಕೆ ಆಗ್ರಾ ಪಟ್ಟಣದಿಂದ ಮಧುರೆಯ ಕಡೆ ಮೇನಾದಲ್ಲಿ ಹೋಗುತ್ತಿದ್ದಳಂತೆ. ಬೋವಿಗಳು ಮೇನಾ ಹೊತ್ತು ನಡೆಯುತ್ತಿದ್ದರು. ಅದು ಕಾಡು ಪ್ರದೇಶ. ಅದರ ಸೊಬಗನ್ನು ನೋಡಲೆಂದು ಆಕೆ ಮೇನೆಯ ಪರದೆಯನ್ನು ಸರಿಸಿ ಈ ಕಡೆ ಆ ಕಡೆ ವೀಕ್ಷಿಸುತ್ತಿದ್ದಳು. ಆಕೆಯ ದೃಷ್ಟಿ ಒಬ್ಬ ಹುಡುಗನ ಮೇಲೆ ಬಿತ್ತು. ಅವನು ಅಲ್ಲಿ ದನ ಕಾಯುತ್ತಿದ್ದ. ಆಕೆ ಆತನನ್ನು ಬಳಿಗೆ ಕರೆದು ಮಾತನಾಡಿಸಿದಳು. ಆಕೆ ಸಂಸ್ಕೃತ ಅಭ್ಯಾಸ ಮಾಡಿದವಳು-ತನ್ನ ಅಣ್ಣ ಮುರಾದನಂತೆ. ಬಹುಶಃ ಸಂಸ್ಕೃತದಲ್ಲಿಯೋ ಸಂಸ್ಕೃತ ಮಿಶ್ರಿತವಾದ ಉರ್ದು ಭಾಷೆಯಲ್ಲಿಯೋ

ಮಾತನಾಡಿಸಿರಬೇಕು; “ನೀನು ಯಾರು? ನಿನ್ನ ಜೀವನವೇನು?” ಇತ್ಯಾದಿ. ಅದಕ್ಕೆ ಆ ಬಾಲಕ ಹೀಗೆ ಉತ್ತರ ಕೊಟ್ಟನಂತೆ:

> ತರುಣಂ ಸರ್ಷಪಶಾಕಂ
> ನವೋದನಂ ಪಿಚ್ಛಲಾನಿ ಚ ದಧೀನಿ ।
> ಅಲ್ಪವ್ಯಯೇನ ಸುಂದರಿ
> ಗ್ರಾಮ್ಯಜನೋ ಮೃಷ್ಟಮಶ್ನಾತಿ ॥

“ಎಳೆಯ ಹರವೆಯ ಸೊಪ್ಪಿನಪಲ್ಯ. ಬಿಸಿ ಬಿಸಿ ಅನ್ನ, ಮುಟ್ಟಿದರೆ ಬೆರಳು ಜಾರಿಸುವಂತಿರುವ ಗಡ್ಡೆ ಮೊಸರು-ಖರ್ಚು ಹೆಚ್ಚಾಗದ ಇಂಥ ಊಟದಿಂದ ಹಳ್ಳಿಯ ಜನರು ಮೃಷ್ಟಾನ್ನಭೋಜನವನ್ನುಂಡಂತೆ ತೃಪ್ತರಾಗಿರುತ್ತಾರೆ.” ಇಂಥದು ೭೦ ವರ್ಷಗಳ ಹಿಂದಿನ ಪರಿಕವಣೆ.

ಒಂದು ಅವಿವೇಕ

ಒಂದು ದಿನ ದ್ವಾದಶಿ. ಆ ಹೊತ್ತು ಸ್ಕೂಲಿಗೆ ಬೆಳಗ್ಗೆ ರಜ. ನಾವು ಎಂಟು ಹತ್ತು ಮಂದಿ ವಿದ್ಯಾರ್ಥಿಗಳು ಒಂಭತ್ತು ಘಂಟೆಯ ಸುಮಾರಿಗೆ ಸೇರಿದ್ದೆವು. ಊರಿನ ಪೂರ್ವದ ಕಡೆ ನರಸಿಂಹತೀರ್ಥಕ್ಕೆ ಹೋಗುವ ರಸ್ತೆಯಲ್ಲಿ ನಮ್ಮ ಷಿಕಾರಿ. ಸಾಲುಮರಗಳಲ್ಲಿ ನೇರಳೆ ಮರಗಳು ಹೆಚ್ಚು. ನಾವೆಲ್ಲ ಒಬ್ಬೊಬ್ಬರು ಒಂದೊಂದು ಮರದಮೇಲೆ ಹತ್ತಿ ಯಥೇಷ್ಟವಾಗಿ ಹಣ್ಣು ತಿಂದೆವು. ಮರದಿಂದಿಳಿದ ಮೇಲೆ ನಾವು ಮಾಡಿದ್ದನ್ನು ಯಾರಾದರೂ ಕಂಡುಹಿಡಿದಾರೆಂಬ ಭಯ ನಮ್ಮ ಮನಸ್ಸಿಗೆ ಬಂತು. ನೇರಳೆ ಹಣ್ಣು ನೆಗಡಿ ಕೆಮ್ಮು ತರತಕ್ಕದ್ದೆಂದು ಅಪವಾದ. ಆದದ್ದರಿಂದ ನಾಲಗೆಯ ಮೇಲಿನ ನೀಲಿಯನ್ನು ಕಳೆಯಬಲ್ಲ ವಸ್ತುವನ್ನು ಹುಡುಕ ಹೊರಟೆವು-ಹುಣಿಸೆಕಾಯಿ. ಹುಣಿಸೇ ಮರದ ಮೇಲೆ ಹತ್ತಿ ಹುಣಿಸೆಕಾಯನ್ನು ತಿಂದೆವು. ಬಹಳ ದೊಡ್ಡ ಸಾಹಸವನ್ನು ಮಾಡಿದೆವೆಂದು ಮೈಮರೆತು ಸ್ಕೂಲಿಗೆ ಬಂದೆವು. ನಾವು ಅಲ್ಲಿಗೆ ಬರುವ ವೇಳೆಗೆ ನನ್ನ ತಂದೆ ಒಂದು ದೊಡ್ಡ ಕನ್ನಡಿಯನ್ನು ಸಿದ್ಧಪಡಿಸಿಟ್ಟುಕೊಂಡಿದ್ದರು. ನಮ್ಮನ್ನು ಒಬ್ಬೊಬ್ಬರನ್ನೂ ಕರೆದು "ನಾಲಿಗೆ ನೀಡು" ಎನ್ನುವುದು; ಕನ್ನಡಿ ತೋರಿಸುವುದು. ಆಗ ನಮಗೇ ಗೊತ್ತಾಯಿತು; ನಮ್ಮ ಕಳ್ಳತನದ ಗುರುತು ಅಳಿಸಿಹೋಗಿರಲಿಲ್ಲವೆಂದು. ನನಗೆ ಕೊಂಚ ಬೆತ್ತದ ಸೇವೆಯೂ ಆಯಿತು. ನಾವು ಗುಸ ಗುಸ ಮಾತನಾಡಿಕೊಂಡೆವು, ನಮ್ಮ ಸಾಹಸವನ್ನು ಯಾರು ತಿಳಿಸಿರಬಹುದು ಎಂದು. ಆ ದಿನ ಸಂಜೆ ಗುಟ್ಟು ತಾನಾಗಿ ಹೊರಕ್ಕೆ ಬಂತು.

ವೆಂಕಟರಾಮಭಟ್ಟರು ನಗುನಗುತ್ತಾ ನನ್ನನ್ನು ಕೇಳಿದರು:

"ಗಟ್ಟಿಯಾಗಿ ಹೊಡೆದನೋ ಮೆತ್ತಗೆ ಹೊಡೆದನೋ? ಗಟ್ಟಿಯಾಗಿ ಹೊಡೆಯಬೇಡ ಎಂದು ನಾನು ಹೇಳಿದ್ದೆ."

ಆ ಬೆಳಗ್ಗೆ ವೆಂಕಟರಾಮಭಟ್ಟರು ಕುದುರೆಯ ಮೇಲೆ ಕುಳಿತು ಯಾವುದೋ ಹಳ್ಳಿಯಿಂದ ಹಿಂತಿರುಗುತ್ತಿದ್ದರು. ನಾನು ಮರದ ಮೇಲಿದ್ದದ್ದನ್ನು ನೋಡಿದ್ದರು. ಅಲ್ಲಿಯೇ ನನ್ನನ್ನು ಎಚ್ಚರಿಸಬಹುದಾಗಿತ್ತು. ಹಾಗೆ ಮಾಡದೆ ದಾರಿಯಲ್ಲಿ ನನ್ನ ತಂದೆಯನ್ನು ಕಂಡಾಗ ಅವರ ಸಂಗಡ ಹೇಳಿದರು.

ಕಾರಣವನ್ನು ಭಟ್ಟರೇ ವಿವರಿಸಿದರು:

“ನೇರಳೆ ಹಣ್ಣು ತಿಂದದ್ದು ತಪ್ಪಲ್ಲ. ನಾಲ್ಕು ಹಣ್ಣು ತಿಂದರೆ ಏನಾಗುತ್ತದೆ. ಮೈಯನ್ನು ಅದಕ್ಕೆ ಒಗ್ಗಿಸಿಕೊಳ್ಳಬೇಕು. ಮತ್ತು ಹುಡುಗರ ಸಂತೋಷಕ್ಕೆ ಭಂಗ ಮಾಡಬಾರದು; ಆದರೆ ಇರುವ ಅಪಾಯವನ್ನು ಅವರಿಗೆ ತಿಳಿಸಬೇಕು. ನೇರಳೆ ಮರದಲ್ಲಿ ಅಪಾಯವಿರುವುದು ಅದರ ರೆಂಬೆಗಳಲ್ಲಿ. ರೆಂಬೆಗಳು ಬೇಗ ಮುರಿಯುತ್ತವೆ. ಮುರಿದು ಕೆಳಕ್ಕೆ ಬಿದ್ದರೆ ಹುಡುಗರ ಕೈಯೋ ಕಾಲೋ ಮುರಿದೀತೆಂದು ಭಯ. ಇದಕ್ಕೋಸ್ಕರ ಹುಡುಗರನ್ನು ಎಚ್ಚರಿಸುವಂತೆ ಹೇಳಿದೆ. ನಿಮ್ಮಪ್ಪನ ಕೈಪೆಟ್ಟು ಜೋರಾದದ್ದು, ಹೋಗಲಿ ಬಿಡು.

ನಮ್ಮ ತಂದೆ ಆ ಹೊತ್ತು ಅಷ್ಟು ಬಲವಾಗೇನೂ ಹೊಡಿಯಲಿಲ್ಲ; ನಗುತ್ತಿದ್ದರು.

ಶಿವಶಂಕರಶಾಸ್ತ್ರಿಗಳು

ನಮ್ಮ ಮನೆಗೆ ಶಿವಶಂಕರಶಾಸ್ತ್ರಿಗಳೆಂಬವರೊಬ್ಬರು, ಪೋಚಂಭಟ್ಲು ನರಸಿಂಹಶಾಸ್ತ್ರಿಗಳೆಂಬವರೊಬ್ಬರು ಹವ್ಯಕವ್ಯಗಳಿಗೆ ಬರುತ್ತಿದ್ದರು. ಅದರಲ್ಲಿ ಶಿವಶಂಕರಶಾಸ್ತ್ರಿಗಳನ್ನು ನಾನು ಒಂದುನೂರು ಸಲವಾದರೂ ನೋಡಿರಬಹುದು. ಅವರ ಬಟ್ಟೆ ಚಿಂದಿಯಿಲ್ಲದ್ದನ್ನು ಒಂದು ಸಲವೂ ಕಂಡಿಲ್ಲ. ಆದರೆ ಬಟ್ಟೆ ಹರಕಲು ಎಂಬುದರ ಪರಿವೆಯೇ ಅವರಿಗಿರಲಿಲ್ಲ. ಹರಕಲು ಬಟ್ಟೆಯನ್ನು ಹೊಲಿಯುತ್ತಿರಲಿಲ್ಲ. ಹರಿದ ಅಂಚುಗಳನ್ನು ಕೈಯಿಂದ ಗಂಟು ಹಾಕಿರುತ್ತಿದ್ದರು. ಯಾವಾಗಲೂ ಅವರ ಮೈಮೇಲೆ ಈ ಗಂಟುಗಳ ಚಿಂದಿಗಳು, ಬಟ್ಟೆಯ ಹರಕಲು ಅವರ ಗಡ್ಡದ ಮೇಲಿನ ಕೂದಲಿನಂತೆ ಸ್ವಾಭಾವಿಕವಾದದ್ದು. "ಹರಿದಿರುವ ಕಡೆ ಹೊಲಿದಾದರೂ ಹಾಕಿಕೊಳ್ಳಬಹುದಲ್ಲ?" ಎಂದರೆ ಶಾಸ್ತ್ರಿಗಳು "ಛೆಛೆ! ಹೊಲಿದ ಬಟ್ಟೆಯನ್ನು ಬ್ರಾಹ್ಮಣ ಉಡುವುದೆಂದರೇನು? ಅದು ಶಾಸ್ತ್ರ ವಿರೋಧ" ಎನ್ನುತ್ತಿದ್ದರು. ಇದನ್ನು ಪ್ರಸ್ತಾವಿಸುವುದರ ಅರ್ಥವೇನು? ಅವರು ವೇದ ಹಾಡಿದ್ದೂ ಹಾಡಿದ್ದೇ. ಎರಡು ಹೊತ್ತಿನ ಭೋಜನ ಅದು ಹೆಚ್ಚಿನ ತರಕಾರಿಗಳಾಗಲಿ ಭಕ್ಷ್ಯಭೋಜ್ಯಗಳಾಗಲಿ ಇಲ್ಲದ್ದು; ಸ್ನಾನಕ್ಕೆ ಕೆರೆಯ ನೀರು; ಹಣೆಗೆ ವಿಭೂತಿ. ಇಷ್ಟಿದ್ದರೆ ಅವರಿಗೆ ಅಷ್ಟೈಶ್ವರ್ಯವಿದ್ದಂತೆ.

ಅವರು ಯಾರೂ ಯಾಚನೆಗೆ ಹೊರಟವರಲ್ಲ. ಯಾಜನ, ಪ್ರತಿಗ್ರಹ-ಇವೆರಡೂ ಕರ್ತವ್ಯವೆಂಬ ಬುದ್ಧಿಯಿಂದಲೇ ಇದ್ದವರು.

> ಅತ್ಯಾಶನಾದತೀಪಾನಾತ್
> ಯಚ್ಚ ಉಗ್ರಾತ್ ಪ್ರತಿಗ್ರಹಾತ್ ॥

ಈ ಪಾಪಗಳಿಂದ ನಮ್ಮನ್ನು ಉಳಿಸು ಭಗವಂತ-ಎಂದು ಬೇಡುತ್ತಿದ್ದವರು. ಇಂಥ ಜನಕ್ಕೆ "Raising the standard of living" ಜೀವನ ಸೌಕರ್ಯದ ಮಟ್ಟವನ್ನು ಏರಿಸುವುದು ಎಂಬ ಮಹಾಮಂತ್ರದ ಯುಗದಲ್ಲಿ ಹಳೆಯ ನೆಮ್ಮದಿ ಹೋಯಿತು; ಹಳೆಯ ಮನೋನೈರ್ಮಲ್ಯ ಹೋಯಿತು; ಹೊಸ ಸಂಪತ್ತು ಬರಲಿಲ್ಲ. ಆಗ ಅವರು ಮಾಡುತ್ತಿದ್ದ ಊಟ ಈಗ ಅವರ ಮಕ್ಕಳು ಮೊಮ್ಮಕ್ಕಳಿಗೆ ದುರ್ಲಭವಾಗಿದೆ.

ದಿನಚರಿ

ವೆಂಕಟರಾಮಭಟ್ಟರ ದಿನಚರಿ ಹೀಗೆ: ಬೆಳಗಿನ ಜಾವ ಐದು ಘಂಟೆಗೆ ಅಧ್ಯಯನ ಪ್ರಾರಂಭ. ಸುಮಾರು ಆರು ಆರೂವರೆಯಾದ ಮೇಲೆ ಆ ದಿನ ಪುರೋಹಿತ ಕಾರ್ಯವಿದ್ದ ಹಳ್ಳಿಗೆ ಕುದುರೆಯ ಮೇಲೆ ಹೊರಡುವರು. ಸುಮಾರು ಹತ್ತು ಘಂಟೆಯ ವೇಳೆಗೆ ಹಿಂತಿರುಗಿ ಬಂದು, ವೈಶ್ಯರ ಮನೆಗಳಲ್ಲಿ ಕೆಲಸವಿದ್ದರೆ ಅಲ್ಲಿಗೆ ಹೋಗುವರು. ಮನೆಗೆ ಸುಮಾರು ಹನ್ನೊಂದು ಘಂಟೆಗೆ ವಾಪಸಾಗುವರು. ಆಗ ತಮ್ಮ ಮನೆಯೊಳಕ್ಕೆ ಹೋಗುವುದಕ್ಕೆ ಮುಂಚೆ ನಮ್ಮ ಮನೆಯ ಮುಂದೆ ನಿಂತು "ಮಾವಯ್ಯ, ಗುಂಡೂ" ಎಂದು ಕೂಗುಹಾಕುವರು. ನಾನು ಒಡನೆಯೇ ಅವರ ಮನೆಯೊಳಕ್ಕೆ ಹೋಗುತ್ತಿದ್ದೆ. ಆ ವೇಳೆಗೆ ಅವರು ಮೂಟೆ ಬಿಚ್ಚಿ ಆ ದಿನ ತಮಗೆ ಉಪಾಯನವಾಗಿ ಬಂದಿದ್ದ ಸಾಮಗ್ರಿಯ ಗಂಟನ್ನು ಬಿಚ್ಚುವರು. ಅದರಲ್ಲಿದ್ದ ಕೊಬ್ಬರಿ ಚೂರು, ಬೆಲ್ಲ, ಖರ್ಜೂರ, ಬಾಳೆಹಣ್ಣುಗಳನ್ನು ನನಗಾಗಿ ತೆಗೆದಿಡುತ್ತಿದ್ದರು. ಅಕ್ಕಿ, ಬೇಳೆ, ಕುಂಬಳಕಾಯಿ ಚೂರು ತಮ್ಮ ಅಡಿಗೆ ಮನೆಗೆ ಕೊಡುತ್ತಿದ್ದರು. ಅದರಲ್ಲಿದ್ದ ದಕ್ಷಿಣೆಯ ಕಾಸುಗಳನ್ನು ನಡು ಮನೆಯ ಕಂಭದ ಮೇಲಣ ಬೋದಿಗೆಯಲ್ಲಿ ಇಡುತ್ತಿದ್ದರು.

ಬೋದಿಗೆ ಬ್ಯಾಂಕು

ಈ ಬೋದಿಗೆ ಎಂಬುದು ಒಂದು ವಿಶೇಷ ವಿಷಯ. ಬೋದಿಗೆ ಎಂದರೆ ಮರದ ಕಂಭದ ಮೇಲೆ ನಾಲ್ಕು ದಿಕ್ಕುಗಳಿಂದ ಬಂದ ದಿಮ್ಮಿಗಳು ಸೇರಿದ ಕಡೆ ಆಗುವ ನಾಲ್ಕು ಮೊಡಕುಗಳು. ಈ ಬೋದಿಗೆಯ ಗೂಡೇ ನಮ್ಮ ಗುರುಗಳ "ಐರನ್ ಸೇಫ್". ನಾಲ್ಕು ಮೊಡಕುಗಳ ಪೈಕಿ ಒಂದರಲ್ಲಿ ದುಡ್ಡು ಕಾಸು. ಇನ್ನೊಂದರಲ್ಲಿ ಜನಿವಾರ ಮತ್ತು ಪವಿತ್ರಗಳು. ಮೂರನೆಯದರಲ್ಲಿ ವಿಭೂತಿ. ನಾಲ್ಕನೆಯದರಲ್ಲಿ ಮಂತ್ರಾಕ್ಷತೆಯ ಬಟ್ಟಲು. ಈ ಬೋದಿಗೆಯ ಪಕ್ಕದಲ್ಲಿ ಒಂದು ಜಂತಿಗೆಯ ಮೇಲೆ ದರ್ಭೆಯ ಕಟ್ಟು. ಇನ್ನೊಂದು ಜಂತಿಗೆಯ ಮೇಲೆ ಪಂಚಾಂಗ.

ಇದಿಷ್ಟು ಅವರ ಸಂಪತ್ತು. ಅವರಿಗೆ ಪೆಟ್ಟಿಗೆ ಬೇಕಾಗಿರಲಿಲ್ಲ. ಅವರ ಹಣದ ಖರ್ಚಿನ ಸಂದರ್ಭಗಳು ಬಹಳ ಕಡಿಮೆ. ಅವರು ಇತರರಿಗೆ ದಕ್ಷಿಣೆ ಕೊಡುತ್ತಿದ್ದದ್ದುಂಟು. ದಿನ ದಿನವೂ ಆಕಳಿಗೆ ಹುಲ್ಲು ಕೊಳ್ಳುತ್ತಿದ್ದದ್ದುಂಟು. ಸಂಜೆ ಗುಡಿಗೆ ಹೋದಾಗ ಹಲಗಾರತಿಯಲ್ಲಿ ಒಂದು ಮುಡುಪು ಹಾಕುತ್ತಿದ್ದದ್ದುಂಟು. ಇಂಥ ಖರ್ಚುಗಳಿಗೆ ಬೋದಿಗೆ ಬ್ಯಾಂಕು. ಅಲ್ಲಿ ಅವರಿರಿಸಿದ್ದ ಹಣಕಾಸನ್ನು ಯಾರೂ ಎಂದೂ ಮುಟ್ಟಿದವರಲ್ಲ.

ಮಧ್ಯಾಹ್ನ

ಹನ್ನೊಂದು ಘಂಟೆಗೆ ಮನೆಗೆ ಬಂದ ತರುವಾಯ ವೆಂಕಟರಾಮಭಟ್ಟರು ಸ್ನಾನಕ್ಕೆ ಹೊರಡುತ್ತಿದ್ದರು. ಆ ವೇಳೆಗೆ ಅವರ ಶಿಷ್ಯರಲ್ಲೊಬ್ಬ ದೇವತಾರ್ಚನೆ ಮಾಡಿರುತ್ತಿದ್ದ. ಭಟ್ಟರು ಸ್ನಾನ ಮಾಡಿ ಬರುವ ವೇಳೆಗೆ ಇಬ್ಬರು ಮೂವರು ವಿದ್ಯಾರ್ಥಿಗಳು ಅವರ ಮನೆಯಿಂದ ಹೊರಟು ಶಂಕರತೀರ್ಥ, ಸೋಮೇಶ್ವರನ ಗುಡಿ, ಆಂಜನೇಯಸ್ವಾಮಿ ಗುಡಿ, ಕಾಶಿ ವಿಶ್ವೇಶ್ವರನ ಗುಡಿ, ವಿಠಲಸ್ವಾಮಿಯ ಗುಡಿ—ಈ ಪ್ರದೇಶಗಳಿಗೆ ಹೋಗಿ "ಪರಸ್ಥಳದ ಬ್ರಾಹ್ಮಣರು ದಯಮಾಡಿ ಭೋಜನಕ್ಕೆ ಬರಬೇಕು" ಎಂದು ಕರೆಯುತ್ತಿದ್ದರು. ಪ್ರತಿದಿನವೂ ಇಂಥ ಅತಿಥಿ ಅಭ್ಯಾಗತರು ಇಬ್ಬರು ಮೂವರಾದರೂ ಇರುತ್ತಿದ್ದರು. ಅವರು ವೆಂಕಟರಾಮಭಟ್ಟರ ಮನೆಗೆ ಬಂದು ಸ್ನಾನ ಮಾಡಿ ತಮ್ಮ ತಮ್ಮ ಆಹ್ನಿಕಗಳಿಗೆ ಕೂಡುತ್ತಿದ್ದರು. ಕೆಲವರು ರುದ್ರಾಧ್ಯಾಯ ಹೇಳುವರು. ಕೆಲವರು ಸೂರ್ಯ ನಮಸ್ಕಾರ ಮಾಡುವರು. ಕೆಲವರು ನವಗ್ರಹ ಸೂಕ್ತಗಳನ್ನು ಹೇಳುವರು. ಕೆಲವರು ಶಿವಕವಚ ಇಂದ್ರಾಕ್ಷೀ ಸ್ತೋತ್ರ ಮೊದಲಾದವನ್ನು ಪಾರಾಯಣ ಮಾಡುವರು. ಹೀಗಾಗಿ ವೆಂಕಟರಾಮಭಟ್ಟರ ಆಹ್ನಿಕವೂ ಇತರರ ಆಹ್ನಿಕಗಳೂ ಮುಗಿಯುವ ವೇಳೆಗೆ ಹನ್ನೆರಡೂವರೆ ಒಂದು ಘಂಟೆ ಆಗುವುದು. ಅನಂತರ ಭೋಜನದಲ್ಲಿ ಸಾಮಾನ್ಯವಾಗಿ ಪ್ರತಿದಿನವೂ ರಾಗಿಯ ಹಿಟ್ಟು ಇರುತ್ತಿತ್ತು.

ಭೋಜನ ಮುಗಿದ ಮೇಲೆ ಒಂದು ಘಂಟೆ ಹೊತ್ತು ವಿಶ್ರಾಂತಿ. ಸುಮಾರು ಮೂರು ಘಂಟೆಗೆ ಪುನಃ ಅಧ್ಯಯನ ಪ್ರಾರಂಭವಾಗುವುದು. ಐದು ಐದೂವರೆ ಘಂಟೆಯವರೆಗೂ ನಡೆಯುವುದು. ಆ ವೇಳೆಗೆ ವೇದಮೂರ್ತಿಗಳನ್ನು ನೋಡುವುದಕ್ಕಾಗಿ ಜನ ಬಂದಿರುತ್ತಿದ್ದರು.

ಸಂಜೆ

ಭಟ್ಟರು ಸಾಮಾನ್ಯವಾಗಿ ಒಳಗಡೆಯ ಮೊಗಸಾಲೆಯಲ್ಲಿ, ಅಥವಾ ಅಂಗಳದಲ್ಲಿ ಕುಳಿತಿರುತ್ತಿದ್ದರು. ಸಾಮಾನ್ಯವಾಗಿ ಯೋಗಾಸನದಲ್ಲಿ ಕುಳಿತಿರುತ್ತಿದ್ದರು. ಒಂದು ಸಣ್ಣ ಪಂಚೆಯನ್ನು ಬೆನ್ನುಕಡೆಯಿಂದ ಮುಂಗಾಲುಗಳಿಗೆ ಸುತ್ತಿ ಯೋಗಪಟ್ಟವಾಗಿ ಬಿಗಿದಿರುವರು. ಕೈಯಲ್ಲಿ ಒಂದು ಚಿಟಿಕೆ ನಸ್ಯ. ಪಕ್ಕದಲ್ಲಿ ಪಂಚಾಂಗ, ಬಿಲ್ವಪತ್ರದ ನಸ್ಯದ ಬುರುಡೆ ಇರುವುವು.

ವೆಂಕಟರಾಮಭಟ್ಟರು ನಸ್ಯ ಹಾಕಿಕೊಳ್ಳುತ್ತಿದ್ದದ್ದನ್ನು ನಾನು ಕಾಣೆ. ಅವರು ನಸ್ಯದ ಚಿಟಿಕೆ ಕೈಯಲ್ಲಿ ಹಿಡಿದಿರುತ್ತಿದ್ದರು. ಹಾಕಿಕೊಳ್ಳುತ್ತಿದ್ದದ್ದು ತುಂಬಾ ಅಪರೂಪ. ನರೆತ ತಲೆಯಿಂದ ಕಾಲಿನವರೆಗೂ ಚೊಕ್ಕಟವಾಗಿರುತ್ತಿದ್ದರು. ಅವರು ಕೊಳಕು ಸಹಿಸುತ್ತಿದ್ದವರಲ್ಲ.

ಭಟ್ಟರನ್ನು ನೋಡಲು ಬರುತ್ತಿದ್ದ ಜನ ಊರಿನಲ್ಲಿದ್ದ ಬಗೆಬಗೆಯ ಜಾತಿಗಳು. ದರ್ಜಿಯವರು, ವೈಶ್ಯರು, ಬಣಜಿಗರು, ಕುಂಬಾರರು, ಒಕ್ಕಲಿಗರು, ಬ್ರಾಹ್ಮಣರಂತೂ ಸರಿಯೇ ಸರಿ. ಈ ಎಲ್ಲ ಜಾತಿಗಳವರೂ ಬರುತ್ತಿದ್ದರು. ಈಗ ಹರಿಜನರೆಂದು ಕರೆಯಿಸಿಕೊಳ್ಳುವ ಜಾತಿಯವರೂ ಬರುತ್ತಿದ್ದರು. ಕೆಲ ಕೆಲವರು ತಮ್ಮ ತಮ್ಮ ರೋಗ ವಿಯೋಗಾದಿ ದುಃಖಗಳನ್ನು ಹೇಳಿಕೊಳ್ಳುವರು. ಕೆಲವರು ಗೃಹಚ್ಛಿದ್ರಗಳನ್ನು ಹೇಳಿಕೊಳ್ಳುವರು. ಕೆಲವರು ವಿವಾಹ ಘಟನೆಯ ಚಿಂತೆಗಳನ್ನು ಹೇಳುವರು. ಕೆಲವರು ಮದುವೆ ಮುಂಜಿಗಳಿಗೆ ಮುಹೂರ್ತನಿಶ್ಚಯ ಕೇಳುವರು.

ಸ್ನೇಹ-ಉಪಶಾಂತಿ

ಭಟ್ಟರು ಎಲ್ಲರ ಮಾತನ್ನೂ ತಾಳ್ಮೆಯಿಂದ ಕೇಳುವರು. ಲಗ್ನ ಕಟ್ಟಬೇಕೆನ್ನುವವರಿಗೆ ಪಂಚಾಂಗ ನೋಡಿ ಗುಣಿಸಿ ಲಗ್ನ ಗೊತ್ತುಮಾಡಿ ಹೇಳುವರು. ಗೃಹಕೃತ್ಯದ ಕಷ್ಟಗಳನ್ನು ಹೇಳಿಕೊಳ್ಳುವವರಿಗೆ ಸಮಾಧಾನ ಹೇಳುವರು. ಯಾವುದೋ ಹಳೆಯ ಕಥೆ, ಯಾವುದೋ ಉಪಾಖ್ಯಾನ, ಯಾವುದೋ ರಾಮಾಯಣ ಭಾರತ ಕಥೆ-ಇದನ್ನು ಸಂಗ್ರಹವಾಗಿ ಹೇಳಿ, ಅದರಿಂದ ಉಪದೇಶ ತಾನಾಗಿ ತೋರುವಂತೆ ವಿವರಿಸುವರು. ಕೇಳಿದವರ ಮನಸ್ಸಿಗೆ ಸಮಾಧಾನ ಬರುತ್ತಿತ್ತು. ವೆಂಕಟರಾಮಭಟ್ಟರು ತಮ್ಮ ಊರಿಗೆ ಎಷ್ಟೋ ಕಾರಣಗಳಿಂದ ಬೇಕಾದವರಾಗಿದ್ದರು. ಆ ಕಾರಣಗಳಲ್ಲಿ ಅತ್ಯಂತ ಮುಖ್ಯವಾದದ್ದೆಂದರೆ ಈ ಸಮಾಧಾನದಾನ ಸಾಮರ್ಥ್ಯ. ಆ ಸಾಮರ್ಥ್ಯ ಅವರಿಗೆ ಬಂದಿದ್ದದ್ದು ಅವರ ಉಪಶಾಂತತೆಯಿಂದ. ಸೌಮ್ಯ, ವಾತ್ಸಲ್ಯ, ಉಪಶಾಂತಿ–ಇವು ವೆಂಕಟರಾಮಭಟ್ಟರಿಗೆ ಭಗವಂತ ಅನುಗ್ರಹಿಸಿದ್ದ ವರಗಳು.

ವೇದವಿದ್ವಾಂಸರು ಎಷ್ಟೋ ಮಂದಿ ಇದ್ದಾರು. ಅನ್ನದಾನಶೀಲರೂ ಇದ್ದಾರು. ಆದರೆ ಸ್ನೇಹ ಉಪಶಾಂತಿಗಳನ್ನು ಕೊಡಬಲ್ಲ ಉಪಕಾರಿಗಳು ಹೆಚ್ಚು ಮಂದಿ ಎಲ್ಲಿಯೂ ಯಾವ ಕಾಲದಲ್ಲಿಯೂ ಇರರು.

ಸಂಜೆ ಸಂಧ್ಯಾವಂದನೆಯನ್ನು ಮುಗಿಸಿ ಸೋಮೇಶ್ವರ ದೇವಾಲಯಕ್ಕೆ ಹೋಗಿ ಬರುವರು. ಆಮೇಲೆ ಪುನಃ ಅಧ್ಯಯನ ಪ್ರಾರಂಭ. ಒಂಭತ್ತು ಘಂಟೆಯವರೆಗೂ ನಡೆಯುವುದು. ಅನಂತರ ಮನೆಯಲ್ಲಿ ದೇವರಿಗೆ ದೀಪಾರಾಧನೆ, ರಾತ್ರಿಯ ಭೋಜನ.

ಹೀಗೆ ಅವರ ದಿನಚರಿ.

ನನ್ನ ಉಪನಯನ

ವೆಂಕಟರಾಮಭಟ್ಟರು ನನಗೆ ಬೇಗ ಉಪನಯನ ಮಾಡಿಸಬೇಕೆಂದು ನನ್ನ ಅಜ್ಜಂದಿರನ್ನೂ ಚಿಕ್ಕ ಅಜ್ಜಂದಿರನ್ನೂ ಒತ್ತಾಯಪಡಿಸಿದರು.

"ಚೇಚಣ್ಣಾ, ನನ್ನ ಹಿರಿಯರು ನನಗೆ ನಾಲ್ಕು ವೇದಾಕ್ಷರ ಕಲಿಸಿದರು. ನಾನು ಅದನ್ನು ವಂಶದಲ್ಲಿ ಹುಟ್ಟಿದವರಿಗೆ ಹೇಳಬೇಕೆಂದಿದ್ದೆ. ಆದರೆ ಅದು ದೈವದ ಚಿತ್ತಕ್ಕೆ ಬರಲಿಲ್ಲ. (ಅವರ ಮೊದಮೊದಲನೆಯ ಗಂಡು ಮಕ್ಕಳು ತೀರಿಹೋಗಿದ್ದರು. ಆಗ ಇದ್ದ ಮಗ ನನಗಿಂತ ಚಿಕ್ಕವನು.) ಮಾವಯ್ಯನಿಗಾದರೂ ಬೇಗ ಮುಂಜಿ ಮಾಡಿದರೆ ಅವನಿಗೆ ಅಧ್ಯಯನ ಹೇಳಬೇಕೆಂದು ಚಪಲವಿದೆ. ನೀನು ಲಾಯರಿ; ಶುದ್ಧ ಲೌಕಿಕ. ನಿನಗೆ ಇದು ಹಿಡಿಸುತ್ತದೋ ಇಲ್ಲವೋ..."

–ಎಂದಿದ್ದರಂತೆ. ಅದು ನನ್ನ ತಾತಂದಿರಿಗೆ ಹಿಡಿಸಿತು. ಉಪನಯನವಾಗಿ ಪ್ರಥಮೋಪಾಕರ್ಮ ನಡೆದ ಮೂರನೆಯ ದಿನವೇ ವೆಂಕಟರಾಮಭಟ್ಟರು ನನಗೆ ಕಟ್ಟು ಮಾಡಿದರು–ನಾನು ನಮ್ಮ ಮನೆಯ ಮುಂದಿನ ಕೈಸಾಲೆಗೆ ಸೇರಿದ್ದ ಕೊಠಡಿಯಲ್ಲಿ ಮಲಗತಕ್ಕದ್ದು ಎಂದು. ಬೆಳಗಿನ ಜಾವ ನಾಲ್ಕೂವರೆ ಘಂಟೆ ಸುಮಾರಿನಲ್ಲಿ ವೆಂಕಟರಾಮಭಟ್ಟರು ನಾನು ಮಲಗಿದ್ದ ಕೊಠಡಿಯ ಮುಂದೆ ನಿಂತು "ಮಾವಯ್ಯ, ಗುಂಡೂ" ಎಂದು ಕೂಗುವರು. ಒಂದೆರಡು ಸಾರಿ ಕೂಗಿದ ಮೇಲೆ ನಾನು ಎದ್ದು ಹೊರಕ್ಕೆ ಬಂದ ಕೂಡಲೆ ಒಂದು ತಂಬಿಗೆ ನೀರನ್ನು ಕೊಟ್ಟು "ಮುಖ ಕೈಕಾಲು ತೊಳೆದುಕೊಂಡು ಬಾ" ಎನ್ನುವರು. ನಾನು ಬಂದು ಕೂಡುತ್ತಲೇ "ಶ್ರೀ ಗುರುಭ್ಯೋ ನಮಃ ಹರಿಃ ಓಮ್" ಪ್ರಾರಂಭ.

ಸಂಜೆ ಅವರು ಗುಡಿಯಿಂದ ಹಿಂತಿರುಗಿದ ಬಳಿಕ ನನ್ನನ್ನು ಕರೆದು ಅಂಗಳದಲ್ಲಿ ಕೂಡಿಸಿಕೊಂಡು ಸ್ತೋತ್ರಪಾಠ ಹೇಳಿಕೊಡುವರು.

> ರತ್ನಸಾನುಶರಾಸನಂ
> ರಜತಾದ್ರಿಶೃಂಗ ನಿಕೇತನಂ।
> ಶಿಂಜಿನೀಕೃತ ಪನ್ನಗೇಶ್ವರ-
> ಮಚ್ಯುತಾನಲಸಾಯಕಂ।
> ಕ್ಷಿಪ್ರದಗ್ಧಪುರತ್ರಯಂ
> ತ್ರಿದಿಶಾಲಯೈರಭಿವಂದಿತಂ।

ಚಂದ್ರಶೇಖರಮಾಶ್ರಯೇ ಮಮ
ಕಿಂ ಕರಿಷ್ಯತಿ ವೈಯಮಃ ॥

ಸಹಾಧ್ಯಯನ

ನಮ್ಮ ಮನೆಯಲ್ಲಿ ಒಬ್ಬ ಸ್ನೇಹಿತರ ಮಗ ವೆಂಕಟರಾಯ ಎಂಬಾತ ನನ್ನ ಜೊತೆಯಲ್ಲಿ ವಿದ್ಯಾರ್ಥಿಯಾಗಿದ್ದ. ಆತನೂ ನನ್ನ ಜೊತೆಯಲ್ಲಿ ಸ್ವಲ್ಪ ಕಾಲ ಅಧ್ಯಯನಕ್ಕೆ ಸೇರುತ್ತಿದ್ದ. ನಮ್ಮಿಬ್ಬರಲ್ಲಿ ಯಾರಾದರೂ ಸ್ವರ ತಪ್ಪಿದರೆ "ಏಮಿರಾ ಅಪಸ್ವರಂ ತಿರುವೇಂಗಡಯ್ಯ" ಎನ್ನುತ್ತಿದ್ದರು. ಅವರು ಇದಕ್ಕಿಂತ ಕಠಿಣವಾದ ಮಾತನ್ನು ಉಪಯೋಗಿಸಿದ್ದನ್ನು ನಾನು ಕೇಳಿಲ್ಲ.

ನಮ್ಮ ಊರಿಗೆ ದೊಡ್ಡಬೆಲೆ ಗೋಪಾಲಾಚಾರ್ಯರೆಂಬ ಸಾಹಿತ್ಯ ವಿದ್ವಾಂಸರು ಮೇಷ್ಟರಾಗಿ ಬಂದರು. ಗೋಪಾಲಾಚಾರ್ಯರು ಈಗ ಪ್ರಸಿದ್ಧ ಕನ್ನಡದ ಪ್ರೊಫೆಸರಾಗಿರುವ ಶ್ರೀ ಡಿ. ಎಲ್. ನರಸಿಂಹಾಚಾರ್ಯರವರ ಬಂಧುಗಳು. ಗೋಪಾಲಾಚಾರ್ಯರು ಕಾಳಿದಾಸನ 'ಮೇಘಸಂದೇಶ' ವನ್ನೂ ಇನ್ನೊಂದೆರಡು ಸಂಸ್ಕೃತ ಕಾವ್ಯಗಳನ್ನೂ ಕನ್ನಡದಲ್ಲಿ ಅರ್ಥಸಹಿತವಾಗಿ ಪ್ರಕಟಪಡಿಸಿದ್ದವರು. ನಾನು ಅವರಲ್ಲಿ 'ಋತುಸಂಹಾರ' ಕಾವ್ಯವನ್ನು ಪಾಠಮಾಡಿದೆ. ಅವರು ಒಂದು ದಿನ ನನ್ನನ್ನು ಕೇಳಿದರು:

"ನಿಮ್ಮ ಊರಿನಲ್ಲಿ ಇಂಥ ದೊಡ್ಡ ಅಧ್ಯಾಪಕರನ್ನಿಟ್ಟುಕೊಂಡಿದ್ದೀರಿ. ಹೀಗೆ ವೇದ ಹೇಳುವ ಪಾಠಕರು ಸಿಕ್ಕುವುದು ಅಪರೂಪ. ವೆಂಕಟರಾಮಭಟ್ಟರು ನನಗೆ ಒಂದಿಷ್ಟು ವೇದಪಾಠ ಹೇಳಿಯಾರೆ?"

ನಾನು ಈ ಸಂಗತಿಯನ್ನು ನಮ್ಮ ಗುರುಗಳಿಗೆ ತಿಳಿಸಿದೆ. ಅವರು ಸಂತೋಷಪಟ್ಟು–

"ಆಹಾ! ವೇದ ಕಲಿತುಕೊಳ್ಳುವವರಿದ್ದು ನಾನು ಪಾಠ ಹೇಳುವುದಿಲ್ಲವೆಂದರೆ ಅದು ಪಾಪವಾದೀತು. ನೀನೂ ಈಗ ಒಬ್ಬನೇ ಹೇಳಿಸಿಕೊಳ್ಳುತ್ತಿದ್ದೀ. ನಿನ್ನ ಜೊತೆಗೆ ಇನ್ನೊಬ್ಬರಾದರೂ ಇದ್ದರೆ ಪಾಠ ಸುಷ್ಠುವಾಗುತ್ತದೆ. ಅವಶ್ಯವಾಗಿ ಅವರು ಬರಲಿ"

–ಎಂದರು. ಆಮೇಲೆ ನಮಗಿಬ್ಬರಿಗೂ ಪಾಠ, ನಕ್ಷತ್ರೇಷ್ಟಿಯಿಂದ ಆರಂಭವಾಯಿತು

ಅಗ್ನಿರ್ನಃ ಪಾತು ಕೃತ್ತಿಕಾಃ ॥
ನಕ್ಷತ್ರಂ ದೇವಮಿಂದ್ರಿಯಮ್ ॥
ಇದಮಾಸಾಂ ವಿಚಕ್ಷಣಮ್ ॥
ಹವಿರಾಸಂ ಜುಹೋತನ ॥

ಗುರೂಪಸದನ

ನನ್ನ ಉಪನಯನವಾದ ನಾಲ್ಕನೆಯ ದಿನ ಕಂಬೋಲಿಯ ದಿನ, ದಂಡಕೋಲು ಕಟ್ಟುವುದಕ್ಕಾಗಿ ಆಂಜನೇಯಸ್ವಾಮಿಯ ದೇವಾಲಯಕ್ಕೆ ಹೊರಡುವ ಏರ್ಪಾಟಿನಲ್ಲಿದ್ದೇವೆ. ನನ್ನ ಚಿಕ್ಕತಾತ ಶೀನಪ್ಪನವರು ಒಂದು ಭಾರಿ ಕುದುರೆಗೆ ಜೀನುಹಾಕಿ ಶಾಲು ಹೊದಿಸಿ ಅಲಂಕಾರ ಮಾಡಿ ಮನೆಯ ಮುಂದೆ ನಿಲ್ಲಿಸಿದರು, ವಟುವನ್ನು ಅದರ ಮೇಲಿರಿಸಿ ಮೆರವಣಿಗೆ ಮಾಡಿಸಬೇಕೆಂದು. ಶೀನಪ್ಪನವರು ಜರ್ಬುದಾರಿ ಮನುಷ್ಯರು, ಷೋಕಿದಾರರು. ಅವರ ಕಥೆ ಇಲ್ಲಿ ಅಪ್ರಕೃತ. ವೆಂಕಟರಾಮಭಟ್ಟರು ಇದೇನೆಂದು ಕೇಳಿದರು. ಶೀನಪ್ಪನವರ ಉದ್ದೇಶವನ್ನು ತಿಳಿದು,

“ಇದು ಬೇಡ. ಈ ಹೊತ್ತಿಗೆ ಸರಿಯಲ್ಲ. ಈ ಹೊತ್ತಿನ ಕರ್ಮ ಗುರೂಪಸದನದ್ದು. ಗುರುವಿನ ಮನೆಗೆ ಹೋಗುವವರು ನಮ್ರರಾಗಿರಬೇಕು, ಅಟ್ಟಹಾಸ ಕೂಡದು”

–ಎಂದು ಖಂಡಿತವಾಗಿ ನಿಷೇಧಿಸಿದರು.

ಗುಡಿಯಲ್ಲಿ ನಟುವರ ತಂಡ ನೆರೆದಿತ್ತು, ಅವರ ಮುಖ್ಯಸ್ಥೆ ನನ್ನ ಚಿಕ್ಕ ತಾತಂದಿರ ಬಳಿ ಬಂದು, “ಮನೆಗೆ ಹೋಗುವಾಗ ನಮ್ಮ ಸೇವೆ ಆಗಬಹುದಲ್ಲ?” ಎಂದು ಕೇಳಿದಳು. ಕೊಂಚ ನಿಷ್ಠುರವಾದ ಮಾತೂ ಆಡಿದಳು– “ನಾವು ಹಣ ಕೇಳುತ್ತೇವೆಯೆ?” ಇತ್ಯಾದಿಯಾಗಿ. ಇದನ್ನು ಗುರುಗಳಿಗೆ ತಿಳಿಸಿದಾಗ ಅವರು ನಕ್ಕು,

“ಬಹು ಚೆನ್ನಾಗಿದೆ ಶೀನಣ್ಣ ನಿನ್ನ ಮಾತು. ವಟುವು ಸ್ರಕ್ಚಂದನಾದಿಗಳನ್ನು ಹತ್ತಿರ ಬರಲೀಸುವುದಿಲ್ಲವೆಂದು ವಚನ ಕೊಟ್ಟ ಮರುಕ್ಷಣವೇ ತಾಫಾದವರ ಕಡೆ ಹೊರಡುವುದೆನ್ನುತ್ತೀಯಾ?”

–ಎಂದು ಛೀಮಾರಿ ಹಾಕಿದರು.

ಮಗಳ ಮದುವೆ

ಇದಾದ ಎರಡು ಮೂರು ವರ್ಷಗಳ ಅನಂತರ ವೆಂಕಟರಾಮಭಟ್ಟರ ಮನೆಯಲ್ಲಿ ಅವರ ಮಗಳ ಮದುವೆ ನಡೆಯಿತು–ನಾಲ್ಕು ದಿನ ವೈದಿಕವಿಜೃಂಭಣೆಯಿಂದ ನಡೆಯಿತು. ಸೊಗಸಾದ ಭೋಜನ, ಗಂಧ ಪುಷ್ಪ ತಾಂಬೂಲ ವಿನಿಯೋಗದಲ್ಲಿ ಕೊರತೆಯೇನೂ ಇರಲಿಲ್ಲ. ಆ ಸಂದರ್ಭದಲ್ಲಿ ಅವರ ಶಿಷ್ಯಕೋಟಿಗೆ ಸೇರಿದ ನಟುವರು ತಮ್ಮ ಸೇವೆ ನಡೆಯಬೇಕೆಂದು ಕುತೂಹಲಪಟ್ಟರು. ಆದರೆ ನೇರವಾಗಿ ಭಟ್ಟರವರಲ್ಲಿ ಈ ಮಾತು ಹೇಳಲು ಅವರಿಗೆ ಹೆದರಿಕೆ, ಸಂಕೋಚ. ಈ ಕಾರಣದಿಂದ ಅವರು ತಮ್ಮ ಸಂಕಲ್ಪವನ್ನು ನನ್ನ ತಂದೆಗೆ ತಿಳಿಸಿ ಆತ ಗುರುಗಳ ಅನುಮತಿಯನ್ನು ಸಂಪಾದಿಸಬೇಕೆಂದು ಸೂಚಿಸಿದರು. ವೆಂಕಟರಾಮಭಟ್ಟರಿಗೆ ನನ್ನ ತಂದೆಯ ಮಾತಿನಲ್ಲಿ ತುಂಬ ವಿಶ್ವಾಸವೆಂದು ಅವರು ತಿಳಿದುಕೊಂಡಿದ್ದರು. ನನ್ನ ತಂದೆ ಅವರ ಮಾತಿಗೆ ಕಿವಿ ಜೋಲು ಹಾಕಿದರು. ಅದರಂತೆ ಗುರುಗಳಲ್ಲಿ ಬಿನ್ನಯಿಸಿದಾಗ ವೇದಮೂರ್ತಿಗಳು "ಎಲ್ಲಾದರೂ ಉಂಟೆ? ನಾವು ಶುದ್ಧ ವೈದಿಕರು. ಇದೆಲ್ಲ ಸಾಹುಕಾರರೂ ಲೌಕಿಕರೂ ಮಾಡಿಕೊಳ್ಳಬಹುದಾದ ಏರ್ಪಾಟು. ಇಲ್ಲಿ ಏನಿದ್ದರೂ ಶಾಸ್ತ್ರ ಕರ್ಮವೆಷ್ಟೋ ಅಷ್ಟೇ. ತಾಫೆ ಗೀಫೆ ನಮ್ಮ ಸಂಪ್ರದಾಯವಲ್ಲ" –ಎಂದುಬಿಟ್ಟರು.

ಸಭಾಪೂಜೆ

ಆ ಮದುವೆಯ ಸಂದರ್ಭದ ಇನ್ನೊಂದು ಸಂಗತಿ ನನ್ನ ನೆನಪಿನಲ್ಲಿ ದೃಢವಾಗಿ ನಿಂತಿದೆ. ಮದುವೆಯ ಮಾರನೆಯ ದಿವಸ ಸಭಾಪೂಜೆ. ಊರಿನ ಪ್ರಮುಖರು–ವರ್ತಕರು, ಜಮೀನುದಾರರು, ಸರಕಾರದ ಅಧಿಕಾರಿಗಳು ನೂರು ಮಂದಿ ನೆರೆದಿದ್ದರು. ಅವರ ಜೊತೆಗೆ ಬಂಧು ಬಳಗ, ವೈದಿಕ ಗೋಷ್ಠಿ ಎಲ್ಲ ಸೇರಿತ್ತು. ಮಧ್ಯಾಹ್ನ ಸುಮಾರು ನಾಲ್ಕು ಘಂಟೆ. ಸಭೆ ಪ್ರಾರಂಭವಾಗುತ್ತಲೇ ವೆಂಕಟರಾಮಭಟ್ಟರ ಶಿಷ್ಯರು ಏಳೆಂಟು ಮಂದಿ ಅಲ್ಲಿ ಇಲ್ಲಿ ಎದ್ದು ನಿಂತರು. ವೇದೋಕ್ತವಾಗಿ ದಂಪತಿಗಳನ್ನು ಆಶೀರ್ವದಿಸಲು ಒಬ್ಬೊಬ್ಬಾತನೂ ಎಡಗೈಯಲ್ಲಿ ಮಂತ್ರಾಕ್ಷತೆಯ ತಟ್ಟೆ ಹಿಡಿದು ಬಲಗೈಯಿಂದ ಒಂದಿಷ್ಟು ಅಕ್ಷತೆ ಕೈಗೆ ತೆಗೆದುಕೊಂಡಿದ್ದ. ಅವರಲ್ಲಿ ಅಹಮಹಮಿಕೆ-ನಾನು ಮುಂದು, ತಾನು ಮುಂದು ಎಂದು. ಎಲ್ಲರೂ ಗುರುಗಳ ಅಪ್ಪಣೆಗಾಗಿ ಕಾದಿದ್ದರು. ವೆಂಕಟರಾಮಭಟ್ಟರು ಮುಗುಳುನಗೆ ನಗುತ್ತ ಹೇಳಿದರು:

“ತಿಪ್ಪಯ್ಯ, ನೀನು ಅವರಿಗೆ ಹೇಳು.”

ತಿಪ್ಪಾಭಟ್ಟರು ಇಬ್ಬರಿಬ್ಬರನ್ನು ಜೊತೆ ಮಾಡಿ ನಾಲ್ಕು ಗುಂಪಿನವರು ಒಬ್ಬೊಬ್ಬರು ಒಂದೊಂದು ಹನಸು ಹೇಳತಕ್ಕದ್ದೆಂದು ವಿಧಿಸಿದರು. ಯಾವ ಗುಂಪು ಮೊದಲು, ಯಾವುದು ಆಮೇಲೆ ಎಂಬುದನ್ನೂ ಅವರೇ ಹೇಳಿದರು. ಅನಂತರ ಪ್ರಾರಂಭವಾಯಿತು. ಆ ಎಂಟು ಮಂದಿಯ ಪೈಕಿ ನನಗೆ ಒಬ್ಬಾತನ ಹೆಸರು ಜ್ಞಾಪಕವಿದೆ: ಆತ ನಂಗಲಿ ಗ್ರಾಮದ ಕಡೆಯ ಸೂರ್ಯನಾರಾಯಣ. ಆ ಶಿಷ್ಯರು ತಮ್ಮ ಹನಸನ್ನು ಪದ, ಕ್ರಮ, ಜಟೆ, ಘನ–ಈ ನಾಲ್ಕು ರೂಪಗಳಲ್ಲಿ ಹೇಳಿದರು. ಒಂದು ನನಗೆ ಜ್ಞಾಪಕವಿದೆ:

> ಹಗ್ಂಸಶ್ಶುಚಿಷತ್ । ಶುಚಿಷದ್ವಸುಃ । ಶುಚಿಷದಿತಿ ಶುಚಿ-ಸತ್ ।
> ವಸುರನ್ತರಿಕ್ಷಸತ್ ॥

ನಾಲ್ಕು ತಂಡಗಳ ವೇದಗಾನ ಮುಗಿಯುವ ವೇಳೆಗೆ ಸುಮಾರು ಏಳು ಘಂಟೆ ಆಗಿರಬಹುದು, ಸಭಿಕರೆಲ್ಲ ಬೆರಗಾಗಿ ಕುಳಿತಿದ್ದರು. ವೆಂಕಟರಾಮಭಟ್ಟರ ಮುಖ, ಅವರ ಭಾರ್ಯೆಯ ಮುಖ ಪ್ರಫುಲ್ಲವಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಯೂ ದಂಪತಿಗಳನ್ನು ಆಶೀರ್ವದಿಸಿದ ಬಳಿಕ ವೆಂಕಟರಾಮಭಟ್ಟರ ಬಳಿಗೆ ಬಂದು ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿದರು. ಗುರುಗಳ ಅಂದಿನ ಆನಂದ ನೋಡಿದವರು ಅನುಭವಿಸಿದ್ದು ವರ್ಣಿಸುವುದು ಮಾತಿಗೆ ಶಕ್ಯವಿಲ್ಲ. ಶ್ರೀರಾಮನು ಲಂಕೆಯನ್ನು ಜಯಿಸಿದ ದಿವಸ,

ಅಲೆಕ್ಸಾಂಡರನು ಜಯಗಳಿಸಿದ ದಿವಸ, ಕೊಲಂಬಸ್ಸನು ಅಮೆರಿಕವನ್ನು ಕಂಡ ದಿವಸ, ಎಂಥ ಆನಂದಪಟ್ಟಿರಬಹುದೋ ಅಂಥಾದ್ದು ನಮ್ಮ ವೆಂಕಟರಾಮಭಟ್ಟರ ಆನಂದ. ವೇದಗುರು ಕಲಿಸಿದ ಪಾಠ ಶಿಷ್ಯರಲ್ಲಿ ಫಲಕ್ಕೆ ಬಂದದ್ದನ್ನು ಕಂಡರು.

ಆ ಕಾಲದ ಜನ ಇಂಗ್ಲಿಷಿನಲ್ಲಿ ಹೇಳುವಂತೆ Unsophisticated -ಅತಿ ನಾಗರಿಕತೆಯನ್ನು ಕಾಣದವರು; ಅತಿಕೃತಕವನ್ನು ಅರಿಯದವರು. ಸರಳರಾಗಿದ್ದದ್ದು ಮಾತ್ರವಲ್ಲದೆ ಸರಳತೆಯೇ ಯುಕ್ತವೆಂದು ನಂಬಿದ್ದವರು.

***

ವೆಂಕಟರಾಮಭಟ್ಟರು ನನ್ನ ತಾತನನ್ನು "ಚೇಚಣ್ಣ" ಎಂದು ಕರೆಯುತ್ತಿದ್ದರು. ಏಕ ವಚನದಲ್ಲಿ ನನ್ನ ತಂದೆಯನ್ನು "ಸಾರನ್ನ" ಎಂದು ಕರೆಯುತ್ತಿದ್ದರು–ಇಸ್ಕೂಲು ಮೇಷ್ಟರಾದದ್ದರಿಂದ, ವೆಂಕಟರಾಮಭಟ್ಟರವರನ್ನು ಎಲ್ಲರೂ ಸಾಮಾನ್ಯವಾಗಿ "ಅಪ್ಪ" ಎಂದು ಕರೆಯುತ್ತಿದ್ದದ್ದು ವಾಡಿಕೆ. ಅವರ ಅಕ್ಕಂದಿರು ಅವರನ್ನು ಹಾಗೆ ಕರೆಯುತ್ತಿದ್ದರು; ಎಲ್ಲರೂ ಅದನ್ನು ಅನುಕರಿಸಿದರು.

ಒಂದು ದುಃಖ ಪ್ರಕರಣ

ನನ್ನ ತಾತಂದಿರ ಅವಸಾನಕಾಲದಲ್ಲಿ ಸುತ್ತಮುತ್ತ ಇದ್ದ ನಾಲ್ವರೈವರಲ್ಲಿ ವೆಂಕಟರಾಮಭಟ್ಟರು ಒಬ್ಬರು. ನನ್ನ ತಂದೆ ಚಿಕ್ಕತಾತಂದಿರು ಕಣ್ಣೀರಿಟ್ಟು ಅತ್ತಂತೆ ವೆಂಕಟರಾಮಭಟ್ಟರೂ ಕಂಬನಿ ಸುರಿಸಿದರು. ಅನಂತರ ನಡೆಯಬೇಕಾದ ಸಂಸ್ಕಾರ ಕಾರ್ಯಗಳಲ್ಲಿ ಪುರೋಹಿತರಾಗಿರಲು ತಾವು ಸಮರ್ಥರಾಗಿದ್ದರೂ ಆ ದುಃಖವನ್ನು ಸಹಿಸಲು ತಮ್ಮಿಂದಾಗದೆಂದೂ ಪದೇ ಪದೇ ಚೇಚಣ್ಣನ ಹೆಸರನ್ನು ಮೃತನೆಂದು ಹೇಳುವುದು ತಮಗೆ ಅಸಾಧ್ಯವೆಂದೂ ಆಪ್ತರಿಗೆ ಹೇಳಿ ವೇದಮೂರ್ತಿ ಶಾಮಭಟ್ಟರವರನ್ನು ಅಂದಿನ ಪೌರೋಹಿತ್ಯಕ್ಕಾಗಿ ಪ್ರಾರ್ಥಿಸಿಕೊಂಡರು. ಏಳನೆಯ ದಿನದಿಂದ ಕಡೆಯ ದಿನದವರೆಗಿನ ಕರ್ಮಗಳಿಗಾಗಿ ಹೆಬ್ಬಣಿಯಿಂದ ಶ್ರೀಪತಿಭಟ್ಟರವರನ್ನು ಕರೆಯಿಸಿದರು. ಎಲ್ಲ ಕಾರ್ಯ ವಿಧಾನಗಳಲ್ಲೂ ವೆಂಕಟರಾಮಭಟ್ಟರು ಮುಂದೆ ನಿಂತು ತಾವೇ ಕರ್ತನೋ ಎಂಬಂತೆ ಆ ದುಃಖ ಪ್ರಕರಣವನ್ನು ಆಗು ಮಾಡಿಸಿದರು.

ವಸಿಷ್ಠ ಕಲ್ಪರು

ವೆಂಕಟರಾಮಭಟ್ಟರು ಊರಿಗೆಲ್ಲ ಪೂಜ್ಯರಾಗಿದ್ದರು. ಎಲ್ಲ ಜಾತಿಗಳ ಜನರೂ ಅವರಲ್ಲಿ ಭಕ್ತಿಯಿಟ್ಟಿದ್ದರು. ಅಂತ್ಯಜರೆನಿಸಿಕೊಂಡಿದ್ದವರು ಕೂಡ ಅವರಲ್ಲಿ ಬಂದು ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದದ್ದಲ್ಲದೆ ತಮ್ಮ ತಮ್ಮ ಮನೆಗಳಲ್ಲಿ ನಡೆಯಬೇಕಾಗಿದ್ದ ಮದುವೆ ಮೊದಲಾದ ಶಾಸ್ತ್ರಕರ್ಮಗಳಿಗೆ ಮುಹೂರ್ತವಿರಿಸಿಕೊಳ್ಳುತ್ತಿದ್ದರು. ಮುಸಲ್ಮಾನ ಜನರೂ ಅವರಲ್ಲಿ ವಿಶ್ವಾಸದಿಂದ ನಡೆಯುತ್ತಿದ್ದರು.

ವೆಂಕಟರಾಮಭಟ್ಟರ ಕರ್ಮನಿಷ್ಠೆಯೂ ಚಾರಿತ್ರವೂ ಉಪಶಾಂತಿಯೂ ಸರ್ವಜನ ಮೈತ್ರಿಯೂ ಹಾಗೆ ಗೌರವಪ್ರೇರಕವಾಗಿದ್ದವು. ನನಗೆ ತಿಳಿದ ಎಲ್ಲ ಜನರೂ ಅವರನ್ನು ಸಾಕ್ಷಾತ್ ವಸಿಷ್ಠರೆಂದೇ ತಿಳಿದಿದ್ದರು.

ದೀವಳಿಗೆಯ ಸುಮಾರಿನಲ್ಲಿ ಬರುವ ಉಮಾಮಹೇಶ್ವರವ್ರತದ ದಿವಸ ಅವರ ಮನೆ ಒಂದು ಜಾತ್ರೆಯ ಸ್ಥಳದಂತೆ ಕಾಣುತ್ತಿತ್ತು. ಎಲ್ಲ ಜಾತಿ ಎಲ್ಲ ಕೋಮುಗಳೂ ಅವರ ಮನೆಗೆ ಬಂದು ಅಲ್ಲಿ ಉಮಾಮಹೇಶ್ವರ ಪೂಜೆ ನಡಸಿ ಪ್ರಸಾದ ತೆಗೆದುಕೊಂಡು ಹೋಗುತ್ತಿದ್ದರು. ಆ ಹೊತ್ತು ದೇವರ ನೈವೇದ್ಯಕ್ಕೆಂದು ಜನರು ತಂದೊಪ್ಪಿಸಿದ ಪಣ್ಯಾರಗಳು ಮೊಣಕಾಲಿನಷ್ಟೆತ್ತರದ ರಾಶಿಯಾಗಿ ಬೀಳುತ್ತಿದ್ದದ್ದನ್ನು ನಾನು ನೋಡಿದ್ದೇನೆ. ಊರಿನ ಮಕ್ಕಳಿಗೆಲ್ಲ ಅದರಲ್ಲಿ ಪಾಲು.

ಆ ಊರಿನಲ್ಲಿ ನಟುವಾಂಗದವರ ಮನೆಗಳು ಎಂಟು ಹತ್ತು ಇದ್ದವು. ಆ ಎಲ್ಲ ಮನೆಗಳವರೂ ವೆಂಕಟರಾಮಭಟ್ಟರನ್ನು ಗುರುಗಳೆಂದು ಭಾವಿಸಿ ಅವರ ಮನೆಯಲ್ಲಿ ಗೆಜ್ಜೆ ಪೂಜೆ ಮಾಡಿಸಿಕೊಳ್ಳುತ್ತಿದ್ದರು. ವೆಂಕಟರಾಮಭಟ್ಟರಾದರೋ ತಾವು ಸಮಸ್ತರಿಗೂ ಪುರೋಹಿತರಾಗಿರುವುದು ತಮ್ಮ ಕುಲಕರ್ತವ್ಯವೆಂದು ನಂಬಿದ್ದವರು.

ರಾಮಾಯಣದ ಉಪದೇಶ

ವೆಂಕಟರಾಮಭಟ್ಟರು ನನ್ನ ತಂದೆಗೆ ಶ್ರೀಮದ್ರಾಮಾಯಣ ಉಪದೇಶ ಮಾಡಿದ ದಿವಸದ ಸಂಭ್ರಮ ನನ್ನ ನೆನಪಿನಲ್ಲಿ ಸ್ಫುಟವಾಗಿ ಚಿತ್ರಿತವಾಗಿದೆ. ಅಂದು ವಿಜಯ ದಶಮಿಯ ಹಬ್ಬ. ಕೋಲಾರದಿಂದ ನನ್ನ ತಾತಂದಿರು ಬಂದಿದ್ದರು. ಅವರಿಗೆ ತಮ್ಮ ಮಗ ರಾಮಾಯಣ ಪಾರಾಯಣ ಮಾಡಬೇಕೆಂಬ ಉತ್ಸಾಹ. ಅವರ ತಮ್ಮನಿಗೂ ಹಾಗೆ ಉತ್ಸಾಹ. ಮನೆಯನ್ನು ರಂಗವಲ್ಲಿ, ತೋರಣಗಳಿಂದ ಸಿಂಗರಿಸಿದ್ದರು. ಐದಾರು ಮಂದಿ ವೈದಿಕ ಬ್ರಾಹ್ಮಣರೂ ಮುತ್ತೈದೆಯರೂ ಬಂದಿದ್ದರು. ಓಲಗ ನಡೆಯಿತು. ಬೆಳಗ್ಗೆ ಒಂಭತ್ತು ಘಂಟೆಯ ವೇಳೆಗೆ ಪೂಜೆ, ಪಂಚಾಮೃತ ರುದ್ರಾಭಿಷೇಕ ಪೂರ್ವಕ ಸಹಸ್ರನಾಮಾರ್ಚನೆ, ಕುಂಕುಮಾರ್ಚನೆ, ಮಹಾ ಮಂಗಳಾರತಿ, ಮಂತ್ರಪುಷ್ಪಗಳು– ಇವೆಲ್ಲ ಮುಗಿದ ಮೇಲೆ ಉಪದೇಶ. ವೆಂಕಟರಾಮಭಟ್ಟರು

> ಕೂಜಂತಂ ರಾಮರಾಮೇತಿ...
> ವಾಲ್ಮೀಕಿಗಿರಿಸಂಭೂತಾ...
> ವೇದವೇದ್ಯೇ ಪರೇ ಪುಂಸಿ...
> ವೈದೇಹೀಸಹಿತಂ...

ಈ ಪೀಠಿಕಾ ಪದ್ಯಗಳನ್ನು ಪದಪದ ಬಿಡಿಸಿ ತಾವು ಉಚ್ಚರಿಸಿ ಬಳಿಕ ನನ್ನ ತಂದೆ ಒಂದೊಂದು ಪದಸಮೂಹವನ್ನು ಎರಡೆರಡು ಸಾರಿ ನುಡಿಯುವಂತೆ ಹೇಳಿದರು. ಅನಂತರ

> ತಪಸ್ಸ್ವಾಧ್ಯಾಯನಿರತಂ...

ಈ ಸಂಕ್ಷೇಪಸರ್ಗವನ್ನು ಪೂರ್ತಿ ತಾವು ಹೇಳಿ ಶಿಷ್ಯನ ಬಾಯಿಂದ ಹೇಳಿಸಿದರು.

ಇದು ಮುಗಿಯುವ ವೇಳೆಗೆ ಮಧ್ಯಾಹ್ನ ಭೋಜನಕಾಲ. ಹೋಳಿಗೆ ಪಾಯಸದ ಅಡಿಗೆ. ಆ ರಾತ್ರಿ ಪುನಃ ಕುಂಕುಮಾರ್ಚನೆ, ಪೂಜೆ. ಮಾರನೆಯ ದಿನವೂ ವಿಶೇಷ ಪೂಜೆ ಪಾರಾಯಣಗಳು ನಡೆದವು.

ಇಂಥ ಸಮಾರಂಭಗಳು ಮುಳಬಾಗಲಿನಲ್ಲಿ ಆಗಾಗ ನಡೆಯುತ್ತಿದ್ದವು. ವೆಂಕಟರಾಮಶಾಸ್ತ್ರಿಗಳೆಂಬ ಘನವಿದ್ವಾಂಸರು ವರ್ಷೇ ವರ್ಷೇ ಕ್ರಮವಾಗಿ ರಾಮೋತ್ಸವ

ನಡಸುತ್ತಿದ್ದರು. ಇವರ ವಿಷಯವನ್ನು ಬೇರೆ ಕಡೆ ಬರೆದಿದ್ದೇನೆ. [1] ಮಾಧ್ವ ಪಂಡಿತರುಗಳ ಮನೆಗಳಲ್ಲಿ ಮಂಗಳಪ್ರಸ್ತಗಳು ನಡೆಯುತ್ತಿದ್ದವು. ವೈಶ್ಯಾದಿ ಜನಗಳೂ ರಾಮೋತ್ಸವ ಮಾಡಿಸುತ್ತಿದ್ದರು.

ವೆಂಕಟರಾಮಭಟ್ಟರು ಬಹುಶಃ ೧೯೦೭-ಅರಲ್ಲಿ ಕಾಲಾಧೀನರಾದರು.

ವೈದಿಕರ ನಂಬಿಕೆ

ವೆಂಕಟರಾಮಭಟ್ಟರ ವೃತ್ತಾಂತವನ್ನೂ ಅವರ ಜನದ ವೃತ್ತಾಂತವನ್ನೂ ಬರೆದಿರುವುದರಲ್ಲಿ ನಾನು ಯಾವುದೋ ಲೋಕೋತ್ತರ ಸಂಗತಿಯನ್ನು ಹೇಳ ಹೊರಟಿಲ್ಲ. ಆ ಜನದ ಜೀವನ ಆ ಕಾಲಕ್ಕೆ ಸಾಮಾನ್ಯವಾದದ್ದೇ. ಅಂಥ ವೈದಿಕ ಕುಟುಂಬಗಳು ಆಗ ಅಪರೂಪವಲ್ಲ. ಎಷ್ಟೋ ಕಡೆ–ಕೋಲಾರ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ ಮುಂತಾದ ಊರುಗಳಲ್ಲಿಯೂ ಇನ್ನೂ ಸಣ್ಣ ಸಣ್ಣ ಊರುಗಳಲ್ಲಿಯೂ ಅಂಥ ವೈದಿಕ ಕುಟುಂಬಗಳು ಸಾಮಾನ್ಯವಾಗಿದ್ದವು. ಈಗ–ಎಂದರೆ ಕಳೆದ ಐವತ್ತರವತ್ತು ವರ್ಷಗಳಲ್ಲಿ ಅಂಥ ಕುಟುಂಬಗಳು ಕಡಮೆಯಾಗುತ್ತಿವೆ. ಹಿಂದಿನ ಸಮಾಜಲಕ್ಷಣಗಳು ಈಗ ಅಳಿಸಿಹೋಗುತ್ತಿವೆ. ಅದನ್ನು ಕೊಂಚಮಟ್ಟಿಗಾದರೂ ಗುರುತು ಮಾಡಬೇಕೆಂಬುದಷ್ಟೇ ನನ್ನ ಉದ್ದೇಶ. ಆ ಜೀವನವಿಧಾನದಲ್ಲಿ ಎದ್ದುಕಾಣುತ್ತಿದ್ದ ಲಕ್ಷಣಗಳು ಮುಖ್ಯವಾಗಿ ಮೂರು: (೧) ನಂಬಿಕೆ, (೨) ನೆಮ್ಮದಿ, (೩) ವಾತ್ಸಲ್ಯ.

ಅವರು ದೇವರೆಂಬುದರಲ್ಲಿಯೂ ಪುಣ್ಯ ಪಾಪಗಳು ಸ್ವರ್ಗ ನರಕಗಳೆಂಬುದರಲ್ಲಿಯೂ ನಂಬಿಕೆಯಿಟ್ಟಿದ್ದರು. ಅದು ಆಳವೂ ಗಾಢವೂ ಆದ ನಂಬಿಕೆ. ಹೀಗೆ ನಂಬಿಕೆಯಿದ್ದದ್ದರಿಂದ ಅವರ ಜೀವನದಲ್ಲಿ ಒಂದು ನೆಮ್ಮದಿ ಕಾಣಬರುತ್ತಿತ್ತು. ಯಾವುದಕ್ಕೂ ಪರದಾಟವಿಲ್ಲ. ರಾಗ ದ್ವೇಷಗಳ ಅತಿಯಿಲ್ಲ. ಬಂದ ಕಷ್ಟ ಸಂಕಟಗಳನ್ನು ಹೇಗೋ ಸುಧಾರಿಸಿ ಸಹಿಸಿಕೊಳ್ಳುವ ಶಕ್ತಿ ಅವರಿಗಿತ್ತು. ಹೆಚ್ಚು ತಲ್ಲಣವಿಲ್ಲದಿದ್ದ ಕಾರಣದಿಂದ ತಮಗೆ ಇದ್ದದ್ದರಲ್ಲಿ, ತಮಗೆ ಬಂದದ್ದರಲ್ಲಿ ಸಂತೋಷಪಡುವುದು ಅವರಿಗೆ ಸಾಧ್ಯವಾಗಿತ್ತು. ನೆಮ್ಮದಿಯಿಂದ ಸಂತೋಷ.

ಲೋಕಸ್ನೇಹ

ಹೀಗೆ ಜಗದೀಶ್ವರನ ಪ್ರಭುತ್ವದಲ್ಲಿ ನಂಬಿಕೆಯೂ ಮನಸ್ಸಿನಲ್ಲಿ ಸಮಾಧಾನವೂ ಇದ್ದದ್ದರಿಂದ ಆ ಜನಕ್ಕೆ ಲೋಕವಿಷಯದಲ್ಲಿ ಮೈತ್ರಿಯಿಂದ ನಡೆದುಕೊಳ್ಳುವುದು ಸುಲಭವಾಯಿತು. ನೆರೆಯವರಿಗೆ ಈ ಹೊತ್ತು ಸಿರಿ ಬಂದಿತೆಂದರೆ ಅದನ್ನು ನೋಡಿ ಕರುಬಿಲ್ಲ. ದೇವರು ದಯಮಾಡಿದರೆ ನಮಗೂ ನಾಳೆ ಸಿರಿ ಬಂದೀತು. ದೇವರ ದಯೆ ದೊಡ್ಡದು. ಅದು ಅವರಿಗೆ ಬಂದಿತು. ನಾವು ಸಂತೋಷಪಡೋಣ. ನೆರೆಯವರಿಗೆ ಕಷ್ಟ ಬಂದಿತು. ಅಯ್ಯೋ, ಅದು ಪಾಪ ಫಲ. ನಮಗೂ ಅದು ತಪ್ಪಿದ್ದಲ್ಲ. ಅವರ ಕಷ್ಟದ ಹೊರೆಯನ್ನು ನಮ್ಮಿಂದಾದಷ್ಟು ಹಗುರ ಮಾಡೋಣ. ಇದು ಲೋಕಸ್ನೇಹ. ಈ ಲೋಕಸ್ನೇಹ ಬರುವುದು ಮನಸ್ಸು ವಿಶಾಲವಾದಾಗ. ಮನಸ್ಸು ವಿಶಾಲವಾಗುವುದು ನೆಮ್ಮದಿಯಿದ್ದಾಗ. ನೆಮ್ಮದಿ ಬರುವುದು ನಂಬಿಕೆ ಪೂರ್ಣ ನಂಬಿಕೆಯಾದಾಗ.

ಇದು ಐವತ್ತು ಅರವತ್ತು ವರ್ಷ ಹಿಂದಿನ ಜೀವನದ ಅವಲೋಕನದಿಂದ ತೋರಿಬರುತ್ತದೆ.

ನಮ್ಮ ಮೋಟಾರ್ ಆಟಂ ಯುಗದಲ್ಲಿ, ಈಗಿನ ಗಡಿಬಿಡಿಯಲ್ಲಿ, ಇಂದಿನ ಬಾಳಿನ ಹೋರಾಟದಲ್ಲಿ, ಈ ಖಾಲಿ ಗಲಾಟೆಯಲ್ಲಿ ಈಗಿನ ಫೇಸ್‌ಪೌಡರ್ ಟೂತ್‌ಪೇಸ್ಟುಗಳ ಸಂಭ್ರಮದಲ್ಲಿ, ನೆಮ್ಮದಿಯ ಕಾಲ ಒಂದಿತ್ತೆಂಬುದನ್ನು ನಾವು ಮನಸ್ಸಿಗೆ ತಂದುಕೊಂಡರೆ ಅದರಿಂದ ನೆಮ್ಮದಿಯ ಸ್ವರೂಪ ಕೊಂಚವಾದರೂ ನಮ್ಮ ಮನಸ್ಸಿಗೆ ಬಂದೀತೇನೋ ಎಂದು ನನ್ನ ಚಪಲ.

> ಯಥಾ ವೃಕ್ಷಸ್ಯ ಸಂಪುಷ್ಪಿತಸ್ಯ ದೂರಾದ್ಗಂಧೋ ವಾತ್ಯೇವಂ
> ಪುಣ್ಯಸ್ಯ ಕರ್ಮಣೋ ದೂರಾದ್ಗಂಧೋ ವಾತಿ ॥

೩ ಸ್ನೇಹಪ್ರಿಯ ವೆಂಕಟನಾರಣಭಟ್ಟರು

ಮುಳಬಾಗಲು ವೆಂಕಟನಾರಣಭಟ್ಟರು ವೆಂಕಟರಾಮಭಟ್ಟರವರ ಜ್ಞಾತಿಗಳು ಮತ್ತು ಶಿಷ್ಯರು. ಅವರಿಗೆ ಮಾತಿನಲ್ಲಿ ಕೊಂಚ ಉಗ್ರು, ನೆತ್ತಿ. ಆದರೂ ಪೌರೋಹಿತ್ಯ ಕ್ರಿಯೆಗೆ ಅಡಚಣೆಯಾಗಿರಲಿಲ್ಲ.

ಅವರಿಗೆ ಸಂಗೀತಸಾಹಿತ್ಯಗಳಲ್ಲಿ ಹೆಚ್ಚು ಆದರಣೆ. ನನ್ನ ತಂದೆಗೆ ಸಮವಯಸ್ಕರು, ಮತ್ತು ಸ್ನೇಹಿತರು. ನಾನು ಅವರನ್ನು "ಮಾಮ" ಎಂದು ಕರೆಯುತ್ತಿದ್ದೆ.

ಮೂರು ನಾಲ್ಕು ಮಂದಿ ಉಪಾಧ್ಯಾಯರುಗಳು ನನ್ನ ತಂದೆಯ ಮಿತ್ರವರ್ಗಕ್ಕೆ ಸೇರಿದವರು. ಅಪ್ಪರ್ ಸೆಕಂಡರಿ ಪರೀಕ್ಷೆ, ಪಂಡಿತ ಪರೀಕ್ಷೆ-ಎಂಬ ವಿದ್ಯಾ ಇಲಾಖೆಯ ಪರೀಕ್ಷೆಗಳಿಗೆ ತಯಾರುಮಾಡಿಕೊಳ್ಳುತ್ತಿದ್ದರು. ನಮ್ಮ ಮನೆಯ ಮುಂದಿನ ಕೈಸಾಲೆ ವಿಶಾಲವಾಗಿದ್ದದ್ದರಿಂದ ಬೇಸಗೆಯ ಕಾಲದಲ್ಲಿ ಆ ಮೂರು ನಾಲ್ಕು ಮಂದಿ ಆ ಜಗಲಿಗಳ ಮೇಲೆ ಕೊಂಚ ಕಾಲ ಓದುತ್ತಿದ್ದು ಆಮೇಲೆ ಮಲಗುತ್ತಿದ್ದರು. ನನಗೆ ಸಂಸ್ಕೃತ ಕಾವ್ಯದ ಪ್ರಥಮ ಪರಿಚಯವಾದದ್ದು ಅವರ ಸಹವಾಸದಿಂದಲೇ. ಶ್ರೀನಿವಾಸಪುರದ ಶೇಷಪ್ಪನವರು, ಅತ್ತಿಕುಂಟೆ ಸುಬ್ಬರಾಯರು, ಕುರ್‍ರಾಯ ಶ್ರೀನಿವಾಸರಾಯರು ಅವರಲ್ಲಿ ಮುಖ್ಯರು. ಶ್ರೀನಿವಾಸರಾಯರೆಂಬವರು ಕುಮಾರವ್ಯಾಸ ಭಾರತದ ಪದ್ಯಗಳನ್ನು ಹೇಳುವಲ್ಲಿ "ಎಂದ ಕುರುರಾಯ" "ಬಂದ ಕುರುರಾಯ" ಎಂಬ ಪದ್ಯಗಳನ್ನು ಹೇಳುವುದರಲ್ಲಿ ಉತ್ಸಾಹ ತೋರಿಸುತ್ತಿದ್ದರಂತೆ. ಮತ್ತು ಆತ ಆಗಾಗ ಕುರುಗಳಿಂದ ಬಾಧೆ ಪಡುತ್ತಿದ್ದರಂತೆ. ಈ ಎರಡು ಸಂಗತಿಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಹೆಡ್ ಮಾಸ್ಟರ್ ಚಂದ್ರಶೇಖರ ಶಾಸ್ತ್ರಿಗಳು ಅವರಿಗೆ "ಕುರುರಾಯ" ಎಂದು ಹೆಸರಿಟ್ಟರು. ಹಾಗೆ ಬಂದ "ಕುರುರಾಯ" ಎಂಬ ಬಿರುದು ಕಾಲಕ್ರಮದಲ್ಲಿ "ಕುರ್‍ರಾಯ" ಆಯಿತು.

ರಸಾಯನ

ಮೇಲೆ ಹೇಳಿದ ಮೂರು ನಾಲ್ಕು ಮಂದಿ ವಿದ್ಯಾರ್ಥಿಗಳು ಒಂದು ಹುಣ್ಣಿಮೆಯ ರಾತ್ರಿ ಸುಮಾರು ಎಂಟು ಘಂಟೆಗೆ ಮಲಗುವ ಪ್ರಯತ್ನದಲ್ಲಿದ್ದಾಗ ವೆಂಕಟನಾರಣಭಟ್ಟರು ಅಲ್ಲಿಗೆ ಬಂದರು. ಶೇಷಪ್ಪನವರನ್ನು ಕುರಿತು (ತೆಲುಗಿನಲ್ಲಿ) ಹೇಳಿದರು:

“ಒಂಭತ್ತು ಘಂಟೆಗೆ ಪ್ರಾರಂಭ. ಬಂದುಬಿಡಿ. ಎಲ್ಲ ಸಿದ್ಧವಾಗಿರುತ್ತದೆ.”

ಇನ್ನೂ ಏನೋ ಹೇಳಿದರು. ನಾನು ಮಲಗಿದ್ದೆ. ನಿದ್ದೆಗಣ್ಣಿನಲ್ಲಿದ್ದೆ. ಆದದ್ದರಿಂದ ಪೂರ್ತಿ ಸರಿಯಾಗಿ ಕೇಳಲಿಲ್ಲ. ವೆಂಕಟನಾರಣಭಟ್ಟರು “ಬಂದುಬಿಡು” ಎನ್ನುತ್ತಲೇ ಶೇಷಪ್ಪನವರು “ಓಹೋ, ಬಂದುಬಿಡುತ್ತೇವೆ” ಎಂದರು. ಆಗ ನಾನು ಅದೇನೋ ವಿಶೇಷವಿರಬೇಕೆಂದು “ಏನು ಮಾಮ, ಏನು ಅದು?” ಎಂದು ಕೇಳಿದೆ. ಅವರು “ರಸಾಯನವೋ, ರಸಾಯನ!” ಎಂದರು. ರಸಾಯನದ ಮಾತು ಕೇಳಿದ ಮೇಲೆ ನನ್ನ ಅಲ್ಪಸ್ವಲ್ಪ ನಿದ್ದೆಯೂ ಹೋಯಿತು. ಆದರೆ ನನ್ನನ್ನು ಕರೆಯಲಿಲ್ಲವಲ್ಲ! ಆದದ್ದರಿಂದ ನಾನು ಉದಾಸೀನತೆಯನ್ನು ತೋರಿಸುವುದು ಉಚಿತವೆನಿಸಿತು. ಅದಕ್ಕಾಗಿ ನಿದ್ದೆಯನ್ನು ನಟಿಸಿದೆ. ಬೇಸಗೆಯಾದದ್ದರಿಂದ ಕೊಂಚ ನಿದ್ದೆಯೂ ಕಣ್ಣಿಗೆ ಹತ್ತಿತು.

ಹದಿನೈದಿಪ್ಪತ್ತು ನಿಮಿಷವಾದ ಮೇಲೆ ಎಚ್ಚರವಾಯಿತು. ಹೊರಗಡೆ ಹಾಲು ಚೆಲ್ಲಿದಂತೆ ಬೆಳುದಿಂಗಳು ಹರಡಿತ್ತು. ಕಣ್ಣುಬಿಟ್ಟುನೋಡಿದೆ. ಅಲ್ಲಿದ್ದ ಸ್ನೇಹಿತರೊಬ್ಬರೂ ಕಾಣಿಸಲಿಲ್ಲ. ಕೂಗಿದೆ, ಸದ್ದಿಲ್ಲ. ವೆಂಕಟನಾರಣಭಟ್ಟರವರು ಕೊಟ್ಟಿದ್ದ ಆಹ್ವಾನ ಜ್ಞಾಪಕಕ್ಕೆ ಬಂದಿತು. ನಾನೂ ಎದ್ದು ಅವರ ಮನೆಯ ಕಡೆ ಓಡಿದೆ. ಅವರ ಮನೆಗೂ ನನ್ನ ಮನೆಗೂ ನೂರು ಗಜದಷ್ಟು ದೂರವಿರಬಹುದು. ನಾನು ಅವರ ಮನೆಯೊಳಕ್ಕೆ ಹೋದಾಗ ನಡುಮನೆಯಲ್ಲಿ ಎಂಟು ಹತ್ತು ಮಂದಿ ಕುಳಿತಿದ್ದರು. ನಾಲ್ಕು ಕಡೆ ನಾಲ್ಕು ಎಣ್ಣೆ ದೀಪಗಳು ಉರಿಯುತ್ತಿದ್ದವು. ಪಶ್ಚಿಮದ ಕಡೆಯ ಗೋಡೆಗೆ ಆನಿಕೊಂಡಿದ್ದ ಒರಗುದಿಂಬಿನ ಮುಂದೆ ಶೇಷಪ್ಪನವರು ಕುಳಿತಿದ್ದರು. ಅವರ ಮುಂದುಗಡೆ ಒಂದು ಸಣ್ಣ ಇಳಿಜಾರು ಮೇಜು. ಅದರ ಮೇಲೆ ಒಂದು ದೊಡ್ಡ ಪುಸ್ತಕ. ಅವರಿಗೆ ಓದಲು ಅನುಕೂಲಿಸುವಂತೆ ಎರಡು ಸಣ್ಣ ದೀಪಗಳು. ಊದುಕಡ್ಡಿಯ ಘಮಲು, ದೇವರ ಪಟಕ್ಕೆ ಹಾಕಿದ್ದ ಮಲ್ಲಿಗೆಯ ಘಮಲು, ಇವೆಲ್ಲ ತುಂಬ ಶೋಭಾಯಮಾನವಾಗಿತ್ತು. ನಾನು ಒಂದು ಕಡೆ ಕುಳಿತೆ. ಶೇಷಪ್ಪನವರು ತೆಲುಗು “ಮನುಚರಿತ್ರೆ” ಯ ಒಂದು ಭಾಗವನ್ನು ಓದುತ್ತಿದ್ದರು. ಅಲ್ಲಿ ಪ್ರವರನೆಂಬ ವಿಪ್ರನು ಕಾಡಿನಲ್ಲಿ ವರೂಥಿನೆಯೆಂಬ ಸುಂದರಿಯನ್ನು ಕಂಡಾಗ ಆಕೆಯೊಡನೆ ಸಂಭಾಷಿಸಿದ ಪ್ರಕರಣ. ಇದನ್ನು ಶೇಷಪ್ಪ ರಾಗವಾಗಿ ಓದುತ್ತಿದ್ದಾರೆ. ಮಿಕ್ಕೆಲ್ಲರೂ ಸಾವಧಾನವಾಗಿ ಕೇಳುತ್ತಿದ್ದಾರೆ. ನನಗೆ ಆ ಸಾಹಿತ್ಯದ ಭಾಗ ಅರ್ಥವಾಗುವ ವಯಸ್ಸಲ್ಲ. ನಾಲ್ಕೈದು ನಿಮಿಷ ಕೇಳಿ ಬೇಸರವಾಯಿತು. ಆಗ (ತೆಲುಗಿನಲ್ಲಿ) ಕೇಳಿದೆ:

“ಎಲ್ಲಿ ಮಾಮ ರಸಾಯನ?”

ವೆಂಕಟನಾರಣಭಟ್ಟರು ಹೇಳಿದರು:

("ವೆರ್ರಿಮುಂಡಾ! ದೀನಿಕನ್ನ ರಸಾಯನಂ ಕದ್ದೇಮಿರಾ?")

"ಇದಕ್ಕಿಂತ ರಸಾಯನ ಉಂಟೇನೋ?"

ಎಲ್ಲರೂ ನಕ್ಕರು.

ಅಲ್ಲಿಂದ ಅನೇಕ ವರ್ಷ ಕಳೆದ ಮೇಲೆ ನನಗೆ ವೆಂಕಟನಾರಣಭಟ್ಟರ ಮನಸ್ಸಿನ ಮರ್ಮ ಸ್ಪಷ್ಟವಾಯಿತು.

ಆ ರಾತ್ರಿ ಚಂದ್ರಗ್ರಹಣ. ಗ್ರಹಣ ಸುಮಾರು ೯ ಕ್ಕೆ ಹಿಡಿದು ೧೧ ಕ್ಕೆ ಬಿಡುವುದು. ಗ್ರಹಣ ಬಿಟ್ಟ ಮೇಲೆ ಬ್ರಾಹ್ಮಣರಾದವರು ಸ್ನಾನ ಮಾಡಿ ತರ್ಪಣ ಕೊಡಬೇಕಾದದ್ದು; ದೇವತಾರ್ಚನೆ ಮೊದಲಾದ ಶಾಸ್ತ್ರಕರ್ಮಗಳನ್ನು ನಡಸಬೇಕಾದದ್ದು. ಆದದ್ದರಿಂದ ಆ ರಾತ್ರಿ ನಡುರಾತ್ರಿಯವರೆಗೂ ನಿದ್ರಿಸುವ ಹಾಗಿಲ್ಲ. ಎರಡು ಘಂಟೆಗಳ ಬಿಡುವು ದೊರೆಯಿತು. ಅದನ್ನು ಕಾವ್ಯವ್ಯಾಸಂಗದಲ್ಲಿ ಕಳೆಯಬೇಕೆಂಬುದು ವೆಂಕಟನಾರಣಭಟ್ಟರ ಮತ್ತು ಅವರ ಮಿತ್ರರ ಸಂಕಲ್ಪ. ಕಾವ್ಯರಸಾಯನವೇ ರಸಾಯನ.

ಸರಸತಿ

ಇದು ವೆಂಕಟನಾರಣಭಟ್ಟರ ಅಂತರಂಗಕ್ಕೆ ದೃಷ್ಟಾಂತ. ವೆಂಕಟನಾರಣಭಟ್ಟರು ಸ್ನೇಹಪ್ರಿಯರು. ಅವರು ಸರಸಿಗಳಾದದ್ದರಿಂದ ಯಾವಾಗಲೂ ನಾಲ್ಕು ಮಂದಿ ಸ್ನೇಹಿತರು ಅವರ ಜೊತೆಯಲ್ಲಿರುತ್ತಿದ್ದರು.

ವೆಂಕಟನಾರಣಭಟ್ಟರು ಪರಿಹಸನಶೀಲರು. ಒಂದು ದಿನ ಒಬ್ಬ ಬುದ್ಧಿವಂತನೆನಿಸಿಕೊಂಡಿದ್ದ ಹುಡುಗನನ್ನು ಕರೆದು ಕೇಳಿದರು:

“ಈ ಕಟ್ಟಿಗೆ ಹೇಗಿದೆ?”

“ಸೊಟ್ಟೆಹೋಗಿದೆ.”

“ನೆಟ್ಟಗಿದೆ ಎಂದು ಒಂದು ಮಾತನ್ನು ಹೇಳಬಾರದೇನಪ್ಪ?”

“ಅದು ನೆಟ್ಟಗಿಲ್ಲದೆ ಸೊಟ್ಟೆಹೋಗಿದೆ ಎಂದು ಹೇಳಿದೆನಲ್ಲ?”

“ಸೊಟ್ಟೆ ‘ಹೋಗಿದ್ದರೆ’ ನೆಟ್ಟಗೆ ತಾನೆ ಇರಬೇಕು?”

ಹೀಗೆ ಅವರ ಮಾತಿನಲ್ಲಿ ಚಮತ್ಕಾರ ತುಂಬಿರುತ್ತಿತ್ತು. ಕನ್ನಡ, ತೆಲುಗು, ಸಂಸ್ಕೃತ ಮೂರು ಭಾಷೆಗಳೂ ಅವರಿಗೆ ಚೆನ್ನಾಗಿ ಬರುತ್ತಿದ್ದವು.

***

ವೆಂಕಟನಾರಣಭಟ್ಟರಿಗೆ ಸಂಸಾರಸುಖದ ಯೋಗ ಹೆಚ್ಚಾಗಿರಲಿಲ್ಲ. ಅವರ ಕುಟುಂಬ ಅವರ ಸೋದರಮಾವನ ಮಗಳೇ. ಆಕೆಯ ಸ್ವಭಾವ ಸಿಡುಕಿನದಾಗಿದ್ದದ್ದರಿಂದಲೂ ಆಕೆ ತನ್ನ ತಂದೆ ತಾಯಿಗಳಿಗೆ ಏಕೈಕ ಪುತ್ರಿಯಾಗಿದ್ದದ್ದರಿಂದಲೂ ಆಕೆ ಎರಡು ತಿಂಗಳು ಮೂರು ತಿಂಗಳಿಗೊಮ್ಮೆ ತವರುಮನೆಗೆ ಹೋಗಿ ಅಲ್ಲಿ ಒಂದೆರಡು ತಿಂಗಳು ಇದ್ದುಬಿಡುತ್ತಿದ್ದಳು. ಗೌರೀ ಹಬ್ಬ ಮೊದಲಾದ ಪೂಜೆಯ ದಿನಗಳಲ್ಲಿ ಬಹುಮಂದಿ ವೈಶ್ಯರು ವೆಂಕಟನಾರಣಭಟ್ಟರ ಮನೆಯಲ್ಲಿ ಪೂಜೆ ಮಾಡುವುದು ವಾಡಿಕೆ. ಆಗ ಬರುತ್ತಿದ್ದ ಮಹಿಳೆಯರು ಹೆಚ್ಚುಹೆಚ್ಚಾಗಿ ವಸ್ತ್ರಾಭರಣಗಳನ್ನು ಧರಿಸಿರುತ್ತಿದ್ದರು. ಅವರ ಮಕ್ಕಳು ಮರಿ ಬಂದು ಗದ್ದಲ ಗಲಾಟೆ ಮಾಡುತ್ತಿದ್ದರು. ವೆಂಕಟನಾರಣಭಟ್ಟರಿಗೆ ಮಕ್ಕಳಾಗಿರಲಿಲ್ಲ.

ಅವರ ಭಾರ್ಯೆಗೆ ಜನ ಹೆಚ್ಚಾಗಿ ಬಂದು ಸಡಗರ ಪಡುವುದೂ ಗದ್ದಲ ಮಾಡುವುದೂ ಮನಸ್ಸಿಗೆ ಒಗ್ಗುತ್ತಿರಲಿಲ್ಲವೆಂದು ತೋರುತ್ತದೆ. ಹಾಗೂ ಹೀಗೂ ನೆವ ಮಾಡಿಕೊಂಡು ಆಕೆ ತವರುಮನೆಗೆ ಹೊರಟುಹೋಗುತ್ತಿದ್ದಳು.

ಅಂಥ ಬಿಡುದಿನಗಳಲ್ಲಿ ವೆಂಕಟನಾರಣಭಟ್ಟರ ಮನೆ ಸತ್ರವಾಗುತ್ತಿತ್ತು. ಆತ, ನನ್ನ ತಂದೆ, ಇಬ್ಬರು ಮೂವರು ಸ್ನೇಹಿತರು ಸೇರಿಕೊಂಡು ವಿಧವಿಧವಾದ ಅಡಿಗೆಗಳನ್ನು ಮಾಡುತ್ತಿದ್ದರು. ಯಾವುದೋ ದೇವರ ಹೆಸರನ್ನು ಹೇಳಿ ಆ ಪೂಜೆಯ ನೆವದಿಂದ ತಮ್ಮ ನಾಲಗೆ ಬೇಡಿದ ತಿಂಡಿಗಳನ್ನು ತಯಾರು ಮಾಡಿಕೊಂಡು ಸ್ನೇಹಿತರೆಲ್ಲ ಊಟ ಮಾಡುತ್ತಿದ್ದರು. ಇದರಲ್ಲಿ ನನಗಿರುವ ಅನುಭವ ಎರಡು ಪದಾರ್ಥಗಳದ್ದು. ಒಂದು ಅವಲಕ್ಕಿ; ಇನ್ನೊಂದು ಹೆಸರುಬೇಳೆ ಕೋಸುಂಬರಿ. ಆ ಕಾಲದಲ್ಲಿ ತೆಂಗಿನಕಾಯಿ ತುಂಬ ಅಗ್ಗ–ಆಣೆಗೆ ಆರೋ ಎಂಟೋ ಸಿಕ್ಕುತ್ತಿತ್ತು. ವೆಂಕಟನಾರಣಭಟ್ಟರು ಪುರೋಹಿತರಾಗಿದ್ದದ್ದರಿಂದ ಕೊಳ್ಳಬೇಕಾಗಿಯೇ ಇರಲಿಲ್ಲ. ಅವರ ಮನೆಯಲ್ಲಿ ಕುಟ್ಟಿದ ಅವಲಕ್ಕಿ ಹಂಡೆಗಳಲ್ಲಿ ತುಂಬಿರುತ್ತಿದ್ದರು. ನೆನಸಿದ ಅವಲಕ್ಕಿ, ಅದಕ್ಕೆ ಸಮನಾಗಿ ಕಾಯಿತುರಿ, ಯಥೇಷ್ಟವಾಗಿ ಬೆಲ್ಲ, ಏಲಕ್ಕಿಯ ಪರಿಮಳ-ಇದು ಒಂದು ತರತೀಪು. ಗೊಜ್ಜಿನ ಅವಲಕ್ಕಿ, ಅದರಲ್ಲಿ ಕಾಯಿತುರಿ, ಹುರಿದ ನೆಲಗಡಲೆಕಾಯಿ ಬೀಜ-ಇದೊಂದು ತರತೀಪು. ಮಾವಿನ ಹಣ್ಣು ಹಲಸಿನ ಹಣ್ಣುಗಳ ಕಾಲದಲ್ಲಿ ಊಟಮಾಡುವಷ್ಟು ಸೀಕರಣೆ. ಈ ಫಲಾಹಾರಪೂಜೆ ವೆಂಕಟನಾರಣಭಟ್ಟರವರ ಮನೆಯಲ್ಲಿ ವಾರಕ್ಕೊಮ್ಮೆಯಾದರೂ, ನಡೆಯುವುದು. ಅನಂತ ಚತುರ್ದಶಿ, ಗಣೇಶ ಚೌತಿ ಮೊದಲಾದ ವ್ಯಾಜಗಳಿಂದ ಲಾಡು ಚಿರೋಟಿಗಳ ಸಂತರ್ಪಣೆಗಳೂ ಆಗುವುದುಂಟು.

ಹೀಗೆ ಇಷ್ಟವಾದ ರುಚಿರುಚಿಯ ಭಕ್ಷ್ಯಭೋಜ್ಯಗಳು, ಸರಸಕಾವ್ಯ, ಸಂಗೀತ ನರ್ತನಗಳು-ಇಂಥ ಸಂತೋಷಗಳಿಂದ ವೆಂಕಟನಾರಣಭಟ್ಟರು ತಮ್ಮ ಜೀವವನ್ನು ತುಂಬಿಕೊಂಡಿದ್ದರು.

ವಿರಸ

ಈಗ ಒಂದು ವಿಷಾದ ಪ್ರಕರಣ. ವೆಂಕಟನಾರಣಭಟ್ಟರ ಹೆಂಡತಿ (ಆಕೆಯ ಹೆಸರು ವೆಂಕಮ್ಮನವರೆಂದೋ ಏನೋ, ಜ್ಞಾಪಕವಿಲ್ಲ) ಒಂದು ವಿಚಿತ್ರವೆನಿಸುವ ಉಪಾಯವನ್ನು ಹಿಡಿದಳು. ನಮ್ಮ ಮನೆಯ ದಕ್ಷಿಣ ಪಾರ್ಶ್ವಕ್ಕೆ ಒಂದು ರಸ್ತೆ. ಅದರ ಮಗ್ಗುಲಲ್ಲಿ ಕೊಪ್ಪರಂ ವೈಶ್ಯರ ಸತ್ರ. ದೊಡ್ಡದಾದ ಕಲ್ಲು ಕಟ್ಟಡ. ಅದರಲ್ಲಿ ಒಂದು ಕೋಣೆಯಲ್ಲಿ ಆಕೆ ಬಿಡಾರ ಮಾಡಿ, ದಿನದಿನವೂ ದೊಡ್ಡ ತಂಬಿಗೆ ಹಿಡಿದು ಊಂಛವೃತ್ತಿಗೆಂದು ನಾಲ್ಕು ಮನೆಗಳಿಗೆ ತಿರುಗಾಡಲು ಆರಂಭಿಸಿದರು. ಆ ಮನೆಗಳವರು “ಇದೇನಮ್ಮ ನಿಮಗೆ ಬಂದಿರುವುದು ತಿರುಪೆ ಕೇಳುವುದಕ್ಕೆ? ನಿಮ್ಮ ಯಜಮಾನರು ಮಹಾನುಭಾವರು. ಅವರಿಗೇನು ಕಡಮೆ?” ಎಂದು ಕೇಳುವರು. ಆಕೆ “ನೀವೇ ಹೇಳಿ ನಮ್ಮ ಯಜಮಾನರಿಗೆ” ಎನ್ನುವರು. ಹೀಗೆ ವಿರಸಕ್ಕಿಟ್ಟುಕೊಂಡಿತು. ವೆಂಕಟನಾರಣಭಟ್ಟರ ಸ್ನೇಹಿತರು ಗಂಡಹೆಂಡಿರಿಬ್ಬರಿಗೂ ಸಮಾಧಾನದ ಮಾತು ಹೇಳಿ ಆ ಸಂಸಾರವನ್ನು ಮತ್ತೆ ಒಟ್ಟುಗೂಡಿಸಬೇಕೆಂದು ಪ್ರಯತ್ನ ಮಾಡಿದರು. ಅದು ಸಾರ್ಥಕವಾಗಲಿಲ್ಲ. ಕಡೆಗೆ ಒಂದು ದಿನ ಬೆಳಗ್ಗೆ ಆಕೆ ಮೃತಳಾದಳೆಂಬ ಸುದ್ದಿ ಹರಡಿತು. ಅದಕ್ಕೆ ಎಂಟು ಹತ್ತು ದಿನಗಳ ಹಿಂದಿನಿಂದ ಆಕೆ ರೋಗದಿಂದ ನರಳುತ್ತಿದ್ದಳಂತೆ. ಜೀವ ಹೊರಟುಹೋದ ಬಳಿಕ ವೆಂಕಟನಾರಣಭಟ್ಟರೂ ಬೇಕಾದವರೂ ಸತ್ರದ ಮುಂದೆ ಸೇರಿದರು. ವೆಂಕಟನಾರಣಭಟ್ಟರು ಒಂದು ಮೂಲೆಯಲ್ಲಿ ಕುಳಿತು “ಈ ದಿನಮೇ ಸುದಿನಮು” ಎಂದು ಮೆಲುದನಿಯಲ್ಲಿ ತಮ್ಮಷ್ಟಕ್ಕೆ ತಾವು ಹಾಡಿಕೊಳ್ಳುತ್ತಿದ್ದರು. ಸ್ವರ್ಣಕಾರ ಮುನಿಸ್ವಾಮಾಚಾರ್ಯರು ಅವರ ಬಳಿಗೆ ಹೋಗಿ (ತೆಲುಗಿನಲ್ಲಿ) ಹೇಳಿದರು:

“ಏನಪ್ಪ, ಇಂಥ ಸಮಯದಲ್ಲಿ ಹಾಡೆ?”

ವೆಂಕಟನಾರಣಭಟ್ಟರು “ಇನ್ನೇನು ಮಾಡಬೇಕೆಂದು ಹೇಳುತ್ತಿ? ನಮಗಿಬ್ಬರಿಗೂ ಮದುವೆಯಾದ ದಿನದಿಂದ ಇಂದಿನವರೆಗೂ ನನ್ನಿಂದ ಅವಳು ಒಂದು ದಿನ ಸುಖ ಕಂಡದ್ದಿಲ್ಲ; ಅವಳಿಂದ ನಾನು ಸುಖಕಂಡದ್ದಿಲ್ಲ. ನಿತ್ಯ ರಗಳೆ, ನಿತ್ಯ ಜಗಳದಲ್ಲಿಯೇ ಅವಳಿಗೆ ವಯಸ್ಸು ಐವತ್ತಾಯಿತು. ನನಗೆ ಐವತ್ತಾರಾಯಿತು. ಇನ್ನು ಬದುಕಿ ನನ್ನಿಂದ ಅವಳಾಗಲಿ ಅವಳಿಂದ ನಾನಾಗಲಿ ಪಡಬಹುದಾದ ಸುಖವೇನು? ಸಾವು ಬಂದು ಅವಳಿಗೆ ಕಷ್ಟದಿಂದ ಬಿಡುಗಡೆಯಾಯಿತು.”

ಇದನ್ನು ಕೇಳಿ ನನ್ನ ತಂದೆ, ಇನ್ನೊಬ್ಬ ಅವರ ಸ್ನೇಹಿತ ಕಂದಾಚಾರದ ಶ್ರೀನಿವಾಸರಾಯರು ಮೊದಲಾದವರಿಗೆ ಕಣ್ಣು ಒದ್ದೆಯಾಯಿತು. ಗುರುಗಳಾದ ವೆಂಕಟರಾಮಭಟ್ಟರು ಅವರ ಹತ್ತಿರಕ್ಕೆ ಬಂದು.

"ಈಗ ಯಾರು ದುಃಖಪಟ್ಟು ಏನು ಪ್ರಯೋಜನ? ಹೇಳಿದ ಮಾತನ್ನು ಇಬ್ಬರೂ ಕೇಳದೆಹೋದರು. ದೈವದ ಯೋಜನೆ ಹೀಗಾಗಿದ್ದರೆ ಅವರಿಬ್ಬರು ತಾನೆ ಏನು ಮಾಡಿಯಾರು?

ವಿಧಿರಹೋ ಬಲವಾನಿತಿ ಮೇ ಮತಿಃ ॥"

ಹೀಗೆಂದು ಮುಂದಿನ ಕೆಲಸಗಳಿಗೆ ಹೊರಟರು.

ಭಟ್ಟರ ರಾಜಕೀಯ ಚಿಂತನೆ

ವೆಂಕಟನಾರಣಭಟ್ಟರೂ ಸುಬ್ಬಾಭಟ್ಟರೂ ನಾನು ಪ್ರತಿದಿನವೂ ಸಂಜೆ ಕಲೆತು ಒಟ್ಟಿಗೆ ಸೋಮೇಶ್ವರ ದೇವಾಲಯಕ್ಕೆ ಹೋಗುವುದು ಪದ್ಧತಿ. ಅಲ್ಲಿಗೆ ಕಾಳೂರು ನರಸಿಂಹಾಚಾರ್ಯರು ಮೊದಲಾದ ವಿದ್ವಾಂಸರುಗಳು ಬಂದಿರುತ್ತಿದ್ದರು. ದೇವರ ದರ್ಶನವಾದ ಮೇಲೆ ನಾವೆಲ್ಲ ಆ ವಿಶಾಲವಾದ ಮುಖಮಂಟಪದಲ್ಲಿ ಕುಳಿತು ಆ ಮಾತು ಈ ಮಾತು ಆಡುತ್ತಿದ್ದದ್ದು ಪದ್ಧತಿ.

ನಾನು ಬೆಂಗಳೂರಿನಲ್ಲಿ ಕೆಲವು ವರ್ಷ ಕಳೆದ ಮೇಲೆ ಊರಿಗೆ ಹೋಗಿದ್ದಾಗ ಒಂದು ಸಂಜೆ ವೆಂಕಟನಾರಣಭಟ್ಟರೂ ನಾನೂ ಇಬ್ಬರೂ ಗುಡಿಗೆ ಹೊರಟೆವು. ಆ ದಿನ ನನ್ನ ನವೀನ ಪಾಂಡಿತ್ಯವನ್ನು ವೆಂಕಟನಾರಣಭಟ್ಟರ ಮುಂದೆ ಪ್ರದರ್ಶಿಸುವ ಅವಕಾಶ ದೊರಕಿತು. 'ಡೆಮಾಕ್ರಸಿ' ಅಥವಾ ಪ್ರಜಾರಾಜ್ಯ ಪದ್ಧತಿ, 'ಸೋಷಲಿಸಂ' ಅಥವಾ ಸಮಾಜ ಸ್ವಾಮ್ಯವಾದ ಇವೇ ಮೊದಲಾದ ನವನಾಗರಿಕತೆಯ ಮಾತುಗಳನ್ನು ಅಷ್ಟಿಷ್ಟು ನನಗೆ ತಿಳಿದಂತೆ ವಿವರಿಸಿದೆ. ವೆಂಕಟನಾರಣಭಟ್ಟರು ನಡುವೆ ಒಂದು ಮಾತನ್ನೂ ಆಡದೆ ದಾರಿಯುದ್ದಕ್ಕೂ ನಾನು ಹೇಳಿದ್ದನ್ನು ಕೇಳುತ್ತ ನಡೆದರು. ಗುಡಿಯನ್ನು ಸೇರಿ ಅಲ್ಲಿನ ತೀರ್ಥದ ಮೆಟ್ಟಲನ್ನಿಳಿದೆವು. ವೆಂಕಟನಾರಣಭಟ್ಟರು ಪಾದಕ್ಷಾಳನ ಮಾಡಿಕೊಂಡು ಸಂಧ್ಯಾವಂದನೆಗೆ ಕೂಡುವ ಮುಂಚೆ– "ಹಾಗಾದರೆ ಇನ್ನು ಮೇಲೆ ಎಲ್ಲ ಶೂದ್ರ ಪ್ರಭುತ್ವ ಎನ್ನು" -ಎಂದರು (ತೆಲುಗಿನಲ್ಲಿ). ನನಗೆ ಕೊಂಚ ವಿಸ್ಮಯವಾಯಿತು– ಇದೇನು, ನಾನು ಹೇಳಿದ ದೊಡ್ಡ ದೊಡ್ಡ ತತ್ತ್ವಗಳನ್ನು ಇವರು ಹೀಗೆಂದುಬಿಟ್ಟರಲ್ಲ- ಎಂದು. ಅದು ಅರವತ್ತು ಅರವತ್ತೈದು ವರ್ಷಗಳ ಹಿಂದಿನ ಮಾತು. ಈಗ ನಾವು ಅದನ್ನು ಬಹುವಾಗಿ ಪರೀಕ್ಷಿಸಬೇಕಾಗಿಲ್ಲ. ವೆಂಕಟನಾರಣಭಟ್ಟರೊಡನೆ ನಾನು ನಡಸಿದ ಉತ್ತರ ಪ್ರತ್ಯುತ್ತರಗಳ ಸಾರಾಂಶವನ್ನು ಇಲ್ಲಿ ಹೇಳಬಹುದು.

ಅವರ ಮಾತೇನೆಂದರೆ, – "ಶೂದ್ರ ಎಂದರೆ ಸಣ್ಣ ಮನಸ್ಸಿನವರು ಎಂದರ್ಥ; ನಾಲ್ಕು ವರ್ಣಗಳಲ್ಲಿ ಒಂದು ವರ್ಣದವನು ಎಂದು ಅರ್ಥವಲ್ಲ. ಜಾತಿ ಯಾವುದಾದರಾಗಲಿ, ಗುಣ ದೊಡ್ಡದಾಗಿರುವುದು ಮುಖ್ಯ. ಮನಸ್ಸು ವಿಶಾಲವಾಗಿರುವುದು ಮುಖ್ಯ. ನಮ್ಮ ಊರಿನಲ್ಲಿ ನೋಡು, ತೋಟದ ಪಾಳ್ಯದ ಮುನಿಯಪ್ಪ, ಸೋಮೇಶ್ವರ ಪಾಳ್ಯದ ಮುನಿಯಪ್ಪ, ಮಾರಶೆಟ್ಟಿ, ಸೊಣ್ಣವಾಡಿಯ ಸೊಣ್ಣೇಗೌಡ–ಇವರ ಮಾತನ್ನು ಯಾರಾದರೂ ನಿರಾಕರಿಸುತ್ತಾರೆಯೆ? ಅವರನ್ನು ಎಲ್ಲರೂ ಗೌರವಿಸುವುದಿಲ್ಲವೆ? ಕಾಷ್ಠಿ ಹೈದರ್ ಸಾಹೇಬರು, ಹಾಜಿ ಮದಾರ್ ಸಾಹೇಬರು, ಸೈಯದ್ ಪಾಛಾಮಿಯ ಇವರನ್ನೆಲ್ಲ

ನಾವು ಗೌರವಿಸುವುದಿಲ್ಲವೆ? ಗೌರವಸ್ಥರೂ ಬುದ್ಧಿವಂತರೂ ರಾಜ್ಯವನ್ನು ನಡಸುವುದೆಂದರೆ ಅದು ಬೇಡವೆಂದು ಯಾರು ಹೇಳಿಯಾರು? ಆದರೆ ನೀನು ಹೇಳುವ ದಾರಿ ಅದಲ್ಲ. ಬಹು ಜನ ಎನ್ನುತ್ತೀ; ಅಧಿಕ ಸಂಖ್ಯೆಯವರು ಎನ್ನುತ್ತೀ. ಯಾವ ದೇಶದಲ್ಲಾದರೂ ಪ್ರಜೆಯಲ್ಲಿ ಅಧಿಕ ಸಂಖ್ಯೆಯವರು ಬುದ್ಧಿವಂತರೂ ನ್ಯಾಯನಿಷ್ಠರೂ ಆಗಿರುವುದುಂಟೆ? ಪ್ರಜೆಯಲ್ಲಿ ಬಹುಮಂದಿ ಅಂಥವರಾದರೆ ಆಗ ರಾಜ್ಯವೇ ಬೇಕಾಗಿಲ್ಲವಲ್ಲ? ಕೃತಯುಗದಲ್ಲಿ ಹಾಗಿತ್ತಂತೆ.

ನೈವ ದಂಡೋ ನ ದಾಂಡಿಕಃ ॥

"ಈಗ ನೀನು ಹೇಳುವ ವಾದದಲ್ಲಿ ಅಂಥ ಕೃತಯುಗ ಬಂದೀತೆಂದು ಹೇಳುತ್ತೀಯಾ? 'ಶೂದ್ರ' ಎಂದರೆ ಮನಸ್ಸಿನಲ್ಲಿ ಸರ್ವದಾ ಶೋಕಪಡುತ್ತಿರುವವನು ಎಂದರ್ಥ, ನನಗೆ ಇದಿಲ್ಲವಲ್ಲ, ನನಗೆ ಅದಿಲ್ಲವಲ್ಲ, ಅವನಿಗೆ ಹಾಗಾಯಿತಲ್ಲ, ನನಗೆ ಹಾಗಾಗಲಿಲ್ಲವಲ್ಲ– ಎಂದು ಆಶೆಗಳನ್ನೂ ಅಸೂಯೆಗಳನ್ನೂ ಅತಿಯಾಗಿ ಮಾಡಿಕೊಂಡು ಸಂಕಟಪಡುತ್ತಿರುವ ಮನುಷ್ಯನು ಶೂದ್ರ. ಅವನೇ ಕೃಪಣ. ಅಂಥವರು ರಾಜ್ಯಾಧಿಕಾರವನ್ನು ವಹಿಸಿಕೊಂಡರೆ ಅವರು ತಮ್ಮ ತಮ್ಮ ಸ್ವಂತ ಕಾರ್ಯಗಳನ್ನು ನೋಡಿಕೊಂಡಾರು: ರಾಜ್ಯವನ್ನು ನೋಡುವರೆ? ಅದು ದೊಂಬಿಯ ಗದ್ದಲವಾಗಬಹುದು: ನ್ಯಾಯವಿವೇಕವುಳ್ಳ ರಾಜ್ಯವಾದೀತೆ? ನಮಗೆ ಬೇಕಾದದ್ದು ನ್ಯಾಯ, ಅಷ್ಟೆ ತಾನೆ?"

ನಾನು ವಾದವನ್ನು ಬೆಳಸಲಿಲ್ಲ. ನನಗಿದ್ದ ಕಾರಣಗಳಲ್ಲಿ ಒಂದು ಸಂಧ್ಯಾವಂದನೆಗೆ ವೇಳೆ ಮೀರಬಾರದೆಂಬುದು. ಅದಕ್ಕಿಂತ ಮುಖ್ಯವಾದ ಕಾರಣ ಇನ್ನೊಂದು ಮನಸ್ಸಿಗೆ ತೋರಿತ್ತು. ವೆಂಕಟನಾರಣಭಟ್ಟರು ಎತ್ತಿದ್ದ ಪ್ರಶ್ನೆ ಬೇಗ ಇತ್ಯರ್ಥಕ್ಕೆ ಬರತಕ್ಕದ್ದಲ್ಲ. ಅದು ವಾದ ಪ್ರತಿವಾದಗಳಿಂದ ಬಗೆಹರಿಯತಕ್ಕದ್ದೂ ಅಲ್ಲ. ಜನಕ್ಕಾಗುವ ಅನುಭವದಿಂದಲೇ ಅವರು ಯುಕ್ತವಾವುದೆಂಬುದನ್ನು ಕಲಿಯಬೇಕು. ಪ್ರಜಾರಾಜ್ಯ ಪದ್ಧತಿಯು ಇನ್ನೂ–ಕ್ರಿ. ಶ. ೧೯೬೯ ರಲ್ಲಿಯೂ ಪರೀಕ್ಷಾವಸ್ಥೆಯಲ್ಲಿಯೇ ಉಳಿದುಕೊಂಡಿದೆ. ಪ್ರಪಂಚದ ಅನೇಕ ದೇಶಗಳಲ್ಲಿ ಪ್ರಜಾಪದ್ಧತಿ ತನ್ನ ಬಲವನ್ನೂ ಕೀರ್ತಿಯನ್ನೂ ಕಳೆದುಕೊಂಡಿದೆ. ವೆಂಕಟನಾರಣಭಟ್ಟರಿಗೆ ಪ್ರತ್ಯುತ್ತರವು ಭವಿಷ್ಯದ ಗರ್ಭದಲ್ಲಿದೆ.

೪ ಪುರೋಹಿತರು, ಪುರಾಣಿಕರು

ಸುಬ್ಬಾಭಟ್ಟರು

ಮುಳಬಾಗಲು ಸುಬ್ಬಾಭಟ್ಟರು ಮನೆತನದಿಂದ ರಾಜಾಪುರೋಹಿತರೆನಿಸಿಕೊಂಡಿದ್ದವರು. ಅವರು ಬಡಗನಾಡು ಪಂಗಡದವರು; ವೆಂಕಟನಾರಣಭಟ್ಟರಿಗಿಂತ ಕಿರಿಯವರು. ಸುಬ್ಬಾಭಟ್ಟರು ಋಗ್ವೇದಿಗಳು; ಆದರೂ ಯಜುರ್ವೇದಿಗಳಾದ ವೆಂಕಟರಾಮಭಟ್ಟರಲ್ಲಿ ಜ್ಯೋತಿಷ್ಯ ಧರ್ಮ ಶಾಸ್ತ್ರಗಳನ್ನು ಕಲಿತವರು. ಅವರ ಮನೆ ವೆಂಕಟರಾಮಭಟ್ಟರ ಮನೆಯ ಪಕ್ಕದ್ದು.

ಆ ಊರಿನಲ್ಲಿದ್ದ ಸ್ಮಾರ್ತರ ಮನೆಗಳು ಆರೇಳು ಮಾತ್ರ. ಮಾಧ್ವ ಬ್ರಾಹ್ಮಣರ ಮನೆಗಳು ಇನ್ನೂರೈವತ್ತು ಮುನ್ನೂರಿದ್ದವು. ಶ್ರೀವೈಷ್ಣವರ ಮನೆ ಒಂದೂ ಇರಲಿಲ್ಲ– ಸರಕಾರದ ಚಾಕರಿಗಾಗಿ ಬಂದವರ ವಿನಾ. ಸ್ಮಾರ್ತರ ಆರೇಳು ಮನೆಗಳಲ್ಲಿ ನಾಲ್ಕು ಪಂಗಡಗಳವರಿದ್ದರು. ಮುಲಕನಾಡು, ಬಡಗನಾಡು, ಸೀರನಾಡು, ದ್ರಾವಿಡ. ಹೀಗಿದ್ದರೂ ಎಲ್ಲ ಒಂದು ಮನೆಯವರಂತೆ ಬದುಕಿದರು. ಅದರಲ್ಲಿ ವೆಂಕಟರಾಮಭಟ್ಟರ ಮನೆ, ಸುಬ್ಬಾಭಟ್ಟರ ಮನೆ, ನಮ್ಮ ಮನೆ–ಈ ಮೂರೂ ಒಂದು ಗುಂಪು, ಈ ಮೂರರಲ್ಲಿ ಯಾವ ಒಂದು ಮನೆಯಲ್ಲಿ ಎಂಥ ವಿಶೇಷ ಸಂದರ್ಭ ಬಂದರೂ ಮೂರೂ ಮನೆಯವರೂ ಆ ಒಂದು ಕಡೆ ಇರುತ್ತಿದ್ದರು.

ಸುಬ್ಬಾಭಟ್ಟರಿಗೆ ಚಿಕ್ಕಂದಿನಲ್ಲಿಯೇ ಪಿತೃವಿಯೋಗವಾಯಿತು. ಅವರ ಚಿಕ್ಕತಂದೆ ಕೃಷ್ಣಂಭಟ್ಟರು ಸಂಸಾರವನ್ನು ಪೋಷಿಸಿದರು. ಸುಬ್ಬಾಭಟ್ಟರ ತಾಯಿ ಚೆನ್ನಮ್ಮನವರು, ಅಕ್ಕ ವೆಂಕಮ್ಮನವರು, ತಂಗಿ ವೆಂಕಟಲಕ್ಷಮ್ಮನವರು. ಈ ಕುಟುಂಬದ ಭವಿಷ್ಯಕ್ಕಾಗಿ ತಮ್ಮ ಜೀವಮಾನವನ್ನು ತೇದವರು ಕೃಷ್ಣಂಭಟ್ಟರು.

ಕೃಷ್ಣಂಭಟ್ಟರು

ಕೃಷ್ಣಂಭಟ್ಟರ ಚರಿತ್ರೆ ಹೇಳಬೇಕಾದದ್ದು. ಅವರು ನೈಷ್ಠಿಕ ಬ್ರಹ್ಮಚಾರಿಗಳಾಗಿಯೇ ಇದ್ದು ಬಿಟ್ಟರು. ಅವರ ಮನೆಯ ನಡುಮನೆಯ ಗೂಡಿನಲ್ಲಿ ಒಂದು ಗಣಪತಿಯ ಶಿಲಾ ವಿಗ್ರಹವಿತ್ತು. ಅದು ಅವರಿಗೆ ಪುರಾತನರಿಂದ ಬಂದಿತ್ತಂತೆ. ಕೃಷ್ಣಂಭಟ್ಟರು ಬೆಳಗ್ಗೆ ಮೊದಲು ಆ ದೇವರಿಗೆ ದೀಪ ಹೊತ್ತಿಸಿ ಹೂವೆರೆದು ಸ್ತೋತ್ರ ಹೇಳಿ ನಮಸ್ಕಾರ ಮಾಡಿದ ಬಳಿಕ ಉಳಿದ ಕೆಲಸ. ಸುಬ್ಬಾಭಟ್ಟರು ಪ್ರಬುದ್ಧರಾಗುವವರೆಗೂ ಕೃಷ್ಣಂಭಟ್ಟರೇ ಪೌರೋಹಿತ್ಯವನ್ನು ನಿರ್ವಹಿಸುತ್ತಿದ್ದರು. ಅದು ಪೇಟೆಯ ಪೌರೋಹಿತ್ಯ. ಅದರ ವರಮಾನ ಆ ಕಾಲದಲ್ಲಿ ಆ ಕುಟುಂಬಕ್ಕೆ ಸಾಕಾಗುತ್ತಿತ್ತು. ಅವರಿಗೆ ಕೆಲವು ಜಮೀನೂ ಇತ್ತು.

ಕೃಷ್ಣಂಭಟ್ಟರು ಹತ್ತು ಹನ್ನೊಂದು ಘಂಟೆಗೆ ಪೌರೋಹಿತ್ಯ ಮುಗಿಸಿಕೊಂಡು ಮನೆಗೆ ಬಂದು ಮತ್ತೆ ಸ್ನಾನಮಾಡುವರು–ತಣ್ಣೀರು. ಅನಂತರ ಮನೆಯ ದೇವತಾರ್ಚನೆ. ಇದು ಸ್ವಲ್ಪ ಕಲಾಪವುಳ್ಳದ್ದು. ಕೃಷ್ಣಂಭಟ್ಟರನ್ನು ಹೊತ್ತಾಯಿತೆಂದು ಯಾರೂ ಅವಸರಿಸುತ್ತಿರಲಿಲ್ಲ, ಅವರು ಸಾವಕಾಶವಾಗಿ ಸ್ವರತಪ್ಪದೆ ಮಂತ್ರ ಹೇಳುವವರು. ಭೋಜನಾನಂತರ ವೆಂಕಟರಾಮಭಟ್ಟರ ಮನೆಗೆ ಬರುವರು. ಅಲ್ಲಿ ಒಂದರ್ಧ ಘಂಟೆ ಕಳೆದು, ಮಧ್ಯಾಹ್ನಾನಂತರ ತಮ್ಮ ಗೃಹಸ್ಥರ ಮನೆಗಳಿಗೆ ಹೋಗಿ ಪಂಚಾಂಗಶ್ರವಣ ಮಾಡಿಸುವರು. ಸಂಜೆ ಮನೆಯಲ್ಲಿ ಸಂಧ್ಯಾವಂದನೆ ದೀಪಾರಾಧನೆಗಳಾದ ಮೇಲೆ ಕಾಶಿ ವಿಶ್ವೇಶ್ವರ ದೇವಸ್ಥಾನಕ್ಕೆ ಹೋಗಿ ಆ ಮಂಟಪದಲ್ಲಿ ಮಲಗುವರು. ರಾತ್ರಿ ಭೋಜನವಿಲ್ಲ. ಬೆಳಗ್ಗೆ ಉಷಃಕಾಲಕ್ಕೆ ಏಳುವರು. ಇದು ಅವರ ನಿತ್ಯದ ಪದ್ಧತಿ. ಕೂಡಿದ ಮಟ್ಟಿಗೂ ಮನೆಯಿಂದ ಹೊರಗಿರಬೇಕು; ಆದರೆ ಕುಟುಂಬದ ವಿಷಯದ ಕರ್ತವ್ಯವನ್ನು ಮರೆಯಬಾರದು. ಇದು ಅವರು ಮಾಡಿಕೊಂಡಿದ್ದ ನಿಯಮ. ಅವರು ಒಳಗೂ ಹೊರಗೂ ಅತ್ಯಂತ ಪರಿಶುದ್ಧರು, ಋಷಿಕಲ್ಪರು.

ಸಣ್ಣ ಮಕ್ಕಳ ವಿಷಯದಲ್ಲಿ ಕೃಷ್ಣಂಭಟ್ಟರು ಅನಾದರಣೆ ತೋರಿದವರಲ್ಲ. ಅವರ ಹಿರಿಮೆಯನ್ನು ತಿಳಿದುಕೊಳ್ಳುವ ವಯಸ್ಸು ಬಾರದಿದ್ದಾಗ ನಾನೂ ನೆರೆಹೊರೆಯವರೂ

ಕಿಟ್ಟಂಭಟ್ಟ
ಕೋಳೀಸುಟ್ಟ
ಎಲ್ಲರಿಗೂ ಕೊಟ್ಟ
ತಾನೂ ಕೆಟ್ಟ

ಇತ್ಯಾದಿಯಾಗಿ ಹಾಡಿ ನಕಲಿ ಮಾಡುತ್ತಿದ್ದೆವು. ಆತ ನಮ್ಮೊಡನೆ ಸೇರಿ ತಾನೂ ನಗುತ್ತಿದ್ದ: ನಾವು ಪದ ತಪ್ಪಿದರೆ ತಿದ್ದಿಕೊಡುತ್ತಿದ್ದ. ಆತನ ನೆನಪಿಗೆ ನಮಸ್ಕಾರ.

ವಿಚಾರಶೀಲತೆ

ಸುಬ್ಬಾಭಟ್ಟರು ಆಚಾರನಿಷ್ಠರು. ಸಾತ್ತ್ವಿಕ ಸ್ವಭಾವದವರು, ನನ್ನ ತಂದೆಯ ಆಪ್ತರಲ್ಲೊಬ್ಬರು. ಅವರಿಗೆ ಏನು ಚಿಂತೆ ಬಂದರೂ "ಎಲಾ ಸುಬ್ಬಾ" ಎಂದು ಕರೆದು ಆತನ ಸಲಹೆ ಕೇಳುತ್ತಿದ್ದರು. ಆತ ಅತಿ ಬುದ್ಧಿವಂತಿಕೆಯನ್ನು ಎಂದೂ ತೋರಿಸಿದವನಲ್ಲ. ನಿಷ್ಕಪಟವಾದ ಮನಸ್ಸು ಆತನದು.

ನನಗಂತೂ ಆತ ಪರಮ ಮಿತ್ರರು, ಮತ್ತು ಪೂಜ್ಯರು. ನನ್ನನ್ನು ಅಷ್ಟಿಷ್ಟು ತಿದ್ದಿದವರಲ್ಲಿ ಅವರೂ ಒಬ್ಬರು. ಇನ್ನಾರ ಮಾತನ್ನೂ ನಾನು ಕೇಳದಿದ್ದಾಗ ಸುಬ್ಬಾಭಟ್ಟರ ಮಾತನ್ನು ಕೇಳುತ್ತೇನೆಂದು ನನ್ನ ತಂದೆಗೆ ನಂಬಿಕೆಯಿತ್ತು. ಅದು ಬಹುಮಟ್ಟಿಗೆ ಸರಿಯಾದ ನಂಬಿಕೆ.

ಸುಬ್ಬಾಭಟ್ಟರದು ವಿಚಾರಶೀಲವಾದ ಬುದ್ಧಿವೃತ್ತಿ. ಆತ (ಥಿಯೊಸಾಫಿಕಲ್ ಸೊಸೈಟಿ) ದಿವ್ಯಜ್ಞಾನ ಸಮಾಜದ ತತ್ತ್ವಗಳ ಪರಿಚಯವನ್ನು ಮಾಡಿಕೊಂಡಿದ್ದರು. ಆ ಅಭಿಪ್ರಾಯಗಳನ್ನು ನನ್ನಲ್ಲಿ ಚರ್ಚಿಸಿದ್ದುಂಟು. ವಜ್ರಸೂಚಿಕೋಪನಿಷತ್ತನ್ನು ಮೊದಲು ನನಗೆ ತೋರಿಸಿಕೊಟ್ಟವರು ಸುಬ್ಬಾಭಟ್ಟರು.

ಸುಬ್ಬಾಭಟ್ಟರು ಸುಮಾರು ಅರವತ್ತು ವಯಸ್ಸಾಗುವ ಮುಂಚೆಯೇ ತೀರಿಕೊಂಡರು. ಆದರೆ ಅವರನ್ನು ಬಲ್ಲವರ ಸ್ಮರಣೆಯಲ್ಲಿ ಈಗಲೂ ಉಳಿದಿದ್ದಾರೆ.

ಶಾಮಭಟ್ಟರು

ಇವರು ಸೀರನಾಡು ಬ್ರಾಹ್ಮಣರು. ಋಗ್ವೇದಿಗಳು. ಚೆನ್ನಾಗಿ ಅಧ್ಯಯನ ಮಾಡಿದ್ದದ್ದಲ್ಲದೆ ಪೂರ್ವಾಪರ ಪ್ರಯೋಗಗಳೆರಡರಲ್ಲಿಯೂ ಪ್ರಶಸ್ತರಾಗಿದ್ದರು. ಅವರು ಕರ್ಮ ನಿಷ್ಠರು.

ಶಾಮಭಟ್ಟರ ಹಿರಿಯ ಮಗ ವಾಮನಭಟ್ಟರೂ ನಾನೂ ಸಮವಯಸ್ಕರು. ನಮಗಿಬ್ಬರಿಗೂ ಮುಂಜಿಯಾದದ್ದು ಒಂದೇ ದಿನ. ಶಾಮಭಟ್ಟರು ತಕ್ಕಮಟ್ಟಿಗೆ ಅನುಕೂಲಸ್ಥರಾಗಿದ್ದರು. ಸ್ವಂತ ಮನೆ, ಭೂಸ್ವತ್ತು ಇದ್ದವು. ಅದನ್ನೆಲ್ಲ ಅವರು ಸಾಮರ್ಥ್ಯದಿಂದಲೂ ಜಾಣತನದಿಂದಲೂ ನಿರ್ವಾಹ ಮಾಡುತ್ತಿದ್ದರು. ಅವರು ಇನ್ನೊಬ್ಬರಲ್ಲಿ ಹೋಗಿ ಎಂದೂ ಯಾಚನೆಗೆ ಕೈಯೊಡ್ಡಿದವರಲ್ಲ.

ನನಗೆ ಅವರ ನೆನಪು ಬಂದಾಗ ಹೆಚ್ಚಾಗಿ ಪ್ರಶಂಸೆಗೆ ಬರುವ ವಿಷಯ ಅವರ ಮನೆಯಲ್ಲಿ ದ್ವಾದಶಿ ದ್ವಾದಶಿಯೂ ನಡೆಯುತ್ತಿದ್ದ ಫಲಾಹಾರಪೂಜೆ. ಹತ್ತು ಹದಿನೈದು ಮಂದಿ ಬ್ರಾಹ್ಮಣರಿರುತ್ತಿದ್ದರು. ಕ್ರಮವಾಗಿ ವೇದಘೋಷವಾಗುತ್ತಿತ್ತು-ಮಧ್ಯಾಹ್ನ ಸುಮಾರು ಎರಡು ಎರಡೂವರೆ ಘಂಟೆಯವರೆಗೆ. ಅನಂತರ ಫಲಾಹಾರಪೂಜೆ. ಅವಲಕ್ಕಿಯಲ್ಲಿ ನಾಲ್ಕು ವಿಧ; ಅರಳು ಲಡ್ಡಿಗೆ; ಸಂಡಿಗೆಗಳು; ರಸಾಯನ; ಕೋಸುಂಬರಿ–ಇವೆಲ್ಲ ಇರುತ್ತಿದ್ದವು. ದಕ್ಷಿಣೆಯನ್ನೂ ಕೊಡುತ್ತಿದ್ದರು. ಹಿರಿಯರ ಫಲಾಹಾರ ಮುಗಿದು ಅವರು "ಶ್ರೀರಾಮರು ಸುಪ್ರೀತರಾದರು ಎಂದು ಹೇಳುತ್ತಾರೆ ಸಭೆಯವರು" ಎನ್ನುತ್ತ ಹೊಟ್ಟೆ ನೀವಿಕೊಂಡು ಹೊರಡುತ್ತಿದ್ದಾಗ, ಶಾಮಭಟ್ಟರ ಕುಟುಂಬ ಶ್ರೀಮತಿ ನರಸಮ್ಮನವರು ನನಗೆ ಸಂಜ್ಞೆ ಮಾಡಿ "ನೀನು ಸ್ವಲ್ಪ ಕುಳಿತುಕೋ" ಎನ್ನುವರು. ನನಗೆ ಪುನಃ ಫಲಾಹಾರಪೂಜೆ ನಡೆಯುವುದು. ನಾನು ಸ್ವಲ್ಪ ತಿಂಡಿಪೋತನೆನ್ನುವುದು ಅವರಿಗೆಲ್ಲ ತಿಳಿದಿತ್ತು.

ಶಾಮಭಟ್ಟರು ಸಾತ್ತ್ವಿಕರು ಉಪಕಾರಿಗಳು. ಪರಿಶುದ್ಧವಾದ ಜೀವನ ನಡಸಿದವರು.

ಹೆಬ್ಬಣಿ ರಾಮಚಂದ್ರಶಾಸ್ತ್ರಿಗಳು

ಇವರು ಮುಲಕನಾಡು ಬ್ರಾಹ್ಮಣರು. ರಾಮಾಯಣ ಭಾರತ ಭಾಗವತಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿದ್ದವರು. ಒಳ್ಳೆಯ ಮೈಬಣ್ಣ, ಒಳ್ಳೆಯ ರೂಪ, ಒಳ್ಳೆಯ ಶಾರೀರ. ಇಷ್ಟೆಲ್ಲ ಸೊಗಸುಗಳು ಸೇರಿ ಅವರು ಸಾತ್ತ್ವಿಕರೂ ಪರಿಶುದ್ಧರೂ ಆಗಿದ್ದರು.

ಹೆಬ್ಬಣಿ ಮುಳಬಾಗಲಿನಿಂದ ಹದಿನೈದಿಪ್ಪತ್ತು ಮೈಲಿ ದೂರದ ಹಳ್ಳಿ. ಅಲ್ಲಿ ಒಂದಾನೊಂದು ಕಾಲದಲ್ಲಿ ಬಹುಮಂದಿ ವಿದ್ವಾಂಸರಿದ್ದಿರಬೇಕು. ಶ್ರೀಪತಿಭಟ್ಟರೆಂಬ ವೇದಾಧ್ಯಯನಸಂಪನ್ನರು ಅಲ್ಲಿದ್ದರು. ಮುಳಬಾಗಲಿನ ಅನೇಕ ಮಾಧ್ವ ವಿದ್ವಾಂಸರು ಹೆಬ್ಬಣಿಯಿಂದ ಬಂದವರು. ಹೆಬ್ಬಣಿ ಶೇಷಾಚಾರ್ಯರು, ಹೆಬ್ಬಣಿ ಶ್ರೀನಿವಾಸಾಚಾರ್ಯರು, ಹೆಬ್ಬಣಿ ರಾಮಣ್ಣಾಚಾರ್ಯರು ಇವರೆಲ್ಲ ಪ್ರಸಿದ್ಧರಾದವರು.

ರಾಮಚಂದ್ರಶಾಸ್ತ್ರಿಗಳು ಪುರಾಣ ಹೇಳುವುದಕ್ಕಾಗಿ ಮುಳಬಾಗಲಿಗೆ ಬರುತ್ತಿದ್ದವರು. ಆ ಪುರಾಣ ನಡೆಯುತ್ತಿದ್ದದ್ದು ತೆಲುಗು ಭಾಷೆಯಲ್ಲಿ. ಪೋತನನ ಭಾಗವತ, ರಂಗನಾಥ ರಾಮಾಯಣ–ಇವು ಆಧಾರಗ್ರಂಥಗಳು. ಶಾಸ್ತ್ರಿಗಳು ಯಾವುದೋ ಒಂದು ಪ್ರಕರಣವನ್ನು ಆರಿಸಿಕೊಂಡು ಅದನ್ನು ರಾಗಸಮೇತವಾಗಿ ಓದುವರು. ಬಳಿಕ ಅರ್ಥ ವಿವರಣೆ. ಅದರಲ್ಲಿ ಬರುತ್ತಿದ್ದ ವಾಗ್ಧೋರಣೆಯೂ ವರ್ಣನ ವೈಖರಿಯೂ ಅದಕ್ಕೆ ಉಚಿತವಾದ ಮುಖಭಂಗಿ ಹಸ್ತವಿನ್ಯಾಸಗಳೂ ಸಭಿಕರಿಗೆ ಅತ್ಯಂತ ರಂಜಕವಾಗಿದ್ದವು. ಸಾಮಾನ್ಯವಾಗಿ ಸಂಜೆ ಏಳೂವರೆ ಎಂಟರಿಂದ ಹತ್ತೂವರೆ ಹನ್ನೊಂದರವರೆಗೂ ಪುರಾಣ ನಡೆಯುವುದು. ಸಮಾಪ್ತಿಯಲ್ಲಿ ಒಂದು ಪದ್ಯ ಹೇಳುವರು:

“ಈ ಹೊತ್ತಿನ ಉಭಯ...ಇಂಥಾ ಉದಾರಿಗಳಿಂದ ನಡೆಯಿತು. ನಾಳೆಯ ಉಭಯವನ್ನು ನಡೆಸಿಕೊಡುವ ಉದಾರಿಗಳನ್ನು ಭಗವಂತನು ಆಶೀರ್ವದಿಸುವನು.”

ಇದು ಪದ್ಯದ ತಾತ್ಪರ್ಯ. “ಉಭಯ” ವೆಂದರೆ ಎರಡು ಹೊತ್ತಿನ ನೈವೇದ್ಯ.

ಇದಾದ ಮೇಲೆ “ಉಭಯ” ನಡಸಲು ನಾನು ಮುಂದು ತಾನು ಮುಂದು ಎಂದು ವೈಶ್ಯರು ಮುಂದೆ ಬರುತ್ತಿದ್ದರು. ಪುರಾಣ ನಡೆಯುತ್ತಿದ್ದದ್ದು ಪೇಟೆಯಲ್ಲಿ, ವೈಶ್ಯ ಮಂಡಲಿಯ ನಡುವೆ. ಆ ಊರಿನ ವೈಶ್ಯರು ಧರ್ಮಿಷ್ಠರೂ ಧನಿಕರೂ ಆಗಿದ್ದರು.

ರಾಮಚಂದ್ರಶಾಸ್ತ್ರಿಗಳು ಬಿಡಾರ ಮಾಡುತ್ತಿದ್ದದ್ದು ನಮ್ಮ ಮನೆಯಲ್ಲಿ. ನನಗೆ ಅವರು ಎಷ್ಟೋ ಕಥೆಗಳನ್ನೂ ಉಪಾಖ್ಯಾನಗಳನ್ನೂ ಹೇಳಿ ಸಂತೋಷಪಡಿಸಿದ್ದಾರೆ. ಮಹಾಭಾರತದಿಂದ ಅವರು ಹೇಳಿದ ಕೆಲವು ಶ್ಲೋಕಗಳು ಕಷ್ಟಪರೀಕ್ಷೆಯ ಕಾಲದಲ್ಲಿ ಮನೋದಾರ್ಢ್ಯಪ್ರದಗಳಾಗಿ ನನ್ನ ನೆನಪಿನಲ್ಲಿ ನಿಂತಿವೆ.

೫ ಚಂದ್ರಶೇಖರಶಾಸ್ತ್ರಿಗಳು

ಚಂದ್ರಶೇಖರಶಾಸ್ತ್ರಿಗಳವರು ಶ್ರೀನಿವಾಸಪುರದವರು. ಹುಲುಸುಕಮ್ಮೆ (ಉಲುಚುಕಮ್ಮೆ) ಬ್ರಾಹ್ಮಣರು. ಮುಳಬಾಗಲಿಗೆ ಆಂಗ್ಲೋವೆರ್ನಾಕ್ಯುಲರ್ ಸ್ಕೂಲಿನ ಹೆಡ್ಮಾಸ್ಟರಾಗಿ ಬಂದರು. ಅವರು ಚಾರಿತ್ರದಿಂದಲೂ ವಿದ್ವತ್ತಿನಿಂದಲೂ ಕಾರ್ಯಶ್ರದ್ಧೆಯಿಂದಲೂ ಎಲ್ಲ ಜನರ ಮನ್ನಣೆಯನ್ನೂ ಗಳಿಸಿದ್ದರು.

ಅವರ ಅಣ್ಣಂದಿರು ನಂಜುಂಡಶಾಸ್ತ್ರಿಗಳು ಹೆಸರುವಾಸಿಯಾದ ವೇದಾಧ್ಯಾಪಕರು; ಅವರ ತಮ್ಮಂದಿರು ಸುಬ್ಬಾಶಾಸ್ತ್ರಿಗಳು ಏರುಕಾಲುವೆ ಎಂಬಲ್ಲಿ ಸ್ಕೂಲ್‌ಮಾಸ್ಟರಾಗಿದ್ದು ಮನ್ನಣೆ ಪಡೆದವರು.

ಚಂದ್ರಶೇಖರಶಾಸ್ತ್ರಿಗಳ ವ್ಯಕ್ತಿಲಕ್ಷಣಗಳಲ್ಲಿ ಮುಖ್ಯವಾದವು ಅವರ ಮುಖದ ಮೇಲಿನ ವರ್ಚಸ್ಸು; ಅವರ ಕಂಚಿನ ಧ್ವನಿಯುಳ್ಳ ಕಂಠ; ಅವರ ಪ್ರವಚನಪಟುತ್ವ; ಅವರ ಮುಂಗೋಪ.

ರೂಲುಕೋಲನ್ನು ಕೈಯಲ್ಲಿ ಯಾವಾಗಲೂ ಹಿಡಿದಿರುತ್ತಿದ್ದರು. ತಪ್ಪು ಮಾಡಿದ ವಿದ್ಯಾರ್ಥಿಗಳಿಗೆ ಕೈಗೆಣ್ಣಿನ ಮೇಲೆ ಏಟು. ದವಡೆ ಚಿವುಟುವುದೂ ಉಂಟು. ಬೈಗಳಲ್ಲಿ ನಿಘಂಟುವಿನ ಕೊರತೆಯಿಲ್ಲ. ತೆಲುಗು ಪರಿಭಾಷೆಯೇ ಹೆಚ್ಚು. "ವೆರ್ರಿ ವೆಧವ" "ಏಡಿಚಿ ಮುಖಂಕಡಗಿಕೊನ್ನಟ್ಟು" "ದಿವ್ಯಃ", ಇತ್ಯಾದಿ. ವಿದ್ಯಾರ್ಥಿಗಳಿಗೆ ಕುಚೋದ್ಯದ ಹೆಸರುಗಳನ್ನು ಇಡುವುದುಂಟು. (ಕುರುರಾಯ ಎಂಬುದನ್ನು ಹಿಂದೆ ಸ್ಮರಿಸಿದೆ.) ಈ ಬಡ ಲೇಖಕನಿಗೆ ಮದನಕುಮಾರ ಎಂದು ಹೆಸರಿಟ್ಟಿದ್ದರು. ಒಬ್ಬಾತನಿಗೆ "ಕಂದನಗಾಡು" ಎಂದು ಹೆಸರು.

ಹೀಗೆ ಅವರು ಕೋಪಿಷ್ಠರೆಂಬ ಕಾರಣದಿಂದ ಭಯವೂ ಹಾಸ್ಯವಂತರೆಂಬ ಕಾರಣದಿಂದ ಮೆಚ್ಚಿಕೆಯೂ ವಿದ್ಯಾಭಿಮಾನಿಗಳೆಂಬ ಕಾರಣದಿಂದ ಗೌರವವೂ ನಮ್ಮ ಮನಸ್ಸುಗಳಲ್ಲಿ ಬೆರೆತುಕೊಂಡಿದ್ದವು.

ಅವರ ತರಗತಿಗಳಲ್ಲಿ ನಾನಾ ಜಾತಿಗಳವರಿದ್ದರು. ಬ್ರಾಹ್ಮಣರು ಮಾತ್ರವಲ್ಲದೆ ಕೋಮಟಿಗರು, ಗಾಣಿಗರು, ಅಗಸರು, ಸುಣ್ಣಕಲ್ಲಿನವರು, ಬಣಜಿಗರು

ಮೊದಲಾದವರಿದ್ದರು. ಶಾಸ್ತ್ರಿಗಳ ಕೋಪವೂ ಹಾಸ್ಯವೂ ನಿಷ್ಪಕ್ಷಪಾತವಾಗಿ ಎಲ್ಲರಲ್ಲಿಯೂ ಹಂಚಿಕೆಯಾಗುತ್ತಿತ್ತು.

ಕಾವ್ಯಪಾಠ

ಚಂದ್ರಶೇಖರಶಾಸ್ತ್ರಿಗಳ ಪಾಠವೆಂದರೆ ಒಂದು ಸರಸ ಸಾಹಿತ್ಯದ ಸುಗ್ಗಿ. "ಗಜವದನ ಹೇರಂಬ" ಪಾಠ ಹೇಳಬೇಕಾದರೂ ಶಬ್ದದ ರೂಪನಿಷ್ಪತ್ತಿ, ಅನ್ವಯಾರ್ಥ, ಆಕಾಂಕ್ಷೆ, ಸಮಾಸ, ಲಿಂಗ ವಚನ ವಿಭಕ್ತಿಗಳು-ಇವನ್ನೆಲ್ಲ ಹೇಳಿಸುತ್ತಿದ್ದರು, ಅಥವಾ ಹೇಳಿ ಕೊಡುತ್ತಿದ್ದರು. ಈ ಪಾಠದ ಅವಸರದಲ್ಲಿ ತಪ್ಪು ಮಾಡಿದ ವಿದ್ಯಾರ್ಥಿಗೆ ಪೆಟ್ಟು ಬಿದ್ದೀತೆಂಬ ಭಯವಿದ್ದರೂ ಶಾಸ್ತ್ರಿಗಳವರ ಕಾವ್ಯವಾಚನದಿಂದ ದೊರೆಯುತ್ತಿದ್ದ ಸಂತೋಷದಲ್ಲಿ ಎಲ್ಲ ಭಯಗಳೂ ಮರೆತುಹೋಗುತ್ತಿದ್ದವು. ಅದೇನು ಸೊಗಸಾದ ಕಂಠ! ಅದೇನು ಸೊಗಸಾದ ಧಾಟಿ! ಕನ್ನಡ ಪದ್ಯವನ್ನಾಗಲಿ, ಸಂಸ್ಕೃತ ಶ್ಲೋಕವನ್ನಾಗಲಿ ಅವರು ಹೇಳುವ ಧೋರಣೆಯಿಂದಲೇ ಅದರ ಭಾವ ಕೇಳುವವರ ಮನಸ್ಸಿಗೆ ಸ್ಫುರಿಸುತ್ತಿತ್ತು. ಅಕ್ಷರಗಳ ಮತ್ತು ಪದಗಳ ಉಚ್ಚಾರಣೆಯ ಸೊಗಸನ್ನು ಕಾಣಬೇಕಾದರೆ ಚಂದ್ರಶೇಖರ ಶಾಸ್ತ್ರಿಗಳಂತೆ ಕಾವ್ಯ ಹೇಳುವವರನ್ನು ಸೇವಿಸಬೇಕು.

ವೇದಗಾನ

ಊರಿನಲ್ಲಿ ನಡೆಯುವ ಉಪಾಕರ್ಮ ಮೊದಲಾದ ವೈದಿಕ ಕರ್ಮ ಸಂದರ್ಭದಲ್ಲಿ ಕೇಳಬೇಕು ಚಂದ್ರಶೇಖರಶಾಸ್ತ್ರಿಗಳ ವೇದಗಾನದ ಸೊಬಗನ್ನ. ವೆಂಕಟರಾಮಭಟ್ಟರೊಡನೆ ಅವರು ಇಂಥ ಸಂದರ್ಭಗಳಲ್ಲಿ ಸಹಕರಿಸುವರು. ಭಟ್ಟರಿಗಿಂತ ಶಾಸ್ತ್ರಿಗಳು ವಯಸ್ಸಿನಲ್ಲಿ ಕಿರಿಯರು. ವಿದ್ಯೆಯ ವಿಷಯದಲ್ಲೂ ನಿಯಮನಿಷ್ಠೆಗಳ ವಿಷಯದಲ್ಲಿಯೂ ಅವರಲ್ಲಿ ಒಬ್ಬರಲ್ಲೊಬ್ಬರಿಗೆ ಮೆಚ್ಚಿಕೆ. ವೆಂಕಟರಾಮಭಟ್ಟರು ಹವನ ಹೋಮ ಕ್ರಿಯೆಗಳಲ್ಲಿ ಸಾಧ್ಯವಾದಾಗಲೆಲ್ಲ ಚಂದ್ರಶೇಖರಶಾಸ್ತ್ರಿಗಳನ್ನು ಬ್ರಹ್ಮಸ್ಥಾನದಲ್ಲಿ ಕೂಡಿಸುವರು. ಇಬ್ಬರೂ ಜೊತೆಯಲ್ಲಿ ಮಂತ್ರ ಹೇಳುವರು.

ಕಾರ್ತಿಕ ಮಾಸದಲ್ಲಿ ಸೋಮೇಶ್ವರ ಸನ್ನಿಧಿಯಲ್ಲಿ ದೀಪಾರಾಧನೆಗಾಗಿ ಚಂದ್ರಶೇಖರ ಶಾಸ್ತ್ರಿಗಳು ತಪ್ಪದೆ ಬರುತ್ತಿದ್ದರು. ಮಂತ್ರಪುಷ್ಪ ಕಾಲದಲ್ಲಿ ವೇದದ ಒಂದು ಹನಸ್ಸು, ಕಾವ್ಯದಿಂದ ಒಂದು ಚೂರ್ಣಿಕೆ-ಇದನ್ನು ಹೇಳುವುದು ಅವರ ಸೇವೆ.

ಬ್ರಹ್ಮಾತ್ಮನ್ವದಸೃಜತ.....

–ಇದು ಅವರಿಗೆ ಪರಮ ಪ್ರಿಯವಾದ ಮಂತ್ರ. ಚೂರ್ಣಿಕೆಯಲ್ಲಿ ಚಂಪೂ ರಾಮಾಯಣದ

ಏಷ ಮೃಗಾಂಕೋಽಪಿ.....

ಗದ್ಯವನ್ನು ಸಂತೋಷದಿಂದ ಹೇಳುವರು. ಆ ಕಾಲದಲ್ಲಿ ಜನ ಆಗಾಗ ಭೋಜನ ಮಾಡುತ್ತಿದ್ದದ್ದುಂಟು. ಆಗ ಅವರಿಗೆ ಊಟಕ್ಕಿಂತ ಪ್ರಿಯವಾದದ್ದು ಚಂದ್ರಶೇಖರಶಾಸ್ತ್ರಿಗಳು ಹೇಳುವ ಪದ್ಯ. ಅವರಿಗೆ ಸಂಗೀತದ ಬಹು ರಾಗಗಳು ಸ್ವಾಧೀನವಾಗಿದ್ದವು. ಅದರಲ್ಲಿ ಅವರು ಹೆಚ್ಚಾಗಿ ಬಳಕೆಯಲ್ಲಿಟ್ಟುಕೊಂಡಿದ್ದದ್ದು ಕೇದಾರಗೌಳ ರಾಗ. ಈ ಗಂಭೀರವಾದ ರಾಗವನ್ನೆತ್ತಿ ಅವರು ಒಂದು ಪಂಕ್ತಿಯನ್ನು ಹೇಳಿದರೆಂದರೆ ಸಭೆಯೆಲ್ಲ ಚಿತ್ರದ ಪ್ರತಿಮೆಗಳಂತೆ ಆಗುತ್ತಿತ್ತು. ಅಂಥ ಸೊಗಸಾದ ಶಾರೀರ ಮತ್ತು ರಾಗಭಾವ.

ಒಂದು ದಿನ ನಾನು ಸಂಧ್ಯಾವಂದನೆ ಮಾಡುತ್ತ ಕುಳಿತಿದ್ದೆ. ಅನಂತರ ಅಗ್ನಿಕಾರ್ಯ ನಡೆಯಬೇಕಾಗಿತ್ತು. ಆ ಹೊತ್ತಿಗೆ ಸರಿಯಾಗಿ ಚಂದ್ರಶೇಖರ ಶಾಸ್ತ್ರಿಗಳವರು ನಮ್ಮ ಮನೆಗೆ

ಬಂದರು. ನಾನು ಆಹ್ನಿಕಮಾಡುತ್ತಿದ್ದದ್ದನ್ನು ಕಂಡು ಅಲ್ಲಿ ಬಂದು ಕುಳಿತರು. ನನಗೆ ಉಪನಯನವಾಗಿ ಕೆಲವೇ ದಿವಸಗಳಾಗಿತ್ತು. ಮಂತ್ರ ಹೇಗೆ ಹೇಳುತ್ತಾನೋ ನೋಡೋಣವೆಂಬುದು ಅವರ ಉದ್ದೇಶ. ನಾನು ಅಗ್ನಿಕಾರ್ಯಕ್ಕೆ ಸಂಕಲ್ಪ ಹೇಳುತ್ತ–

"ಶ್ರೀ ಪರಮೇಶ್ವರ ಪ್ರೀತ್ಯರ್ಥಂ... ಅಸ್ಮಾಕಂ..."

ಎಂದೆ. ಚಂದ್ರಶೇಖರಶಾಸ್ತ್ರಿಗಳು (ತೆಲುಗಿನಲ್ಲಿ)

"ಎಲ ಎಲಾ! ಆಗಲೇ ಹಿಡಿದೆಯಾ ಚಿಲ್ಲರೆ ಕುಟುಂಬಗಳನ್ನು!"

–ಎಂದರು. ಮನೆಯೆಲ್ಲ ನಗು. ಊರಿಗೆಲ್ಲ ಇದೊಂದು ತಮಾಷೆ. ಸ್ಕೂಲಿನಲ್ಲೂ ಶಾಸ್ತ್ರಿಗಳು ಇದನ್ನು ಹೇಳಿದರು.

ಪಾಕಕೌಶಲ

ಚಂದ್ರಶೇಖರಶಾಸ್ತ್ರಿಗಳು ಪಾಕರಸಿಕರೂ ಹೌದು. ಬಗೆಬಗೆಯ ಸಾರುಗಳನ್ನೂ ಹುಳಿಗಳನ್ನೂ ಭಕ್ಷ್ಯಗಳನ್ನೂ ಮಾಡುವುದರಲ್ಲಿ ಒಳ್ಳೆಯ ಕೈ. ಅವರ ಮನೆಯಲ್ಲಿ ಷಷ್ಠಿ ಬಂದರೆ ನನ್ನನ್ನು ಊಟಕ್ಕೆ ಕರೆದು ನನಗೆ ಕಾಲು ತೊಳೆದು ಒಂದು ಪಂಚೆ ಕೊಡುವರು. ಅನಂತರ ಊಟ. ಪಾಯಸ ಆಂಬೊಡೆ ಮೊದಲಾದ ವಿಶೇಷ ಪದಾರ್ಥಗಳುಂಟು. ಆದರೆ ನನಗೆ ಬಹು ಸೊಗಸೆನ್ನಿಸಿದ್ದು ಅವರು ಮಾಡಿದ ಸಾರು. ಅದಕ್ಕೆ ತೆಂಗಿನ ಕಾಯೊಳಗಿನ ನೀರನ್ನು ಹಾಕುವುದಲ್ಲದೆ ಕೊಬ್ಬರಿ ತುರಿಯನ್ನೊ ಏನೋ ಪಕ್ವಮಾಡಿ ಹಾಕಿರುತ್ತಿದ್ದರು. ನಾನು ಪಂಚೆ ಏಕೆಂದು ಕೇಳಿದರೆ “ನೀನು ಬ್ರಾಹ್ಮಣನಯ್ಯ, ಅದನ್ನೂ ತೆಗೆದುಕೊಳ್ಳಬೇಕು, ದಕ್ಷಿಣೆಯನ್ನೂ ತೆಗೆದುಕೊಳ್ಳಬೇಕು” ಎನ್ನುವರು. ಎಲ್ಲರೂ ನಗುವರು.

ಅವರು ಭೋಜನಪ್ರಿಯರೂ ಹೌದು. ನನ್ನ ಅಜ್ಜಿಯನ್ನು ಕಂಡಾಗ,

“ಏನಮ್ಮ, ನೀವು ಮಾಡಿದ ಹುಳಿಸೊಪ್ಪು ಹಿಟ್ಟು ತಿಂದು ಎಷ್ಟೋ ದಿನವಾಯಿತಲ್ಲ?” -ಎನ್ನುವರು.

ಚಂದ್ರಶೇಖರಶಾಸ್ತ್ರಿಗಳ ಪ್ರಭಾವ ನನ್ನ ಮೇಲೆ ಪರಿಣಾಮಕಾರಿಯಾಗಿದೆ ಎನ್ನುವುದು ಅತ್ಯುಕ್ತಿಯಲ್ಲ. ಅವರು ಕಷ್ಟವನ್ನು ಬಲ್ಲವರು. ಗೃಹಕೃತ್ಯದಲ್ಲಿ ನೋವು ತಿಂದವರು. ಬಡತನವನ್ನು ಕಂಡಿದ್ದವರು. ಎಂಥ ಕಷ್ಟ ಎಂಥ ಬಡತನದಲ್ಲಿಯೂ ಎದೆ ಕುಗ್ಗದೆ ನಿಂತವರು. ಅವರಿಗೆ ಪರಮ ಪ್ರಿಯವಾಗಿದ್ದ ಗ್ರಂಥಗಳಲ್ಲಿ ಶಿವಾಪರಾಧ ಕ್ಷಮಾಪಣ ಸ್ತೋತ್ರ ಒಂದು. ಸ್ತೋತ್ರವನ್ನು ಅವರು ಸೋಮೇಶ್ವರ ಸನ್ನಿಧಿಯಲ್ಲಿ ಹೇಳಿದಾಗ ಕೇಳಿದವರು ತಮ್ಮ ಜೀವನದ ಒಳಗಡೆ ಒಂದು ವಿಶೇಷ ಪರಿಚಲನೆಯನ್ನು ಅನುಭವಿಸಿದ್ದಾರು.

> ಕ್ಷಂತವ್ಯೋ ಮೇಽಪರಾಧಃ
> ಶಿವ ಶಿವ ಶಿವ ಭೋ
> ಶ್ರೀ ಮಹಾದೇವ ಶಂಭೋ ॥

ಮದನಕುಮಾರ

ಚಂದ್ರಶೇಖರಶಾಸ್ತ್ರಿಗಳು ಪಾಠ ಹೇಳಬೇಕಾಗಿದ್ದ ಗ್ರಂಥಗಳಲ್ಲಿ 'ಸುಮತಿ ಮದನ ಕುಮಾರರ ಚರಿತ್ರೆ' ಒಂದು. ಅದು ಇಂಗ್ಲಿಷಿನ 'ಸ್ಯಾಂಡ್‌ಫರ್ಡ್ ಅಂಡ್ ಮೆರ್ಟನ್' ಎಂಬ ಗ್ರಂಥದ ಕನ್ನಡ ಅನುವಾದ; ಎಂ. ಎಸ್. ಪುಟ್ಟಣ್ಣನವರಿಂದ ರಚಿತವಾದದ್ದು. ಬಹು ಸ್ವಾರಸ್ಯವುಳ್ಳ ಗ್ರಂಥ; ಬಹು ಚೆನ್ನಾಗಿ ಬರೆದಿದ್ದಾರೆ. ಈ ಪುಸ್ತಕ ಪಾಠ ನಡೆಯುತ್ತಿದ್ದಾಗ ಒಂದು ದಿನ ಪ್ರಾರಂಭದಲ್ಲಿ ನಾನು ಕ್ಲಾಸಿನಲ್ಲಿರಲಿಲ್ಲ. ಕ್ಲಾಸು ಪ್ರಾರಂಭವಾದ ಐದಾರು ನಿಮಿಷಗಳಾದ ಮೇಲೆ ನಾನು ಹೋದೆ. ಶಾಸ್ತ್ರಿಗಳು ನನ್ನ ಕಡೆಗೆ ತಿರುಗಿ "ಬಂದನಯ್ಯ ಮದನಕುಮಾರ!" ಎಂದರು. ಎಲ್ಲರೂ ನಕ್ಕರು. ನನಗೆ ಕೊಂಚ ನಾಚಿಕೆಯಾಯಿತು.

ಪಾಠದ ಕಥೆಯಲ್ಲಿ ಮದನಕುಮಾರನು ಆ ಕ್ಷಣ ಪ್ರವೇಶಮಾಡಬೇಕಾಗಿತ್ತು. ನಾನು ಅಷ್ಟು ಹೊತ್ತಿಗೆ ಸರಿಯಾಗಿ ಅಲ್ಲಿ ಸೇರಿದೆ. ಶಾಸ್ತ್ರಿಗಳು ಪುಸ್ತಕದಲ್ಲಿಯ ಹೆಸರನ್ನು ಹೇಳುವರು. ವಿದ್ಯಾರ್ಥಿಗಳು ಅದನ್ನು ನನಗೆ ಅನ್ವಯಿಸಿದರು. ನನಗೆ ಸ್ವಲ್ಪ ಉಳುಕಿತ್ತು. ಕಾರಣವೇನೆಂದರೆ ನಾನು ಓದಿನಲ್ಲಿ ಹೆಚ್ಚು ಗಮನವಿಲ್ಲದವನು, ಸುಖಪುರುಷ–ಎಂದು ದುರ್ನಾಮ ನನಗೆ ಬಂದಿತ್ತು. ಶಾಸ್ತ್ರಿಗಳು ನನ್ನ ಮನೆಯ ಸಮಾಚಾರವನ್ನು ಚೆನ್ನಾಗಿ ಬಲ್ಲವರು. ಅವರು ನಮ್ಮ ಮನೆಯಲ್ಲಿ ಒಬ್ಬರಾಗಿದ್ದರು. ಆದದ್ದರಿಂದ ನನ್ನ ಚೇಷ್ಟೆಗಳನ್ನು ಬಲ್ಲವರು. ನನಗೆ ಆದ ಅವಮಾನದಿಂದ ನನ್ನ ತಂದೆ, ತಾತ, ಅಜ್ಜಿ ಎಲ್ಲರೂ ಸಂತೋಷಪಟ್ಟರು.

ವಿಚಕ್ಷಣೆ

ಚಂದ್ರಶೇಖರಶಾಸ್ತ್ರಿಗಳು ಇಟ್ಟುಕೊಂಡಿದ್ದ ಒಂದು ಪದ್ಧತಿಯನ್ನು ನಾನು ಈಗಲೂ ಸಾಧ್ಯವಾದಷ್ಟು ಮಟ್ಟಿಗೆ ಪರಿಪಾಲಿಸುತ್ತಿದ್ದೇನೆ.

ಆ ಕಾಲದಲ್ಲಿ ಹೆಡ್‌ಮಾಸ್ಟರಾದವರಿಗೆ ಇನ್ನೊಂದು ಬೇರೆ ಕರ್ತವ್ಯ, ಸಣ್ಣದು, ಅಂಟಿಕೊಂಡಿರುತ್ತಿತ್ತು. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪಠ್ಯಪುಸ್ತಕಗಳನ್ನು ಸರಕಾರದ ಬುಕ್‌ಡಿಪೊದಿಂದ ತರಿಸಿ ಬಿಕರಿ ಮಾಡುವ ಏಜೆಂಟ್ ಕೆಲಸ ಹೆಡ್‌ಮಾಸ್ಟರಿಗೆ ಸೇರಿದ್ದು. ಇದಕ್ಕಾಗಿ ಅವರಿಗೆ ಸಾದಿಸ್ವಾರು ಖರ್ಚು ಎಂದು ಎರಡು ಮೂರು ರೂಪಾಯಿ ದೊರೆಯುತ್ತಿತ್ತು. ಅದಲ್ಲದೆ ಮಾರಾಟದ ಮೊಬಲಗಿನ ಮೇಲೆ ಒಂದು ಸಣ್ಣ ಕಮಿಷನ್ ದೊರೆಯುತ್ತಿತ್ತು.

ಚಂದ್ರಶೇಖರಶಾಸ್ತ್ರಿಗಳವರು ಹೀಗೆ ಆಗಾಗ ಸರಕಾರದ ಬುಕ್‌ಡಿಪೊವಿನಿಂದ ಪುಸ್ತಕ ತರಿಸುತ್ತಿದ್ದರು. ಭಾಂಗಿಗಳು ಬಂದಾಗ ಅದಕ್ಕೆ ಕಟ್ಟಿದ್ದ ದಾರವನ್ನು ಅವರು ಚಾಕುವಿನಿಂದಲಾಗಲಿ ಕತ್ತರಿಯಿಂದಲಾಗಲಿ ಕತ್ತರಿಸುತ್ತಿರಲಿಲ್ಲ. ತರಗತಿಯಲ್ಲಿ ಪಾಠ ಹೇಳುತ್ತ ಹೇಳುತ್ತ ಭಾಂಗಿ ಬಿಚ್ಚುವ ಕೆಲಸವನ್ನೂ ಮಾಡುವರು. ಬಾಯಿಂದ ಪಾಠ; ಕೈಬೆರಳಿನಿಂದ ದಾರದ ಗಂಟು ಬಿಚ್ಚೋಣ. ಕೆಲವು ಗಂಟುಗಳು ಬಹಳ ಕಷ್ಟಕೊಡುತ್ತಿದ್ದವು. ಶಾಸ್ತ್ರಿಗಳು ತಾಳ್ಮೆಯಿಂದ ನಗುನಗುತ್ತ ಗಂಟು ಬಿಚ್ಚುವರು. ಬಿಚ್ಚಿದ್ದಾದ ಮೇಲೆ ಆ ದಾರವನ್ನು ಎಡಗೈಯ ನಾಲ್ಕು ಬೆರಳುಗಳಿಗೂ ಸುತ್ತುವರು. ಆಮೇಲೆ ಆ ದಾರದ ಸುರುಳಿಯನ್ನು ಸುಲಭವಾಗಿ ಬಿಚ್ಚಲಾಗುವಂತೆ ಗಂಟು ಹಾಕಿ ಮೇಜಿನ ಮೇಲೆ ಇರಿಸಿಕೊಳ್ಳುವರು. ಬಳಿಕ ಪುಸ್ತಕದ ಭಾಂಗಿಗೆ ಸುತ್ತಿದ್ದ ಕಾಗದಗಳನ್ನು ಜೋಪಾನವಾಗಿ ತೆಗೆದು ಕೊಂಚವೂ ಹರಿಯದಂತೆ ಮಡಿಸಿ ಭದ್ರವಾಗಿರಿಸುವರು. ಬಂದ ಪುಸ್ತಕಗಳು ಗೊತ್ತಾದ ಕಾಲದೊಳಗಾಗಿ ಮಾರಾಟವಾಗದೆ ಕೆಲವು ಶಿಲ್ಕು ನಿಂತಿರುತ್ತಿದ್ದವು. ಹೀಗೆ ಉಳಿದುಹೋದ ಪುಸ್ತಕಗಳನ್ನು ಶಾಸ್ತ್ರಿಗಳವರು ಅದೇ ಹಳೆಯ ಕಾಗದಗಳಲ್ಲಿ ಮತ್ತೆ ಭಾಂಗಿ ಮಾಡಿ ಅದೇ ಹಳೆಯ ದಾರದಲ್ಲಿ ಸುತ್ತಿ ಸರಕಾರದ ಡಿಪೊವಿಗೆ ವಾಪಸ್ ಕಳುಹಿಸುವರು. ಕ್ಲಾಸಿನಲ್ಲಿದ್ದ ನಮಗೆ ಇದೊಂದು ವಿನೋದ. ಒಂದು ದಿನ ಯಾರೋ ಕೇಳಿದರು: "ಏನು-ಹಳೆಯ ಕಾಗದ; ಹಳೆಯ ದಾರ. ಇದಕ್ಕೆ ಇಷ್ಟು ಮುತುವರ್ಜಿ?"

ಶಾಸ್ತ್ರಿಗಳು ಹೇಳಿದರು: "ದಿವ್ಯಬುದ್ಧಿವಂತನಯ್ಯ. ಅವರು ಕೊಡುವ ಎರಡು ರೂಪಾಯಿನಲ್ಲಿ ಇದಕ್ಕೆ ಎಂಟಾಣೆ ಖರ್ಚುಮಾಡಿದರೆ ಏನು ಬರುತ್ತದೆ?"

ಇದು ನಮಗೆ ಆಗ ಜಿಪುಣತನವೆನಿಸುತ್ತಿತ್ತು. ಅದು ಸತ್ಯವಂತಿಕೆ ಎಂದು ಈಗ ಅನಿಸುತ್ತದೆ. ಇಂಗ್ಲಿಷಿನಲ್ಲಿ “Waste not, want not” ಎಂದು ಹೇಳುವುದುಂಟು. “ಪೋಲು ಮಾಡದಿದ್ದರೆ ತಿರುಪೆಯೆತ್ತಬೇಕಾಗುವುದಿಲ್ಲ.”

ರಂಗಾಚಾರ್ಯರು

ಚಂದ್ರಶೇಖರಶಾಸ್ತ್ರಿಗಳ ಪಟ್ಟ ಶಿಷ್ಯರಲ್ಲೊಬ್ಬರು ವ್ಯಾಸರಾಯಮಠದ ರಂಗಾಚಾರ್ಯರು. ಮೈಸೂರು ಸಂಸ್ಥಾನದಲ್ಲಿ ರಾತ್ರಿ ಪಾಠಶಾಲೆ (ನೈಟ್‌ಸ್ಕೂಲ್) ಪದ್ಧತಿ ಪ್ರಾರಂಭವಾದ ಕಾಲ ಅದು. ಚಂದ್ರಶೇಖರಶಾಸ್ತ್ರಿಗಳು ಹೆಡ್‌ಮಾಸ್ಟರಾಗಿದ್ದ ಸ್ಕೂಲಿನಲ್ಲಿ ನೈಟ್ ಸ್ಕೂಲ್ ಸಹ ನಡೆಯತಕ್ಕದ್ದೆಂದು ಸರಕಾರದವರು ಹುಕುಂ ಮಾಡಿದ ಮೇಲೆ ಆ ನೈಟ್ ಸ್ಕೂಲಿಗೆ ರಂಗಾಚಾರ್ಯರು ಉಪಾಧ್ಯಾಯರಾಗತಕ್ಕದ್ದೆಂದು ಚಂದ್ರಶೇಖರಶಾಸ್ತ್ರಿಗಳು ಶಿಫಾರಸು ಮಾಡಿ ಮಂಜೂರು ಮಾಡಿಸಿದರು. ಹಗಲು ಸ್ಕೂಲಿದ್ದ ದಿನಗಳಲ್ಲಿ ಸಂಜೆ ೭ ಘಂಟೆಯಿಂದ ೯ ರ ವರೆಗೆ ನೈಟ್ ಸ್ಕೂಲ್ ನಡೆಯುತ್ತಿತ್ತು. ಎಂಟು ಹತ್ತು ಮಂದಿ ವಿದ್ಯಾರ್ಥಿಗಳಿರುತ್ತಿದ್ದರು. ೨೫, ೩೦, ೪೦ ವರ್ಷ ವಯಸ್ಸಿನವರು–ರೈತರು, ಸುಣ್ಣಕಲ್ಲಿನವರು, ಗಾರೆಯವರು ಮೊದಲಾದವರು. ಮೊದಮೊದಲು ತೋರಿದ ಉತ್ಸಾಹವು ಬರುಬರುತ್ತ ಕಡಮೆಯಾಯಿತು. ಎರಡು ಮೂರು ವರ್ಷಗಳೊಳಗಾಗಿ ಆ ಏರ್ಪಾಟು ನಿಂತುಹೋಯಿತೆಂದು ನನ್ನ ಜ್ಞಾಪಕ, ನೈಟ್‌ಸ್ಕೂಲಿನ ಉಪಾಧ್ಯಾಯರಿಗೆ ಸಲ್ಲುತ್ತಿದ್ದ ಸಂಬಳ ತಿಂಗಳಿಗೆ ಎರಡೋ ಮೂರೋ ರೂಪಾಯಿ: ದೀಪದ ವೆಚ್ಚಕ್ಕಾಗಿ ಎಂಟಾಣೆ.

ಷೇಕ್ ದಾವೂದ್ ಸಾಹೇಬರು

ಚಂದ್ರಶೇಖರಶಾಸ್ತ್ರಿಗಳ ಇನ್ನೊಬ್ಬ ಅಚ್ಚುಮೆಚ್ಚಿನ ಶಿಷ್ಯ ಷೇಕ್ ದಾವೂದ್ ಸಾಹೇಬರು. ಅವರು ಉರ್ದು (ಹಿಂದೂಸ್ಥಾನಿ), ಕನ್ನಡ ಎರಡರಲ್ಲಿಯೂ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು-ಫಸ್ಟ್‌ಕ್ಲಾಸಿನಲ್ಲಿ. ಕನ್ನಡವನ್ನು ಚೆನ್ನಾಗಿ ಮಾತನಾಡುವರು. ಒಳ್ಳೆಯ ಚಟುವಟಿಕೆಯುಳ್ಳ ಆಸಾಮಿ. ಸ್ವಭಾವದಲ್ಲಿಯೂ ಸಭ್ಯರು.

ಪಂಚ (ಹರಿಜನ)ರಿಗಾಗಿ ಒಂದು ಬೇರೆ ಸ್ಕೂಲು ಇರತಕ್ಕದ್ದೆಂದು ಸರಕಾರ ಗೊತ್ತುಮಾಡಿದಾಗ ಅದರ ಉಪಾಧ್ಯಾಯರಾಗಲು ಷೇಕ್ ದಾವೂದ್ ಸಾಹೇಬರೇ ಅರ್ಹರೆಂದು ಚಂದ್ರಶೇಖರಶಾಸ್ತ್ರಿಗಳು ಶಿಫಾರಸು ಮಾಡಿ ಮಂಜೂರು ಮಾಡಿಸಿದರು. ಷೇಕ್ ದಾವೂದ್ ಸಾಹೇಬರ ಮೆಹನತ್ತಿನಿಂದ ಪಂಚಮ ಪಾಠಶಾಲೆ ಚೆನ್ನಾಗಿ ನಡೆದು ಅಭಿವೃದ್ಧಿಗೆ ಬಂದಿತು. ಅದು ಬಹು ವರ್ಷ ಕಾಲ ನಡೆಯಿತು.

ಅವರ ಕಾವ್ಯಪ್ರಯತ್ನವನ್ನು ಬೇರೆ ಕಡೆ ಪ್ರಸ್ತಾವಿಸಲಾಗಿದೆ.

ಷೇಕ್ ದಾವೂದ್ ಸಾಹೇಬರು ಜನಾನುರಾಗಿಯಾಗಿ ಹಿಂದೂ ಮುಸಲ್ಮಾನ್ ಜನಾಂಗಗಳೆರಡರಲ್ಲೂ ಗಣ್ಯತೆ ಸಂಪಾದಿಸಿದ್ದರು.

***

ಚಂದ್ರಶೇಖರಶಾಸ್ತ್ರಿಗಳವರಿಗೆ ಮೂರು ಮಂದಿ ಗಂಡುಮಕ್ಕಳೂ ಇಬ್ಬರು ಹೆಣ್ಣು ಮಕ್ಕಳೂ ಇದ್ದರು. ಇವರೆಲ್ಲರಿಗಿಂತ ಹಿರಿಯನಾದ ರಾಮಯ್ಯ ಎಂಬಾತ ಚಿಕ್ಕಂದಿನಲ್ಲಿಯೇ ತೀರಿಹೋದ. ಆತನ ತರುವಾಯದ ಶೇಷಪ್ಪನವರು ವಿದ್ವಾಂಸರು. ಕನ್ನಡ ಸಂಸ್ಕೃತಗಳಲ್ಲಿ ಅವರದು ಒಳ್ಳೆಯ ಪರಿಶ್ರಮ. ನಡೆ ನುಡಿಗಳಲ್ಲಿಯೂ ಸಾತ್ತ್ವಿಕರು. ಆತ ಕೆಲವು ವರ್ಷ ಸ್ಕೂಲ್‌ಮಾಸ್ಟರಾಗಿ ಕೆಲಸಮಾಡಿದ ಬಳಿಕ ಆಗಿನ ಜಗದ್ಗುರುಗಳಾದ ಶೃಂಗೇರಿಯ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳ ದರ್ಶನಕ್ಕಾಗಿ ಹೋದರು. ಆ ವೇಳೆಗೆ ಅವರಿಗೆ ಹರಿಕಥೆಮಾಡುವ ಅಭ್ಯಾಸ ಕೊಂಚಮಟ್ಟಿಗೆ ಆಗಿತ್ತು. ಸ್ವಾಮಿಗಳವರ ಸನ್ನಿಧಿಯಲ್ಲಿ ಹರಿಕಥೆಮಾಡುವ ಅವಕಾಶ ದೊರೆಯಿತು. ಸ್ವಾಮಿಗಳವರು ಸಂತೋಷಪಟ್ಟು ಶೇಷಪ್ಪನವರಿಗೆ ಪಂಚಾಕ್ಷರೀ ಉಪದೇಶ ಕೊಡಿಸಿದ್ದಲ್ಲದೆ ಶೇಷಪ್ಪನವರು ಹರಿಕಥಾರೂಪದಲ್ಲಿ ಗುರುಸೇವೆ ನಡಸತಕ್ಕದ್ದೆಂದು ಅಪ್ಪಣೆಕೊಟ್ಟರು. ಅದರಂತೆ ಶೇಷಪ್ಪನವರು ಸರಕಾರಿ ಕೆಲಸದಿಂದ ನಿವೃತ್ತರಾಗಿ ದೇಶಸಂಚಾರ ಮಾಡಿ ನೂರಾರು

ಸ್ಥಳಗಳಲ್ಲಿ ಹರಿಕಥೆ ನಡಸಿದರು. ಆಗ ಸಂಭಾವನೆಯಾಗಿ ದೊರೆತ ಧನವನ್ನೂ ತಮ್ಮ ಸ್ವಂತದ ಹಣವನ್ನೂ ಹಾಕಿ ಶ್ರೀನಿವಾಸಪುರದಲ್ಲಿ ಶ್ರೀಶಂಕರಾಲಯವನ್ನು ಸ್ಥಾಪನೆ ಮಾಡಿಸಿದರು. ಅಲ್ಲಿ ಆಚಾರ್ಯಮೂರ್ತಿ, ಗಾಯತ್ರಿ, ಗಣಪತಿ ಮೊದಲಾದ ದೇವತಾ ಮೂರ್ತಿಗಳು ಪ್ರತಿಷ್ಠಾಪನೆಯಾಗಿ ನಿತ್ಯಪೂಜೆಯನ್ನು ಪಡೆಯುತ್ತಿವೆ.

ಶೇಷಪ್ಪನವರ ತಮ್ಮ ಶ್ರೀನಿವಾಸಯ್ಯನವರು ನೆಲ್ಲೂರಿನಲ್ಲಿ ವಕೀಲರಾಗಿದ್ದರು.

ಕಡೆಯವರಾದ ಶ್ರೀಕಂಠಯ್ಯನವರು ಶ್ರದ್ಧಾಳುವಾಗಿ ಶಂಕರಾಚಾರ್ಯರ ಉಪಾಸನೆ ಮಾಡುತ್ತಿದ್ದರು.

೬ ಹಲವರು ಮಾಧ್ವ ಮಹನೀಯರು

ಮುಳಬಾಗಲಿನಲ್ಲಿ ಮಾಧ್ವ ಬ್ರಾಹ್ಮಣ ಮಂಡಲಿ ದೊಡ್ಡದಾಗಿತ್ತು. ಅವರು ವಾಸ ಮಾಡುತ್ತಿದ್ದ ಪ್ರದೇಶ ಮೇಲಗ್ರಹಾರ, ಕೆಳಗಿನ ಅಗ್ರಹಾರ ಎಂದು ಎರಡು ಭಾಗವಾಗಿತ್ತು. ಎರಡೂ ಸೇರಿ ಸುಮಾರು ಇನ್ನೂರೈವತ್ತು ಮುನ್ನೂರು ಮನೆಗಳಿರಬಹುದು. ಅವುಗಳಲ್ಲಿ ಸುಮಾರು ನೂರೈವತ್ತು ಇನ್ನೂರು ವೈದಿಕ ಆಚಾರ್ಯರುಗಳದು. ಅವರಲ್ಲಿ ಬಹುಮಂದಿ ಮಧ್ವಶಾಸ್ತ್ರಸಂಪನ್ನರು. ಸಾಮಾನ್ಯವಾಗಿ ಮನೆಮನೆಯಲ್ಲಿಯೂ ಪಾಠ ಪ್ರವಚನ ನಡೆಯುತ್ತಿತ್ತು.

ಮುಖ್ಯರಾದವರು ಶ್ರೀಪಾದರಾಯ ಮಠದ ಸ್ವಾಮಿಗಳು, ವ್ಯಾಸರಾಯಮಠದ ಅಪ್ಪಣ್ಣಾಚಾರ್ಯರು, ಅವರೂರು ನರಹರಿ ಆಚಾರ್ಯರು ಮತ್ತು ರಾಘವೇಂದ್ರಾಚಾರ್ಯರು, ಮಧ್ವರಾಯಾಚಾರ್ಯರು, ಕಾಳ್ಳೂರು ರಾಘವೇಂದ್ರಾಚಾರ್ಯರು, ಬೆಲ್ಲದ ನರಷಿಞು ಆಚಾರ್ಯರು, ಹೆಬ್ಬಣಿ ಶೇಷಾಚಾರ್ಯರು ಮತ್ತು ರಾಮಣ್ಣಾಚಾರ್ಯರು.

ಅವರೂರು ಸಹೋದರರು

ಅವರೂರು ನರಹರಿ ಆಚಾರ್ಯರು ಮತ್ತು ರಾಘವೇಂದ್ರಾಚಾರ್ಯರು ಸಹೋದರರು. ಅವರದು ಮಣ್ಣುಮಾಳಿಗೆ ಮನೆ. ವಿಶಾಲವಾದದ್ದು. ಎರಡು ಬೇರೆ ಬೇರೆ ಹಜಾರಗಳಲ್ಲಿ ಆ ಅಣ್ಣತಮ್ಮಂದಿರು ಪಾಠ ನಡಸುವರು. ಒಬ್ಬೊಬ್ಬರ ತರಗತಿಯಲ್ಲಿ ಆರು ಮಂದಿ ಎಂಟು ಮಂದಿ ವಿದ್ಯಾರ್ಥಿಗಳು ಇರುತ್ತಿದ್ದರು. ತರ್ಕ, ವೇದಾಂತಗಳು ಪಾಠ ವಿಷಯಗಳಲ್ಲಿ ಮುಖ್ಯ. ಬೆಳಗ್ಗೆ ಎಂಟರಿಂದ ಹನ್ನೊಂದರವರೆಗೆ ಪಾಠ ನಡೆಯುವುದು. ಸಂಜೆ ನಾಲ್ಕರಿಂದ ಏಳರವರೆಗೆ.

ಬೋಧಕರಿಗೆ ಸಂಬಳವಿಲ್ಲ; ವಿದ್ಯಾರ್ಥಿಗಳಿಗೆ ಸ್ಕಾಲರ್ಷಿಪ್ ಇಲ್ಲ; ಪಾಠಶಾಲೆಗೆ ಸರಕಾರದ ಗ್ರ್ಯಾಂಟ್ ಇಲ್ಲ. ವಿದ್ಯೋತ್ಸಾಹವೊಂದೇ ಅವರಿಗಿದ್ದ ಬಂಡವಾಳ.

ಅವರೂರು ನರಹರಿ ಆಚಾರ್ಯರ ಮಕ್ಕಳು ವ್ಯಾಸಾಚಾರ್ಯರು ನನಗಿಂತ ಒಂದೆರಡು ವರ್ಷ ಹಿರಿಯರು. ಅವರ ಮನೆಯಲ್ಲಿ ಒಂದು ಶ್ವೇತಚ್ಛತ್ರಿ–ಗುಡಿಗಳಲ್ಲಿಯೂ

ಮಠಗಳಲ್ಲಿಯೂ ಇರುವಂಥಾದ್ದು-ಚಾವಣಿಗೆ ಕಟ್ಟಿದ್ದು ಕಾಣಿಸುತ್ತಿತ್ತು. ನಾನು ಅದೇನೆಂದು ಕೇಳಿದೆ. ವ್ಯಾಸಾಚಾರ್ಯರು ಹೇಳಿದರು:

"ನಮ್ಮ ತಾತಂದಿರೋ ಯಾರೋ ಪೂರ್ವಿಕರು ಪ್ರಚಂಡ ವಿದ್ವಾಂಸರಾಗಿದ್ದರಂತೆ. ಅವರಿಗೆ ಉತ್ತರಾದಿ ಸ್ವಾಮಿಗಳೋ ಯಾರೋ ಮೇನಾದಲ್ಲಿ ಕೂಡಿಸಿ ಮೆರವಣಿಗೆ ಮಾಡಿಸಿದರಂತೆ. ಆಗ ಇದನ್ನು ಗೌರವವಾಗಿ ಕೊಟ್ಟರಂತೆ. ಅದಕ್ಕೆ ನಾವೇನು ಮಾಡಬೇಕು? ಈ ಪದಾರ್ಥಕ್ಕೆ ನಮ್ಮ ಮನೆಯಲ್ಲಿ ಸ್ಥಳವಿಲ್ಲ. ಆದದ್ದರಿಂದ ಅಲ್ಲಿ ಕಟ್ಟಿದ್ದಾರೆ."

ನರಹರಿ ಆಚಾರ್ಯರು ಸದ್ದಿಲ್ಲದ ಹಾಸ್ಯಸ್ವಭಾವದವರು. ಅವರ ಬಳಿ ವಿದ್ಯಾರ್ಥಿಯಾಗಿದ್ದವನ ತಂದೆಯೋ ತಾತನೋ ಎಂದಾದರೂ ಬಂದು "ನಮ್ಮ ಹಣಮ ಹ್ಯಾಂಗಧಾನೆ?" "ನಮ್ಮ ಭೀಮ ಹ್ಯಾಂಗಧಾನೆ?" ಎಂದು ಕೇಳುತ್ತಿದ್ದರು. ಆಚಾರ್ಯರಿಗೆ ಹಣಮ, ಭೀಮ ಎಂದರೆ ಯಾರೆಂದು ಗೊತ್ತಾಗುತ್ತಿರಲಿಲ್ಲ. ಪಕ್ಕದಲ್ಲಿದ್ದವರ ಕಡೆಗೆ ತಿರುಗುವರು. ಅವರು ಗುರುತು ಕೇಳಿದ ಕೂಡಲೆ "ಓ-ಅವ-ಭೀಮು-ಛಂದಾಗದಾನೆ. ಮೊನ್ನೆ ಶಾಮರಾಯರ ಮನೆಗೆ ಷಷ್ಠಿಗೆ ಕರೆದಿದ್ದರಲ್ಲ-ಆ ಹುಡುಗ ಹೌದಲ್ಲೊ? ಛಂದಾಗದಾನೆ." –ಹೀಗೆನ್ನುವರು. ಬಂದಿದ್ದವರು "ವಿದ್ಯಾ?" ಎಂದು ಕೇಳುವರು. ಇವರು "ಆಹಾ! ಆಹಾ" ಎಂದು ಹೇಳಿ ಇನ್ನೇನೋ ಪ್ರಸ್ತಾವ ತೆಗೆಯುವರು.

ಅಣ್ಣ ತಮ್ಮಂದಿರಿಬ್ಬರೂ ನಿಗರ್ವಿಗಳು. ಅವರಿಗೆ ತಾವು ದೊಡ್ಡ ಪಂಡಿತರೆಂಬುದರ ಅರಿವೇ ಇದ್ದಂತೆ ಕಾಣುತ್ತಿರಲಿಲ್ಲ. ಬೆಳಗಿನಿಂದ ಸಂಜೆಯವರೆಗೂ ಪಾಠ, ಶಾಸ್ತ್ರ, ಅನುಷ್ಠಾನ, ಪೂಜೆ-ಇದಿಷ್ಟೇ ಅವರ ಜೀವನ.

ಪೂರ್ವಕಾಲದ ರಾಜರೋ ಪಾಳೆಯಗಾರರೋ ಯಾರೋ ಬ್ರಹ್ಮಸ್ವವಾಗಿ ಕೊಟ್ಟಿದ್ದ ಜಮೀನಿನಿಂದ ಬಂದ ಉತ್ಪನ್ನವೇ ಅವರ ಜೀವನೋಪಾಯ. ಅವರಿಗೆ ಪೌರೋಹಿತ್ಯ ಮೊದಲಾದ ವರಮಾನದ ಉದ್ಯೋಗ ಇರಲಿಲ್ಲ. ಆದರೂ ಯಾಚನೆಗೆ ಹೊರಟವರಲ್ಲ.

ಮುಳಬಾಗಲಿನಲ್ಲಿದ್ದ ಮಾಧ್ವ ಮಠಗಳು ಎರಡು: ಒಂದು ಶ್ರೀಪಾದರಾಜ ಸ್ವಾಮಿಗಳ ಮಠ, ಇನ್ನೊಂದು ಮಜ್ಜಿಗೆಹಳ್ಳಿ ಸ್ವಾಮಿಗಳ ಮಠ. ಈ ಎರಡನೆಯ ಮಠದ ಸ್ವಾಮಿಗಳು ಯಾವಾಗಲೋ ಕೆಲವು ವರ್ಷಗಳಿಗೊಂದು ಬಾರಿ ಬಂದು ಹೋಗುತ್ತಿದ್ದವರೇ ಹೊರತು ಮುಳಬಾಗಲಿನಲ್ಲಿ ನೆಲಸಿದ್ದವರಲ್ಲ.

ನೆಲಸಿದ್ದ ಸ್ವಾಮಿಗಳು ಶ್ರೀಪಾದರಾಜಮಠದವರು. ಈ ಮಠವೇ ಅಲ್ಲಿಯ ಮಾಧ್ವ ಮಂಡಲಿಯ ಕೇಂದ್ರಸ್ಥಾನ.

ಶ್ರೀಪಾದರಾಜ ಮಠ

ಶ್ರೀಪಾದರಾಜರ ಮಠ ಐದುನೂರು ವರ್ಷಗಳ ಹಿಂದಿನಿಂದ ಬಂದಿರತಕ್ಕದ್ದು. ಆ ಮಠದ ಮುಖ್ಯಸ್ಥಳ ಮುಳಬಾಗಲು ಊರಿನ ಮಧ್ಯರಂಗದಲ್ಲಿದೆ. ಮಠದಲ್ಲಿ ಶ್ರೀ ಗೋಪೀನಾಥಸ್ವಾಮಿಯ ಸನ್ನಿಧಿಯಿದೆ. ಈ ಮಠಕ್ಕೆ ಸೇರಿದಂತೆ ಊರಿನ ಪೂರ್ವ ದಿಕ್ಕಿನಲ್ಲಿ ಸುಮಾರು ಒಂದೂವರೆ ಎರಡು ಮೈಲಿ ದೂರದಲ್ಲಿ ನರಸಿಂಹತೀರ್ಥವೆಂಬ ಕ್ಷೇತ್ರವಿದೆ. ಅಲ್ಲಿ ಮೂಲ ಶ್ರೀಪಾದರಾಜ ಗುರುಗಳ ವೃಂದಾವನವೂ ಅದೇ ಮಠದ ಇತರ ಕೆಲ ಮಂದಿ ಸ್ವಾಮಿಗಳ ವೃಂದಾವನಗಳೂ ಇವೆ. ಯೋಗ ನರಸಿಂಹಸ್ವಾಮಿ ದೇವಸ್ಥಾನವೂ, ಮುಖ್ಯಪ್ರಾಣದೇವರ ಗುಡಿಯೂ, ವ್ಯಾಸರಾಜರು ಪಾಠ ಚಿಂತನ ಮಾಡುತ್ತಿದ್ದರೆಂದು ಹೇಳಲಾದ ಗೂಡೂ ಇವೆ. ಜ್ಯೇಷ್ಠಮಾಸದಲ್ಲಿ ಶ್ರೀಪಾದರಾಜರ ರಥೋತ್ಸವ ಕಾಲದಲ್ಲಿ ಆ ವ್ಯಾಸರಾಜ ಪಾಠಸ್ಥಾನದ ಬಳಿ ಕುಳಿತು ನಾನು ದಕ್ಷಿಣೆ ವಸೂಲು ಮಾಡುತ್ತಿದ್ದದ್ದು ಜ್ಞಾಪಕವಿದೆ. ಮಠದ ಪಕ್ಕದಲ್ಲಿ ಪೂರ್ಣಯ್ಯನವರ ಸತ್ರವಿದೆ. ಮುಂದುಗಡೆ ವಿಶಾಲವಾದ ಸೋಪಾನ ಪುಷ್ಕರಿಣಿಯಿದೆ. ಇದೇ ನರಸಿಂಹತೀರ್ಥ.

ನರಸಿಂಹತೀರ್ಥದ ವಿಜೃಂಭಣೆಯ ಕಾಲವೆಂದರೆ ಜ್ಯೇಷ್ಠಮಾಸದಲ್ಲಿ ಬರುವ ಶ್ರೀಮದಾದಿ ಶ್ರೀಪಾದರಾಜ ಗುರುಗಳವರ ಪುಣ್ಯದಿನೋತ್ಸವ. ಆ ಉತ್ಸವಕ್ಕಾಗಿ ದೇಶದ ನಾನಾ ಪ್ರಾಂತಗಳಿಂದ ಜನ ಸಾವಿರ ಸಾವಿರಗಟ್ಟಲೆ ಬಂದು ನೆರೆಯುತ್ತಿದ್ದ ದಿನಗಳನ್ನು ನಾನು ನೋಡಿದ್ದೇನೆ. ಮಂಟಪ ಮಂಟಪದಲ್ಲಿಯೂ ಭಕ್ತಸಮೂಹ. ಮಂಟಪಗಳ ಚಾವಣಿಯ ಮೇಲೆಯೂ ಜನಗಳ ಗುಂಪುಗಳು. ನಾಲ್ಕಾರು ಭಜನೆಯ ಕೂಟಗಳು, ವೃಂದಾವನ ವೃಂದಾವನದ ಸನ್ನಿಧಿಯಲ್ಲಿಯೂ ಪೂಜೆಗಳು-ಹೀಗೆ ಕೋಲಾಹಲವಿರುತ್ತಿತ್ತು. ಅಂದು ರಾಯರ ರಥೋತ್ಸವ, ಮಾರನೆಯ ದಿನ ಊರ ಮೆರವಣಿಗೆ, ಎಂದರೆ ಪಾಲಕ್ಕಿಯಲ್ಲಿ ರಾಯರ ವೃಂದಾವನದ ಪ್ರತೀಕವನ್ನು ಮೇಳ ತಾಳಗಳೊಡನೆ ಉತ್ಸವ ಮಾಡಿಸುವುದು. ಈ ಉತ್ಸವ ಸಂಭ್ರಮಗಳು ಜನದ ಭಗವದ್ಭಕ್ತಿಗೂ ನೀತಿ ಸಂಸ್ಕೃತಿಗೂ ಪೋಷಕಗಳಾಗುತ್ತಿದ್ದವೆಂಬುದರ ಜೊತೆಗೆ ಅವು ಗ್ರಾಮಕ್ಕೆ ಆಗಾಗ್ಗೆ ಒಂದು ಕಳೆಯನ್ನು ಕೊಟ್ಟು ಜೀವನದಲ್ಲಿ ಒಂದು ಉತ್ಸಾಹವನ್ನು ಉಂಟುಮಾಡುತ್ತಿದ್ದವು.

ಶ್ರೀಪಾದಂಗಳವರು

ನನಗೆ ಬಾಲ್ಯದಿಂದ ಮನಸ್ಸಿನಲ್ಲಿ ನಿಂತು ನನ್ನ ಜೀವನಕ್ಕೆ ವಜ್ರಕವಚವಾಗಿ ಬಂದಿರುವ ಸ್ಮೃತಿಸಂಗತಿಯೆಂದರೆ ಶ್ರೀಪಾದರಾಜ ಮಠದ ಶ್ರೀಪಾದಂಗಳವರದು.

ಆ ಗುರುಗಳ ಪೂರ್ವಾಶ್ರಮದ ಹೆಸರು ಹರಿಯಪ್ಪಾಚಾರ್ಯರೆಂದು. ಇವರು ಮಹಾ ವಿದ್ವಾಂಸರು ಮತ್ತು ತಪಸ್ವಿಗಳು. ನಾನು ಅವರನ್ನು ಕಂಡಿದ್ದದ್ದು ಅವರ ವಾರ್ಧಕ್ಯದಲ್ಲಿ. ಸಾಮಾನ್ಯವಾಗಿ ಬೆಳಗ್ಗೆ ಆರೂಮುಕ್ಕಾಲು ಏಳು ಘಂಟೆಯ ಸುಮಾರಿಗೆ ನನ್ನ ಸ್ಕೂಲು ಬಳಿ ಬಂದಾಗ ಸ್ವಾಮಿಗಳವರು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ನೃಸಿಂಹ ತೀರ್ಥದ ಕಡೆಯಿಂದ ಆ ವೇಳೆಗೆ ಸರಿಯಾಗಿ ಅಲ್ಲಿಗೆ ಬರುತ್ತಿದ್ದರು. ಅವರ ಜೊತೆಯಲ್ಲಿ ಅವರ ಪೂರ್ವಾಶ್ರಮದ ಬೀಗರೂ ಅವರ ಅನಂತರ ಪೀಠಾಧಿಕಾರಿಗಳೂ ಆದ ಹೆಬ್ಬಣಿ ಶ್ರೀನಿವಾಸಾಚಾರ್ಯ ಸ್ವಾಮಿಗಳು ಇರುತ್ತಿದ್ದರು.

ಶ್ರೀ ಹರಿಯಪ್ಪಾಚಾರ್ಯ ಸ್ವಾಮಿಗಳನ್ನು ನಾನು ಕಂಡ ಕೂಡಲೆ ಎಲ್ಲಿ ನಿಂತಿದ್ದರೆ ಅಲ್ಲಿಂದಲೇ ನೆಲದ ಮೇಲೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದೆ. ಸ್ವಾಮಿಗಳವರು ನನ್ನನ್ನೇ ವಾತ್ಸಲ್ಯದೃಷ್ಟಿಯಿಂದ ನೋಡುತ್ತಿದ್ದು ನಾನು ಎದ್ದು ನಿಂತ ಕೂಡಲೆ ಬಳಿಗೆ ಕರೆದು ತಲೆಯ ಮೇಲೆ ಕೈಯಿಟ್ಟು ಏನಾದರೊಂದು ಮಾತನಾಡಿಸುವರು. ಬಳಿಕ "ಸ್ಕೂಲಿಗೆ ಹೋಗು" ಎನ್ನುತ್ತಿದ್ದರು. ಅವರ ಆಶೀರ್ವಾದ ನನ್ನನ್ನು ಈ ಹೊತ್ತೂ ಕಾದುಕೊಂಡಿದೆಯೆಂದು ತಿಳಿದಿದ್ದೇನೆ.

ಶ್ರೀ ಹರಿಯಪ್ಪಾಚಾರ್ಯ ಸ್ವಾಮಿಗಳು ಆಶ್ರಮಧರ್ಮನಿಷ್ಠರು. ಅತ್ಯಂತ ಉಪಶಾಂತರು. ವೇದಾಂತಶಾಸ್ತ್ರದಲ್ಲಿ ದ್ವೈತಭಾವನೆಯ ಅಂತರಂಗವನ್ನೂ ಉಪಾಸನಾಮರ್ಮವನ್ನೂ ತಿಳಿದುಕೊಳ್ಳಬೇಕೆನ್ನುವವರು ಶ್ರೀ ಹರಿಯಪ್ಪಾಚಾರ್ಯಸ್ವಾಮಿಗಳನ್ನು ಆಶ್ರಯಿಸುತ್ತಿದ್ದರು. ಅವರಲ್ಲಿ ಅನೇಕರು ಮಹಾ ಪಂಡಿತರೂ ಇದ್ದರು.

ಉದಾರ ಮನೋಭಾವನೆ

ಶ್ರೀ ಹರಿಯಪ್ಪಾಚಾರ್ಯ ಸ್ವಾಮಿಗಳು ಅನ್ಯಮತಗಳಲ್ಲಿ ಸಹನೆ ಸ್ನೇಹಗಳನ್ನಿರಿಸಿದ್ದ ಪರಮೋದಾರಿಗಳು. ಸ್ಮಾರ್ತಾದಿಗಳೊಡನೆ ಸಹಪಂಕ್ತಿಭೋಜನವನ್ನು ಅವರು ನಿಷೇಧ ಮಾಡಿರಲಿಲ್ಲ. ಅವರ ಆಚಾರದಿಂದಲೂ ಪ್ರಾಮಾಣಿಕತೆಯಿಂದಲೂ ನಿಃಸ್ವಾರ್ಥತೆಯಿಂದಲೂ ಅವರು ಎಲ್ಲರಿಗೂ ಪೂಜ್ಯರಾಗಿದ್ದರು.

ಶ್ರೀ ಹರಿಯಪ್ಪಾಚಾರ್ಯ ಸ್ವಾಮಿಗಳ ಅನಂತರ ಶ್ರೀಪಾದರಾಯ ಮಠದ ಪೀಠಾಧಿಕಾರಕ್ಕೆ ಬಂದವರು ಹೆಬ್ಬಣಿ ಶ್ರೀನಿವಾಸಾಚಾರ್ಯ ಸ್ವಾಮಿಗಳು. ಇವರ ಹೆಸರನ್ನು ಮೇಲೆ ಸ್ಮರಿಸಿದೆ. ನನಗೆ ಸಂಧ್ಯಾವಂದನೆ ಹೇಳಿಕೊಟ್ಟ ಗುರುಗಳು ಇವರು.

ಆಶ್ರಮ ಸ್ವೀಕಾರಕ್ಕೆ ಮುಂಚೆ ಶ್ರೀನಿವಾಸಾಚಾರ್ಯರವರು ಶ್ರೀಪಾದರಾಯ ಮಠದ ಮುಖ್ಯ ಕಾರ್ಯಕರ್ತರಾಗಿದ್ದರು. ಆ ಸಂಬಂಧದಲ್ಲಿ ನನ್ನ ಅಜ್ಜಂದಿರಾದ ಲಾಯರ್ ಶೇಷಗಿರಯ್ಯನವರ ಕಕ್ಷಿಗಾರರಾಗಿದ್ದರು. ನನ್ನ ಉಪನಯನದ ದಿನಗಳಲ್ಲಿ ಶ್ರೀನಿವಾಸಾಚಾರ್ಯರು ಮುಂಜಿಯ ಮಂಟಪದಲ್ಲಿದ್ದರು. ನನ್ನ ಅಜ್ಜಂದಿರು ಅವರನ್ನು ಕೇಳಿದರು:

ಶೇ: "ಶ್ರೀನಿವಾಸಾಚಾರ್ಯರೆ, ಸಂಧ್ಯಾವಂದನೆಯ ಮಂತ್ರಗಳಲ್ಲಿ ನಿಮಗೂ ನಮಗೂ ಏನಾದರೂ ವ್ಯತ್ಯಾಸವುಂಟೊ?"

ಶ್ರೀ: "ವೇದಮಂತ್ರ ಭಾಗದಲ್ಲಿ ಏನೂ ಹೆಚ್ಚುಕಡಿಮೆಯಿಲ್ಲ. ವೇದ ಎಲ್ಲರಿಗೂ ಒಂದೇ ತಾನೆ?"

ಶೇ: "ಹಾಗಾದರೆ ನೀವು ನಮ್ಮ ಹುಡುಗನಿಗೆ ಪ್ರತಿದಿನವೂ ಏಕೆ ಪ್ರಾತಸ್ಸಂಧ್ಯೆ ಹೇಳಿಕೊಡಬಾರದು? ನಮ್ಮ ಸ್ವಂತ ಪುರೋಹಿತರಿಗೆ ಬೆಳಗ್ಗೆಯ ಹೊತ್ತು ನಾಲ್ಕಾರು ಕಡೆ ಕೆಲಸವಿರುತ್ತದೆ. ಅವರು ಬಂದು ಹೇಳಿಕೊಡುವುದೆಂದರೆ ಪ್ರಾತಸ್ಸಂಧ್ಯೆಗೆ ಹನ್ನೊಂದು ಘಂಟೆಯಾದೀತು-ಮಧ್ಯಾಹ್ನದ ಹೊತ್ತೇ ಆದೀತು. ನೀವು ಬರಲು ಅನುಕೂಲ ಉಂಟೊ?"

ಶ್ರೀ: "ಸಂತೋಷವಾಗಿ. ಅವಶ್ಯ ಬರುತ್ತೇನೆ, ನಾಳೆಯಿಂದ."

ಆ ಕಾಲದಲ್ಲಿ ಸ್ಮಾರ್ತ, ವೈಷ್ಣವ ಎಂಬ ಭೇದದ ಅವಾಂತರ ಹೆಚ್ಚಾಗಿರಲಿಲ್ಲ. ಜನದಲ್ಲಿ ಔದಾರ್ಯವಿತ್ತು, ಸಹನೆಯಿತ್ತು, ಸ್ನೇಹವಿತ್ತು.

ವೆಂಕಟರಾಮಭಟ್ಟರೂ ವೆಂಕಟನಾರಣಭಟ್ಟರೂ ತಿಪ್ಪಾಭಟ್ಟರೂ ಮುಲಕನಾಡು ಪಂಗಡದವರು, ಯಜುರ್ವೇದಿಗಳು. ಸುಬ್ಬಾಭಟ್ಟರೂ ಕೃಷ್ಣಂಭಟ್ಟರೂ ಬಡಗನಾಡು, ಋಗ್ವೇದಿಗಳು. ಶಾಮಭಟ್ಟರು ಶೀರ್ಯನಾಡು, ಋಗ್ವೇದಿಗಳು. ಚಂದ್ರಶೇಖರಶಾಸ್ತ್ರಿಗಳು ಉಲುಚು ಕಮ್ಮೆ, ಯಜುರ್ವೇದಿಗಳು. ಈ ಭಿನ್ನತೆಗಳಾಗಲಿ, ಸ್ಮಾರ್ತ-ಮಾಧ್ವ ಭೇದಗಳಾಗಲಿ ನಮ್ಮ ವೈದಿಕರ ಪರಸ್ಪರ ಸ್ನೇಹ ಗೌರವಗಳಿಗೆ ಅಡ್ಡಿಯಾಗಲಿಲ್ಲ.

ಶ್ರೀನಿವಾಸಾಚಾರ್ಯ ಸ್ವಾಮಿಗಳ ಅನಂತರ ಶ್ರೀಪಾದರಾಜ ಮಠದಲ್ಲಿ ಪಟ್ಟಕ್ಕೆ ಬಂದವರು ಶ್ರೀ ದ್ವೈಪಾಯನಾಚಾರ್ಯ ಸ್ವಾಮಿಗಳು. ಇವರು ಪೂರ್ವಾಶ್ರಮದಲ್ಲಿ ಬಿ.ಎ., ಬಿ.ಎಲ್., ಪ್ಯಾಸ್ ಮಾಡಿ, ಸಬ್‌ರಿಜಿಸ್ಟ್ರಾರ್ ಹುದ್ದೆಯಲ್ಲಿದ್ದವರು. ಒಳ್ಳೆಯ ವಿದ್ವಾಂಸರು. ಸರಕಾರಿ ಚಾಕರಿಯಲ್ಲಿದ್ದಾಗಲೂ ಆಚಾರನಿಷ್ಠರಾಗಿ ಪಾಠ ಪ್ರವಚನ ನಡಸುತ್ತಿದ್ದವರು. ಪರಮ ಸಾತ್ತ್ವಿಕರು. ಇವರು ಶ್ರೀ ಹರಿಯಪ್ಪಾಚಾರ್ಯ ಸ್ವಾಮಿಗಳ ಪೂರ್ವಾಶ್ರಮದ ಪುತ್ರರು. ಪೂರ್ಣ ಆಯುಸ್ಸಿನವರೆಗೂ ದೃಢಕಾಯರಾಗಿ ಬಾಳಿ ತಮ್ಮ ಅನುಷ್ಠಾನಗಳನ್ನು ನಡಸಿದರು. ಅವರು ಉಪನ್ಯಾಸ ಮಾಡಿದ್ದನ್ನು ಕೇಳುವ ಮತ್ತು ಅವರ ಪೂಜಾವಿಧಾನವನ್ನು ನೋಡುವ ಭಾಗ್ಯ ನನಗೆ ದೊರೆತಿತ್ತು.

ಇವರ ತರುವಾಯ ಪಟ್ಟಕ್ಕೆ ಬಂದವರು ಶ್ರೀ ಕೃಷ್ಣಮೂರ್ತಿ ಆಚಾರ್ಯ ಸ್ವಾಮಿಗಳು. ಇವರು ಪೂರ್ವಾಶ್ರಮದಲ್ಲಿ ಕೆಲವರ್ಷ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದು ಲೋಕದ ಯೋಗಕ್ಷೇಮಗಳನ್ನು ಪಾಲಿಸಿದರು. ಅವರಿಗೆ ನಾನು ಪೂರ್ವಾಶ್ರಮದ ತಮ್ಮನಿಗಿಂತ ಕಿರಿಯನಾದದ್ದರಿಂದ ಆಶೀರ್ವಾದಪಾತ್ರನಾಗಿದ್ದೇನೆ.

ಶ್ರೀನಿವಾಸಾಚಾರ್ಯರ ಎರಡನೆಯ ಮಗ ವೆಂಕಟರಮಣಾಚಾರ್ಯರು ಬಿ.ಎ., ಬಿ.ಎಲ್. ಪ್ಯಾಸ್ ಮಾಡಿ ಕೋಲಾರದಲ್ಲಿ ಅಡ್ವೊಕೇಟರಾಗಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ದೈವಾಧೀನರಾದರು. ಅವರು ನನಗಿಂತ ಎರಡು ವರ್ಷ ಹಿರಿಯರು. ನಾವಿಬ್ಬರೂ ಸಹಪಾಠಿಗಳು, ಅವರು ಚಿಕ್ಕವಯಸ್ಸಿನಲ್ಲಿಯೇ ಬುದ್ಧಿಶಾಲಿಯೆನಿಸಿಕೊಂಡಿದ್ದರು. ಸಂಸ್ಕೃತ ಸಾಹಿತ್ಯ ತರ್ಕಗಳಲ್ಲಿಯೂ ಗಣಿತಶಾಸ್ತ್ರದಲ್ಲಿಯೂ ಅವರಿಗೆ ಹೆಚ್ಚು ಪರಿಶ್ರಮ. ನಾನು ಅವರ ಮನೆಯ ಹುಡುಗನಂತಿದ್ದೆ. ತಿಂಡಿ ತೀರ್ಥ ಆಟ ಪಾಠಗಳೆಲ್ಲದರಲ್ಲೂ ಅವರ ಮನೆಯಲ್ಲಿ ಯಾರೂ ಯಾವ ವ್ಯತ್ಯಾಸವನ್ನು ತೋರಿಸಿದವರಲ್ಲ.

ಮೇಲಣ ನಾಲ್ಕು ಮಂದಿ ಪೀಠಸ್ಥರ ಪೂರ್ವಾಶ್ರಮ ನಾಮಧೇಯಗಳನ್ನು ನಾನು ಇಲ್ಲಿ ಬಳಸಿದ್ದೇನೆ.

ಅವರ ಯತ್ಯಾಶ್ರಮ ನಾಮಧೇಯಗಳು ಹೀಗಿವೆ:

1. ಶ್ರೀ ಶ್ರೀ ಸುಧೀನಿಧಿತೀರ್ಥ ಶ್ರೀಪಾದಂಗಳವರು (ಶ್ರೀ ಹರಿಯಪ್ಪಾಚಾರ್ಯ ಸ್ವಾಮಿಗಳವರು)
2. ಶ್ರೀ ಶ್ರೀ ಮೇಧಾನಿಧಿತೀರ್ಥ ಶ್ರೀಪಾದಂಗಳವರು (ಶ್ರೀ ಶ್ರೀನಿವಾಸಾಚಾರ್ಯ ಸ್ವಾಮಿಗಳವರು)
3. ಶ್ರೀ ಶ್ರೀ ದಯಾನಿಧಿತೀರ್ಥ ಶ್ರೀಪಾದಂಗಳವರು (ಶ್ರೀ ದ್ವೈಪಾಯನಾಚಾರ್ಯ ಸ್ವಾಮಿಗಳವರು)
4. ಶ್ರೀ ಶ್ರೀ ಸತ್ಯನಿಧಿತೀರ್ಥ ಶ್ರೀಪಾದಂಗಳವರು (ಶ್ರೀ ಕೃಷ್ಣಮೂರ್ತ್ಯಾಚಾರ್ಯ ಸ್ವಾಮಿಗಳವರು)

ಮುಳಬಾಗಲಿನ ಮಾಧ್ವ ಪಂಡಿತರಲ್ಲಿ ವ್ಯಾಕರಣ ಸಾಹಿತ್ಯಾದಿ ಪಾಠ ಹೇಳುವವರು ಅಪರೂಪ. ಅಂಥವರು ನನಗೆ ಗುರುಗಳಾಗಿದ್ದ ಕಾಶಿ ರಾಘವೇಂದ್ರಾಚಾರ್ಯರೊಬ್ಬರೇ. ಇವರು ಮುಳಬಾಗಲಿಗೆ ಬಂದದ್ದು ಸುಮಾರು ೧೯೪೮-೪೯ರ ವೇಳೆಗೆ. ಅದಕ್ಕೆ ಹಿಂದೆ ಸಂಸ್ಕೃತ ವ್ಯಾಕರಣವನ್ನೂ ಕಾವ್ಯವನ್ನೂ ಪಾಠ ಹೇಳುತ್ತಿದ್ದವರು ಬಡಗನಾಡು ಪಂಗಡದ ವೆಂಕಟರಾಮಶಾಸ್ತ್ರಿಗಳು (ನತ್ತಿ ಶಾಸ್ತ್ರಿಗಳು). ಇವರನ್ನು ಕುರಿತು ಬೇರೆ ಕಡೆ ಬರೆದಿದ್ದೇನೆ. [2] ಮಾಧ್ವ ವಿದ್ಯಾರ್ಥಿಗಳು ವ್ಯಾಕರಣ ಕಾವ್ಯಪಾಠಗಳಿಗಾಗಿ ಬರುತ್ತಿದ್ದದ್ದು ಈ ಸ್ಮಾರ್ತ ವಿದ್ವಾಂಸರ ಬಳಿಗೆ. ವೆಂಕಟರಾಮಶಾಸ್ತ್ರಿಗಳು ಮಾಧ್ವ ಶಿಷ್ಯರಿಗೆ ಏಕಪ್ರಕಾರವಾದ ಶ್ರದ್ಧೆಯಿಂದ ಪಾಠ ಕಲಿಸುತ್ತಿದ್ದದ್ದು ಮಾತ್ರವಲ್ಲದೆ ಅವರನ್ನು ಆಗಾಗ ಆಕ್ಷೇಪಣೆ ಮಾಡುತ್ತಿದ್ದದ್ದೂ ಉಂಟು. ಆ ಆಕ್ಷೇಪಣೆ ಯಾರನ್ನೂ ನೋಯಿಸುತ್ತಿರಲಿಲ್ಲ. ಅದಕ್ಕೆ ಅರ್ಧಕಾರಣ ಶಾಸ್ತ್ರಿಗಳ ಉಗ್ಗು. ಮಾತು ಬರುವುದೇ ತಡವಾಗುತ್ತಿತ್ತು; ಅಷ್ಟರೊಳಗಾಗಿ ಕೋಪದ ಕಾವು ಆರಿಹೋಗುತ್ತಿತ್ತು.

***

ಮಾಧ್ವ ವಿದ್ವಾಂಸದಲ್ಲಿ ಮುಖ್ಯರಾದ ಹೆಬ್ಬಣಿ ಶೇಷಾಚಾರ್ಯರ ಸ್ಮರಣೆಯನ್ನು ಬೇರೆ ಕಡೆ ಮಾಡಿದೆ.

ಮಧ್ವಶಾಸ್ತ್ರದಲ್ಲಿ ಮಹಾ ಪಂಡಿತರೆನಿಸಿಕೊಂಡ ಇನ್ನೊಬ್ಬರು ಹೆಬ್ಬಣಿ ರಾಮಣ್ಣಾಚಾರ್ಯರು. ಇವರ ವಿಷಯದಲ್ಲಿಯೂ ಎಲ್ಲರಿಗೂ ತುಂಬ ಗೌರವವಿತ್ತು. ಇವರು ಶಾಸ್ತ್ರ ವಿದ್ವಾಂಸರಾಗಿದ್ದದ್ದು ಮಾತ್ರವಲ್ಲದೆ ಸರಳರೂ ವಿನಯಶೀಲರೂ ಆಗಿದ್ದರು. ಇವರು ಕಡೆಯ ಕಾಲದಲ್ಲಿ ಯತಿಗಳಾಗಿ ಪಾಠ ಪ್ರವಚನ ನಿರತರಾಗಿ ಇದ್ದುಕೊಂಡು ಪರಂಧಾಮವನ್ನೈದಿದರು.

೭ ಮಾಧ್ವ ವಿದ್ವನ್ಮಂಡಲಿ

ಮುಳಬಾಗಲಿನ ಮಾಧ್ವಬ್ರಾಹ್ಮಣರು ವಿಶೇಷವಾಗಿ ತಮಗೆ ಪೂರ್ವದಿಂದ ಬಂದಿದ್ದ ಜಮೀನನ್ನು ನಂಬಿಕೊಂಡು ಬದುಕುತ್ತಿದ್ದರೆಂದು ಹಿಂದೆ ಹೇಳಿದೆಯಷ್ಟೆ? ಅವರಿಗೆ ತಮ್ಮ ದವಸ ಧಾನ್ಯಗಳನ್ನು ಮಾರಿದರೆ ಬರುತ್ತಿದ್ದಷ್ಟು ಹಣವೇ ಅವರಿಗಿದ್ದ ನಗದು ವರಮಾನ. ಇದರ ಜೊತೆಗೆ ಇನ್ನೊಂದು ಹೊಸ ವರಮಾನ ಏರ್ಪಟ್ಟಿತ್ತು. ಅದು ಶ್ರೀಮನ್ಮಧ್ವಸಿದ್ಧಾಂತೋನ್ನಾಹಿನೀಸಭೆಯು ಕೊಡಲಾರಂಭಿಸಿದ ವಿದ್ವತ್ಸಂಭಾವನೆ. ಶ್ರೀ ॥ ಮ ॥ ಸಿ ॥ ಸಭೆಯು ವರ್ಷಕ್ಕೊಮ್ಮೆ ತಿರುಪತಿಯ ಬಳಿಯ ತಿರುಚಾನೂರಿನಲ್ಲಿ ಸೇರುತ್ತಿತ್ತು. ಆ ಸಭೆಯ ಸ್ಥಾಪಕರು ಕಂಚಿ ಸುಬ್ಬರಾಯರೆಂಬ ಪ್ರಸಿದ್ಧ ಪುರುಷರು. ಅವರು ಕೆಲವು ಕಾಲ ತಿರುವಾಂಕೂರು ಸಂಸ್ಥಾನದ ದಿವಾನರಾಗಿದ್ದವರು. ಕೌಕೂರು ರಾಮಚಂದ್ರರಾಯರು ಅವರಿಗೆ ಸಹಾಯಕರಾಗಿದ್ದರು. ಅವರು ವಕೀಲರು. ಸಭೆಗೆ ಎಲ್ಲ ಪ್ರಸಿದ್ಧ ಮಾಧ್ವಕೇಂದ್ರಗಳಿಂದಲೂ ಜನ ಬರುತ್ತಿದ್ದರು. ಅವರಿಗೆ ಸ್ನಾನ ಭೋಜನಾದಿ ಸೌಕರ್ಯಗಳ ವ್ಯವಸ್ಥೆ ತೃಪ್ತಿಕರವಾಗಿರುತ್ತಿತ್ತು.

ಸಭೆಗೆ ಬಂದ ವಿದ್ವಾಂಸರುಗಳಲ್ಲಿ ಮುಖ್ಯರಾದವರನ್ನು ಒಂದು ಪರೀಕ್ಷಕ ಸಮಿತಿಯನ್ನಾಗಿ ಗೊತ್ತುಮಾಡುತ್ತಿದ್ದರು. ಈ ಸಮಿತಿಯು ಮಣಿಮಂಜರಿ, ಸಮಧ್ವವಿಜಯ, ವಾಯುಸ್ತುತಿ, ಸುಧಾ, ಚಂದ್ರಿಕಾ, ಮೊದಲಾದ ಮಧ್ವಮತ ಗ್ರಂಥಗಳನ್ನು ಕುರಿತು ಪರೀಕ್ಷೆ ನಡಸುತ್ತಿತ್ತು. ಆ ಪರೀಕ್ಷೆಗೆ ಕೂಡುತ್ತಿದ್ದವರು ಮಹಾಮಹಾ ಆಚಾರ್ಯರುಗಳ ಶಿಷ್ಯರು. ಪರೀಕ್ಷೆಗಳೆಲ್ಲ ಮುಗಿದ ಮೇಲೆ ಶಿಷ್ಯರಿಗೂ ಗುರುಗಳಿಗೂ ಸಹ ಸಂಭಾವನೆ ಕೊಡುತ್ತಿದ್ದರು. ಆ ಸಂಭಾವನೆ ಬಹುಮಟ್ಟಿಗೆ ನಗದು ಹಣದ ರೂಪದಲ್ಲಿರುತ್ತಿತ್ತು. ಬೆಳ್ಳಿಯ ಬಟ್ಟಲು, ಬೆಳ್ಳಿಯ ತಟ್ಟೆ, ಬೆಳ್ಳಿಯ ಘಂಟೆ, ಮೊದಲಾದ ದೇವಪೂಜಾಪರಿಕರಗಳನ್ನೂ ಕೊಡುತ್ತಿದ್ದದ್ದುಂಟು. ಈ ವಿತರಣೆಯಲ್ಲಿ ಶಿಷ್ಯರಿಗೆ ದೊರೆಯುತ್ತಿದ್ದ ಸಂಭಾವನೆಯಲ್ಲಿ ದೊಡ್ಡ ಭಾಗ ಅವರ ಆಚಾರ್ಯರುಗಳಿಗೆ ಹೋಗುತ್ತಿತ್ತು. ಕೆಲಮಂದಿ ಪರೀಕ್ಷಕರು ಒಬ್ಬ ಆಚಾರ್ಯರ ಶಿಷ್ಯರಿಗೆ ಪಕ್ಷಪಾತಮಾಡಿ ಇನ್ನೊಬ್ಬ ಆಚಾರ್ಯರ ಶಿಷ್ಯರಿಗೆ ಅನ್ಯಾಯ ಮಾಡಿದರೆಂದೂ ಗೊಣಗಾಟ ನಡೆಯುತ್ತಿದ್ದದ್ದುಂಟು. ಇಂಥ ಅಸೂಯೆಗಳು ಒಂದು ಮಹಾ ಸಮಾರಂಭದಲ್ಲಿ ಅನಿವಾರ್ಯವಾಗುತ್ತವೆ. ನಾವು ಅವನ್ನು ಲೆಕ್ಕಿಸ ಬೇಕಾಗಿಲ್ಲ. ಒಟ್ಟಿನಮೇಲೆ ಶ್ರೀ ॥ ಮ ॥ ಸಿ ॥ ಸಭೆಯು ಮಾಧ್ವವರ್ಗದ ವಿದ್ವನ್ಮಂಡಲಿಗೆ ಪ್ರೋತ್ಸಾಹಪ್ರದವಾಗಿ ಪ್ರಯೋಜನಕರವಾಗಿತ್ತೆಂದು ಧಾರಾಳವಾಗಿ ಹೇಳಬಹುದು.

ಕೆಲವು ವರ್ಷಗಳಾದ ಮೇಲೆ ಮಾಧ್ವ ಮಠಗಳ ಕಲಹಗಳ ಕಾರಣದಿಂದಲೂ ವೈಯಕ್ತಿಕ ಕಲಹಗಳ ಕಾರಣದಿಂದಲೂ ಆ ಸಭೆ ಒಡೆದು ಹೋಗಿ ಬೇರೆ ಸಂಸ್ಥೆಗಳು ಹುಟ್ಟಿಕೊಂಡವು.

ಒಂದು ನಗುವಿನ ಪ್ರಕರಣ ಜ್ಞಾಪಕಕ್ಕೆ ಬರುತ್ತದೆ.

ಅಪ್ಪಣಾಚಾರ್ಯರು

ಮುಳಬಾಗಲಿನಿಂದ ತಿರುಪತಿ ಸಭೆಗೆ ಹೋಗುತ್ತಿದ್ದ ಮಹಾವಿದ್ವಾಂಸರುಗಳಲ್ಲಿ ಶ್ರೀ ವ್ಯಾಸರಾಯ ಮಠದ ಅಪ್ಪಣಾಚಾರ್ಯರೂ ಒಬ್ಬರು. ಜನ ಬಾಯಿ ತಿರುಗದೆ ಅವರನ್ನು ಅಪ್ಪಳಾಚಾರ್ಯರು, ಹಪ್ಪಳಾಚಾರ್ಯರು ಎಂದೂ ಕರೆಯುತ್ತಿದ್ದುದ್ದುಂಟು. ಅಪ್ಪಣಾಚಾರ್ಯರು ಪಾಂಡಿತ್ಯದಿಂದಲೂ ಚಾರಿತ್ರದಿಂದಲೂ ಗೌರವ ಪಡೆದಿದ್ದರು. ಆ ಊರಿನಲ್ಲಿ ಮಾತ್ರವಲ್ಲದೆ ದೇಶದ ಅನೇಕ ಕಡೆಗಳಲ್ಲಿ ಅವರು ಸನ್ಮಾನಿತರಾಗಿದ್ದರು. ಅವರಿಗೆ ಶಿಷ್ಯಸಂಪತ್ತೂ ಹೆಚ್ಚಾಗಿತ್ತು.

ಒಂದಾನೊಂದು ವರ್ಷ ಸಭೆಗೆ ಅಪ್ಪಣಾಚಾರ್ಯರು ದಯಮಾಡಿಸಿದ್ದಾಗ ಕಾರ್ಯಕರ್ತರು ಅವರನ್ನು ಬಹುವಾಗಿ ಗೌರವಿಸಿದರು. ಒಂದು ಬೆಳ್ಳಿಯ ದೀಪಸ್ತಂಭ, ಒಂದು ಬೆಳ್ಳಿಯ ತಂಬಿಗೆ, ಶಾಲು, ಇವನ್ನೆಲ್ಲ ಬಹುಮಾನವಾಗಿ ಕೊಟ್ಟಿದ್ದರು. ಅಪ್ಪಣಾಚಾರ್ಯರು ಈ ಬೆಲೆಯುಳ್ಳ ಸಾಮಾನುಗಳನ್ನೂ ಅದರ ಜೊತೆಗೆ ತಮ್ಮ ಕೈಗೂ ಶಿಷ್ಯರಿಗೂ ಬಂದಿದ್ದ ದ್ರವ್ಯವನ್ನೂ ತಮ್ಮ ಸ್ವಂತ ದೇವರಪೂಜೆಯ ಪೆಟ್ಟಿಗೆಯನ್ನೂ ಒಟ್ಟಿಗೆ ಮೂಟೆ ಕಟ್ಟಿ ಒಂದು ಗೋಣಿಚೀಲದಲ್ಲಿ ಭದ್ರಪಡಿಸಿಟ್ಟರು. ಆ ರಾತ್ರಿ ಅವರ ಪ್ರಯಾಣ. ತಮ್ಮೂರಿಗೆ. ಆ ಕಾಲದಲ್ಲಿ-ಈಗ್ಗೆ ಸುಮಾರು ೭೦ ವರ್ಷಗಳ ಹಿಂದೆ-ತಿರುಪತಿಯಿಂದ ಬೌರಿಂಗ್ ಪೇಟೆಗೆ ಬರುವ ರೈಲುದಾರಿಯಲ್ಲಿ ರೇಣಿಗುಂಟ ಎಂಬ ಜಂಕ್ಷನ್ ಇತ್ತು. ಅಲ್ಲಿ ಬಂಡಿ ಬದಲಾಯಿಸಬೇಕಾಗಿತ್ತು. ಆಗ ನಡುರಾತ್ರಿ ೧೨ ಘಂಟೆ. ಅಪ್ಪಣಾಚಾರ್ಯರೂ ಅವರ ಶಿಷ್ಯರೂ ಮೂರನೆ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರು ರೇಣಿಗುಂಟೆಯಲ್ಲಿ ಗಾಡಿ ಬದಲಾಯಿಸಿ ಬೌರಿಂಗ್ ಪೇಟೆಗೆ ಬಂದು ಅಲ್ಲಿಂದ ಮಾರನೆಯ ದಿನ ಕಾಲುನಡಿಗೆಯಿಂದ ಮುಳಬಾಗಲಿಗೆ ಬಂದರು. ಅವರು ಹಿಂದಿರುಗಿ ಬರುವ ದಿವಸ ಸಂಬಂಧಪಟ್ಟ ಜನಕ್ಕೆ ಗೊತ್ತಿದ್ದದ್ದರಿಂದ ಆಚಾರ್ಯರ ಇಷ್ಟಮಿತ್ರರೂ ಶಿಷ್ಯಾಭಿಮಾನಿಗಳೂ ಕುತೂಹಲದಿಂದ ಆಚಾರ್ಯರ ಮನೆಯ ಹತ್ತಿರ ನೆರೆದಿದ್ದರು. “ನಮ್ಮ ಆಚಾರ್ಯರಿಗೆ ಏನೇನು ಬಹುಮಾನ ಬಂತು? ಶಿಷ್ಯರಿಗೆ ಎಷ್ಟೆಷ್ಟು ಸಂಭಾವನೆ?” -ಇದನ್ನು

ತಿಳಿದುಕೊಳ್ಳಲು ಎಲ್ಲರಿಗೂ ಆತುರ. ಆಗ ಆಚಾರ್ಯರು ಅವರ ಮನೆಯ ಜಗುಲಿಯ ಮೇಲೆ ಕುಳಿತು ತಮ್ಮ ಮುಖ್ಯ ಶಿಷ್ಯನನ್ನು ಕರೆದು ಹೇಳಿದರು:

"ಎಲಾ-ಆ ಚೀಲ ಬಿಚ್ಚಿ ಎಲ್ಲರಿಗೂ ತೋರಿಸು."

ಶಿಷ್ಯನು ಅಪ್ಪಣೆಯಾದಂತೆ ಗೋಣಿಚೀಲದ ಗಂಟನ್ನು ಬಿಚ್ಚಿದ. ಹೊರಕ್ಕೆ ಹೊರಟಿತು ಒಬ್ಬ ದಾಸಯ್ಯನ ಗರುಡಗಂಬ, ಒಂದು ಮುಸುರೆಯ ಮಡಕೆ, ಒಂದು ಜಾಗಟೆ ಮತ್ತು ಜಾಗಟೆಯ ಕೋಲು, ಕೊಳೆತ ತೆಂಗಿನ ಕಾಯಿ ಚೂರುಗಳು, ಇತ್ಯಾದಿ. ಬೆಳ್ಳಿಯ ಸಾಮಾನಾಗಲಿ ಹಣವಾಗಲಿ ಕಾಣಿಸಲಿಲ್ಲ. ಎಲ್ಲರಿಗೂ ಆಶ್ಚರ್ಯವಾದದ್ದು ಸ್ವಾಭಾವಿಕ ತಾನೆ? ಮುಖ ಜೋಲು ಬಿತ್ತು. ಆಚಾರ್ಯರು ಹತ್ತು ನಿಮಿಷ ಮೌನವಾಗಿ ಚಿಂತಿಸಿ ಹೀಗೆಂದರು:

ಆಚಾರ್ಯರು "ಎಲಾ-ನಾವು ಕುಳಿತಿದ್ದ ರೈಲು ಡಬ್ಬ್ಯಾಗೆ ಒಬ್ಬ ನಾಮ ಹಾಕಿದ ದಾಸಯ್ಯ ಕುಳಿತಿದ್ದ ಹೌದಲ್ಲೊ?"

ಶಿಷ್ಯರು: "ಹೌಂದು ಹೌಂದು."

ಆ: "ನೀವು ನಮ್ಮ ಚೀಲ ತರುವುದನ್ನು ಬಿಟ್ಟು ಅವನ ಚೀಲ ತಂದು ಬಿಟ್ಟಿದ್ದೀರೆಂದು ತೋರುತ್ತದೆ."

ಶಿ: "ಹಾಂಗಿದ್ದರೂ ಇದ್ದೀತು. ಅರ್ಧರಾತ್ರಾಗೆ ನಿದ್ದೆ ಕಣ್ಣಿನಲ್ಲಿ ಒಂದಕ್ಕೆ ಇನ್ನೊಂದು ಭ್ರಮಿಸಿ ಹೀಗೆ ತಪ್ಪು ನಡೆದಿರಬಹುದು."

ಆ: "ಆ ದಾಸಯ್ಯ ಯಾವನೋ ಎಲ್ಲಿ ಹೋದನೋ. ಈಗ ಪತ್ತೆ ಮಾಡುವುದು ಹ್ಯಾಂಗೆ? ಇದು ನಮ್ಮ ಪ್ರಾರಬ್ಧ. ನಾವು ಅನುಭವಿಸಬೇಕಾದದ್ದು."

ಹೀಗೆ ಸಮಾಧಾನ ಮಾಡಿಕೊಂಡರು.

ಸಭಾಕಲಾಪಗಳು

ಶ್ರೀಮನ್ಮಧ್ವಸಿದ್ಧಾಂತೋನ್ನಾಹಿನೀ ಸಭೆಯ ಸಂಚಾಲಕರು ಪ್ರತಿ ವರ್ಷವೂ ಆ ವರ್ಷದ ಸಭೆಯ ಆದಾಯ ವ್ಯಯಗಳನ್ನೂ ಕಾರ್ಯಕಲಾಪಗಳನ್ನೂ ಕುರಿತ ವರದಿಯ ಪುಸ್ತಕ ಪ್ರಕಟಿಸುತ್ತಿದ್ದರು. ಅದು ಭಾರೀ ಪುಸ್ತಕ. ಅದರಲ್ಲಿ ಸಭೆಯಲ್ಲಾದ ವಾಕ್ಯಾರ್ಥ ಚರ್ಚೆಗಳ ಸಾರಾಂಶವನ್ನೂ ಕೊಡುತ್ತಿದ್ದರು. ಇದು ಶಾಸ್ತ್ರಕುತೂಹಲಿಗಳಿಗೆ ಪ್ರಯೋಜನಕರವಾಗಿತ್ತು. ಒಂದು ಸಾರಿ

> ದ್ವಾಸುಪರ್ಣಾ ಸಯುಜಾ ಸಖಾಯಾ

ಎಂಬ ಶ್ರುತಿಯ ಮೇಲೆ ನಡೆದ ವಾದ ವಿವಾದಗಳ ವರದಿಯನ್ನು ಓದಿದ್ದು ನನಗೆ ಜ್ಞಾಪಕವಿದೆ. ಮಠಗಳ ವಿವಾದಗಳ ವರದಿಯೂ ಇರುತ್ತಿತ್ತು. ಸಭಾಸ್ಥಾನದಲ್ಲಿದ್ದ ಶ್ರೀಮದ್ವೇದವ್ಯಾಸ ಮೂರ್ತಿಯ ಪೂಜೆ ನಡಸುವ ಅಧಿಕಾರ ಯಾವ ಮಠದ್ದು? ಅಗ್ರತೀರ್ಥ ಯಾವ ಮಠದ್ದು? ನೈವೇದ್ಯ ಸಮರ್ಪಣೆ ಯಾರಿಂದ ಆಗಬೇಕಾದದ್ದು? ಇಂಥ ಅವಾಂತರವಿಷಯಗಳ ಮೇಲಣ ವಾಗ್ವಾದಗಳ ಪ್ರಸ್ತಾವ ಆ ವರದಿಯ ಪುಸ್ತಕದಲ್ಲಿರುತ್ತಿತ್ತು. ಶ್ರೀಮದುತ್ತರಾದಿ ಮಠಕ್ಕೂ ಶ್ರೀಮದ್ವ್ಯಾಸರಾಯ ಮಠಕ್ಕೂ ತಕರಾರು ಬಂದಿತ್ತೆಂದು ನನ್ನ ಜ್ಞಾಪಕ. ಆ ತಕರಾರೇ ಸಭೆಗೆ ಕೊಡಲಿಯಾಯಿತು: ಸೇಡು ಉಳಿಯಿತು, ಸಂಸ್ಥೆ ಅಳಿಯಿತು.

***

ಮಠಗಳ ವೈಷಮ್ಯ

ಮುಳಬಾಗಲಿನಲ್ಲಿದ್ದ ಮಾಧ್ವ ಮಠಗಳು ಎರಡೆಂದು ಹೇಳಿದ್ದೇನೆ. ಆ ಎರಡು ಮಠಗಳಿಗೂ ಒಂದು ವೈಷಮ್ಯಕಾರಣ ಹುಟ್ಟಿಕೊಂಡಿತು.

ಮಜ್ಜಿಗೆಹಳ್ಳಿ ಸ್ವಾಮಿಗಳು ಊರಿನಲ್ಲಿ ನೆಲಸಿದ್ದವರಲ್ಲವೆಂದೂ ಆಗಾಗ ಬಂದು ಹೋಗುತ್ತಿದ್ದವರೆಂದೂ ಹೇಳಿದೆನಲ್ಲವೆ? ಆ ಸ್ವಾಮಿಗಳು ರಸಿಕೋದಾರಿಗಳು. ಮಠದಲ್ಲಿ ಆನೆ ಕುದುರೆಗಳನ್ನಿಟ್ಟಿದ್ದದ್ದಲ್ಲದೆ ಆ ಪ್ರಾಣಿಗಳಲ್ಲಿ ವಾತ್ಸಲ್ಯ ತೋರುತ್ತಿದ್ದರು.

ಮಜ್ಜಿಗೆಹಳ್ಳಿ ಸ್ವಾಮಿಗಳು ಆನೆಗಳ ಪಕ್ಕದಲ್ಲಿ ನಿಂತು "ರಾಮ್‌ಬೋಲ್" "ಸೀತಾ ಬೋಲ್" ಎಂದು ಆಜ್ಞೆ ಮಾಡಿದಾಗ ಆನೆಯು ಬೃಂಹಿತ ಮಾಡಿದ್ದನ್ನು ನಾನು ನೋಡಿ ಕೇಳಿದ್ದೇನೆ. ಸ್ವಾಮಿಗಳು ಸರಸಿಗಳು: ಆದರೆ ತಮ್ಮ ಮಠದ ಮೇಲ್ಮೆಯ ವಿಷಯದಲ್ಲಿ ಅಭಿಮಾನವುಳ್ಳವರು.

ಒಂದು ಸಾರಿ ನಾನು ಪ್ಯಾಸ್ ಮಾಡಿರುವ ಏಕೈಕ ಪರೀಕ್ಷೆಯಾದ ಲೋಯರ್ ಸೆಕಂಡರಿ ಪರೀಕ್ಷೆಗೋಸ್ಕರ ಕೇಂದ್ರವಾಗಿ ನಿಯಮಿತವಾಗಿದ್ದ ಕೋಲಾರಕ್ಕೆ ಪ್ರಯಾಣ ಮಾಡುತ್ತಿದ್ದೆ. ನಾವು ಎಂಟು ಹತ್ತು ಮಂದಿ ವಿದ್ಯಾರ್ಥಿಗಳು. ನಾವೂ ನನ್ನ ಮೇಷ್ಟರೂ ಎರಡು ಎತ್ತಿನ ಗಾಡಿಗಳಲ್ಲಿ ಪಯಣಿಸುತ್ತಿದ್ದೆವು. ತಂಬುಹಳ್ಳಿ ಎಂಬುದು ಮುಳಬಾಗಲಿನಿಂದ ೯ ಮೈಲಿ ದೂರ; ಕೋಲಾರ ಅಲ್ಲಿಂದ ೯ ಮೈಲಿ. ಅಲ್ಲಿ ಪಾಲಾರ್ ನದಿ ಹರಿಯುತ್ತದೆ. ಈ ತಂಬುಹಳ್ಳಿಯಿಂದ ದಕ್ಷಿಣಕ್ಕೆ ಇನ್ನೊಂದು ಮೈಲಿಯಾಚೆ ಮಜ್ಜಿಗೆಹಳ್ಳಿ.

ನಮ್ಮ ಪ್ರಯಾಣದ ದಿವಸ ಬೆಳಗ್ಗೆಯೇ ಮೋಡವಾಗಿತ್ತು. ತಂಬುಹಳ್ಳಿಗೆ ಬರುವ ವೇಳೆಗೆ ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು. ಅಂಥ ಮಳೆಯನ್ನು ನಾನು ಕಂಡಿರುವುದು ನಾಲ್ಕೈದು ಸಾರಿ ಮಾತ್ರ. ಮಧ್ಯಾಹ್ನ ಹನ್ನೊಂದು ಘಂಟೆ ಸಮಯ ಇರಬಹುದು. ಆ ಹೊತ್ತು ನಮಗೆ ಸ್ನಾನ ಭೋಜನಗಳೆಲ್ಲಿ? ಮಠದಲ್ಲಿ ಅನುಕೂಲಿಸೀತೇನೋ ನೋಡೋಣವೆಂದು ನಮ್ಮ ಮೇಷ್ಟರು ಈ ಹಳ್ಳಿಗೆ ಹೋಗಿ ವಿಚಾರಿಸಿದರು. ಅವರಿಂದ ದೊರೆತ ಉತ್ತರ ಅನುಕೂಲವಾಗಿತ್ತು. ನಾವೆಲ್ಲ ಅಲ್ಲಿಗೆ ಹೋಗಿ ಗಾಡಿಯಿಂದ ಇಳಿದೆವು. ಮಠದಲ್ಲಿ ಮೂರು ನಾಲ್ಕು ಕಡೆ ಅಗ್ಗಿಷ್ಟಿಕೆಯಿಂದಲೂ ಬೆಂಕಿ ಕೆಂಡದಿಂದಲೂ ಮೈ ಕಾಯಿಸಿಕೊಳ್ಳುತ್ತ ವೈದಿಕ ಬ್ರಾಹ್ಮಣರು ಊಟಕ್ಕೆ ಅಣಿಮಾಡುತ್ತಿದ್ದರು. ನಮ್ಮ ಅದೃಷ್ಟಕ್ಕೆ ಸರಿಯಾಗಿ ಆ ಹೊತ್ತು ದ್ವಾದಶಿ.

ಮಾಧವ ಮಾಧವ ಸಾಧಕ ವಂದೇ
ಬಾಧಕ ಬೋಧಕ ಶುದ್ಧ ಸಮಾಧೇ ।
ನಂದನ ನಂದನ ಗೋವಿಂದ ವಂದೇ
ಆನಂದತೀರ್ಥ ಪರಾನಂದ ವರದ ॥

ಈ ದ್ವಾದಶಸ್ತೋತ್ರವನ್ನು ಹೇಳುತ್ತಿದ್ದರು. ಈ ವಾಕ್ಯಗಳು ನನಗೆ ಪೂರ್ವ ಪರಿಚಿತಗಳಾಗಿದ್ದವು, ಮಾಧ್ವರ ಸಹವಾಸ ಪ್ರಭಾವದಿಂದ. ಕಡೆಯ ಪಾದವನ್ನು ಹಾಸ್ಯಕ್ಕಾಗಿ

ಆನಂದತೀರ್ಥ ಪರಾತಾನ್ನ ಹೊಡೆದ ॥

ಎಂದೂ ಹುಡುಗರು ಒದರುತ್ತಿದ್ದದ್ದುಂಟು.

"ಪರಾತಾನ್ನ" ಅಂದರೆ ಒಂದು ಪರಾಯತದಷ್ಟು-ದೊಡ್ಡ ತಟ್ಟೆ ಅನ್ನ.

ನಾವು ಬಿಸಿನೀರು ಸ್ನಾನ ಮಾಡಿ ಅಲ್ಲಿ ಸುಖಭೋಜನ ಮಾಡಿದೆವು.

ಮಜ್ಜಿಗೆಹಳ್ಳಿ ಮಠದ ಶ್ರೀಶ್ರೀಗಳವರು ಮುಳಬಾಗಲಿಗೆ ಬಿಜಮಾಡಿಸಬೇಕೆಂದು ಆಶೆಯಿಟ್ಟುಕೊಂಡಿದ್ದರು. ಆದರೆ ಒಂದು ವಿಘ್ನ.

ಮುಳಬಾಗಲಿನ ರಾಜಬೀದಿಯೆಂದರೆ ಪೇಟೆಸಾಲಿನ ಬೀದಿ. ಅದು ಶ್ರೀಪಾದರಾಜರ ಮಠದ ಮುಂದೆಯೇ ಹರಿದು ಸಾಗುತ್ತದೆ. ಈ ಮಠದ ಉತ್ತರಪಾರ್ಶ್ವದಲ್ಲಿ ಊರಿಗೆ ಮುಖ್ಯಾಧಾರವಾದ ದೊಡ್ಡ ಪುಷ್ಕರಿಣಿ ಇದೆ. ಅದರಿಂದ ಉತ್ತರಕ್ಕೆ ಇರುವ ರಸ್ತೆಯಲ್ಲಿ ಪಶ್ಚಿಮಕ್ಕೆ ಹೋದರೆ ಮಜ್ಜಿಗೆಹಳ್ಳಿಯ ಮಠ ಸಿಕ್ಕುತ್ತದೆ. ಆ ಸ್ವಾಮಿಗಳ ಮನೋಗತವೇನೆಂದರೆ ತಮ್ಮ ಮೇನಾ ಮೆರವಣಿಗೆ ಶ್ರೀಪಾದರಾಜರ ಮಠದ ಮುಂದೆ ಪೂರ್ವ ದಿಕ್ಕಿಗೆ ನಡೆದು ಸಾಗಿ ಪೇಟೆಸಾಲನ್ನು ಹಾಯ್ದು ರಸ್ತೆಯ ಕೊನೆಯಲ್ಲಿ ಉತ್ತರಪಾರ್ಶ್ವಕ್ಕೆ ತಿರುಗಿ ಅಲ್ಲಿಂದ ಪಶ್ಚಿಮಕ್ಕೆ ತಿರುಗಿ, ಮೇಲೆ ಹೇಳಿದ ಕುಂಟೆಯ ಉತ್ತರಭಾಗದಲ್ಲಿ ಮುಂದಕ್ಕೆ ನಡೆದು ತಮ್ಮ ಮಠ ಸೇರಬೇಕು. ಈ ಪ್ಲಾನಿಗೆ ಶ್ರೀಪಾದರಾಜ ಮಠದವರು ಅಡ್ಡಿ. ತಮ್ಮ ಮಠದ ಮುಂದೆ ಬಾಜಾಬಜಂತ್ರಿಯ ಸಮೇತವಾಗಿ ಇನ್ನೊಂದು ಮಠದ ಮೆರವಣಿಗೆ ನಡೆದರೆ ಅದು ತಮ್ಮ ಮಠಕ್ಕೆ ಅವಮರ್ಯಾದೆಯೆಂದು ತಕರಾರೆಬ್ಬಿಸಿದರು. ತಕರಾರು ಕೋರ್ಟುಕಚೇರಿಗಳಿಗೂ ಹತ್ತಿತು. ಹೇಗೆ ತೀರ್ಮಾನವಾಯಿತೋ ನೆನಪಿಲ್ಲ. ಈ ಪ್ರಕರಣ ಹಿಂದೂಜನ ಜ್ಞಾಪಕದಲ್ಲಿರಿಸಿಕೊಳ್ಳಬೇಕಾದದ್ದು.

***

ಸಗಣೀ ಕೂಟ

ಶ್ರೀಮನ್ಮಾಧ್ವಮಂಡಲಿಯಲ್ಲಿ ವ್ಯಾಸಕೂಟ, ದಾಸಕೂಟ ಎಂಬೆರಡು ಸಂಪ್ರದಾಯಗಳು ಪ್ರಸಿದ್ಧವಾದವು. ವ್ಯಾಸಕೂಟದವರು ಶ್ರೀವೈಷ್ಣವರಲ್ಲಿ ವಡಗಲೆಯವರಂತೆ ವೇದಶಾಸ್ತ್ರಗಳನ್ನು ಪ್ರಮಾಣವಾಗಿರಿಸಿಕೊಂಡವರು. ದಾಸಕೂಟದವರು ಶ್ರೀವೈಷ್ಣವರ ತೆಂಗಲೆಯವರಂತೆ ಪುರಂದರಾದಿ ಹರಿದಾಸರ ಅನುಭವ ವಚನಗಳನ್ನು ಪ್ರಮಾಣವಾಗಿ ಇರಿಸಿಕೊಂಡವರು.

ಈ ಎರಡು ಶಾಖೆಗಳ ಜೊತೆಗೆ ಮುಳಬಾಗಲಿನಲ್ಲಿ ಸಗಣೀ ಕೂಟವೆಂಬ ಇನ್ನೊಂದು ಸಂಪ್ರದಾಯ ಕೆಲವು ವರ್ಷಕಾಲ ಪ್ರಚಲಿತವಾಗಿತ್ತು. ಇದರ ವಿಶೇಷ ಲಕ್ಷಣ ಆಚಾರ ನೇಮಗಳ ಕಟ್ಟುನಿಟ್ಟು. ಇವರಿಗೆ ಏಕಾದಶಿ ಉಪವಾಸದ ವಿಷಯದಲ್ಲಿ ತುಂಬ ಶ್ರದ್ಧೆ. ಆ ಹೊತ್ತು ಎಮ್ಮೆಗಳನ್ನು ಕುಂಟೆಯಲ್ಲಿಳಿಸಿ ತೊಳೆಯಲಿಕ್ಕೆ ಸರಿಯಾದ ದಿವಸ. ಅಂದು ಸಂಜೆ ನಾಲ್ಕಕ್ಕೆ ಮುಂಚೆ ಸ್ನಾನವಿಲ್ಲ. ಏಕೆಂದರೆ ಯಥಾಪ್ರಕಾರದ ವೇಳೆಗೆ ಸ್ನಾನ ಮಾಡಿದರೆ ಯಥಾಪ್ರಕಾರ ಹಸಿವೆಯಾದೀತು. ಮತ್ತು ಸ್ನಾನಕಾಲದಲ್ಲಿ ರೋಮಕೂಪಗಳ ಮೂಲಕ ದೇಹದೊಳಕ್ಕೆ ನೀರಿಳಿದು ಭೋಜನದಂತೆ ಆದೀತು. ಆದದ್ದರಿಂದ ತಡೆಯಲಾಗುವಷ್ಟು ಹೊತ್ತು ತಡೆದು ಆಮೇಲೆ ಕೊಳದಲ್ಲಿ ಮೈಯದ್ದಿ ಆ ಕೂಡಲೆ ದೇವರ ಪೂಜೆಗೆ ಕೂಡತಕ್ಕದ್ದು. ಆಗ ತೀರ್ಥ ಲಭ್ಯವಾಗುತ್ತದೆ. ಏಕಾದಶಿಯ ದಿವಸ ತೀರ್ಥ ಮಾತ್ರ ಸೇವಿಸಬೇಕಾದದ್ದು.

ಇದು ಒಂದು ಅತಿರೇಕ ಲಕ್ಷಣ. ಇದಕ್ಕಿಂತ ಚೋದ್ಯವಾದದ್ದು ಇನ್ನೊಂದು. ಅದು ಗೋಮಯದ ಪರಮ ಪವಿತ್ರತೆ. ಬೆಳಗ್ಗೆ ಹಾಸಿಗೆಯಿಂದೇಳುತ್ತಲೇ ಆಕಳ ಸಗಣಿಯನ್ನಷ್ಟು ಸಂಪಾದಿಸಿ ನೀರಿನಲ್ಲಿ ಕದರಿ ಆ ನೀರಿನಿಂದ ಮುಖ ಪ್ರಕ್ಷಾಳನ. ಬಳಿಕ ಗೋಮಯದೊಡನೆ ಕಲಸಿದ ಮೃತ್ತಿಕೆಯನ್ನು ಹಣೆಯಲ್ಲಿ ಧರಿಸತಕ್ಕದ್ದು. ಆಮೇಲೆ ಆ ಸಗಣಿಯ ನೀರನ್ನು ತುಳಸೀ ಗಿಡದ ಮೇಲೆ ಪ್ರೋಕ್ಷಿಸಿ ತುಳಸಿಯನ್ನು ಶುದ್ಧಿಪಡಿಸತಕ್ಕದ್ದು. ಮತ್ತು ತನ್ನ ಉಸಿರು ತುಳಸಿಗೆ ಸೋಕದಂತೆ ಮೂಗಿನ ಮೇಲೆ ಧೋತ್ರಸೆಳೆದುಕೊಂಡಿರತಕ್ಕದ್ದು. ಹಾಗೆಯೇ ಸಾಲಿಗ್ರಾಮಾದಿಗಳಿಗೆ ಅಭಿಷೇಕ ಮಾಡುವ ಕಾಲದಲ್ಲಿ ಆ ನೀರಿನಲ್ಲಿ ಮೊದಲು ಒಂದು ಚಿಟಿಕೆ ಗೋಮಯವನ್ನು ಕಲಸಿರತಕ್ಕದ್ದು. ತುಳಸಿ ಸಿಕ್ಕದೆಹೋದ ಸಂದರ್ಭಕ್ಕಾಗಿ ತುಳಸೀಕಾಷ್ಠಗಳನ್ನಿರಿಸಿಕೊಂಡಿದ್ದು ಅದನ್ನು ಸಣ್ಣ ಸಣ್ಣ ತುಂಡಾಗಿ ಚಿವುಟಿ ಅದರಿಂದ ಅರ್ಚನೆ ಮಾಡತಕ್ಕದ್ದು-ಇದೂ

ಗೋಮಯಶುದ್ಧಿಯಾದ ಮೇಲೆ. ಹೀಗೆ ಗೋಮಯವು ಸರ್ವಪ್ರಶಸ್ತವಾಗಿದ್ದದ್ದರಿಂದ ಆ ಸಂಪ್ರದಾಯಸ್ಥರಿಗೆ ಸಗಣೀ ಕೂಟವೆಂಬ ಹೆಸರು.

ಇದರಲ್ಲಿ ನಾನು ಎಲ್ಲವನ್ನೂ ಸ್ವಯಂ ಕಂಡವನಲ್ಲ. ಅದರಲ್ಲಿ ಕೊಂಚ ಭಾಗ ಕೇಳಿದ ಮಾತು. ಅದರಲ್ಲಿ ಕುಹಕವಿದ್ದರೂ ಇದ್ದೀತು. ಮಡಿ, ಆಚಾರ, ನೇಮ, ಎಂದು ಹೊರಟರೆ ಅದರಲ್ಲಿ ಅತಿಯೂ ವಿಪರೀತವೂ ಆಗುವುದು ಅಪರೂಪವಲ್ಲ. ಸಗಣೀ ಕೂಟವೆಂಬುದು ಅಂಥ ವಿಪರೀತಕ್ಕೆ ದೃಷ್ಟಾಂತ. ಆ ಕೂಟ ಬಹು ಕಾಲ ಉಳಿದದ್ದಲ್ಲ. ಅದರಲ್ಲಿ ಜನಬಾಹುಳ್ಯವೂ ಇರಲಿಲ್ಲ. ಈಗ ಕೂಟದ ಹೆಸರನ್ನು ಹೇಳುವವರೇ ಇಲ್ಲ.

೮ ಕಾಶಿ ರಾಘವೇಂದ್ರಾಚಾರ್ಯರು

ನನಗೆ ಸಂಸ್ಕೃತದಲ್ಲಿ ಪ್ರಥಮ ಗುರುಗಳು ಕಾಶಿ ರಾಘವೇಂದ್ರಾಚಾರ್ಯರು. ಮುಳಬಾಗಲಿನಲ್ಲಿ ಸಂಸ್ಕೃತ ವಿದ್ವನ್ಮಂಡಲಿ ತಕ್ಕಷ್ಟಿದ್ದರೂ ಅಲ್ಲಿ ಪಾಠಶಾಲೆಯೊಂದಿರಲಿಲ್ಲ. ಅಲ್ಲಿದ್ದ ಮೂರುನಾಲ್ಕು ಸ್ಕೂಲುಗಳಲ್ಲಿ ಯಾವುದರಲ್ಲಿಯೂ ಸಂಸ್ಕೃತ ಕಲಿಸುವ ವ್ಯವಸ್ಥೆ ಇರಲಿಲ್ಲ. ನನ್ನ ತಂದೆಯವರಿಗೆ ಸಂಸ್ಕೃತದ ವಿಷಯದಲ್ಲಿ ತುಂಬಾ ಉತ್ಸಾಹ ಮತ್ತು ಗೌರವ. ನಾನು ಓದುತ್ತಿದ್ದ ಆಂಗ್ಲೋವರ್ನಾಕ್ಯುಲರ್ ಮಿಡ್ಲ್ ಸ್ಕೂಲಿನಲ್ಲಿ ಸಂಸ್ಕೃತ ಬೋಧನೆಯ ಏರ್ಪಾಟನ್ನಿಡಬೇಕೆಂದು ಸರಕಾರಕ್ಕೆ ಪದೇಪದೇ ಅರ್ಜಿ ಬರೆಯಿಸಿದ್ದರು. ಸರಕಾರದವರು ಆ ಕೋರಿಕೆಯನ್ನು ನಡಸುವವರೆಗೂ ಮಹಾಜನಸಹಾಯದಿಂದ ಆ ಏರ್ಪಾಟನ್ನು ಕೂಡಿದ ಮಟ್ಟಿಗೆ ನಡಸಬೇಕೆಂದು ನಿಶ್ಚಯಮಾಡಿಕೊಂಡು, ಕಾಶಿ ರಾಘವೇಂದ್ರಾಚಾರ್ಯರು ಬೋಧಕರಾಗಿರುವಂತೆ ಅವರನ್ನು ಒಡಂಬಡಿಸಿ ಕರೆಯಿಸಿಕೊಂಡರು.

ರಾಘವೇಂದ್ರಾಚಾರ್ಯರು ಪುಂಗನೂರು ಮದನಪಲ್ಲಿಗಳಲ್ಲಿ ಹೆಸರುವಾಸಿಯಾಗಿದ್ದರು. ಅವರು ಸಂಸ್ಕೃತ ಕಾವ್ಯವ್ಯಾಕರಣಗಳಲ್ಲಿ ಕೃತಪರಿಶ್ರಮರಾಗಿದ್ದರು; ಮತ್ತು ಮುಳಬಾಗಲಿನಲ್ಲಿ ಮೇಲೆ ಹೇಳಿರುವ ಅವರೂರು ನರಹರಿ ಆಚಾರ್ಯರವರಲ್ಲಿ ಮಧ್ವಶಾಸ್ತ್ರ ಪಾಠ ಮಾಡಬೇಕೆಂದು ಆಶೆಪಟ್ಟುಕೊಂಡಿದ್ದರು.

ಸಂಸ್ಕೃತ ಪಾಠಶಾಲೆ ಪ್ರೈವೇಟ್ ಚಂದಾದಾರರ ಸಹಾಯದಿಂದ ಕೆಲವು ಕಾಲ ನಡೆದು ಆಮೇಲೆ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನ ಭಾಗವಾಗಿ ಅಂಗೀಕರಿಸಲ್ಪಟ್ಟಿತು. ಆಚಾರ್ಯರು ಹೀಗೆ ಸರಕಾರಿ ಉದ್ಯೋಗಸ್ಥರಾದರು.

ಘರ್ಷಣೆ

ರಾಘವೇಂದ್ರಾಚಾರ್ಯರು ಕೊಂಚ ಮುಂಗೋಪದವರು. ಹೆಡ್‌ಮಾಸ್ಟರ್ ಚಂದ್ರಶೇಖರಶಾಸ್ತ್ರಿಗಳಿಗೂ ಆಚಾರ್ಯರಿಗೂ ಆಗಾಗ ಘರ್ಷಣೆಗಳಾಗುತ್ತಿದ್ದವು-ವೇಳಾನಿಯಮ ಪಾಲನೆಯ ವಿಷಯದಲ್ಲಿ. ಆಚಾರ್ಯರಿಗೆ ವಾರಕ್ಕೊಂದು ದಿನ ಎರಡು ದಿನ, ಸಂಜೆ ನಾಲ್ಕರವರೆಗೂ ಸ್ಕೂಲಿಗೆ ಬರಲು ಅನುಕೂಲಿಸುತ್ತಿರಲಿಲ್ಲ. ಅಲ್ಲಲ್ಲಿ ನಿಮಂತ್ರಣೋತ್ಸವಗಳಿಗೂ ಮಂಗಳಪ್ರಸ್ತಗಳಿಗೂ ಪುಣ್ಯದಿವಸಗಳಿಗೂ ಅವರಿಗೆ ಆಹ್ವಾನ

ಬರುತ್ತಿತ್ತು. ಆ ಸಣ್ಣ ಊರಿನಲ್ಲಿ ಇಂಥ ದೊಡ್ಡ ವಿದ್ವಾಂಸರು ಎಲ್ಲರಿಗೂ ಬೇಕು. ಆಹ್ವಾನವನ್ನು ತಿರಸ್ಕರಿಸಲಾಗುತ್ತಿರಲಿಲ್ಲ. ಆದರೆ ನಾಲ್ಕು ಘಂಟೆಗೆ ಭೋಜನ ತೀರಿಸಿಕೊಂಡು ಬಂದ ಮೇಲೆ ಕೊಂಚ ವಿಶ್ರಾಂತಿ ಎಂಥವರಿಗೂ ಬೇಕಾಗುತ್ತದೆ. ಆಚಾರ್ಯರು ಕೊಂಚ ಸ್ಥೂಲಕಾಯರೂ ಹೌದು. ಸ್ಕೂಲು ಬೆಂಚುಗಳ ಮೇಲೆ ಮಲಗಿ ವಿಶ್ರಾಂತಿಯಾಗುವ ವೇಳೆಗೆ ಘಂಟೆ ಐದಾಗಿಬಿಡುತ್ತಿತ್ತು. ಆ ಹೊತ್ತಿನಲ್ಲಿ ನಮಗೆ ಪಾಠ ಪ್ರಾರಂಭ. ನಮಗಾದರೋ ಸ್ಕೂಲು ಬಿಟ್ಟು ಹೊರಡಬೇಕೆಂಬ ಆತುರ. ಹೀಗೆ ನಾಲ್ಕೈದು ಸಾರಿ ಆದಮೇಲೆ ಹೆಡ್ ಮಾಸ್ಟರು ಅದನ್ನು ಕುರಿತು ಟೀಕಿಸುವರು. ಅದು ಕೊಂಚ ಕಹಿಮಾತಿಗೆ ಕಾರಣ.

ಪಾಠಕ್ರಮ

ಪಾಠದಲ್ಲೇನೋ ಅವರಿಗೆ ತುಂಬಾ ಶ್ರದ್ಧೆ. ಅವರು ಶಿಷ್ಯರಲ್ಲಿ ಕಟ್ಟುನಿಟ್ಟಿನಿಂದ ನಡೆದುಕೊಳ್ಳುವರು. ಶಬ್ದಮಂಜರಿಯಿಂದ ಶಬ್ದಗಳನ್ನು ಬಾಯಿಗೆ ಗಟ್ಟಿ ಮಾಡಬೇಕು. ರಾಮಾಯಣ ಸಂಗ್ರಹದಿಂದ ಶ್ಲೋಕಗಳನ್ನು ಕೇಳಿದ ಕಡೆ ಹೇಳುವಂತಿರಬೇಕು. ಧಾತು ಪಾಠವನ್ನೂ ಹೀಗೆಯೇ. ಮೊದಲು ಎಲ್ಲ ಬಾಯಿಗೆ ಬರಬೇಕು. ಇದು ವಿನಾಯಿತಿಯಿಲ್ಲದ ನಿಯಮ. ವಿದ್ಯಾರ್ಥಿಯು ಒಂದಕ್ಷರ ತಪ್ಪಿದರೆ, ಸ್ವಲ್ಪ ಹೆಚ್ಚುಕಡಮೆ ಮಾಡಿದರೆ-ಬಲಿ, ದಿಗ್ಬಲಿ.

ನಾನಿದ್ದ ಸಂಸ್ಕೃತ ತರಗತಿಯಲ್ಲಿ ನಾಲ್ಕುಮಂದಿ ವಿದ್ಯಾರ್ಥಿಗಳು. ನಮಗೊಬ್ಬ ಮುಖಂಡ; ಹೆಡ್ ಮಾಸ್ಟರ ಮಗ ಶ್ರೀನಿವಾಸಯ್ಯ. ಒಂದು ದಿನ ಒಂದು ಸಣ್ಣ ಪುಂಡುತನ ಮಾಡಿದೆವು. ಘಂಟೆ ಐದಾಗಿತ್ತು. ಸ್ಕೂಲಿನ ಎಲ್ಲ ತರಗತಿಗಳವರೂ ಹೊರಟು ಹೋಗಿದ್ದರು. ನಾವು ಇಬ್ಬರೋ ಮೂವರೋ ಉಳಿದಿದ್ದೆವು ಪಾಠಕ್ಕಾಗಿ; ಕಿಟಕಿಯ ಬಾಗಿಲುಗಳ ಮುಂದೆ ನಿಂತೆವು. ಯಾವ ಪಾಠವೋ-ನಮಗೆ ಬಾಯಿಗೆ ಬಂದಿರಲಿಲ್ಲ. ಆಚಾರ್ಯರು ಪ್ರಶ್ನೆ ಕೇಳಿದ ಕೂಡಲೆ ಶ್ರೀನಿವಾಸಯ್ಯ ಬಾಯಿಗೆ ಬಂದದ್ದನ್ನು ಹೇಳಿದ. ಇಂಥ ಸಂದರ್ಭದಲ್ಲಿ ಆಚಾರ್ಯರ ಪ್ರತಿವರ್ತನೆ ಎಂಥಾದ್ದೆಂಬುದು ನಮಗೆ ತಿಳಿದಿತ್ತು. ಇವರು ಕೈಯನ್ನು ಮುಷ್ಟಿ ಮಾಡಿಕೊಂಡು ನಮಗೆ ತಲೆಯ ಮೇಲೋ ಬೆನ್ನಿನ ಮೇಲೋ ಗುದ್ದಬೇಕು. ಹಾಗೆ ಅವರ ಕೈ ಮೇಲಕ್ಕೆ ಹೋದೊಡನೆಯೇ ಶ್ರೀನಿವಾಸಯ್ಯ ತಲೆ ತಗ್ಗಿಸಿದ (Ducking). ಆಚಾರ್ಯರ ಕೈಮುಷ್ಟಿ ಕಿಟಕಿಯ ಬಾಗಿಲಿಗೆ ಹೊಡೆಯಿತು. ಆ ನೋವಿನಿಂದ ಅವರ ಬೈಗುಳ ದ್ವಿಗುಣವಾಯಿತು.

ಮಧ್ಯಾಹ್ನ ಪಾಠ ಹೇಳುವಾಗ ಅವರು ಬೆಂಚಿನ ಮೇಲೆ ಕುಳಿತು, ಶಿಷ್ಯನನ್ನು ತಮ್ಮ ಮೊಣಕಾಲುಗಳ ನಡುವೆ ಸಿಕ್ಕಿಸಿಕೊಂಡು ಪಾದಗಳೆರಡನ್ನೂ ಗಂಟಿಕ್ಕಿ ಅವನ ಕಿವಿಯ ಮೇಲೆ ನಲುಚುಬೆರಳುಗಳನ್ನು ಇಟ್ಟು "ಹೊಲಸು ರಂಡೀದೇ" ಎನ್ನುವರು. ಕೂಡಲೆ ಧಾರಾಪ್ರವಾಹವಾಗಿ ಶಿಷ್ಯನ ಬಾಯಿಂದ ಹೊರಡಬೇಕು. "ಭೂ ಸತ್ತಾಯಾಮ್ ॥ ಏಧವೃದ್ಧೌ ಸಂಘರ್ಷೇ ॥" ಇತ್ಯಾದಿ ಧಾತುಪಾಠ. ಎಲ್ಲಿಯಾದರೂ ತಪ್ಪಿದರೆ (೧) ಕಿವಿಯ ಮೇಲ್ತುದಿಯನ್ನು ನಲುಚುವುದು, (೨) ಮೊಣಕಾಲಿನ ಒತ್ತಡ, (೩) ಬೆನ್ನಿನ ಮೇಲೆ ಗುದ್ದು.

ಆಕರ್ಷಕ ಬೋಧನೆ

ಇದು ನನ್ನ ಇಂದಿನ ವಾಚಕರಿಗೆ ಕಠಿನವೆಂದು ತೋರಿದರೂ ಆ ಕಾಲಕ್ಕೆ ಅಪರೂಪವಾದದ್ದೇನಲ್ಲ. ಒಟ್ಟಿನಲ್ಲಿ ನಾವು ಭಂಡರು, ಮೊಂಡರು. ಈ ಶಿಕ್ಷೆಗಳನ್ನು ಅಷ್ಟಾಗಿ ಲಕ್ಷಿಸುತ್ತಿರಲಿಲ್ಲ. ಅದನ್ನು ಮರೆಸುವಂಥ ಸಂದರ್ಭಗಳು ಪದೇ ಪದೇ ಬರುತ್ತಿದ್ದವು. ರಾಘವೇಂದ್ರಾಚಾರ್ಯರು ಯಾವ ಸಂಗತಿಯನ್ನಾದರೂ ಹೇಳುವುದಕ್ಕಾಗಲಿ ವರ್ಣಿಸುವುದಕ್ಕಾಗಲಿ ಪ್ರಾರಂಭಿಸಿದರೆ ಮತ್ತಷ್ಟು ಕೇಳಬೇಕೆನಿಸುವುದು. ಅವರ ಶೈಲಿಯ ಆಕರ್ಷಣೆ ಅಂಥಾದ್ದು. ಮನಸ್ಸನ್ನು ಹಿಡಿಯುವಂಥ ಮಾತುಗಳು, ಓಜಸ್ವಿಯಾದ ಪದ ಪ್ರಯೋಗ, ಉಚಿತವಾದ ಮುಖಭಾವ ಹಸ್ತಮುದ್ರಿಕೆಗಳು, ನಡುನಡುವೆ ಹಾಸ್ಯ-ಇದರಿಂದ ಅವರ ಮಾತುಗಾರಿಕೆ ಸೊಗಸಾಗುತ್ತಿತ್ತು.

ಕಾವ್ಯಪಾಠದಲ್ಲಂತೂ ಅವರದು ಪ್ರಚಂಡ ನೈಪುಣಿ. ಅವರು ರಘುವಂಶ ಪಾಠ ಹೇಳಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಮೊದಲನೆಯ ಶ್ಲೋಕದ ಅರ್ಥ ಹೇಳುವಾಗ "ಪಾರ್ವತೀಪ+ರಮೇಶ್ವರೌ" (ಪಾರ್ವತೀಪಶ್ಚ ರಮೇಶ್ವರಶ್ಚ ಪಾರ್ವತೀಪ-ರಮೇಶ್ವರೌ) ಎಂದು ಎರಡು ಪದಗಳಾಗಿ ವಿಭಾಗ ಮಾಡುವ ಚಮತ್ಕಾರ, ಆದರೆ "ಪಾರ್ವತೀ+ಪರಮೇಶ್ವರೌ" ಎಂದು ಹೇಳುವುದರ ಹೆಚ್ಚಿನ ಸ್ವಾರಸ್ಯ, ಕಾಳಿದಾಸನು ಈಶ್ವರಭಕ್ತನೆಂದು ಅವನ ಇತರ ಕೃತಿಗಳಿಂದ ತಿಳಿದುಬರುವ ಸಂಗತಿ–ಈ ವಿಷಯಗಳನ್ನು ಕುರಿತು ಮಹೋಪನ್ಯಾಸ ಮಾಡಿದರು. ಅದರಲ್ಲಿ ಇಲ್ಲಲ್ಲಿ ಬಂದ ಕೆಲವೇ ಕೆಲವು ಕನ್ನಡ ಮಾತುಗಳನ್ನು ಬಿಟ್ಟರೆ ಅದು ಸಂಸ್ಕೃತದಲ್ಲಿ ಮಾಡಿದ ವ್ಯಾಖ್ಯಾನವೆಂದೇ ಅನ್ನಿಸುತ್ತಿತ್ತು. ಅವರು ಕಾವ್ಯರಸಜ್ಞರು.

ನನ್ನ ಕಷ್ಟಕಾಲ

ಒಂದು ಸಾರಿ ಬೇಸಗೆಯ ರಜಾ ಆರಂಭವಾಗುವುದಕ್ಕೆ ಮುಂಚೆ ನಾನೂ ನನ್ನ ಸಹಪಾಠಿಗಳೂ ಮೂವತ್ತು ಮೂವತ್ತೈದು ಧಾತುರೂಪ ನಿಷ್ಪತ್ತಿಗಳನ್ನು ರಜಾಕಾಲದಲ್ಲಿ ಗಟ್ಟಿ ಮಾಡತಕ್ಕದ್ದೆಂದು ರಾಘವೇಂದ್ರಾಚಾರ್ಯರು ವಿಧಿಸಿದರು. ನಾನು ರಜೆಯಲ್ಲಿ ಮುಪ್ಪಾಗ ಮುರವೀಶಪಾಲನ್ನು ತಿಂಡಿಪೋತತನದಲ್ಲಿಯೂ ಪುಂಡಾಟಿಕೆಯಲ್ಲಿಯೂ ಕಳೆದೆ. ಇನ್ನೊಂದು ವಾರಕ್ಕೆ ಸ್ಕೂಲು ತೆಗೆಯುತ್ತದೆನ್ನುವ ವೇಳೆಗೆ ಆಚಾರ್ಯರು ವಿಧಾಯಕ ಮಾಡಿದ್ದು ಜ್ಞಾಪಕಕ್ಕೆ ಬಂದಿತು. ಆಗ ಶಬ್ದಮಂಜರಿ ಪುಸ್ತಕವನ್ನು ತೆರೆದು ಮುಂದಿಟ್ಟುಕೊಂಡೆ. ಮನಸ್ಸಿಗೆ ಭಯ ಬಂದಿತು, ದುಃಖ ಬಂದಿತು. ಗೋಳಾಟಕ್ಕೆ ಆರಂಭ. ಗಟ್ಟಿಯಾಗಿ ಅತ್ತೆ.

ಆ ವೇಳೆಯಲ್ಲಿ ನಮ್ಮ ಮನೆಯ ಮುಂದಿನ ಪಡಸಾಲೆಯಲ್ಲಿ ನನ್ನ ಅಜ್ಜಿ ಕೆಲಸಗಾರರಿಂದ ಬತ್ತ ಕುಟ್ಟಿಸುತ್ತಿದ್ದಳು. ಸಂಜೆ ಏಳು ಘಂಟೆ ಇರಬಹುದು. ದೀಪ ಹೊತ್ತಿಸಿತ್ತು ಬುಡ್ಡಿದೀಪ, ಹೊಂಗೆಯೆಣ್ಣೆಯದು. ನನ್ನ ಅಜ್ಜಿ “ಯಾಕೋ ಅಪ್ಪಾ ಅಳುತ್ತೀ” -ಎಂದು ಕೇಳಿದಳು. ನಾನು “ನೋಡು ಅಜ್ಜಿ, ಇಷ್ಟೆಲ್ಲ ಪಾಠ ಕೊಟ್ಟುಬಿಟ್ಟಿದ್ದಾರೆ. ಇದನ್ನೆಲ್ಲ ಬಾಯಿಗೆ ಗಟ್ಟಿ ಮಾಡಬೇಕಂತೆ!” ಎಂದು ಹೇಳಿದೆ. ಆಕೆ ನನ್ನ ಹತ್ತಿರ ಬಂದು “ಪುಸ್ತಕ ಕೊಡು, ನೋಡೋಣ” ಎನ್ನುತ್ತ ಶಬ್ದಮಂಜರಿಯನ್ನು ತನ್ನ ಕೈಯಲ್ಲಿ ಹಿಡಿದು ಕೈಯಿಂದ ಪುಸ್ತಕವನ್ನು ಅಳೆದಳು. ಆಕೆಗೆ ಅಕ್ಷರ ಬರದು. “ಇದೇನೋ ಅಪ್ಪಾ, ಚೋಟುದ್ದ ಕೂಡ ಇಲ್ಲವಲ್ಲೋ? ಬೆಟ್ಟಿನಷ್ಟಿದೆ ಇದು. ನೀನು ಮೂವತ್ತು ಮೂವತ್ತೈದು ಎಂದರೆ ಎಷ್ಟಾಗುತ್ತದೆ ಎಂದು ತಿಳಿದಿದ್ದೀ? ಬೆಳಗ್ಗಿನಿಂದ ಸಂಜೆಯೊಳಗೆ ನೀನು ಎಷ್ಟು ಕೋಡುಬಳೆ ತಿಂದು ಮುಗಿಸುತ್ತೀ? ಒಂದು ಪುಟ ಒಂದು ಕೋಡುಬಳೆಯಷ್ಟು ಕೂಡ ಇಲ್ಲವಲ್ಲೋ? ನೀನೆಂಥ ಗಂಡಸು ಇದಕ್ಕೆ ಅಳುವವನು?” –ಎಂದು ಮೂದಲಿಸಿದಳು. ಅಲ್ಲಿದ್ದವರೆಲ್ಲ ನಕ್ಕರು.

ನನಗೆ ಸ್ವಲ್ಪ ಧೈರ್ಯ ಬಂತು. ಆದಷ್ಟು ಗಟ್ಟಿಮಾಡಿದೆ.

ನನ್ನ ವ್ಯಾಸಂಗಶ್ರದ್ಧೆ

ಇಂಥ ಸಂಗತಿ ಇನ್ನೊಂದು. ನನಗೆ ಮುಂಜಿಯಾದ ಕೆಲವು ತಿಂಗಳ ಬಳಿಕ ನಮ್ಮ ಬಂಧು ಬಳಗ ನನ್ನನ್ನು ನೋಡಬೇಕೆಂದು ಆಶೆಪಟ್ಟದ್ದರಿಂದ ಆನೇಕಲ್ಲು, ಸರ್ಜಾಪುರ ಪ್ರಾಂತಕ್ಕೆ ನಾವು ಪ್ರಯಾಣ ಮಾಡತಕ್ಕದ್ದೆಂದು ನನ್ನ ಹಿರಿಯರು ನಿಶ್ಚಯಿಸಿದರು. ಆ ಪ್ರಯಾಣ ನಡೆದದ್ದು ಒಂದು ಬೇಸಗೆಯ ಕಾಲದಲ್ಲಿ. ಮುಳಬಾಗಲಿನಿಂದ ಹೊರಟು ಕೋಲಾರ ಬೌರಿಂಗ್ ಪೇಟೆ ಮಾರ್ಗವಾಗಿ ಮುಂದಿನ ಪ್ರಯಾಣ. ಇದಕ್ಕಾಗಿ ಗೊತ್ತಾಗಿದ್ದ ದಿವಸದ ಹಿಂದಿನ ರಾತ್ರಿ ನನ್ನ ತಂದೆ ನನಗೆ ಆಜ್ಞೆ ಕೊಟ್ಟರು. “ಅಗ್ನಿಕಾರ್ಯದ ಸಮಿತ್ತು, ಅಕ್ಷತೆಯ ಬಟ್ಟಲು, ತುಪ್ಪದ ಡಬ್ಬಿ, ಪಂಚಪಾತ್ರೆ, ಉದ್ಧರಣೆ, ತಟ್ಟೆ, ಅಮರ, ಶಬ್ದಮಂಜರಿ–ಇದಿಷ್ಟನ್ನು ಮೂಟೆಕಟ್ಟಿ ಚೀಲದಲ್ಲಿಟ್ಟುಕೊ” –ಎಂದು. ನಾನು “ಓಹೋ” ಎಂದೆ. ಮಾರನೆಯ ದಿನ ಬೆಳಗ್ಗೆ ಸುಮಾರು ೧೦ ಘಂಟೆಗೆ ಭೋಜನಾನಂತರ ಎತ್ತಿನ ಗಾಡಿಯಲ್ಲಿ ನಮ್ಮ ಪ್ರಯಾಣ. ನನ್ನ ತಂದೆ, ತಾಯಿ, ಅಜ್ಜಿ, ನನ್ನ ತಂದೆಯ ಸ್ನೇಹಿತರಿಬ್ಬರು ಇಷ್ಟು ಮಂದಿ. ಎರಡು ಜೋಡೆತ್ತಿನ ಗಾಡಿಗಳಲ್ಲಿ ನಮ್ಮ ಪ್ರಯಾಣ. ನಮ್ಮ ಪಾಥೇಯದಲ್ಲಿ ಚಕ್ಕುಲಿ ಕೋಡುಬಳೆಗಳೂ ಅವಲಕ್ಕಿಯೂ ತಕ್ಕಮಟ್ಟಿಗೆ ಧಾರಾಳವಾಗಿಯೇ ಇದ್ದವು. ಸುಮಾರು ೧ ಘಂಟೆಯ ವೇಳೆಗೆ ತಂಬುಹಳ್ಳಿ (ತಂಪುಹಳ್ಳಿ) ಸೇರಿದೆವು. ಅಲ್ಲಿ ಗಾಡಿ ನಿಲ್ಲಿಸಿ ಇಳಿದು ನದಿಯಲ್ಲಿ ಕೈ ಕಾಲು ತೊಳೆದುಕೊಂಡು, ಜೊತೆಯಲ್ಲಿ ತಂದಿದ್ದ ಫಲಾಹಾರಗಳನ್ನು ಮುಗಿಸಿ ನೀರು ಕುಡಿದು, ಪುನಃ ಪ್ರಯಾಣಕ್ಕೆ ಸಿದ್ಧರಾದೆವು. ಆಗ ನನ್ನ ತಂದೆ “ಎಲಾ, ನಿನ್ನ ಗಂಟುಬಿಚ್ಚಿ ಅಮರ ಶಬ್ಧಮಂಜರಿ ಹೊರಕ್ಕೆ ತೆಗಿ. ಇಲ್ಲಿ ಸಾಲುಮರಗಳ ನೆರಳು ಕೊಂಚ ದೂರ ಬಹು ಸೊಗಸಾಗಿ ತಂಪಾಗಿದೆ, ಪಾಠ ಮಾಡೋಣ” ಎಂದರು. ಕೂಡಲೆ ನನಗೆ ಎದೆ ಝುಲ್ಲೆಂದಿತು. ನನ್ನ ಮೂಟೆಯನ್ನು ಬಿಚ್ಚಿ ಆಶ್ಚರ್ಯವನ್ನು ಅಭಿನಯಿಸಿ, “ಅಯ್ಯೋ, ರಾತ್ರಿ ಕತ್ತಲೆಯಲ್ಲಿ ಆ ಪುಸ್ತಕಕ್ಕೆ ಬದಲಾಗಿ ‘ಸರಳಾರೋಗ್ಯ ಪಾಠ’ ‘ವ್ಯವಸಾಯ ಬೋಧಿನಿ’ ಗಳನ್ನು ತಂದು ಬಿಟ್ಟಿದ್ದೇನಲ್ಲ!” ಎಂದೆ.

ಆಗ ಬಿತ್ತಯ್ಯಾ ನನ್ನ ಬೆನ್ನಿನ ಮೇಲೆ ಗುದ್ದು-ಅವಾಚ್ಯ ಪದಗಳ ಸುರಿಮಳೆಯ ಸಮೇತ, ನಾನು ಓಡಿದೆ. ನನ್ನ ತಂದೆ ತರುಬಿಕೊಂಡು ಬಂದರು. ಹತ್ತು ಹದಿನೈದು ಗುದ್ದು ಬಿದ್ದಿರಬಹುದು. ಇಷ್ಟರೊಳಗಾಗಿ ನನ್ನ ಅಜ್ಜಿ ಅಡ್ಡ ಬಂದಳು. ಜೊತೆಯಲ್ಲಿ ಬಂದಿದ್ದ ಇಬ್ಬರು ಸ್ನೇಹಿತರು ನನಗೆ ಕಾವಲಾಗಿ ಬಂದರು. ಈ ಆಪದ್ಬಾಂಧವರಿಲ್ಲದೆ ಹೋಗಿದ್ದಿದ್ದರೆ ನನ್ನ ಕಥೆ ಅಂದೇ ಮುಗಿಯುತ್ತಿತ್ತು, ನನ್ನ ತಂದೆಗೆ ನಿರಂತರ ಶೋಕ ಬರುತ್ತಿತ್ತು–ಎಂದು ಈ ಹೊತ್ತಿಗೂ ನನಗನಿಸುತ್ತದೆ. ನನ್ನ ತಂದೆಯ ಕೋಪ ಹಾಗೆ ತೀವ್ರವಾದದ್ದು.

ಕೆಲವು ದಿನ ಕಳೆದು ಎಲ್ಲರ ಮನಸ್ಸೂ ಶಾಂತವಾದ ಮೇಲೆ ಆ ಮಿತ್ರರಲ್ಲೊಬ್ಬರು ನನ್ನನ್ನು ಕೇಳಿದರು, ಎಲ್ಲರ ಎದುರಿಗೂ:

"ಎಲಾ ಅಪ್ಪಯ್ಯ, ನೀನು ರಾಮಾಯಣಸಂಗ್ರಹ ಓದು ಎಂದರೆ ಗೊಬ್ಬರ ಓದುತ್ತೇನೆ ಎಂದು ಹೊರಟೆಯಲ್ಲೊ! ಎಂಥ ಬುದ್ಧಿವಂತ!"

ಈ ಹಾಸ್ಯವಾಕ್ಯ ಮಾಲೂರಿನಿಂದ ಈಚೆ ಇರುವ ಸುದ್ದಕುಂಟೆ ಆಂಜನೇಯ ದೇವಸ್ಥಾನದ ಹತ್ತಿರ ನಾವು ಬಿಡಾರ ಮಾಡಿದ್ದಾಗ. ಎಲ್ಲರೂ ಹೊಟ್ಟೆ ಬಿರಿಯ ನಕ್ಕರು. ಆ ಕಾಲದಲ್ಲಿ ಸರಕಾರದ ಸ್ಕೂಲುಗಳಲ್ಲಿ ಆರೋಗ್ಯಶಾಸ್ತ್ರ ವ್ಯವಸಾಯಶಾಸ್ತ್ರಗಳು ಪಠ್ಯ ವಿಷಯಗಳಾಗಿದ್ದವು. ಸಂಸ್ಕೃತ ಐಚ್ಛಿಕ ವಿಷಯ, ನಿರ್ಬಂಧ ವಿಷಯವಲ್ಲ. ನಾನು ಹೇಗಿದ್ದರೂ ವ್ಯವಸಾಯ ಪುಸ್ತಕವನ್ನು ವ್ಯಾಸಂಗ ಮಾಡಬೇಕಿತ್ತು. ನನ್ನ ಬಂಧು ದರೋಗ ಸುಬ್ಬಣ್ಣನವರು ವ್ಯವಸಾಯಶಾಸ್ತ್ರದ ಗೊಬ್ಬರಪ್ರಕರಣವನ್ನೇ ಎತ್ತಿಹಿಡಿದರು. ಆಮೇಲೂ ಎಷ್ಟೋ ದಿನ ಅವರು ನನ್ನನ್ನು ಕಂಡಾಗಲೆಲ್ಲ "ಏನಪ್ಪಾ? ಗೊಬ್ಬರ ಮಾಡುತ್ತಿದ್ದೀಯೊ? ಹೇಗಿದೆ?" ಎಂದು ಕೇಳುತ್ತಿದ್ದರು.

ಸಂಸ್ಕೃತದ ಪುಸ್ತಕಗಳನ್ನು ನಾನು ಮನೆಯಲ್ಲಿ ಬಿಟ್ಟು ಬಂದದ್ದು ಮರವಿನಿಂದಲ್ಲವೆಂದು ನನ್ನ ತಂದೆಗೆ ತಿಳಿದಿತ್ತು. ವಾಸ್ತವವಾಗಿ ನಾನು ಮರೆತಿರಲಿಲ್ಲ; ಸಂಸ್ಕೃತವೆಂದರೆ ಅದು ಕಷ್ಟ, ಅದು ಏಟು ಪೋಟುಗಳ ಓದು, ಅದು ಮುಷ್ಟಿ ಬೆರಳ ತಿವಿತಗಳ ಸ್ವಭಾವದ್ದು-ಎಂದು ನನ್ನ ಮನಸ್ಸಿನಲ್ಲಿ ಜಿಹಾಸೆ ಹುಟ್ಟಿತ್ತು. ಅದು ಅವಿವೇಕವೇ ಹೌದು ಆದರೆ ಒಂಭತ್ತು ಹತ್ತು ವರ್ಷದ ಹುಡುಗನಲ್ಲಿ ಸದಸದ್ವಿವೇಕ ಹುಟ್ಟಿರಬೇಕಾದರೆ, ಅವನು ವಾಚಸ್ಪತಿಮಿಶ್ರ, ಮಕಾಲೆ ಮೊದಲಾದವರಂತೆ ಹುಟ್ಟು ವಿದ್ವಾಂಸನಾಗಿರಬೇಕು; ಮಹಾಪುರುಷನಾಗಿರಬೇಕು. ಆ ಪಂಕ್ತಿಯಲ್ಲಿ ನನಗೆ ಜಾಗ ಬೇಕಿಲ್ಲ.

***

ಪ್ರವಚನದ ಏರ್ಪಾಟು

ರಾಘವೇಂದ್ರಾಚಾರ್ಯರು ಮಹಾ ಪ್ರಾಮಾಣಿಕರು, ಮತ್ತು ಸಾತ್ತ್ವಿಕರು. ಅವರು ಉದ್ಯೋಗದಿಂದ ವಿಶ್ರಾಂತಿ ಪಡೆದಮೇಲೆ ಬೆಂಗಳೂರಿನಲ್ಲಿ ನೆಲಸಿದರು. ನನಗೆ ಆಗಾಗ ದರ್ಶನ ಕೊಟ್ಟು ನನ್ನನ್ನು ಆಶೀರ್ವದಿಸುತ್ತಿದ್ದರು.

ಬೆಂಗಳೂರಿನ ಪ್ರಸಿದ್ಧರಾದ ರಾವ್ ಬಹದ್ದೂರ್ ಡಾಕ್ಟರ್ ಸಿ. ಬಿ. ರಾಮರಾಯರು ತಮಗೆ ಪ್ರತಿದಿನವೂ ಒಂದು ಘಂಟೆಯ ಕಾಲ ಭಾರತ ಭಾಗವತಾದಿ ಗ್ರಂಥಗಳನ್ನು ಓದಿ ಹೇಳುವ ಸಂಸ್ಕೃತ ವಿದ್ವಾಂಸರೊಬ್ಬರು ಬೇಕೆಂದು ತಿಳಿಸಿದರು. ನಾನು ನನ್ನ ಗುರುಗಳು ಕಾಶಿ ರಾಘವೇಂದ್ರಾಚಾರ್ಯರು ಎಲ್ಲ ವಿಧಗಳಲ್ಲಿಯೂ ತಕ್ಕವರೆಂದು ಸೂಚನೆ ಮಾಡಿದೆ. ಅದರಂತೆ ರಾಘವೇಂದ್ರಾಚಾರ್ಯರು ಸಿ. ಬಿ. ರಾಮರಾಯರ ಮನೆಗೆ ಹೋಗಿ ಕೊಂಚ ಹೊತ್ತು ಮಹಾಗ್ರಂಥ ಕಾಲಕ್ಷೇಪ ಮಾಡುತ್ತಿದ್ದರು. ಹೀಗಿರಲಾಗಿ ಒಂದು ದಿನ ಬೆಳಗ್ಗೆ ಆಚಾರ್ಯರು ನನ್ನ ಮನೆಗೆ ಬಂದು ಕೇಳಿದರು:

"ಗುಂಡಪ್ಪಾ, ಇದೇನು ಈ ಪುಸ್ತಕದಲ್ಲಿರುವುದು? ಇಂಗ್ಲಿಷಿನಾಗದೆ, ನೋಡಿ ಹೇಳು."

ನಾನು ಆ "ಇದು" ಎಂದದ್ದನ್ನು ಕೈಗೆ ತೆಗೆದುಕೊಂಡು ನೋಡಿದೆ. ಅದು ಒಂದು ಮೆನು ಕಾರ್ಡ್-ಭೋಜ್ಯ ಪದಾರ್ಥ ಪಟ್ಟಿಕೆ. ಒಂದಾನೊಂದು ಐರೋಪ್ಯ ಭೋಜನ ಕೂಟಕ್ಕೆ ಡಾ॥ ಸಿ. ಬಿ. ರಾಮರಾಯರನ್ನು ಆಹ್ವಾನಿಸಿ ಆ ಆಹ್ವಾನದೊಡನಿಟ್ಟಿದ್ದ ಪಟ್ಟಿ ಅದು. ಆ ಪಟ್ಟಿಯಲ್ಲಿ ಬ್ರಾಹ್ಮಣರಿಗೆ ನಿಷಿದ್ಧವಾದ ವಸ್ತುಗಳ ಹೆಸರುಗಳೆಷ್ಟೋ ಇದ್ದವು. ಈ ನಿಷಿದ್ಧ ವಸ್ತುಗಳ ಹೆಸರುಗಳನ್ನು ಆಚಾರ್ಯರಿಗೆ ತಿಳಿಸುವುದು ಅವಶ್ಯವಲ್ಲವೆಂದು ನಾನು ಮೊಗಮ್ಮಾಗಿ ಮಾತನಾಡಲು ಪ್ರಯತ್ನ ಮಾಡಿದೆ. ಆಚಾರ್ಯರು ಹೇಳಿದರು:

"ನೀನು ಹಾಂಗೆಲ್ಲ ತೇಲಿಸಬೇಡ. ನಾನು ಅದನ್ನು ಬೇರೊಬ್ಬರಿಂದ ಓದಿಸಿದ್ದೇನೆ. ಓದಿದಾತ ಹುಡುಗ. ಅವನಿಗೆ ಅರ್ಥ ಚೆನ್ನಾಗಿ ತಿಳಿಯಲಿಲ್ಲ. ಅದಕ್ಕಾಗಿ ನಿನ್ನ ಹತ್ತಿರ ಬಂದೆ, ಹೇಳು ನಿಸ್ಸಂಕೋಚವಾಗಿ."

ನಾನು "ಇದನ್ನು ಬಿಟ್ಟುಬಿಡಿ ಆಚಾರ್ಯರೆ, ಯಾರೋ ಇದನ್ನು ಅವರಿಗೆ ಕಳಿಸಿದ್ದಾರೆ. ಅವರು ಇದನ್ನು ಬುಕ್‌ಮಾರ್ಕ್ ಗುರುತಿನ ಚೀಟಿಯಾಗಿ ಸಿಕ್ಕಿಸಿದ್ದಾರೆ. ಇದರಿಂದ ನಮ್ಮ ರಾಯರು ಅಭಕ್ಷ್ಯ ಭೋಜನ ಮಾಡಿದರೆಂದು ಸಿದ್ಧವಾಗುವುದಿಲ್ಲ. ಸ್ಪಷ್ಟವಾಗಿಲ್ಲದ ವಿಷಯಕ್ಕೆ ನಾವು ಏಕೆ ಕೈಹಾಕಬೇಕು!"

ಆಚಾರ್ಯರು: “ಅದೆಲ್ಲ ಸರಿಯಪ್ಪ. ಇಂಥ ಕಾಗದವನ್ನು ಭಾಗವತ ಪುಸ್ತಕದಲ್ಲಿ ಸಿಕ್ಕಿಸೋಣವೆಂದರೇನು? ಮಹಾಪವಿತ್ರವಾದ ವಸ್ತುವಿಗೆ ಇಂಥಾದ್ದರ ಸಂಪರ್ಕವೆ?”

ಹೀಗೆ ಕಣ್ಣುಗಳನ್ನು ದೊಡ್ಡದಾಗಿ ಅರಳಿಸಿ ಉಗ್ರಾವತಾರದ ಪ್ರಶ್ನೆಗಳನ್ನು ಹಾಕಿದರು. ನಾನು ಬದಲು ಹೇಳಲು ಪ್ರಯತ್ನ ಮಾಡಲಿಲ್ಲ.

ಕೆಲವು ದಿನಗಳಲ್ಲಿಯೇ ಆ ಭಾಗವತ ಪ್ರವಚನದ ಏರ್ಪಾಟು ನಿಂತು ಹೋಯಿತು.

ರಾಘವೇಂದ್ರಾಚಾರ್ಯರು ಭಗವದ್ಭಕ್ತರು; ಸಾಹಿತ್ಯ ತರ್ಕ ವ್ಯಾಕರಣಗಳಲ್ಲಿ ಪ್ರೌಢವರ್ಗದ ಪಂಡಿತರು; ಸ್ನೇಹಪರರಾದ ಸಜ್ಜನರು. ಅವರ ಸ್ಮರಣೆ ನನಗೆ ಶ್ರೇಯಸ್ಕರವಾದದ್ದು.

೯ ಮುಳಬಾಗಲಿನ ಅರ್ಚಕವರ್ಗ

ಮುಳಬಾಗಲಿನ ಆಂಜನೇಯಸ್ವಾಮಿಯ ದೇವಾಲಯ ಬಹು ಪ್ರಸಿದ್ಧವಾದದ್ದು. ಮೈಸೂರು ಬೆಂಗಳೂರು ಪ್ರಾಂತಗಳಿಂದ ತಿರುಪತಿಗೆ ಯಾತ್ರೆ ಹೊರಟವರು ಸಾಮಾನ್ಯವಾಗಿ ಮುಳಬಾಗಲನ್ನು ಹಾಯ್ದು ಅಲ್ಲಿಯ ಆಂಜನೇಯಸ್ವಾಮಿಯ ಪ್ರಸಾದವನ್ನು ಪಡೆದು ಮುಂದಕ್ಕೆ ಹೋಗುತ್ತಿದ್ದರಂತೆ. ತಿರುಪತಿಗೆ ಆ ಸ್ಥಳ ಮೂಡಲಭಾಗವಾಗಿದ್ದದ್ದರಿಂದ ಅದಕ್ಕೆ 'ಮುಳಬಾಗಲು' ಎಂದು ಹೆಸರಾಯಿತೆಂದು ಒಂದು ಕಥೆ. ಮುಖ್ಯವಾದ ಗುಡಿಯಲ್ಲದೆ ಮುಳಬಾಗಲಿನಲ್ಲಿ ಆಂಜನೇಯಸ್ವಾಮಿಯ ಸನ್ನಿಧಿಗಳು ಇನ್ನೂ ಎಷ್ಟೋ ಇದ್ದವು. ಮಾಧ್ವರ ಅಗ್ರಹಾರದಲ್ಲಿ ಎರಡಿದ್ದವು.

ನನ್ನ ಮನೆಯ ಹೊರತು ನನ್ನ ವಿಶ್ವವಿದ್ಯಾಲಯ ಯಾವುದೆಂದರೆ ಆಂಜನೇಯ ಸ್ವಾಮಿಯ ದೇವಾಲಯ. ಅದು ನನ್ನ ಸ್ಕೂಲಿಗೆ ಬಹು ಸಮೀಪವಾಗಿತ್ತು. ಬಿಡುವು ಬಂದಾಗಲೆಲ್ಲ, ಬಿಡುವು ಮಾಡಿಕೊಳ್ಳಲಾದಾಗಲೆಲ್ಲ ನಾನೂ ನನ್ನ ಸಹಪಾಠಿಗಳೂ ಕಾಲವನ್ನು ಆ ದೇವಾಲಯದ ಆವರಣದೊಳಗೆ ಕಳೆಯುತ್ತಿದ್ದೆವು.

ನನ್ನ ಚಿಕ್ಕಜ್ಜ ರಾಮಣ್ಣನವರು ಆಂಜನೇಯಸ್ವಾಮಿಯ ದೇವಾಲಯದ ಧರ್ಮದರ್ಶಿಗಳಲ್ಲೊಬ್ಬರು. ಅವರು ಸ್ವಾಮಿಗೆ ವಜ್ರಾಂಗ ಎಂಬ ಕವಚವನ್ನು ಮಾಡಿಸಿ ಕೊಟ್ಟಿದ್ದರೆಂದೂ ಧನುರ್ಮಾಸದಲ್ಲಿ ಒಂದೆರಡು ದಿವಸಗಳ ಕೈಂಕರ್ಯಕ್ಕಾಗಿ ಪುದುವಟ್ಟು ಏರ್ಪಡಿಸಿದ್ದರೆಂದೂ ಕೇಳಿದ್ದೇನೆ. ಅವರು ಈ ಸ್ವಾಮಿಯ ಭಕ್ತರು; ಸಂಜೆಯ ದರ್ಶನಕ್ಕಾಗಿ ದಿನವೂ ತಪ್ಪದೆ ಹೋಗುತ್ತಿದ್ದರು. ನಮ್ಮ ಮನೆಯಲ್ಲಿ ಯಾರಿಗೆ ಯಾವ ಕಾಯಿಲೆ ಬಂದರೂ ಆಂಜನೇಯ ದೇವರ ಕೇದಗೆಹೂವಿನ ಪ್ರಸಾದ, ದೇವರಿಗೆ ಧೂಪಸೇವೆಯಾದದ್ದರ ಅಂಗಾರ-ಇವೇ ನಾವು ನಂಬಿಕೊಂಡಿದ್ದ ಔಷಧಗಳು.

ದೇವಸ್ಥಾನದ ಆವರಣ ವಿಸ್ತಾರವಾದದ್ದು. ಗುಡಿಯ ಹೆಸರು ಆಂಜನೇಯನದೆಂದಿದ್ದರೂ ಅದರ ಆವರಣದೊಳಗೆ ಏಳೆಂಟು ವಿಷ್ಣುದೇವಸ್ಥಾನಗಳಿದ್ದವು. ಆ ಗುಡಿಗಳು ಸಣ್ಣವೇನೂ ಅಲ್ಲ. ದೊಡ್ಡದಾಗಿಯೇ ಇದ್ದವು.

ದೇವಸ್ಥಾನ ಪಶ್ಚಿಮಾಭಿಮುಖವಾದದ್ದು. ಮಹಾದ್ವಾರ ದೊಡ್ಡದು. ಅದರ ಮೇಲಿನ ಗೋಪುರ ಕಣ್ಣನ್ನಾಕರ್ಷಿಸುವಂಥಾದ್ದು. ಅದರ ಮುಂಭಾಗ ವಿಶಾಲವಾಗಿ

ಚೊಕ್ಕಟವಾಗಿರುತ್ತಿತ್ತು. ಆ ಜಾಗದಲ್ಲಿ ನಿಂತು ಈಕಡೆ ಆಕಡೆ ನೋಡುವುದೇ ಒಂದು ಸಂತೋಷ.

ಮಹಾದ್ವಾರವನ್ನು ಹೊಕ್ಕು ಎಡಕ್ಕೆ ತಿರುಗಿದರೆ ಒಂದು ಪುಷ್ಕರಿಣಿ. ಅದರ ಪಕ್ಕದಲ್ಲಿ ಸಣ್ಣ ಹೂದೋಟ. ಆ ಪುಷ್ಕರಿಣಿಯಿಂದ ಮುಂದೆ ಹೊರಟು ಪೂರ್ವಕ್ಕೆ ತಿರುಗಿದರೆ ಪಕ್ಕದಲ್ಲಿ ರಂಗನಾಥಸ್ವಾಮಿಯ ಗುಡಿ. ಅದರಲ್ಲಿಯ ಮೂರ್ತಿ ಆಳೆತ್ತರಕ್ಕಿಂತ ಹೆಚ್ಚಿನ ಪ್ರಮಾಣದ್ದು; ಬಹು ಸುಂದರವಾದದ್ದು. ಗರ್ಭಗುಡಿಯ ಮುಂದೆ ನವರಂಗ. ಅದರ ಮುಂದೆ ಮುಖಮಂಟಪ. ನವರಂಗದ ದಕ್ಷಿಣ ಪಾರ್ಶದಲ್ಲಿ ಒಂದು ಬಾಗಿಲು. ಅದರ ಮುಂದೆ ಒಂದು ಶೃಂಗಾರ ಮಂಟಪ. ಮುಕ್ಕೋಟಿ ದ್ವಾದಶಿಯ ದಿನ ತಿರುಚಿನಾಪಲ್ಲಿಯ ಬಳಿಯಿರುವ ಶ್ರೀರಂಗದಲ್ಲಿ ನಡೆಯುವಂತೆ ಇಲ್ಲಿಯೂ ವೈಕುಂಠೋತ್ಸವ. ಇಲ್ಲಿ ಅಂದು ಬೆಳಗ್ಗೆ ಉತ್ಸವಮೂರ್ತಿಗಳನ್ನು ಬಿಜಮಾಡಿಸಿ ಕೈಂಕರ್ಯ ನಡಸುವರು. ನೂರಾರು ಭಕ್ತರು ತಂಡೋಪತಂಡವಾಗಿ ಬಂದು ಮಂಗಳಾರತಿ ಪ್ರಸಾದಗಳನ್ನು ಪಡೆದು ಹೋಗುವರು.

ರಂಗನಾಥಸ್ವಾಮಿ ಗುಡಿಗೆದುರಾಗಿ ವರದರಾಜಸ್ವಾಮಿಯ ಗುಡಿ. ಅದರ ಪಕ್ಕದಲ್ಲಿ ಹೊರಟು ಆಂಜನೇಯಸ್ವಾಮಿಯ ಗುಡಿಯ ಹಿಂಭಾಗದಲ್ಲಿ ನಡೆದು ಪ್ರದಕ್ಷಿಣಾಕಾರವಾಗಿ ಪಶ್ಚಿಮದ ಕಡೆ ಬಂದರೆ ಅಲ್ಲಿ ದೊಡ್ಡ ಸೊಗಸಾದ ಕಲ್ಯಾಣಮಂಟಪ, ಉತ್ತರದ ಕಡೆಯ ಪುಷ್ಕರಿಣಿಗೆ ಸರಿಯಾಗಿ. ಅಲ್ಲಿಂದ ಮುಂದಕ್ಕೆ ಬಂದರೆ ರಂಗನಾಥಸ್ವಾಮಿಯ ಗುಡಿಗೆ ಸರಿಸಮನಾಗಿ ವೆಂಕಟರಮಣ ದೇವರ, ಪದ್ಮಾವತಮ್ಮನವರ ಗುಡಿ. ಇದರಲ್ಲಿಯೂ ಮೂರ್ತಿ ಮನುಷ್ಯ ಪ್ರಮಾಣಕ್ಕಿಂತ ದೊಡ್ಡದು, ಬಹು ಸುಂದರವಾದದ್ದು. ಈ ಗುಡಿಯಲ್ಲಿಯೂ ನವರಂಗ, ಮುಖಮಂಟಪ ವಿಸ್ತಾರವಾಗಿವೆ. ಈ ದೇವರ ದರ್ಶನ ಮಾಡಿ ಆವರಣದ ಮಧ್ಯರಂಗಕ್ಕೆ ಬಂದರೆ ಅಲ್ಲಿ ಮೊದಲು ಕಾಣುವುದು ಕೊಠಾರೋತ್ಸವದ ದೊಡ್ಡ ಜಗುಲಿ, ಅರ್ಧಚಂದ್ರಾಕಾರದ್ದು. ಅದಕ್ಕೆ ಆನಿಕೊಂಡು ದೊಡ್ಡ ತುಲಸೀ ವೃಂದಾವನ. ಅದಕ್ಕೆ ಆನಿಕೊಂಡು ಬಲಿಪೀಠ, ಧ್ವಜಸ್ತಂಭ. ಅದರ ಮುಂದುಗಡೆ ಆಂಜನೇಯ ಸ್ವಾಮಿಯ ಗುಡಿಯ ಮುಖ ಮಂಟಪ.

ಈ ಮುಖಮಂಟಪದಲ್ಲಿ ಎಡಗಡೆಯಿಂದ ಹೊರಟರೆ ಮೊದಲು ಅಲಂಕಾರ ಮಂಟಪ. ಇದರಲ್ಲಿ ಉತ್ಸವ ದಿವಸಗಳಲ್ಲಿ ಮೂರ್ತಿಯನ್ನು ಅಲಂಕಾರ ಮಾಡಿ ಕೂಡಿಸುವರು. ದೀಪಾರಾಧನೆ, ಮಂಗಳಾರತಿ, ಮಂತ್ರಪುಷ್ಪಗಳು ಬಹಳ ವಿಜೃಂಭಣೆಯಿಂದ ನಡೆಯುವುವು. ನಾಲ್ಕು ಕಡೆಯ ಗೋಡೆಗಳ ಮೇಲೂ ರಾಮಾಯಣದ ದೃಶ್ಯಗಳನ್ನು ಬಣ್ಣಗಳಲ್ಲಿ ಚಿತ್ರಿಸಿರುವರು. ಅದೆಲ್ಲ ನೋಟಕರಿಗೆ ಚೆಂದವೂ ಹೌದು, ಸ್ಫೂರ್ತಿಕಾರಕವೂ ಹೌದು. ಅಲಂಕಾರ ಮಂಟಪದ ಪಕ್ಕದಲ್ಲಿ ಸಂಜೀವರಾಯರ ಗುಡಿ, ಮತ್ತೊಂದು ಆಂಜನೇಯನ ಗುಡಿ ಅಲ್ಲಿ ತಿರುಗಿದರೆ ದಕ್ಷಿಣ ಪಾರ್ಶ್ವದಲ್ಲಿ (ಉತ್ತರಾಭಿಮುಖವಾಗಿ)

ಕೋದಂಡರಾಮರ ಗುಡಿ, ನೃಸಿಂಹಸ್ವಾಮಿಯ ಗುಡಿ, ವೇಣುಗೋಪಾಲ ಸ್ವಾಮಿಯ ಗುಡಿ, ಇತ್ಯಾದಿ. ಇದರ ಪಕ್ಕದಲ್ಲಿ ಮಣೆಗಾರರ ಆಫೀಸು ಕೊಠಡಿ. ಅದರ ಮುಂದೆ ನಗಾರಿಗಳು, ದೊಡ್ಡ ಬೂರಗ.

ಈ ಮುಖಮಂಟಪದಿಂದ ನಾಲ್ಕೈದು ಮೆಟ್ಟಲು ಹತ್ತಿದರೆ ಸಾಕ್ಷಾತ್ ಶ್ರೀಮದಾಂಜನೇಯ ಸ್ವಾಮಿ ಮುಖಮಂಟಪ. ಅದರಿಂದಾಚೆಗೆ ಗರ್ಭಗೃಹ. ಅಲ್ಲಿ ಕಂಗೊಳಿಸುತ್ತದೆ, ಮಹಾನುಭಾವನಾದ ವೀರಾಂಜನೇಯ ಸ್ವಾಮಿ, ಎಡಬಾಹುವನ್ನು ಮೇಲಕ್ಕೆತ್ತಿ ರಾಕ್ಷಸರನ್ನಪ್ಪಳಿಸುವ ಭಂಗಿ:

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ ॥

ಆಂಜನೇಯಸ್ವಾಮಿಯ ಗರ್ಭಗುಡಿಯ ದಕ್ಷಿಣದಲ್ಲಿ ಪಾಕಶಾಲೆ. ಅದರ ಹತ್ತಿರ ಒಂದು ಸೇದುವ ಬಾವಿ. ದೇವರ ಅಭಿಷೇಕಕ್ಕೆ ಈ ಬಾವಿಯ ನೀರು.

ನಮ್ಮ ಸುಳಿದಾಟ ಬಹುಮಟ್ಟಿಗೆ ಈ ಸುತ್ತಮುತ್ತ: ಒಂದಿಷ್ಟು ಪ್ರಸಾದ ಸಿಕ್ಕುವುದು. ನೀರು ಕುಡಿಯಲಿಕ್ಕೆ ಬಹು ರುಚಿ. ಎಲ್ಲಕ್ಕಿಂತ ಮುಖ್ಯ ಹರಟೆ, ಮರ ಹತ್ತುವುದು, ಕಾಯಿ ಕಿತ್ತು ಕಚ್ಚಿ ಬಿಸುಡುವುದು, ಕಾವಲುಗಾರರಿಂದ "ಲೇ !" ಅನ್ನಿಸುವುದು, ಕೀಟಲೆ ಮಾಡುವುದು- ಇದು ನಮ್ಮ ವಿನೋದ.

ಸಿಬ್ಬಂದಿ

ಈ ದೊಡ್ಡ ದೇವಸ್ಥಾನಕ್ಕೆ ಸಿಬ್ಬಂದಿಯೂ ದೊಡ್ಡದಾಗಿತ್ತು. ಗುಡಿ ಗೋಪುರಗಳಿಗಿಂತ ಕಡಮೆಯಲ್ಲದ ಆಕರ್ಷಣೆ ತೋಟಗಳದು. ನಾಲ್ಕು ಕಡೆಯೂ ರಸ್ತೆಗಳು. ಮಧ್ಯೆ ಮಧ್ಯೆ ಸಣ್ಣ ಸಣ್ಣ ಚೊಕ್ಕಟವಾದ ರಸ್ತೆಗಳು. ರಸ್ತೆಗಳ ಪಕ್ಕದಲ್ಲಿ ಸಣ್ಣ ಸಣ್ಣ ಬೇಲಿಗಳು. ಅದರೊಳಗೆ ಬಗೆಬಗೆಯ ಹೂವಿನ ತೋಟಗಳು. ಇವೆಲ್ಲ ಬಹು ರಮಣೀಯವಾಗಿ ನೇತ್ರಾನಂದಕರವಾಗಿ ಮನಸ್ಸಿಗೆ ಉಲ್ಲಾಸಕರವಾಗಿತ್ತು.

ಇದೆಲ್ಲ ಆ ಗುಡಿಯ ಅರ್ಚಕರ ವಿಚಕ್ಷಣೆ. ಸರಕಾರದಿಂದ ಆದದ್ದಲ್ಲ. ಸರಕಾರವು ಹಿಂದಿನಿಂದ ಬಂದಿದ್ದ ತಸ್ತೀಕನ್ನು ನಡೆಸಿಕೊಡುತ್ತಿತ್ತು. ಅಮಲ್ದಾರರು ವರ್ಷಕ್ಕೊಂದೆರಡು

ದಿನ ಬಂದು ದರ್ಶನ ಮಾಡಿ ಹೋಗುತ್ತಿದ್ದರು. ಅವರ ಹುದ್ದೆ ಏನಿದ್ದರೂ ಮೇಲುಸ್ತುವಾರಿಯದು. ಅಲ್ಲಿಯ ಪ್ರತಿದಿನದ ಆಡಳಿತ ಅರ್ಚಕರ ಕೈಯಲ್ಲಿತ್ತು.

ಅರ್ಚಕರಲ್ಲಿ ಮುಖ್ಯರಾದವರು ನನಗೆ ತಿಳಿದಂತೆ ರಾಮಾಚಾರ್ಯರು. ಅವರಿಗೆ ತಿರುಪತಿಯ ಅರ್ಚಕರೊಡನೆ ವಿವಾಹ ಸಂಬಂಧ ಬೆಳೆದಿತ್ತು. ಆಗಾಗ ತಿರುಪತಿಗೆ ಹೋಗಿ ಬರುತ್ತಿದ್ದರು. ರಾಮಾಚಾರ್ಯರು ನನ್ನ ತಂದೆಯ ಸ್ನೇಹಿತರಲ್ಲೊಬ್ಬರು. ಅವರು ತಿರುಪತಿಯಿಂದ ಬಂದಾಗ ನಮ್ಮ ಮನೆಗೆ ಅಲ್ಲಿಯ ಶ್ರೀಪಾದರೇಣು, ಚಂದನ, ವಡೆ ಮೊದಲಾದ ಪ್ರಸಾದ ವಸ್ತುಗಳನ್ನು ತಪ್ಪದೆ ತಂದುಕೊಡುತ್ತಿದ್ದರು.

ವಿಶಾಲಭಾವನೆ

ಆಂಜನೇಯಸ್ವಾಮಿಯ ಅರ್ಚಕರು ವೈಖಾನಸ ಸಂಪ್ರದಾಯದವರು. ವೈಷ್ಣವಾಗಮದಲ್ಲಿ ಪಾಂಚರಾತ್ರವೆಂದೂ ವೈಖಾನಸವೆಂದೂ ಸಂಪ್ರದಾಯಗಳು ಎರಡು ಮುಖ್ಯವಾದುವು. ಅದರಲ್ಲಿ ವೈಖಾನಸ ಸಂಪ್ರದಾಯ ಹೆಚ್ಚು ಉದಾರವಾದದ್ದೆಂದು ನನಗನಿಸುತ್ತದೆ. ಆ ಸಂಪ್ರದಾಯದವರು ಪಾಷಂಡಿಗಳಲ್ಲ. ಶಿವದ್ವೇಷ ಅವರಿಗಿಲ್ಲ. ನಮ್ಮ ರಾಮಾಚಾರ್ಯರ, ಹತ್ತಿರದ ಪೂರ್ವಿಕರೊಬ್ಬರು ಗೌರೀಶಾಸ್ತ್ರಿಗಳೆಂಬವರು. ಬಹುಶಃ ಅದು ಮೂಲದಲ್ಲಿ ಗೌರೀಶಶಾಸ್ತ್ರಿಗಳೆಂದಿದ್ದಿರಬಹುದು. ಇದೇ ತೋರಿಸುತ್ತದೆ ವಿಶಾಲಭಾವನೆಯನ್ನು.

ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಗ್ಂ ಶಿವಃ ॥

ಇದರಂತೆ ಇದ್ದವರು ನನ್ನ ಸ್ಥಳದ ವೈಖಾನಸ ಆಗಮಿಕರು. ಅವರೆಲ್ಲ ಆಗಮಶಾಸ್ತ್ರದಲ್ಲಿ ನಿಷ್ಣಾತರಾದವರು. ಸಂಸ್ಕೃತ ಸಾಹಿತ್ಯ ಬಲ್ಲವರು, ವೇದಪಾಠ ಮಾಡಿದವರು, ಆಚಾರಶೀಲರು.

ಕಾರ್ಯವಿಚಕ್ಷಣೆ

ಆಂಜನೇಯ ಸನ್ನಿಧಿಯ ಅರ್ಚಕರು ಆಗಮಶಾಸ್ತ್ರಗಳಲ್ಲಿ ನಿಪುಣರಾಗಿದ್ದದ್ದಲ್ಲದೆ ಕಾರ್ಯನಿರ್ವಾಹದಲ್ಲಿ ದಕ್ಷರಾಗಿದ್ದವರು. ಆ ದೊಡ್ಡ ದೇವಾಲಯದ ಮಂಟಪ ಪರಿಸರಗಳನ್ನು ಚೊಕ್ಕಟವಾಗಿರಿಸುವುದು, ತೋಟವನ್ನು ಸೊಂಪು ಮಾಡುವುದು, ದೇವರ ವಸ್ತ್ರಾಭರಣಗಳ ಜೋಪಾನ, ಪಾತ್ರೆ ಪದಾರ್ಥಗಳ ಜೋಪಾನ, ಕಾಲಕಾಲಕ್ಕೆ ಪೂಜೆ ಉತ್ಸವಗಳು-ಈ ಎಲ್ಲ ಕಾರ್ಯಗಳಲ್ಲಿಯೂ ಅವರು ವಿಚಕ್ಷಣರಾಗಿದ್ದರು. ಊರಿನ ಎಲ್ಲ ವರ್ಗಗಳ ಗೌರವ ವಿಶ್ವಾಸಗಳನ್ನೂ ಸಂಪಾದಿಸಿಕೊಂಡಿದ್ದರು; ಪ್ರಜಾನುರಾಗಿಗಳಾಗಿದ್ದರು.

ದೇವತಾಕ್ಷೇತ್ರ ಮಾಹಾತ್ಮ್ಯಂ ಅರ್ಚಕಸ್ಯ ತಪೋಬಲಾತ್ ॥

ಎಂಬ ಉಕ್ತಿಗೆ ಅವರು ನಿದರ್ಶನವಾಗಿದ್ದರು.

ನನ್ನ ದೇವತಾರ್ಚನೆ

ರಾಮಾಚಾರ್ಯರ ತಂದೆ ಸಂಜೀವಪ್ಪನವರೆಂದು ಜ್ಞಾಪಕ. ಅವರೂ ಹೆಸರುವಾಸಿಯಾದವರು. ಬಾಲ್ಯದಲ್ಲಿ ನಾನು ವೈಕುಂಠ ದ್ವಾದಶಿಯ ಉತ್ಸವದ ವೈಭವಕ್ಕೆ ಮನ ಸೋತವನಾಗಿ ನನ್ನ ಮನೆಯಲ್ಲಿ ಹಾಗೆ ದೇವರನ್ನಿಟ್ಟು ಅಲಂಕಾರ ಮಾಡಬೇಕೆಂದು ಪ್ರವೃತ್ತಿಯುಳ್ಳವನಾದೆ. ಅದಕ್ಕಾಗಿ ಒಂದು ದೊಡ್ಡ ವಿಗ್ರಹಬೇಕೆಂದು ನನ್ನ ಕಿರಿಯಜ್ಜನನ್ನು ಕಾಡಿಸುತ್ತಿದ್ದೆ. ನನ್ನ ಸ್ವಂತ ದೇವತಾರ್ಚನೆಗೆ ನನ್ನ ಅಜ್ಜಿ ಸೋದರ ಮಾವಂದಿರ ಪ್ರೋತ್ಸಾಹ. ಕೊನೆಗೆ ವಿದ್ವಾನ್ ಸಂಜೀವಪ್ಪನವರು ಒಂದು ಶ್ರೀ ಪರವಾಸುದೇವ ವಿಗ್ರಹವನ್ನು ನನಗೆ ತಂದುಕೊಟ್ಟರು. ಅದು ಬಲು ಮುದ್ದಾಗಿತ್ತು. ಅದಕ್ಕೆ ಅಲಂಕಾರ ಮಾಡಲು ನನ್ನ ತಾತಂದಿರು ನನಗೆ ಕೊಟ್ಟಿದ್ದ ಒಂದು ಸಣ್ಣ ಕಾಶ್ಮೀರ ಶಾಲಿನ ಕಸೂತಿ ಕೆಲಸದ ಅಂಚನ್ನು ಕತ್ತರಿಸಿ ಪರವಾಸುದೇವಮೂರ್ತಿಯನ್ನು ಸಿಂಗರಿಸಿದೆ. ನನ್ನ ತಂದೆಗೆ ಗುರುತು ಪತ್ತೆಯಾಗಿ ಗುದ್ದುಗಳ ಸಮಾರಾಧನೆಯ ಊಟವಾಯಿತು. ಆದರೆ ಮೊಂಡುಜೀವ. ನನಗೆ ಮಕ್ಕಳಾಗುವವರೆಗೂ ಆ ಪರವಾಸುದೇವರು ಆಗಾಗ ಕಣ್ಣಿಗೆ ಕಾಣಿಸುತ್ತಿದ್ದರು.

***

ಅರ್ಚಕವರ್ಗದಲ್ಲಿ ಪ್ರಸಿದ್ಧರಾದ ಇನ್ನೊಬ್ಬರು ಶ್ರೀನಿವಾಸಾಚಾರ್ಯರು ಅಥವಾ ಬಂಡೆಮನೆ ಶೀನಪ್ಪನವರು. ಇವರು ರಾಮಾಚಾರ್ಯರ ಅಣ್ಣ ಶ್ರೀನಿವಾಸಾಚಾರ್ಯರ ಮಾವಂದಿರು. ಶೀನಪ್ಪನವರು ಊರಿನ ಗಣ್ಯ ಮಹನೀಯರಲ್ಲೊಬ್ಬರು. ಇವರದು ವಿಶಾಲವಾದ ತೊಟ್ಟಿಯ ಮನೆ. ಅವರಿಗೆ ಜಮೀನೂ ಇತ್ತು. ಮನೆಯ ತುಂಬ ಜನವೂ ಅತಿಥಿಗಳೂ ಇರುತ್ತಿದ್ದರು. ಇವರ ಮೊಮ್ಮಗನೇ ಮೊನ್ನೆ ಮೊನ್ನೆ ತೀರಿಕೊಂಡ ಪಂಡಿತರತ್ನಂ ಆಗಮಿಕ ವಿದ್ವಾನ್ ವೆಂಕಟರಮಣಾಚಾರ್ಯರು.

ಇನ್ನಿಬ್ಬರು ಅರ್ಚಕರಲ್ಲಿ ಹನುಮಪ್ಪ ಎಂಬವರೊಬ್ಬರು, ವೆಂಕಟರಮಣಾಚಾರ್ಯರೆಂಬವರೊಬ್ಬರು ಹೆಸರುವಾಸಿಯಾದವರು. ಇಬ್ಬರೂ ಆಂಜನೇಯ ಸ್ವಾಮಿಯ ಕೈಂಕರ್ಯದಲ್ಲಿದ್ದದ್ದಲ್ಲದೆ ಪೇಟೆಯ ಕೋದಂಡರಾಮಸ್ವಾಮಿ ಗುಡಿ, ವಿಠಲೇಶ್ವರ ಗುಡಿಗಳಲ್ಲಿಯೂ ಪೂಜೆ ಮಾಡುತ್ತಿದ್ದರು. ಅವರೆಲ್ಲ ಸಂಭಾವಿತರು.

ಕೃಷ್ಣಪ್ಪನವರು

ಅರ್ಚಕವರ್ಗದ ಇನ್ನೊಬ್ಬರ ಸ್ಮರಣೆ ಮುಖ್ಯವಾದದ್ದು. ಅವರು ಕೃಷ್ಣಪ್ಪನವರು. ಒಳ್ಳೆಯ ವಿದ್ವಾಂಸರು. ಇವರ ಮಕ್ಕಳು ಶಾಮದಾಸರೆಂದು ಹರಿಕಥಾಕಾರರಾಗಿ ಪ್ರಸಿದ್ಧರಾದರು. [3] ಈ ಶಾಮದಾಸರು ಸಂಸ್ಕೃತಾಂಧ್ರ ಸಾಹಿತ್ಯಗಳಲ್ಲಿ ವೆಂಕಟರಾಮಶಾಸ್ತ್ರಿಗಳ ಶಿಷ್ಯರು. ವೆಂಕಟರಾಮಶಾಸ್ತ್ರಿಗಳೂ ಅರ್ಚಕ ಕೃಷ್ಣಪ್ಪನವರೂ [4] ಆಪ್ತಸ್ನೇಹಿತರು. ಪ್ರತಿದಿನವೂ ಮಧ್ಯಾಹ್ನಾತ್ಪರ ಮೂರು ನಾಲ್ಕು ಘಂಟೆಯ ವೇಳೆಗೆ ಅವರಿಬ್ಬರೂ ಕೃಷ್ಣಪ್ಪನವರ ಮನೆಯ ಮುಂದುಗಡೆಯ ಕಲ್ಲುಬೆಂಚಿನ ಮೇಲೆ ಪಕ್ಕಪಕ್ಕದಲ್ಲಿ ಕೂಡುತ್ತಿದ್ದರು. ಒಬ್ಬೊಬ್ಬರ ಮುಂದೆಯೂ ಎರಡೆರಡು ಜಾಯಿಕಾಯಿ ಪೆಟ್ಟಿಗೆಗಳಿರುತ್ತಿದ್ದವು. ಒಂದು ಪೆಟ್ಟಿಗೆಯ ತುಂಬ ಜೇಡಿಮಣ್ಣಿನ ಗೋಲಿಗಳು. ಒಬ್ಬೊಬ್ಬರು ಒಂದೊಂದು ಗೋಲಿಯನ್ನೆತ್ತಿಕೊಂಡು “ಶ್ರೀ ರಾಮಾಯ ನಮಃ” ಎಂದು ಹೇಳಿ ಅದನ್ನು ಇನ್ನೊಂದು ಪೆಟ್ಟಿಗೆಯೊಳಗೆ ಹಾಕುವರು. ಹೀಗೆ ಒಂದು ಸಾರಿ ಪೆಟ್ಟಿಗೆ ಖಾಲಿಯಾದರೆ ಒಂದು ಸಾವಿರ ರಾಮನಾಮೋಚ್ಚಾರಣೆಯೆಂದು ಲೆಕ್ಕ. ಈ ಜಪ ಹೀಗೆ ನಡೆಯುತ್ತಿರುವಾಗ ದಾರಿಯಲ್ಲಿ ಹೋಗುವ ಜನರೊಡನೆ ಕುಶಲ ಪ್ರಶ್ನೆ.

“ಕುಂಬಾರ ಗುಣಗಾ, ಚೆನ್ನಾಗಿದ್ದೀಯಾ?”

“ಅಗಸರ ಸುಬ್ಬಾ, ನಿನ್ನ ಕತ್ತೆಗೆ ಕಾಲು ವಾಸಿಯಾಯಿತೆ?”

“ಸುಣ್ಣಕಲ್ಲು ಮಾದ, ಕೈ ಸುಟ್ಟುಕೊಂಡೆಯಂತಲ್ಲಪ್ಪಾ?

ಆ ಜನರು ಜ್ಯೋತಿಷ್ಯ ಕೇಳುವರು; ಧರ್ಮಶಾಸ್ತ್ರ ಕೇಳುವರು. ಕೃಷ್ಣಪ್ಪನವರು ಎಲ್ಲರಿಗೂ ಸ್ನೇಹದಿಂದ ಉತ್ತರ ಹೇಳುವರು.

ಹೀಗೆ ಒಂದು ಕಡೆ ರಾಮಭಕ್ತಿ, ಇನ್ನೊಂದು ಕಡೆ ಲೋಕವಾತ್ಸಲ್ಯ-ಎರಡೂ ಒಟ್ಟೊಟ್ಟಿಗೆ ಸಾಗುತ್ತಿದ್ದವು ಆ ಹಿರಿಯರ ಜೀವನದಲ್ಲಿ.

೧೦ ಪ್ರಸಿದ್ಧ ವಿದ್ವಾಂಸರ ನೆಲೆ- ಗುಂಡೋಪಂತ್ ರಸ್ತೆ

ಬೆಂಗಳೂರಿನಲ್ಲಿ ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯಿಂದ ದೊಡ್ಡಪೇಟೆಗೆ ಹೋಗುವ ರಸ್ತೆಯೊಂದು ಮಾರ್ಕೆಟ್ಟಿನ ಉತ್ತರದ ಕಡೆ ಇದೆಯಷ್ಟೆ. ಆ ರಸ್ತೆಗೆ ದಿವಾನ್ ಗುಂಡೋಪಂತರ ಬೀದಿ ಎಂದು ಹೆಸರು.

'ದಿವಾನ್' ಎಂಬುದು ಕನ್ನಡದಲ್ಲಿ ಬಹುಕಾಲದಿಂದ ರೂಢಿಯಲ್ಲಿರುವ ಪದ. ಅದರ ಮೂಲ ಯಾವ ಭಾಷೆಯದೋ ನನಗೆ ತಿಳಿಯದು. ಮರಾಠಿಯಲ್ಲೂ ಹಿಂದಿಯಲ್ಲೂ ಆ ಮಾತು ಬಳಕೆಯಲ್ಲಿದೆ. ಅದರ ಬಳಕೆಯ ಅರ್ಥ "ಒಂದಾನೊಂದು ಕಛೇರಿಯ ಅಥವಾ ಸಂಸ್ಥೆಯ ಮುಖ್ಯ ಕಾರ್ಯಕರ್ತ" ಎಂದು; "ಆಫೀಸಿನ ಮುಖ್ಯಸ್ಥ" ಎಂದು. ಈ ಅರ್ಥವನ್ನು "ಮಠದ ದಿವಾನರು" ಎಂಬ ಪ್ರಯೋಗದಲ್ಲಿ ಕಾಣಬಹುದು. ಮೈಸೂರಿನಲ್ಲಿ ಚೀಫ್ ಕಮಿಷನರುಗಳ ಕಾಲದಲ್ಲಿ ಆಫೀಸ್ ಮ್ಯಾನೇಜರಾಗಿದ್ದವನಿಗೆ 'ದಿವಾನ್' ಎಂದು ವ್ಯವಹಾರ. ಉದಾ: ದಿವಾನ್ ಕೃಷ್ಣಂ ನಾಯಿಡು. ಹೈದರ್, ಟಿಪ್ಪುಸುಲ್ತಾನ್ ನವಾಬರ ಮಂತ್ರಿ ಪೂರ್ಣಯ್ಯನವರಿಗಿದ್ದ ಹುದ್ದೆಯೂ ಅಂಥಾದ್ದೇ. ಅದರಂತೆ ಕಮಿಷನರುಗಳ ಕಾಲದಲ್ಲಿ ಅವರ ಆಫೀಸಿನ ದಿವಾನರಾಗಿದ್ದವರು ಗುಂಡೋಪಂತರು. ಇವರ ವಿಷಯದಲ್ಲಿ ಎರಡು ಕಥೆಗಳನ್ನು ಕೇಳಿದ್ದೇನೆ.

1. ಅವರ ಕಾಲದಲ್ಲಿ ಸರಕಾರಕ್ಕೆ ಜನ ತೆರಬೇಕಾದ ಸುಂಕಗಳೂ ತೆರಿಗೆಗಳೂ ಹೆಚ್ಚಾದವಂತೆ. ಇದರಿಂದ ಹುಟ್ಟಿತು ಡೆಮಾಕ್ರಸಿಯ ಪದ್ಯ-ತೆಲುಗಿನಲ್ಲಿ:

   ಗುಂಡೋಪಂತುಣಿ ದಿವಾನಗಿರಿಲೋ ದಂಡಗಮೆಂಡಾಯ ॥

2. ಗುಂಡೋಪಂತರು ವೈಯಕ್ತಿಕವಾಗಿ ಉದಾರಿಗಳೆಂದು ತೋರುತ್ತದೆ. ಅವರಲ್ಲಿ ಒಬ್ಬ ಯಾಚಕನು ಹೋಗಿ ಬೇಡಿದಾಗ ಅವರು ಅರ್ಧ ರೂಪಾಯಿ-ಎಂಟಾಣೆ-ಕೊಟ್ಟರಂತೆ. ಯಾಚಕನು ತೃಪ್ತನಾಗದೆ-

   ಗುಂಡೋಪಂತುಲು ಅರ್ಧ ರೂಪಾಯ!

"ಗುಂಡೋಪಂತರ ರೂಪ ಅರ್ಧವಾಗಿಬಿಟ್ಟಿತು" ಎಂದನಂತೆ. ಒಡನೆಯೇ ಗುಂಡೋಪಂತರ ತೇಜಸ್ಸೂ ಸತ್ತ್ವವೂ ಉಡುಗಿಹೋಯಿತಂತೆ. ಆಗ ಅವರು

ಪುನರಾಲೋಚನೆ ಮಾಡಿ ಇನ್ನೊಂದರ್ಧ ರೂಪಾಯನ್ನು ಸೇರಿಸಿಕೊಟ್ಟರಂತೆ. ಆಗ ಯಾಚಕನು ತೃಪ್ತನಾಗಿ–

ಗುಂಡೋಪಂತುಲು ಹೋ ರೂಪಾಯ !

ಎಂದನಂತೆ. ಕೂಡಲೆ ಗುಂಡೋಪಂತರ ತೇಜಸ್ಸೂ ಸತ್ತ್ವವೂ ಹಿಂದಕ್ಕೆ ಬಂದು ಪೂರ್ಣವಾದವಂತೆ.

["ಗುಂಡೋಪಂತುಲು ಅರ್ಧರೂಪಾಯ!" ಎಂಬುದಕ್ಕೆ ಎರಡರ್ಥ" (೧) ಗುಂಡೋಪಂತರು ಕೊಡುವುದು ಅರ್ಧ ರೂಪಾಯನ್ನೆ? ಅವರ ಯೋಗ್ಯತೆ ಅಷ್ಟೇನೆ? (೨) ಗುಂಡೋಪಂತರ ಸ್ವರೂಪ (ಕಾಂತಿಸತ್ತ್ವ) ಅರ್ಧಕ್ಕಿಳಿಯಿತು.

"ಗುಂಡೋಪಂತುಲು ಹೋ ರೂಪಾಯ" ಎಂಬುದಕ್ಕೂ ಎರಡರ್ಥ: (೧) ಗುಂಡೋಪಂತರು ಒಂದು (ಅಖಂಡ) ರೂಪಕ್ಕೆ ಬಂದರು. (೨) ಗುಂಡೋಪಂತರು ಒಂದು ಗಟ್ಟಿ ರೂಪಾಯಿ ಕೊಟ್ಟರು.]

"ಪೂರ್ಣರೂಪಾಯ!" ಎಂಬ ಪಾಠಾಂತರವೂ ಉಂಟು.

ಕವಿವಾಕ್ಯದ ಪ್ರಭಾವವನ್ನು ತೋರಿಸುವುದು ಈ ದೃಷ್ಟಾಂತ. ಭವಭೂತಿ ಹೇಳಿದ್ದಾನಷ್ಟೆ-

ಕವೀನಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ ॥

ಕವಿಯ ಬಾಯಿಂದ ಹೊರಟ ಮಾತುಗಳನ್ನನುಸರಿಸಿ ಸಂಗತಿಗಳು ನಡೆಯುತ್ತವಂತೆ.

ಹೀಗೆ ಪ್ರಸಿದ್ಧರಾದವರು ದಿವಾನ್ ಗುಂಡೋಪಂತರು. ಅವರು ಮಾಧ್ವ ದೇಶಸ್ಥ ಬ್ರಾಹ್ಮಣರು. ಅವರ ಹೆಸರಿನಲ್ಲಿ ಗುಂಡೋಪಂತ ಅಗ್ರಹಾರವೆಂಬ ಅಗ್ರಹಾರವೂ ಬೆಂಗಳೂರಿನ ಸಮೀಪದಲ್ಲಿದೆ.

ಗುಂಡೋಪಂತರ ಮನೆ ಅವರ ಹೆಸರನ್ನು ಹೊತ್ತಿರುವ ಬೀದಿಯ ಉತ್ತರ ಶ್ರೇಣಿಯ ಮನೆಗಳ ಮಧ್ಯದಲ್ಲಿದೆ. ಆ ಕಟ್ಟಡದಲ್ಲಿ ಐರಿಷ್ ಪ್ರೆಸ್ ಎಂಬ ಮುದ್ರಣಾಲಯವೂ 'ಕರ್ಣಾಟಕ' ಪತ್ರಿಕೆಯ ಕಾರ್ಯಾಲಯವೂ ಕೆಲವರ್ಷ ನಡೆದವು. ತರುವಾಯ ಅದರಲ್ಲಿ ರಾಜಚರಿತ ವಿಶಾರದ ರಾವ್ ಬಹದ್ದೂರ್ ಹಯವದನರಾಯರ 'ಮೈಸೂರು ಇಕನಾಮಿಕ್ ರೆವ್ಯು' ಪತ್ರಿಕೆಯ ಕಾರ್ಯಾಲಯವಿತ್ತು. ಆ ತರುವಾಯ ಅದರಲ್ಲಿ ಬಾಳೆಕಾಯಿ ಮೊದಲಾದವುಗಳ ಮಂಡಿಗಳು ಪ್ರಾರಂಭವಾದವು.

ಸದಾಶಿವರಾಯರ ಗಾಯನ

ಗುಂಡೋಪಂತರ ಕಾಲದಲ್ಲಿ ಈ ಕಟ್ಟಡದಲ್ಲಿ ಪೂಜೆ ಪುರಸ್ಕಾರಗಳೂ ಬ್ರಾಹ್ಮಣ ಸಂತರ್ಪಣೆಗಳೂ ವಿಶೇಷವಾಗಿ ನಡೆಯುತ್ತಿದ್ದವಂತೆ. ಈ ಕಟ್ಟಡದ ಮುಂದುಗಡೆಯ ಮಹಡಿಯ ಮೇಲಿನ ಹಜಾರದಲ್ಲಿ 'ಕರ್ಣಾಟಕ' ಪತ್ರಿಕೆಯ ಕಛೇರಿ ಇದ್ದ ಕಡೆ-ಒಂದು ಸಾರಿ ಭಾರಿ ಸಂಗೀತ ಕಛೇರಿಯಾಯಿತೆಂದು ಭಾರತಿ ಸಂಪಂಗಿರಾಮಯ್ಯನವರು ನನಗೆ ಹೇಳಿದರು. ಆ ದಿನ ಹಾಡಿದವರು ಪ್ರಸಿದ್ಧ ವಾಗ್ಗೇಯಕಾರರಾದ ಮೈಸೂರು ಸದಾಶಿವರಾಯರಂತೆ. ಸಭೆ ತುಂಬುಸಭೆ. ಆ ಹಜಾರದ ಪೂರ್ವದ ಕಡೆಯ ಗೋಡೆಯ ಗೂಡಿನಲ್ಲಿ ಶ್ರೀಕೃಷ್ಣಪಟ ಶೋಭಿಸುತ್ತಿದ್ದದ್ದನ್ನು ನಾನು ನೋಡಿದ್ದೇನೆ. ಅದರಲ್ಲಿ ರಾಧಾ ರುಕ್ಮಿಣೀಸಮೇತನಾದ ಶ್ರೀ ಕೃಷ್ಣಸಾರ್ವಭೌಮನು ಉಭಯಭಾರ್ಯೆಯರ ಹೆಗಲ ಮೇಲೆ ಕೈಯಾಡಿಸುತ್ತಿರುವಂತಿತ್ತು. ಒಳ್ಳೆ ರಾಜಾವರ್ತಿ ಬಣ್ಣದ ಕೆಲಸ. ಪಟದ ಸೈಜು ನಾಲ್ಕೈದಡಿ ಎತ್ತರ. ನಾಲ್ಕೈದಡಿ ಅಗಲ. ಪಟಕ್ಕೆ ಗಾಜು ಹಾಕಿ, ಮುಚ್ಚುವ ಬಾಗಿಲು ಇತ್ತು. ಪೂಜೆ ಭಜನೆಗಳ ಕಾಲದಲ್ಲಿ ಬಾಗಿಲುಗಳನ್ನು ತೆರೆದು, ಸಿಂಗರಿಸುತ್ತಿದ್ದರು. ಸದಾಶಿವರಾಯರು ಈ ಪಟದ ಮುಂದೆ ಕುಳಿತು ಹಾಡುತ್ತ

ನರಸಿಂಹುಡು ಉದಯಿಂಚೆನು

ಎಂಬ ಕೀರ್ತನೆಯನ್ನು ಆರಂಭಿಸಿದರು. ಸಭೆಯೆಲ್ಲ ಪುಲಕಾಂಕಿತವಾಯಿತು. ಸದಾಶಿವರಾಯರಿಗೆ ಆವೇಶವೇರಿತು.

ನೀದು ಪರಮಾದ್ಭುತಮೈನ

ಎಂಬ ಚರಣವನ್ನು ಹೇಳುವಾಗ ಉಚ್ಚಸ್ಥಾಯಿಯಲ್ಲಿ ಭಗವಂತನನ್ನು ಕೀರ್ತಿಸಲಾರಂಭಿಸಿದರಂತೆ. ಪಟದ ಮುಂದೆ ಇದ್ದ ದೀಪಗಳ ಉರಿ ಭಗ್ಗೆಂದು ಮೇಲಕ್ಕೆದ್ದಿತಂತೆ. ಸಭಿಕರು ವಿಸ್ಮಯದಿಂದ ನೋಡುತ್ತಿದ್ದಂತೆಯೇ ಪಟದ ಗಾಜುಗಳು ಬಿರಿದು ಘಟ್ಟೆಂದು ಶಬ್ದವಾಯಿತಂತೆ. ಜನಕ್ಕೆಲ್ಲ ಆಶ್ಚರ್ಯ ಮಾತ್ರವಲ್ಲದೆ ಭಯ ಭಕ್ತಿಗಳ ಅನುಭವವೂ ಆಯಿತು. ಸದಾಶಿವರಾಯರು ಎದ್ದು ಪಟಕ್ಕೆ ಮಂಗಳಾರತಿ ಮಾಡಿ ಮಂಗಳ ಹಾಡಿದರಂತೆ.

ಸಿದ್ದಿಕಟ್ಟೆ

ಗುಂಡೋಪಂತರ ಮನೆಗೆ ಪೂರ್ವದ ಕಡೆ ಒಂದೆರಡು ಮನೆ ಬಿಟ್ಟು ಪೂರ್ಣಯ್ಯನವರ ಸತ್ರವೂ ಅಲ್ಲೊಂದು ಬಾವಿಯೂ ಗುಡಿಯೂ ಇವೆ. ವಾಚಕರು ಇದನ್ನೂ ದೃಷ್ಟಿಯಲ್ಲಿರಿಸಿಕೊಳ್ಳಬೇಕು.

ವಿದ್ಯಾನಿಧಿ ವಾಸುದೇವಶಾಸ್ತ್ರಿಗಳ ಮನೆ ಗುಂಡೋಪಂತರ ಮನೆಗೂ ಪೂರ್ಣಯ್ಯನವರ ಸತ್ರಕ್ಕೂ ನಡುವಣದು. ಈ ಪ್ರದೇಶಕ್ಕೆ ಸಿದ್ದಿಕಟ್ಟೆ ಎಂದು ಹೆಸರು. ಅಲ್ಲಿ ಆ ಕಾಲದಲ್ಲಿ ಮಾಧ್ವಬ್ರಾಹ್ಮಣ, ಸ್ಮಾರ್ತಬ್ರಾಹ್ಮಣರ ಕೇರಿಗಳಿದ್ದವು. ಈ ಕಾರಣದಿಂದಲೂ ಮೇಲೆ ಹೇಳಿದ ಸತ್ರಕ್ಕೆ ಪ್ರಾಶಸ್ತ್ಯವುಂಟಾಗಿತ್ತು.

ವಾಸುದೇವಶಾಸ್ತ್ರಿಗಳ ಮನೆ ಸ್ಮಾರ್ತ ಮಂಡಲಿಯ ಕೇಂದ್ರಸ್ಥಾನ. ಪೂರ್ಣಯ್ಯನವರ ಸತ್ರ ಮಾಧ್ವಮಂಡಲಿಯ ರಾಜಧಾನಿ. ಎರಡು ಕಡೆಗಳಲ್ಲೂ ವಿದ್ಯಾರ್ಥಿಗಳೂ ಅಶನಾರ್ಥಿಗಳೂ ಭರ್ತಿಯಾಗಿದ್ದರು.

ಲಡಾಯಿ

ಸ್ಮಾರ್ತ ಯುವಕರೂ ಮಾಧ್ವ ಯುವಕರೂ ಹೀಗೆ ಪಕ್ಕಪಕ್ಕದಲ್ಲಿದ್ದದ್ದು ಎರಡು ಮಡಕೆಗಳನ್ನು ಒಂದು ಹಗ್ಗದ ಎರಡು ತುದಿಗಳಿಗೆ ಕಟ್ಟಿ ಡಿಕ್ಕಿ ಹೊಡಿಸುವಂತಾಗಿತ್ತು. ಇಬ್ಬರಿಗೂ ದಿನದಿನವೂ ವಾಗ್ವಾದ. "ಶಂಕರಾಚಾರ್ಯರು ಹೀಗೆ ಮಾಡಿದರು" ಎಂದು ಒಬ್ಬರು ಹೇಳಿದರೆ "ಮಧ್ವಾಚಾರ್ಯರು ಹಾಂಗೆ ಮಾಡಿದರು" ಎಂದು ಇನ್ನೊಬ್ಬರು ಅಂಬೋಣ. "ಶಂಕರಾಚಾರ್ಯರು ಹೇಳಿದ್ದನ್ನು ಮಧ್ವಾಚಾರ್ಯರು ಹೀಗೆ ಖಂಡನೆ ಮಾಡಿದರು" ಎಂದು ಉತ್ತರ. "ಮಧ್ವಾಚಾರ್ಯರು ಖಂಡಿಸಿದ್ದನ್ನು ಸುರೇಶ್ವರಾಚಾರ್ಯರು ಹಾಗೆ ಮಂಡಿಸಿದರು" ಎಂದು ಪ್ರತಿತರ್ಕ. ಈ ತರ್ಕ ಪ್ರತಿತರ್ಕಗಳು ಆಗಾಗ ವಿಪರೀತಕ್ಕೆ ಬರುತ್ತಿದ್ದವು. ಒಂದು ದಿನ ತರ್ಕದ ಅತಿರೇಕದಲ್ಲಿ ಉಭಯ ಪಕ್ಷಗಳಿಗೂ ತಾಳ್ಮೆ ತಪ್ಪಿ ಕೈ ಕೈ ಸೇರಿತು. ಹೊಡೆದಾಟವಾಯಿತು. ಯಾರೋ ಹೋಗಿ ಪೊಲೀಸರನ್ನು ಕರೆತಂದರು. ಪೊಲೀಸಿನವರು ಉಭಯಪಕ್ಷಗಳವರನ್ನೂ ಹಿಡಿದು ಲಾಕ್‌ಅಪ್‌ಗೊಯ್ದು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಫಿರ್ಯಾದು ಹಾಕಿದರು. ಆಗ ಸಿಟಿ ಮ್ಯಾಜಿಸ್ಟ್ರೇಟರಾಗಿದ್ದವರು ವೈದ್ಯನಾಥಯ್ಯರ್ ಎಂಬವರಂತೆ. ಅವರು ಫಿರ್ಯಾದನ್ನು ಕೇಳಿ ಸೌಮ್ಯದಿಂದ ತಪಶೀಲು ವಿಚಾರಿಸಿಕೊಂಡರಂತೆ.

ಅವರು ಕೈದಿಗಳನ್ನು ಕುರಿತು ಹೇಳಿದರು:

"ಏನ್ರಯ್ಯಾ! ಶಂಕರಾಚಾರ್ಯರಿದ್ದದ್ದು ಯಾವಾಗ. ಎಲ್ಲಿ? ಮಧ್ವಾಚಾರ್ಯರಿದ್ದದ್ದು ಯಾವಾಗ, ಎಲ್ಲಿ? ನಿಮಗೆ ತಿಳಿದಿದೆಯೆ?"

ಉತ್ತರ; "ನಮಗೆ ತಿಳಿಯದು."

ವೈ: "ಕಾಲ ದೇಶ ಪರಿಜ್ಞಾನವಿಲ್ಲದೆ ಪುಂಡಾಟಕ್ಕೆ ಹೋಗಿದ್ದೀರಲ್ಲ! ಒಳ್ಳೆಯದು. ನೀವು ಚಿಕ್ಕ ವಯಸ್ಸಿನವರಾದದ್ದರಿಂದ ನಿಮ್ಮನ್ನು ಕ್ರೂರವಾಗಿ ದಂಡಿಸುವುದಕ್ಕೆ ನನಗೆ ಇಷ್ಟವಿಲ್ಲ. ನೀವುಗಳು ಇನ್ನು ಮುಂದೆ ವಿಹಿತ ರೀತಿಯಲ್ಲಿರುವಂತೆ ಮುಚ್ಚಳಿಕೆ ಬರೆದುಕೊಟ್ಟರೆ ನಿಮ್ಮನ್ನು ಖುಲಾಸೆ ಮಾಡಿಸುವುದಾಗುತ್ತದೆ."

ಕೈದಿಗಳು ಸಂತೋಷದಿಂದ ಒಪ್ಪಿದರು. ಹೀಗೆ ಒಂದು ವರ್ಷದ ವಾಯಿದೆಯ ಮುಚ್ಚಳಿಕೆಯನ್ನು (Good behaviour bond) ಬರೆದುಕೊಟ್ಟ ಮೇಲೆ ಆ ವಿದ್ಯಾರ್ಥಿಗಳಿಗೆ ಬಿಡುಗಡೆಯಾಯಿತು. ಮತ್ತೆ ಅಂಥ ಪುಂಡಾಟ ತಲೆಯೆತ್ತಲಿಲ್ಲ.

೧೧ ವಾಸುದೇವಶಾಸ್ತ್ರಿಗಳ ಶಿಷ್ಯವರ್ಗ

ವಾಸುದೇವಶಾಸ್ತ್ರಿಗಳು ದೊಡ್ಡಬಳ್ಳಾಪುರದವರೆಂದು ಕೇಳಿದ್ದೇನೆ. ಅವರಿಗೆ ಶ್ರೀ ಮನ್ಮಹಾರಾಜರು 'ವಿದ್ಯಾನಿಧಿ' ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದರು. ಮೈಸೂರಿನ 'ವಿದ್ಯಾನಿಧಿ' ಶ್ರೇಣಿಯಲ್ಲಿ ಬಹುಶಃ ಅವರೇ ಪ್ರಥಮರು. ಅವರಿಗೆ 'ಜಗನ್ಮಿಥ್ಯಾ ವಾಸು ದೇವಶಾಸ್ತ್ರಿ' ಗಳೆಂದೂ ಪ್ರಖ್ಯಾತಿ ಬಂದಿತ್ತು. ಶೃಂಗೇರಿ ಜಗದ್ಗುರುಗಳ ಸನ್ನಿಧಿಯ ವಿದ್ವತ್ಪರಿಷತ್ತಿನಲ್ಲಿ ವಾಕ್ಯಾರ್ಥ ನಡೆದಾಗ ವಾಸುದೇವಶಾಸ್ತ್ರಿಗಳವರು "ಬ್ರಹ್ಮ ಸತ್ಯಂ ಜಗನ್ಮಿಥ್ಯಾ" ಎಂಬ ಅದ್ವೈತ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿ ಜಗನ್ಮಿಥ್ಯಾವಾದವು ಪ್ರಮಾಣವತ್ತಾದದ್ದೆಂದು ಶ್ರುತಿ ಯುಕ್ತಿಗಳಿಂದ ಸಾಧಿಸಿದರು. ಆಗ ಅವರು ತೋರಿದ ಪಾಂಡಿತ್ಯವನ್ನೂ ವಾಗ್ವೈಖರಿಯನ್ನೂ ಜಗದ್ಗುರುಗಳು ಮೆಚ್ಚಿಕೊಂಡು "ಜಗನ್ಮಿಥ್ಯಾ ವಾಸುದೇವಶಾಸ್ತ್ರಿಗಳು" ಎಂದು ಪ್ರಶಂಸೆ ಮಾಡಿದರಂತೆ.

ಶಿಷ್ಯಸಮುದಾಯ

ವಾಸುದೇವಶಾಸ್ತ್ರಿಗಳು ತರ್ಕ ವ್ಯಾಕರಣ ಮೀಮಾಂಸಾ ಶಾಸ್ತ್ರಗಳಲ್ಲಿ ಅಪ್ರತಿಮರಾಗಿದ್ದರು. ಬೆಂಗಳೂರಿನಲ್ಲಿ ಪ್ರಸಿದ್ಧರಾದ ಪಂಡಿತರಲ್ಲಿ ಬಹುಮಂದಿ ಅವರ ಶಿಷ್ಯರು. ಅವರಲ್ಲಿ ಒಬ್ಬರಿಬ್ಬರನ್ನು ಕಂಡು ಮಾತನಾಡಿದ ಭಾಗ್ಯ ನನಗೆ ದೊರೆತಿತ್ತು. ಅವರಲ್ಲಿ ಮುಖ್ಯರು ಸಾಗ್ಗೆರೆ ನಾರಾಯಣಶಾಸ್ತ್ರಿಗಳು, ದೇವನಗೊಂದಿ ನಾರಾಯಣಶಾಸ್ತ್ರಿಗಳು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ಸೊಂಡೇಕೊಪ್ಪದ ವೆಂಕಟೇಶಶಾಸ್ತ್ರಿಗಳು. ಬಹುಮಂದಿಯ ಹೆಸರುಗಳು ನನಗೆ ಈಗ ಮರೆತುಹೋಗಿವೆ. ವಾಸುದೇವಶಾಸ್ತ್ರಿಗಳ ಶಿಷ್ಯಸಮುದಾಯ ವಿಸ್ತಾರವಾದದ್ದು.

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು

ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಕನ್ನಡ ಸಾಹಿತ್ಯಕ್ಕೆ ಸೇವೆಮಾಡಿದ್ದಾರೆ. ಜೈಮಿನಿ ಭಾರತ ಮೊದಲಾದ ಕನ್ನಡ ಗ್ರಂಥಗಳಿಗೆ ಪ್ರತಿಪದ ಟೀಕಾತಾತ್ಪರ್ಯಗಳನ್ನು ರಚಿಸಿದ್ದಾರೆ. ಭಗವದ್ಗೀತೆ, ವಿವೇಕ ಚೂಡಾಮಣಿ, ರಘುವಂಶ ಮುಂತಾದ ಸಂಸ್ಕೃತ ಗ್ರಂಥಗಳಿಗೆ ಟೀಕಾ ತಾತ್ಪರ್ಯಗಳನ್ನು ಬರೆದು ಪ್ರಕಟಿಸಿದ್ದಾರೆ. ಕನ್ನಡದಲ್ಲಿ 'ದೇವರ ಸೇವೆ' ಎಂಬ ಪುಸ್ತಕವನ್ನೂ, 'ಹನೂಮನ್ನಾಮಾಮೃತ' ಎಂಬ ಭಜನೆಯ ಪುಸ್ತಕವನ್ನೂ, ಇನ್ನೂ ಅನೇಕ ಸಣ್ಣ ಪುಸ್ತಕಗಳನ್ನೂ ಬರೆದಿದ್ದಾರೆ. ಆ ಕಾಲದಲ್ಲಿ "ಶುದ್ಧ ಬ್ರಹ್ಮ ಪರಾತ್ಪರರಾಮ" ಜಾತಿಯ ಭಜನೆಗಳು ಜನಪ್ರಿಯವಾಗಿದ್ದವು. ಅದನ್ನನುಸರಿಸಿ ದೊಡ್ಡಬೆಲೆ ಶಾಸ್ತ್ರಿಗಳು ಶಿವಭಜನೆ ಹನೂಮದ್ಭಜನೆ ಮೊದಲಾದ ದೇವತಾ ಭಜನೆಯ ಪುಸ್ತಕಗಳನ್ನೂ ಬರೆದಿದ್ದಾರೆ. ದೊಡ್ಡಬೆಲೆ ಶಾಸ್ತ್ರಿಗಳು ಒಳ್ಳೆಯ ವಾಗ್ಮಿ. ವಾಕ್ಯಾರ್ಥದಲ್ಲಿ ಧೈರ್ಯಶಾಲಿ.

ನಾರಾಯಣಶಾಸ್ತ್ರಿಗಳವರು ಶ್ರೀ ಶಿವಗಂಗಾ ಸಂಸ್ಥಾನದ ಆಶ್ರಯದಲ್ಲಿ 'ಶಾರದಾ' ಎಂಬ ಮಾಸಪತ್ರಿಕೆಯನ್ನೂ, ಕೆಲಕಾಲದ ತರುವಾಯ 'ವಿದ್ಯಾನಂದ' ಎಂಬ ಪತ್ರಿಕೆಯನ್ನೂ ನಡಸಿದರು. ಆ ಪತ್ರಿಕೆಗಳಲ್ಲಿಯೇ ಮೇಲೆ ಹೇಳಿದ ಗೀತೆ, ವಿವೇಕ ಚೂಡಾಮಣಿ ಗ್ರಂಥಗಳು ಮೊದಲು ಪ್ರಕಟವಾದದ್ದು. ಉಪಯುಕ್ತ ಗ್ರಂಥಗಳ ಜೊತೆಗೆ ಶಾಸ್ತ್ರಪ್ರಸಂಗಗಳನ್ನೂ ಸಾಹಿತ್ಯದ ಪ್ರಕರಣಗಳನ್ನೂ ಪ್ರಕಟಪಡಿಸುತ್ತಿದ್ದರು. ಅವರ ಲೇಖನಶೈಲಿ ಸಾಮಾನ್ಯಜನರನ್ನು ಉದ್ದೇಶಿಸಿದ್ದಾಗಿ, ಸರಳವಾಗಿತ್ತು.

ದೇವನಗೊಂದಿ ನಾರಾಯಣಶಾಸ್ತ್ರಿಗಳು

ದೇವನಗೊಂದಿ ನಾರಾಯಣಶಾಸ್ತ್ರಿಗಳವರಲ್ಲಿ ನಾನು ಕೊಂಚಕಾಲ ತರ್ಕಶಾಸ್ತ್ರ ಪಾಠ ಮಾಡುತ್ತಿದ್ದೆ. ಅವರಿಗೆ ಅನುಪಪತ್ತಿ ಹೆಚ್ಚಾಗಿದ್ದದ್ದು ನನ್ನ ತಿಳಿವಳಿಕೆಗೆ ಬಂದಿತು. ನಾನು ಅರಮನೆಯ ಕಂಟ್ರೋಲರ್ ಬಿ. ರಾಮಕೃಷ್ಣರಾಯರಿಗೆ ಈ ವಿದ್ವಾಂಸರ ಸಂಗತಿಯನ್ನು ತಿಳಿಸಿ ಪತ್ರ ಬರೆದೆ. ನಾಲ್ಕೈದು ತಿಂಗಳು ಕಳೆಯಿತು. ಯಾವ ಉತ್ತರವೂ ಬರಲಿಲ್ಲ. ಒಂದು ದಿನ ಮಧ್ಯಾಹ್ನ ನಾನು ಗುಂಡೋಪಂತ್ ಬೀದಿಯಲ್ಲಿದ್ದ 'ಕರ್ಣಾಟಕ' ಪತ್ರಿಕೆಯ ಕಾರ್ಯಾಲಯದಲ್ಲಿ ಏನೋ ಕೆಲಸ ಮಾಡುತ್ತ ಕುಳಿತಿದ್ದೆ. ಅಲ್ಲಿಗೆ ದೇವನಗೊಂದಿ ಶಾಸ್ತ್ರಿಗಳವರು ದಯಮಾಡಿಸಿದರು. ಕೈಯಲ್ಲಿ ಒಂದು ಲಕ್ಕೋಟೆ ಹಿಡಿದು ನಿಂತಿದ್ದರು. ನಾನು ಹೇಳಿದೆ:

ನಾನು: "ಕೂಡಬಹುದಲ್ಲ?"

ಶಾ: (ತೆಲುಗಿನಲ್ಲಿ) "ನೀವು ನನಗಿಂತ ಚಿಕ್ಕವರು. ನಾನು ನಿಮಗೆ ನಮಸ್ಕಾರ ಮಾಡಬೇಕೆಂದೆನ್ನಿಸುತ್ತದೆ."

ಅವರ ಮುಖ ಆಗ ದೈನ್ಯವನ್ನು ತಾಳಿತ್ತು. ಕಣ್ಣಿನಲ್ಲಿ ನೀರು ಬರುವಂತಿತ್ತು. ನಾನು ಅವರ ನಮಸ್ಕಾರ ಪ್ರಯತ್ನವನ್ನು ತಡೆದು ಕೇಳಿದೆ:

"ಏನು ಸಮಾಚಾರ?"

ಅವರು ಲಕ್ಕೋಟೆಯನ್ನು ನನ್ನ ಕೈಯಲ್ಲಿಟ್ಟು ನೋಡಹೇಳಿದರು. ಅದರಲ್ಲಿ ಅರಮನೆಯಿಂದ ಬಂದ ಕಾಗದವಿತ್ತು. "ವಿದ್ವಾನ್ ದೇವನಗೊಂದಿ ನಾರಾಯಣಶಾಸ್ತ್ರಿಗಳವರನ್ನು ಅರಮನೆಯ ವಿದ್ವಾಂಸರನ್ನಾಗಿ ನಿಯಮಿಸಿದೆ." ನಾನು ರಾಮಕೃಷ್ಣರಾಯರನ್ನು ಮನಸಾ ವಂದಿಸಿ ಶಾಸ್ತ್ರಿಗಳನ್ನು ಕೇಳಿದೆ:

ನಾನು: "ನಿಮಗೆ ಇದರಿಂದ ಏನು ಪ್ರಯೋಜನ?"

ಶಾ: "ತಿಂಗಳು ತಿಂಗಳಿಗೆ ಐದು (ಅಥವಾ ಆರು) ರೂಪಾಯಿ ಬರುತ್ತದೆ."

ನಾನು: "ಅಷ್ಟೇನೆ? ಇದಕ್ಕೆ ಇಷ್ಟು ದೊಡ್ಡ ರಗಳೆಯೇನು?"

ಅವರು ಆಗ ಹೇಳಿದ್ದರಲ್ಲಿತ್ತು ಸ್ವಾರಸ್ಯ:

"ಸ್ವಾಮಿ, ನಿಮಗಿನ್ನೂ ಚಿಕ್ಕ ವಯಸ್ಸು. ನಮ್ಮ ಪರಿಸ್ಥಿತಿ ಎಷ್ಟು ಹೀನವಾಗಿದೆಯೆಂಬುದನ್ನು ನಿಮ್ಮಂಥವರು ತಿಳಿದುಕೊಳ್ಳಬೇಕು. ನಾನು ಸಾಗ್ಗೆರೆ ನಾರಾಯಣಶಾಸ್ತ್ರಿಗಳವರಲ್ಲಿ ಶಿಷ್ಯನಾಗಿದ್ದೆ. ಒಂದು ದಿನ ಮಧ್ಯಾಹ್ನ ನಾನು ಅವರ ಮನೆಗೆ ಹೋದೆ. ಅವರು ಮೊಣಕಾಲ ಮೇಲೆ ಕೈಯಿಟ್ಟು ಕೈಯಲ್ಲಿ ತಲೆಯಿಟ್ಟು ಚಿಂತಾಕ್ರಾಂತರಾಗಿ ಕುಳಿತಿದ್ದರು. ತಲೆ ಎತ್ತಿ ನನ್ನ ಕಡೆ ನೋಡಲಿಲ್ಲ. ಅವರು ಯಾವಾಗಲೂ ನನ್ನನ್ನು ಕಂಡ ಕೂಡಲೆ 'ಬಾಪ್ಪಾ' ಎನ್ನುತ್ತಿದ್ದರು. ಆ ಹೊತ್ತು ನಾನು ಅಲ್ಲಿ ಹೋಗಿದ್ದದ್ದೇ ಅವರಿಗೆ ತಿಳಿಯಲಿಲ್ಲ. ಅವರ ಮನಸ್ಸು ಎಲ್ಲಿಯೋ ಇತ್ತು. ನಾನು ಒಂದೆರಡು ನಿಮಿಷ ನೋಡಿ ಬಳಿಕ 'ಶಾಸ್ತ್ರಿಗಳೆ, ಏನು-ತಲೆನೋವೆ?' ಎಂದು ಕೇಳಿದೆ. ಅವರು ಆಗ ತಲೆಯೆತ್ತಿ ನನ್ನ ಕಡೆ ನೋಡಿ ಕೊಂಚ ನಕ್ಕು, 'ಹೌದಪ್ಪಾ, ತಲೆನೋವು. ಈ ಹೊತ್ತು ನನಗೆ ಬಂದಿದೆ, ನಾಳೆ ನಿನಗೂ ಕಾದಿದೆ' ಎಂದರು. 'ಅದೇನು ಹಾಗೆನ್ನುತ್ತೀರಿ?' ಎಂದು ನಾನು ಕೇಳಿದೆ. ಅವರು ಹೇಳಿದರು: 'ನಾನು ವಾಸುದೇವಶಾಸ್ತ್ರಿಗಳವರಲ್ಲಿ ಹನ್ನೆರಡು ವರ್ಷ ತರ್ಕಪಾಠ ಮಾಡಿದೆ. ಅದರ ಫಲ ಈ ತಲೆನೋವು. ನಾಳಿದ್ದು ನನ್ನ ತೀರ್ಥರೂಪರ ಶ್ರಾದ್ಧ. ಅದಕ್ಕೆ ಬೇಕಾದ ಸಾಮಗ್ರಿಗೆ ಏನು ಮಾಡಬೇಕು ಎಂದು ಚಿಂತೆ ಮಾಡುತ್ತಿದ್ದೆ. ನನಗೆ ಸಾಲಕೊಡುತ್ತಿದ್ದ ಅಂಗಡಿಯವರು ಎಷ್ಟು ಕೊಡಬಹುದೋ ಅಷ್ಟನ್ನು ನನಗೆ ಕೊಟ್ಟು ಮುಗಿಸಿದ್ದಾರೆ. ಇನ್ನು ಅವರನ್ನು ಸಾಲ ಕೇಳುವ ಹಾಗಿಲ್ಲ. ಈಗ ಎಲ್ಲಿಗೆ ಹೋಗಬೇಕು ಎಂಬುದು ಯೋಚನೆ. ತರ್ಕಕ್ಕೆ ಬದಲಾಗಿ ಒಂದು ಗುಮಾಸ್ತೆ ಕೆಲಸಕ್ಕೋ ಸ್ಕೂಲ್ ಮೇಷ್ಟರ ಕೆಲಸಕ್ಕೋ ಸೇರಿಕೊಂಡಿದ್ದಿದ್ದರೆ ಇಷ್ಟು ತಲೆನೋವು ಬರುತ್ತಿರಲಿಲ್ಲ. ಇದನ್ನು ನೀನು ಈಗಲಾದರೂ ತಿಳಿದುಕೋ. ತರ್ಕಶಾಸ್ತ್ರದ ಪ್ರಯೋಜನ ಇಷ್ಟೆ. ಮಗು ಸತ್ತಿತು, ಅದರ ತೊಟ್ಟಿಲು ಬಟ್ಟೆಯ ವಾಸನೆ ಉಳಿಯಿತು. ಶಾಸ್ತ್ರಾಧ್ಯಯನ ಮುಗಿಯಿತು. ತಲೆನೋವು ಉಳಿಯಿತು."

"ನನ್ನ ಪಾಡೂ ಅಷ್ಟೆ. ಈಗ ಈ ಅರಮನೆಯ ಸಂಬಳವನ್ನು ನನಗೆ ನೀವು ಕೊಡಿಸಿದ್ದರಿಂದ ಒಪ್ಪತ್ತಿನ ಗಂಜಿಯಾದರೂ ನನಗೆ ಖಂಡಿತವಾಯಿತು. ಇದಕ್ಕಾಗಿ ಪರಮೇಶ್ವರನಿಗೆ ಸಹಸ್ರ ನಮಸ್ಕಾರ!"

ದೇವನಗೊಂದಿ ನಾರಾಯಣಶಾಸ್ತ್ರಿಗಳು ತುಂಬ ಮರ್ಯಾದಸ್ಥರು, ಆಚಾರನಿಷ್ಠರು, ಗಟ್ಟಿಯಾಗಿ ಮಾತನಾಡುವವರಲ್ಲ. ನಾನು ಅವರನ್ನು ಕೊಂಚ ಲಘುವಾಗಿ ಹಾಸ್ಯ ಮಾಡುತ್ತಿದ್ದುದುಂಟು: "ತಾರ್ಕಿಕರು ವಾಚಾಳಿಗಳು, ಬಾಯಿಬಡುಕರು. ಅವರ ಕೀರ್ತಿ ಹೀಗಿರುವಾಗ ತರ್ಕಶಾಸ್ತ್ರಪಾರಂಗತರಾಗಿರುವ ನೀವು ಹೀಗೆ ಸಭ್ಯರಾಗಿದ್ದೀರಲ್ಲ!"

***

ವಿದ್ಯಾನಿಧಿ ವಾಸುದೇವಶಾಸ್ತ್ರಿಗಳ ಮನೆ ದೊಡ್ಡದು: ಗುಂಡೋಪಂತ್ ಬೀದಿಯಿಂದ ಹಳೆತರಗುಪೇಟೆಯವರೆಗೂ ಇತ್ತು. ಅಲ್ಲಿ ಹತ್ತಾರು ಮಂದಿ ವಿದ್ಯಾರ್ಥಿಗಳಿಗೆ ವಾಸುದೇವಶಾಸ್ತ್ರಿಗಳು ಭೋಜನ ಮಾಡಿಸಿ ವಿದ್ಯಾದಾನ ಮಾಡುತ್ತಿದ್ದರು.

ಸಾಮಾನ್ಯವಾಗಿ ಅವರು ತರ್ಕ, ವ್ಯಾಕರಣ, ಪೂರ್ವಮೀಮಾಂಸಾ, ಉತ್ತರ ಮೀಮಾಂಸಾ, ಜ್ಯೋತಿಷ-ಈ ಶಾಸ್ತ್ರಗಳನ್ನು ಪಾಠ ಹೇಳುತ್ತಿದ್ದರು. ಅವರಲ್ಲಿ ಶಿಷ್ಯರಾಗಿದ್ದವರೆಲ್ಲ ಒಳ್ಳೆಯ ಪಂಡಿತರೆಂದು ಹೆಸರುವಾಸಿಯಾದರು.

ವಾಸುದೇವಶಾಸ್ತ್ರಿಗಳು ವೆಲನಾಡು ಎಂಬ ಪಂಗಡಕ್ಕೆ ಸೇರಿದವರು. ಅವರ ಬಂಧುಗಳಲ್ಲಿ ಪ್ರಸಿದ್ಧ ಮುದ್ರಣಾಲಯ ಪ್ರಕಟನಾಲಯಗಳ ಸ್ವತ್ತುಗಾರರಾದ ವಿ. ಬಿ. ಸುಬ್ಬಯ್ಯನವರು ಮುಖ್ಯರು (ಈಗಲೂ ವಿ. ಬಿ. ಸುಬ್ಬಯ್ಯ ಅಂಡ್ ಸನ್ಸ್ ಎಂಬ ಸಂಸ್ಥೆ ಅಭಿವೃದ್ಧಿ ಸ್ಥಿತಿಯಲ್ಲಿದೆ.)

ಸುಬ್ರಹ್ಮಣ್ಯಶಾಸ್ತ್ರಿಗಳು

ವಾಸುದೇವಶಾಸ್ತ್ರಿಗಳ ಭಾವಮೈದ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳು. ಇವರು ಜ್ಯೋತಿಷಶಾಸ್ತ್ರದಲ್ಲಿ ಮಹಾ ಪ್ರಖ್ಯಾತರು. ಇವರು ಸಿದ್ಧರಾಮ ಪುರಾಣ ಮೊದಲಾದ ಕನ್ನಡ ಗ್ರಂಥಗಳಿಗೆ ಟೀಕಾತಾತ್ಪರ್ಯಗಳನ್ನು ಬರೆದಿದ್ದಾರೆ. ಶೃಂಗೇರಿ ಮಠದ ಆಶ್ರಯದಲ್ಲಿ ಪಂಚಾಂಗ ಪ್ರಕಟಣೆ ಮಾಡುತ್ತಿದ್ದರು.

ಸುಬ್ರಹ್ಮಣ್ಯಶಾಸ್ತ್ರಿಗಳು ಸಂಸ್ಕೃತದಲ್ಲಿ ಉಪನಿಷತ್ಸಾರವೆಂಬ ಅನುವಾದ ಗ್ರಂಥವನ್ನು ಬರೆದಿದ್ದಾರೆ. ಉಪನಿಷತ್ತುಗಳ ಮತ್ತು ಬ್ರಹ್ಮಸೂತ್ರಗಳ ತಾತ್ಪರ್ಯವನ್ನು ಸಂಗ್ರಹವಾಗಿ ಹೇಳಿದ್ದಾರೆ.

ಗರಣಿ ವೈಯಾಕರಣಿ ಕೃಷ್ಣಾಚಾರ್ಯರು [5] ಇವರಿಗೆ ಅತ್ಯಂತ ಸ್ನೇಹಿತರು.

ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳ ಮಕ್ಕಳೇ ಮಹಾಮಹೋಪಾಧ್ಯಾಯ ಶಿವಶಂಕರ ಶಾಸ್ತ್ರಿಗಳು. ಇವರೂ ತಮ್ಮ ತಂದೆಯಂತೆಯೇ ನಾನಾ ಶಾಸ್ತ್ರವೇತ್ತರು ಮತ್ತು ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಮಹಾಪಂಡಿತರು.

ಶಿವಶಂಕರಶಾಸ್ತ್ರಿಗಳು

ಶಿವಶಂಕರಶಾಸ್ತ್ರಿಗಳವರು ಬಿಜಾಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಆಗ ಇವರು ತಮ್ಮ ಅಧ್ಯಕ್ಷ ಭಾಷಣವನ್ನೆಲ್ಲ ಪದ್ಯರೂಪದಲ್ಲಿ ಮಾಡಿದರೆಂದು ನನ್ನ ಜ್ಞಾಪಕ. ಅವರು ಯಾವ ಅಕ್ಷರದಿಂದ ಬೇಕಾದರೂ ಪ್ರಾರಂಭಮಾಡಿ ಕಂದವನ್ನೋ ವೃತ್ತವನ್ನೋ ಬೇರೆ ರೂಪದ ಪದ್ಯವನ್ನೋ ಲೀಲಾಜಾಲವಾಗಿ ಕಟ್ಟಬಲ್ಲವರಾಗಿದ್ದರು. ಅವರ ಪ್ರಯೋಗಗಳು ವ್ಯಾಕರಣ ಶುದ್ಧವಾಗಿರುತ್ತಿದ್ದವು. ಶಾಸ್ತ್ರಸಮ್ಮತವಾಗಿರುತ್ತಿದ್ದವು. ಆದರೆ ಶಾಸ್ತ್ರಪರಿಚಯವಿಲ್ಲದವರಿಗೆ ಕೊಂಚ ಕಷ್ಟ.

> ಚಿನ್ಮಯ ರೂಪನೀಶನಭವಂ ಸಲೆ ರಾಜಿಸೆ ಚಿತ್ತದೊಳ್
> ಸನ್ಮತಿ ಸದ್ವಿಧೇಯ ಶಿವಶಂಕರ ಶರ್ಮನಿನಾದುದು ಬುದ್ಧಿಭಾ–
> ಸ್ವನ್ಮಹನೀಯರೆಲ್ಲರಿದನೋದಿ...

ಶಿವಶಂಕರಶಾಸ್ತ್ರಿಗಳು ಇನ್ನೊಂದು ಪ್ರಯತ್ನ ಮಾಡಿದ್ದರು. ವೆಂಕಟೇಶ ಸಹಸ್ರನಾಮ, ಶಿವಸಹಸ್ರನಾಮ, ಲಲಿತಾಸಹಸ್ರನಾಮ, ಗಣೇಶಸಹಸ್ರನಾಮ, ಸೂರ್ಯ ಸಹಸ್ರನಾಮ– ಈ ಐದು ಸಹಸ್ರನಾಮಗಳನ್ನೂ ಆಧಾರವಾಗಿರಿಸಿಕೊಂಡು ಆ ಒಂದೊಂದು ನಾಮದ ಮೇಲೂ ಅದರ ಅರ್ಥವನ್ನು ತೋರಿಸುವಂತೆ ಒಂದು ಪದ್ಯ ಬರೆಯತಕ್ಕದ್ದು. ಹೀಗೆ ಒಟ್ಟು ಐದು ಸಾವಿರ ಪದ್ಯ. ಇದರಲ್ಲಿ ಮೊದಲನೆಯ ಐನೂರು ಎಂಟುನೂರು ಪದ್ಯಗಳನ್ನು ಬೆಂಗಳೂರ್ ಪ್ರೆಸ್ಸಿನಲ್ಲಿ ಒಳ್ಳೆಯ ನುಣುಪುಕಾಗದದಲ್ಲಿ ಅಂದವಾಗಿ ಮುದ್ರಣ ಮಾಡಿಸಿದ್ದರು. ಪದ್ಯಗಳ ಜೊತೆಗೆ ಅಲ್ಲಲ್ಲಿ ಆ ದೇವತಾಮೂರ್ತಿಗಳ ಚಿತ್ರಗಳೂ ಇದ್ದವು. ನಾನು ಅದನ್ನು ನೋಡಿದ್ದೆ–ಕೆಲಸ ನಡೆಯುತ್ತಿದ್ದಾಗ. ಅಬ್ಬಬ್ಬಾ! ಎನ್ನಿಸಿತು. ಆ ಪಾಂಡಿತ್ಯ, ಆ ಧೋರಣೆ, ಆ ಎದೆಗಾರಿಕೆ ಮತ್ತು ಆ ಹಟ-ಇದನ್ನು ನಾನು ಇನ್ನೆಲ್ಲಿಯೂ ಕಂಡವನಲ್ಲ. ಉಪನ್ಯಾಸಕ್ಕೆ ಕುಳಿತರೂ ಶಾಸ್ತ್ರಿಗಳು ಹಾಗೆಯೆ. ಅದ್ಭುತವಾದ ವಾಕ್ಪಟುತ್ವ.

ಶಾಸ್ತ್ರಿಗಳು ದೈವಜ್ಞರು–ಮಂತ್ರ ತಂತ್ರ ಶಾಸ್ತ್ರಗಳ ಮರ್ಮವನ್ನರಿತವರು; ಸುಬ್ರಹ್ಮಣ್ಯೋಪಾಸಕರು.

ಬೆಳ್ಳಾವೆ ವೆಂಕಟನಾರಣಪ್ಪನವರು ಎಂ. ಎ. ಡಿಗ್ರಿ ಪಡೆಯುವುದಕ್ಕಾಗಿ ವ್ಯಾಸಂಗ ಮಾಡಲು ಮದರಾಸಿನಲ್ಲಿ ಕೆಲವು ತಿಂಗಳು ವಾಸವಿದ್ದರು. ವೆಂಕಟನಾರಣಪ್ಪನವರದು ಮಹಾನಿಷ್ಠೆ. ಓದಿ ಪಾಸುಮಾಡುವ ಗೀಳಿನಲ್ಲಿ ಆಹಾರ ನಿದ್ರೆಗಳನ್ನೂ ಮೊಟಕು ಮಾಡಿದ್ದರು. ಮೂರು ಹೊತ್ತೂ ಓದು, ಬರವಣಿಗೆ, ಲೆಕ್ಕ, ಈ ತಪಶ್ಚರ್ಯೆಯಲ್ಲಿ ಅವರಿಗೆ

ಕಾಯಿಲೆ ಬಂದಿತು. ಎಷ್ಟೋ ವೇಳೆ ಪ್ರಜ್ಞೆ ತಪ್ಪಿರುತ್ತಿತ್ತಂತೆ. ಆ ಕಾಲದಲ್ಲಿ ವೆಂಕಟನಾರಣಪ್ಪನವರ ಮನೆ ಬೆಂಗಳೂರಿನ ಅಲಸೂರುಪೇಟೆಯಲ್ಲಿ, ವಿ. ಬಿ. ಸುಬ್ಬಯ್ಯನವರ ಮನೆಯ ಸಮೀಪದಲ್ಲಿತ್ತಂತೆ. ವೆಂಕಟನಾರಣಪ್ಪನವರ ಮನೆಯವರು ಗಾಬರಿಪಟ್ಟು ಸುಬ್ಬಯ್ಯನವರಿಗೆ ಹೇಳಲಾಗಿ ಅವರು ಶಿವಶಂಕರಶಾಸ್ತ್ರಿಗಳಿಗೆ ವರ್ತಮಾನ ಕೊಟ್ಟರಂತೆ. ಆಗ ಶಿವಶಂಕರಶಾಸ್ತ್ರಿಗಳು ವಿಭೂತಿ ಕುಂಕುಮಗಳನ್ನೂ ಬಿಲ್ವಾಕ್ಷತೆಗಳನ್ನೂ ಕೊಟ್ಟು ವಾಸಿಮಾಡಿಸಿದರಂತೆ.

ಶಿವಶಂಕರಶಾಸ್ತ್ರಿಗಳವರು ಕಡೆಕಡೆಯ ದಿನಗಳಲ್ಲಿ ಬೆಂಗಳೂರಿನ ಮೌಂಟ್‌ಜಾಯ್ ಗುಡ್ಡದ ಮೇಲಿರುವ ಶ್ರೀ ಕುಮಾರಸ್ವಾಮಿ ದೇವಾಲಯವನ್ನು ಸರಕಾರದಿಂದ ತಮ್ಮ ಯಾಜಮಾನ್ಯಕ್ಕೆ ಪಡೆದುಕೊಂಡು, ಅಲ್ಲಿ ಪೂಜೆಪುರಸ್ಕಾರಗಳನ್ನು ಮಾಡಿಸುತ್ತ ಭಕ್ತರನ್ನನುಗ್ರಹಿಸುತ್ತಿದ್ದರು. ಅವರೇ ಹೊಸದಾಗಿ ಒಂದು ಅಷ್ಟಭುಜ ಗಣಪತಿ ಮೂರ್ತಿಯನ್ನು ಸ್ಥಾಪನೆ ಮಾಡಿಸಿದರು. ಅಂದು ನಾನೂ ಹೋಗಿದ್ದೆ. ಆ ಗುಡ್ಡಕ್ಕೆ ಅವರಿಂದ ಕಳೆ ಬಂತು.

ಪ್ರತ್ಯಕ್ಷಾದ್ಭುತ ಷಣ್ಮುಖ ಮೃತ್ಯುಂಜಯ ಶ್ರೀ ಕುಮಾರ ಗಿರಿ ಶೃಂಗಂ ।
ಭಕ್ತ್ಯಾ ಪ್ರಣಮತ...... ಶಿವಲಿಂಗಂ ॥

ಕ್ರೂರಗ್ರಹ ಪೀಡಿತರೂ ಭೂತಚೇಷ್ಟೆಯಿಂದ ಬಾಧೆಪಡುವವರೂ ಜ್ವರಾಪಸ್ಮಾರ ಕುಷ್ಠಾದಿಗಳಿಂದ ನೊಂದವರೂ ಈ ಕುಮಾರಸ್ವಾಮಿಶೈಲಕ್ಕೆ ಬಂದು ಶಾಸ್ತ್ರಿಗಳವರಿಂದ ಮಂತ್ರ ತಂತ್ರ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು.

೧೨ ತಮಾಷೆಯ ತಂಡ- ಬಾಲಸರಸ್ವತಿಯವರು

೧೯೦೮-೦೯ರ ಸುಮಾರಿನಲ್ಲಿ ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯಲ್ಲಿ ನವರತ್ನ ಅಂಡ್ ಸನ್ಸ್ ಅವರ ಮುದ್ರಣಶಾಲೆಯಿತ್ತು. ನನಗೂ ನವರತ್ನದವರಿಗೂ ಸ್ನೇಹವಿದ್ದ ಕಾರಣದಿಂದ ನಾನು ಪ್ರತಿದಿವಸವೂ ಅಲ್ಲಿ ಕೊಂಚ ಹೊತ್ತು ಇರುವುದು ವಾಡಿಕೆಯಾಗಿತ್ತು. ಆಗ ಅಲ್ಲಿಗೆ ಬರುತ್ತಿದ್ದವರಲ್ಲಿ ಒಬ್ಬರು ವಿದ್ವಾನ್ ವೆಂಕಟಾಚಾರ್ಯರು. ಇವರು ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮರವರ ಚಿಕ್ಕಪ್ಪಂದಿರು.

ವೆಂಕಟಾಚಾರ್ಯರು

ವೆಂಕಟಾಚಾರ್ಯರು ಆ ಕಾಲದಲ್ಲಿ ಉಪಾಧ್ಯಾಯರಾಗಿದ್ದದ್ದು ಮಾತ್ರವಲ್ಲದೆ ಕನ್ನಡದಲ್ಲಿ ಒಂದೆರಡು ನಾಟಕಗಳನ್ನೂ ಬರೆದಿದ್ದರು. ಆ ನಾಟಕಗಳನ್ನು ಅಚ್ಚುಮಾಡಿಸುವುದಕ್ಕಾಗಿ ಅವರು ನವರತ್ನ ಪ್ರೆಸ್ಸಿಗೆ ಬರುತ್ತಿದ್ದರು. ಆಗ ಅವರಿಗೂ ನನಗೂ ಪರಿಚಯವಾಯಿತು.

ವೆಂಕಟಾಚಾರ್ಯರು ಬರೆದಿದ್ದ ನಾಟಕಗಳ ಹೆಸರುಗಳು ನನಗೆ ಮರೆತುಹೋಗಿದೆ. ಒಂದು ಬಹುಶಃ 'ಚಂದ್ರಕಲಾ' ಎಂಬುದು. ಅದು ಕೃಷ್ಣಗೋಪೀ ಪ್ರಕರಣ. ಅದರ ಪ್ರಸ್ತಾವನೆಯಲ್ಲಿ "ಶಾಂತಾನಂದ ಮೌನಿಯೆಂಬ ಕಾಂತಾಮಣಿಯಿಂದ ವಿರಚಿತವಾದ" ಎಂದು ಇನ್ನೊಂದು ನಾಟಕದ ಸ್ಮರಣೆಯಿದ್ದದ್ದು ನನಗೆ ಜ್ಞಾಪಕವಿದೆ. ಆ ಮೌನಿ ಯಾರು ಎಂದು ನಾನು ಕೇಳಿದಾಗ "ಮದರಾಸಿನಲ್ಲಿದ್ದಾಳೆ" ಎಂದು ಅವರು ಹೇಳಿದ್ದೂ ನನಗೆ ಜ್ಞಾಪಕದಲ್ಲಿದೆ.

ವೆಂಕಟಾಚಾರ್ಯರು ನನಗಿಂತ ತುಂಬ ಹಿರಿಯರು. ಅವರು ಸಂಗೀತ ಸಾಹಿತ್ಯಗಳಲ್ಲಿ ಹೆಚ್ಚು ಪರಿಶ್ರಮ ಮಾಡಿದ್ದವರು. ಅವರ ತಂದೆಗಳು ತಿರುಮಲೆ ರಾಜಗೋಪಾಲಯ್ಯಂಗಾರ್ಯರು ಚಿಕ್ಕಬಳ್ಳಾಪುರದ ಸಮೀಪದ ಕಂದವಾರ ಗ್ರಾಮದಲ್ಲಿದ್ದವರು. ಅವರು ಮಹಾ ಪ್ರಸಿದ್ಧರಾದ ವಿದ್ವಾಂಸರು. ಅವರು ಬರೆದಿರುವ ಸಂಸ್ಕೃತ ಕಾವ್ಯವೊಂದನ್ನು ನಾನು ನೋಡಿದ್ದೇನೆ. ಶ್ರೀವೈಷ್ಣವ ಸಿದ್ಧಾಂತವನ್ನು ವಿವರಿಸಿ

ಸಂಸ್ಕೃತದಲ್ಲಿ ಒಂದು ಪ್ರಬಂಧವನ್ನೂ ಬರೆದಿದ್ದರು. ಅವರಿಗೆ ಆಶ್ರಯದಾತ ಗುರುಮೂರ್ತಿನಾಯಕ ಎಂಬ ಪಾಳೆಯಗಾರ. ಅವರು ಬರೆದ ಚಿತ್ರಪ್ರಬಂಧ ಕವಿತ್ವವನ್ನೂ ನಾನು ನೋಡಿದ್ದೇನೆ.

ಒಂದು ವ್ಯಾಖ್ಯಾನ

ಒಂದು ದಿನ ಮಧ್ಯಾಹ್ನ ನಾನು ವೆಂಕಟಾಚಾರ್ಯರ ಮನೆಗೆ ಹೋದೆ. ಆಗ ಅವರು ಮಾಮೂಲ್‌ಪೇಟೆಯಲ್ಲಿದ್ದರೆಂದು ಜ್ಞಾಪಕ. 'ಕರ್ಣಾಟಕ' ಪತ್ರಿಕೆ ನಡೆಯುತ್ತಿತ್ತು. ಅದರ ಅಚ್ಚಿನ ಸ್ಥಳ ಸಿದ್ದಿಕಟ್ಟೆಯ ಗುಂಡೋಪಂತರ ಮನೆಯಲ್ಲಿದ್ದ ಐರಿಷ್ ಪ್ರೆಸ್ಸು ಎಂದು ಹಿಂದೆ ಹೇಳಿದೆ. ಮಧ್ಯಾಹ್ನ ಕಂಪಾಸಿಟರುಗಳು ಹನ್ನೆರಡು ಘಂಟೆಗೆ ಊಟಕ್ಕೆ ಹೋದಾಗ ಅವರು ಮತ್ತೆ ಬರುವವರೆಗೂ ನನಗೆ ಒಂದೊಂದು ದಿನ ಬಿಡುವಿರುತ್ತಿತ್ತು. ಅಲ್ಲಿಗೆ ವೆಂಕಟಾಚಾರ್ಯರ ಮನೆ ದೂರವಲ್ಲ. ಹಾಗಿದ್ದದ್ದರಿಂದ ನಾನು ಆಗಾಗ ಅವರಲ್ಲಿಗೆ ಹೋಗುವ ವಾಡಿಕೆಯಾಗಿತ್ತು.

ಆ ದಿನ ನಾನು ಹೋದಾಗ ಆಚಾರ್ಯರು ಊಟದ ಕೋಣೆಯಲ್ಲಿದ್ದರು. ನಾನು ನಡುಮನೆಯಲ್ಲಿ ನಿಂತು ಕೂಗಿದೆ. ಅವರು ಒಳಗಡೆಯಿಂದಲೇ ಉತ್ತರ ಕೊಟ್ಟು ನನ್ನನ್ನು ಕೂಡ ಹೇಳಿದರು. ಮಾತು ಪ್ರಾರಂಭವಾಯಿತು. (ತೆಲುಗಿನಲ್ಲಿ)

ನಾನು: ಊಟದ ಪರಿಠವಣೆ?"

ವೆಂ: "ಬಲು ಪಸಂದು. ನೀವೂ ಬನ್ನಿ."

ನಾನು: "ಹಾಗೆಯೆ? ಏನು ಅಂಥಾ ಪಸಂದು?"

ವೆಂ: "ಸೊಗಸಾದ ಅನ್ನ, ಸೊಗಸಾದ ಸಾರು."

ನಾನು: "ಅಷ್ಟೇನೆ? ಬರಿಯ ಅನ್ನಸಾರಿಗೆ ಇಷ್ಟೊಂದು ಕೊಂಡಾಟವೆ?"

ವೆಂ: "ಸಾರು ಅಂದರೆ ಏನು ಅಂತ ತಿಳಕೊಂಡಿರಿ? ಒಳ್ಳೆ ಭರ್ಜರಿ ಸಾರು."

ನಾನು: "ಅದೇನು ಅಷ್ಟು ರುಚಿ?"

ವೆಂ: "ಹ್ಯಾಗಿದೆ ಅಂತೀರಿ-ಒಳ್ಳೆ ಬ್ರಾಂದಿ ಇದ್ದ ಹಾಗಿದೆ. ಜುರ್ರೋ ಹಾಗಿದೆ. ಇದು ಫಖತ್ ಬ್ರಾಂದಿ."

ನಾನು: "ಬ್ರಾಂದಿ ಹೇಗಿರುತ್ತೆ? ನೀವು ಅದರ ರುಚಿ ಬಲ್ಲಿರಾ?"

ವೆಂ: “ಅಮೃತ ಅಮೃತ ಅಂತ ಪೂರ್ವಿಕರು ಅಂತಾರಲ್ಲ? ಅವರು ಅಮೃತ ಕಂಡಿದ್ದರೆ? ಅಮೃತ ಕಂಡಿದ್ದರೆ ಏಕೆ ಮೃತರಾದರು? ಅಮೃತವೆಂಬುದು ಬಹು ರುಚಿ ಎಂದಷ್ಟೇ ಅಲ್ಲವೆ ಅವರ ಅಭಿಪ್ರಾಯ? ಹಾಗೆಯೇ ನಾನು ಬ್ರಾಂದಿ ಎಂದದ್ದು. ಅದೊಂದು ಪ್ರಶಸ್ತಿವಾಚಕ.”

ಇದು ಒಂದು ಸಣ್ಣ ಸ್ಯಾಂಪಲ್ (ಮಾದರಿ). ಇಂಥ ಚರ್ಚೆಗಳೂ ವ್ಯಾಖ್ಯಾನಗಳೂ ದಿನದಿನವೂ ಆಗುತ್ತಿದ್ದವು.

ಮುದ್ದಯ್ಯನವರು

ಆ ಸುಮಾರಿನಲ್ಲಿ ನಾನು ‘ಕನಕಾಲುಕಾ’ ಎಂಬ ಕನ್ನಡ ನಾಟಕವನ್ನು ಬರೆದಿದ್ದೆ. ಅದು ಟೆನ್ನಿಸನ್ ಕವಿಯ ‘ದಿ ಕಪ್’ ಎಂಬ ಸಣ್ಣ ನಾಟಕದ ಭಾವಾನುವಾದ. ಅದನ್ನು ನಾಟ್ಯರಂಗದ ಮೇಲೆ ತರಿಸಬೇಕೆಂದು ವೆಂಕಟಾಚಾರ್ಯರು ಬಹು ಮೆಹನತ್ತು ಮಾಡಿದರು. ಈ ಉದ್ದೇಶಕ್ಕಾಗಿ ಅವರು ನನ್ನನ್ನು ಹಿಂದಿಟ್ಟುಕೊಂಡು ನಟನಟಿಯರನ್ನು ಒದಗಿಸಿಕೊಳ್ಳಲು ಸಂದಿಗೊಂದಿಗಳಲ್ಲಿ ಸುತ್ತಾಡಿದರು. ನಾಟಕದ ರಂಗಪ್ಪ ಎಂಬಾತನನ್ನು ಹುಡುಕಲು ಅಲೆದಾಡಿದೆವು. ಹಾಗೆಯೇ ಫೋಟೋಗ್ರಾಫರ್ ಮತ್ತು ಚಿತ್ರಶಿಲ್ಪಿ ಸಿ. ಮುದ್ದಯ್ಯನವರಲ್ಲಿಗೆ ಕರೆದುಕೊಂಡು ಹೋದರು. ಮುದ್ದಯ್ಯನವರ ಹೆಸರು ಶೃಂಗೇರಿ ಶಾರದಾಂಬೆಯ ಚಿತ್ರಪಟದಲ್ಲಿ ನಿಂತಿದೆ.

ಮೈಸೂರು ಹೈಕೋರ್ಟಿನ ಮುಖ್ಯ ಜಡ್ಜಿಯಾಗಿದ್ದ ಎ. ರಾಮಚಂದ್ರಯ್ಯರ್ ಅವರು ತಮ್ಮ ನಿತ್ಯಪೂಜೆಗಾಗಿ ಶೃಂಗೇರಿ ಅಮ್ಮನವರ ಮೂಲ ವಿಗ್ರಹದ ವರ್ಣರಂಜಿತ ಪಟವೊಂದನ್ನು ತಯಾರು ಮಾಡಿಕೊಡಬೇಕೆಂದು ಮುದ್ದಯ್ಯನವರಿಗೆ ಅಪ್ಪಣೆ ಕೊಟ್ಟರು. ಹಾಗೆ ಮುದ್ದಯ್ಯನವರು ತಯಾರಿಸಿದ ಶಾರದಾ ಚಿತ್ರಪಟವನ್ನು ಅವರು ನನಗೆ ತೋರಿಸಿ ಸಲಹೆ ಕೇಳಿದರು. ಅದನ್ನು ಅಚ್ಚುಮಾಡಿಸಿದರೆ ಲೋಕೋಪಕಾರವಾಗುವುದೆಂದು ನಾನು ಸೂಚಿಸಿದೆ. ಅದರಂತೆ ರವಿವರ್ಮ ಪ್ರೆಸ್ಸಿನಲ್ಲಿ ಅಚ್ಚಾದ ಶ್ರೀ ಶಾರದಾ ಚಿತ್ರದ ಪ್ರತಿಗಳು ಅನೇಕ ವರ್ಷಗಳ ಕಾಲ ಪ್ರಚಾರದಲ್ಲಿದ್ದವು. ನಾನು ಅದನ್ನು ನೂರಾರು ಮನೆಗಳಲ್ಲಿ ನೋಡಿದ್ದೇನೆ.

ಮುದ್ದಯ್ಯನವರು ಜಾತಿಯಿಂದ ಚಿತ್ರಕಾರರು. ಸರಸಿಗಳು. ಸಾಹಿತ್ಯಾಭಿಮಾನಿಗಳು. ಅವರೂ ವೆಂಕಟಾಚಾರ್ಯರೂ ಸಹ ಆಲೋಚನೆ ಮಾಡಿ ನನ್ನ ‘ಕನಕಾಲುಕಾ’ ನಾಟಕಕ್ಕೆ ಒಂದು ಮುಖಚಿತ್ರವನ್ನು ಹಾಕಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ಯಾವನೋ ಒಬ್ಬ ನಾಟಕದ ಹುಡುಗನಿಗೆ ಸ್ತ್ರೀವೇಷ ಹಾಕಿ ಆ ವ್ಯಕ್ತಿಯ ಫೋಟೋಗ್ರಾಫನ್ನು ಮುದ್ದಯ್ಯನವರ ಸ್ಟುಡಿಯೋದಿಂದ ಕೊಟ್ಟದ್ದು ನನಗೆ ಚೆನ್ನಾಗಿ ನೆನಪಿದೆ. ಅದು ಪರಿಶುದ್ಧವಾದ ಸ್ನೇಹದ ಉಪಕಾರ.

ಮುದ್ದಯ್ಯನವರ ಸ್ಟುಡಿಯೋ ಚಿಕ್ಕಪೇಟೆಯಲ್ಲಿ ಆಗ್ಗೆ ರೈಲ್ವೆ ಇಲಾಖೆಯ ಔಟ್ ಸ್ಟೇಷನ್ ಡಿಪೊ ಇದ್ದಕಡೆ, ಮಹಡಿಯ ಮೇಲೆ ಇತ್ತೆಂದು ನನ್ನ ಜ್ಞಾಪಕ. ಮುದ್ದಯ್ಯನವರು ಸಾಧುಸಜ್ಜನರು. ಒಳ್ಳೆಯ ಫೋಟೋಗ್ರಾಫರ್.

ಬಾಲಸರಸ್ವತಿಯವರು

ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯಲ್ಲಿ ನವರತ್ನ ಪ್ರೆಸ್ಸು ಇತ್ತೆಂದೂ ಅಲ್ಲಿ ವೆಂಕಟಾಚಾರ್ಯರೂ ನಾನೂ ಸೇರುತ್ತಿದ್ದೆವೆಂದೂ ಮೇಲೆ ಹೇಳಿದ್ದೇನೆ. ಆ ಪ್ರೆಸ್ಸಿಗೆ ಸಮೀಪದಲ್ಲಿ ಸೆಂಟ್ರಲ್ ಮಹಮಡನ್ ಅಸೋಸಿಯೇಷನ್ ಕಟ್ಟಡದ ದಕ್ಷಿಣ ಪಾರ್ಶ್ವದ ಒಂದು ಮನೆಯಲ್ಲಿ ವಿದ್ವಾನ್ ಬಾಲಸರಸ್ವತಿಯವರಿದ್ದರು. ಇವರೂ ವೆಂಕಟಾಚಾರ್ಯರೂ ಗಾಢ ಸ್ನೇಹಿತರು. ಆದದ್ದರಿಂದ ವೆಂಕಟಾಚಾರ್ಯರು ನನ್ನನ್ನು ಬಾಲ ಸರಸ್ವತಿಗಳ ಮನೆಗೆ ಕರೆದುಕೊಂಡು ಹೋಗಿ ಅವರ ಪರಿಚಯ ಮಾಡಿಸಿಕೊಟ್ಟರು.

ಬಾಲಸರಸ್ವತಿಗಳು ಸ್ಕೂಲ್ ಮಾಸ್ಟರಾಗಿದ್ದವರು. ಆದರೆ ಅವರು ಬೋಧನೆ ಮಾಡುತ್ತಿದ್ದ ವಿಷಯ ಯಾವುದೋ ಒಂದು ಎಂದು ನಿಷ್ಕರ್ಷೆ ಮಾಡುವಂತಿರಲಿಲ್ಲ. ಕೆಲವು ಕಡೆ ಸಂಸ್ಕೃತಪಾಠ ಹೇಳುತ್ತಿದ್ದರು. ಇನ್ನು ಕೆಲವು ಸ್ಕೂಲುಗಳಲ್ಲಿ ಕೆಲವು ಕಾಲ ಕನ್ನಡ ಪಾಠ ಹೇಳುತ್ತಿದ್ದರು. ಬೇರೆ ಕೆಲವು ಸ್ಕೂಲುಗಳಲ್ಲಿ ಸ್ವಲ್ಪ ದಿನ ಡ್ರಾಯಿಂಗ್ ಮಾಸ್ಟರಾಗಿದ್ದರು. ಮತ್ತೆ ಕೆಲವುಕಾಲ ಸಂಗೀತದ ಉಪಾಧ್ಯಾಯರಾಗಿದ್ದರು.

ವ್ಯಕ್ತಿಸ್ವರೂಪ

ಅವರ ವ್ಯಕ್ತಿಸ್ವರೂಪನ್ನು ವರ್ಣಿಸುವುದು ಅವಶ್ಯ. ಅವರು ವಿವಾಹಿತರಾಗಿದ್ದರು. ಇಬ್ಬರು ಮೂವರು ಮಕ್ಕಳಿದ್ದರೆಂದೂ ನನ್ನ ಜ್ಞಾಪಕ. ಆದರೆ ನಾನು ನೋಡಿದಾಗ ಅವರ ಪತ್ನಿಯು ಮುಳಬಾಗಲಿನಲ್ಲಿ ಮಕ್ಕಳೊಡನೆ ಆಕೆಯ ತಂದೆಯ ಮನೆಯಲ್ಲಿದ್ದರೆಂದು ನೆನಪು. ಬಾಲಸರಸ್ವತಿಗಳು ನನಗೆ ತಿಳಿದಷ್ಟು ಕಾಲವೂ ಒಬ್ಬಂಟಿಯಾಗಿದ್ದರು. ಯಾವುದೋ ಹೋಟಲಿನಲ್ಲಿ ಊಟ, ಯಾವುದೋ ಬಾಡಿಗೆಯ ಕೋಣೆಯಲ್ಲಿ ವಾಸ. ಎಲ್ಲಿ ಮಾತು ಪ್ರಾರಂಭವಾಗಿ ಸರಸವಾಗಿದ್ದರೆ ಅಲ್ಲಿ ಸಾವಕಾಶವಾಗಿ ಮಾತು. ವೇಳೆಯ ನಿಯಮವಿಲ್ಲ.

ಆಳು ಗಿಡ್ಡೆಂದೇ ಹೇಳಬೇಕು. ದಪ್ಪವೂ ಅಲ್ಲ. ಬಣ್ಣ ಎಣ್ಣೆಗೆಂಪು. ಸೊಗಸಾಗಿ ಬಾಚಿ ಪೋದಿಮಾಡಿದ ಗಡ್ಡ. ತಲೆಯ ತುಂಬ ಕೂದಲು: ಬೈತಲೆ ತೀಡಿ ಗಂಟು ಹಾಕಿದ್ದದ್ದು. ಹಣೆಯಲ್ಲಿ ದಮ್ಮಡಿಯಗಲದ ಕುಂಕುಮದ ಬೊಟ್ಟು-ಅಡ್ಡಡ್ಡವಾಗಿ. ತಲೆಯ ಮೇಲೆ ಒಂದೊಂದು ವೇಳೆ ಸೊಟ್ಟಸೊಟ್ಟೆ ಕೋರೆ ರುಮಾಲು-ಔತ್ತರೇಯ ರೀತಿಯದು. ಇಷ್ಟರ ಹೊರತು ಮಿಕ್ಕ ಎಲ್ಲ ಇತರರಂತೆ. ಆಸಾಮಿಯಲ್ಲಿ ಆಡಂಬರ, ಡೌಲು ಏನೂ ಇರಲಿಲ್ಲ. ಆದರೆ ಮುಖದ ಮೇಲೆ, ಮಾತಿನಲ್ಲಿ ಚಾಕಚಕ್ಯ, ಕಲೆಯಬೇಕೆಂಬ ಕುತೂಹಲ ಕಾಣಬರುತ್ತಿತ್ತು. ಕಣ್ಣುಗಳು ತೀಕ್ಷ್ಣ, ಮುಖದಲ್ಲಿ ಒಂದೊಂದು ಕ್ಷಣಕ್ಕೊಂದೊಂದು ಭಂಗಿ. ಬಲಗೈಯಲ್ಲಿ ನಸ್ಯದ ಚಿಟಿಕಿ ಹಿಡಿದಂತೆ ತರ್ಕಮುದ್ರಿಕೆ. ಆದರೆ ಅವರು ನಸ್ಯ ಹಾಕುತ್ತಿರಲಿಲ್ಲ. ಬಟ್ಟೆಗಳ ಆಡಂಬರವಿಲ್ಲ. ಕೊಂಚ ಮಾಸಿ ನಲುಗಿದ ಬಟ್ಟೆಗಳು. ಮಾತು ಮಾತ್ರ ಬಲು ಸೊಗಸು. ಅದರಲ್ಲಿ ಚಮತ್ಕಾರ, ಹಾಸ್ಯ ತುಂಬಿರುತ್ತಿತ್ತು. ಸಂಸ್ಕೃತದಲ್ಲಿ ಅವರಿಗೆ ಸಮಾನವಾಗಿ ಸರಸರನೆ ಉಚಿತ ಪದಗಳಿಂದ ಮಾತನಾಡುತ್ತಿದ್ದವರನ್ನು ಇನ್ನು ಯಾರನ್ನೂ ನಾನು ಕಾಣೆ. ಅದರಲ್ಲೂ ತರ್ಕಕ್ಕೆ ಕುಳಿತರೆ ಅವರ ಸಂಸ್ಕೃತವಾಣಿ ನದೀ ಪ್ರವಾಹರೂಪದಲ್ಲಿ ಬರುತ್ತಿತ್ತು.

***

ಒಂದು ಸಾರಿ ವಿದ್ಯಾ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಸಿ. ಕೃಷ್ಣರಾಯರೊಡನೆ ನಾನು ಮಾತನಾಡುತ್ತಿದ್ದಾಗ ಬಾಲಸರಸ್ವತಿಗಳ ಪ್ರಸ್ತಾವ ಬಂದಿತು. ಕೃಷ್ಣರಾಯರು ಕಣ್ಣಗಲಿಸಿ ಹೇಳಿದರು:

“ಒಳ್ಳೆಯ ಪ್ರಚಂಡನಪ್ಪ. ಆದರೆ ಆತನ ಜೊತೆಯಲ್ಲಿ ಏಗುವುದು ಹೇಗೆ?”

ಬಾಲಸರಸ್ವತಿಗಳು ಹುಟ್ಟಿನಿಂದ ಮಾಧ್ವ ಬ್ರಾಹ್ಮಣರು. ಅವರ ತಂದೆಗಳು ಮೈಸೂರಿನಲ್ಲಿ ಪ್ರಸಿದ್ಧರಾಗಿದ್ದ ಸಂಸ್ಕೃತ ವ್ಯಾಕರಣ ವಿದ್ವಾಂಸರು. ಅವರ ಹೆಸರು ಗೀತಾಚಾರ್ಯರೆಂದೋ ಏನೋ ನನಗೆ ಸರಿಯಾಗಿ ಗೊತ್ತಿಲ್ಲ. ಅವರು ಎಂದೋ ಕ್ಲಾಸಿನಲ್ಲಿ ಪಾಠತ್ತಿದ್ದಾಗ ಸ್ವಲ್ಪ ತೂಕಡಿಸುತ್ತಿದ್ದರಂತೆ. ಬಾಲಸರಸ್ವತಿಗಳು ಅದರ ಮೇಲೆ ಒಂದು ಪದ್ಯ ಬರೆದರು. ಅದರ ಒಂದು ಪಂಕ್ತಿ ಜ್ಞಾಪಕಕ್ಕೆ ಬರುತ್ತದೆ.

ನಿದ್ರಾಮುದ್ರಿತಲೋಚನೋ ವಿಜಯತೇ
ಗೀತಾರ್ಯನಾಮಾ ಬುಧಃ ॥

ನನ್ನ ವ್ಯಾಕರಣಾಧ್ಯಯನ

ಬಾಲಸರಸ್ವತಿಗಳು ಸಂಸ್ಕೃತ ವ್ಯಾಕರಣದಲ್ಲಿ ಹೆಚ್ಚು ಪರಿಶ್ರಮಮಾಡಿದ್ದವರು. ಅವರಿಗೆ ಕಾವ್ಯಪರಿಚಯ ವಿಸ್ತಾರವಾಗಿತ್ತು. ಅವರು ಸ್ವತಂತ್ರವಾಗಿ ಪ್ರಾಸ್ತಾವಿಕವಾಗಿ ಪದ್ಯರಚನೆ ಮಾಡಿ ಹೇಳುತ್ತಿದ್ದದ್ದೂ ಉಂಟು. ಆದದ್ದರಿಂದ ಅವರು ಉದಾಹರಿಸುತ್ತಿದ್ದ ಪದ್ಯಗಳಲ್ಲಿ ಅವರ ಸ್ವಂತದ್ದು ಯಾವುದು, ಇತರರದು ಯಾವುದು ಎಂದು ತಿಳಿಯುವುದು ಕಷ್ಟಸಾಧ್ಯವಾಗಿತ್ತು.

ನಾನು ಅವರಲ್ಲಿ ಸಂಸ್ಕೃತ ವ್ಯಾಕರಣ ಪಾಠ ಮಾಡಬೇಕೆಂದು ಇಷ್ಟಪಟ್ಟು ಅವರನ್ನು ಕೇಳಿಕೊಂಡೆ. ಅವರು ಪರಮೋತ್ಸಾಹದಿಂದ “ಓಹೋ! ದಿನಾ ಒಂದೊಂದು ಪ್ರಕರಣ ಮಾಡಿಬಿಡೋಣ” ಎಂದರು.

ಆದರೆ ಒಂದು ಪ್ರಕರಣವೂ ಸಾಂಗವಾಗಿ ನಡೆಯಲಿಲ್ಲ.

ಪಾಠಕ್ಕೆ ಪ್ರಾರಂಭ ಮಾಡಿದ ನಾಲ್ಕೈದು ನಿಮಿಷಗಳಲ್ಲಿ ಯಾವುದೋ ವಿಷಯಾಂತರ ಪ್ರಸ್ತಾವ ಬರುವುದು. ಮಾತು ಅತ್ತಕಡೆ ತಿರುಗುವುದು. ಅಂದಿನ ಪಾಠ ಅಲ್ಲಿಗೇ ನಿಂತು ಹೋಗುವುದು. ಹೀಗೆ ಹದಿನೈದಿಪ್ಪತ್ತು ಸಲ ಆದಮೇಲೆ ನಾನು ಪಾಠದ ಆಸೆಯನ್ನು ಅಲ್ಲಿಗೆ ಬಿಟ್ಟೆ.

ನಮ್ಮ ಗುರುಗಳು ಬಾಲಸರಸ್ವತಿಯವರು ಆಗಾಗ ಸ್ನಾನ ಮಾಡುತ್ತಿದ್ದದ್ದುಂಟೆಂದು ತೋರುತ್ತದೆ. ಬಟ್ಟೆಗಳನ್ನು ಒಗೆದದ್ದನ್ನು ಮಾತ್ರ ನಾನು ಕಾಣೆ. ಎರಡು ತಿಂಗಳಿಗೋ ಮೂರು ತಿಂಗಳಿಗೋ ಒಂದು ಸಾರಿ ಸುತ್ತಮುತ್ತ ಇದ್ದವರಾರಾದರೂ ಮಾಸಿದ ಬಟ್ಟೆಗಳನ್ನು ಅಗಸನಿಗೆ ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. ಒಂದೊಂದು ದಿನ ಅವರಿಗೇ ತೋರುವುದು, “ಬಟ್ಟೆಗಳೆಲ್ಲ ಏಕೋ ಕೊಳೆಯಾಗಿದೆ” ಎನ್ನುವರು. ನಮ್ಮಲ್ಲಿ ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಐದಾರು ಜೊತೆ ಧೋತ್ರಗಳನ್ನು ತರುವರು. “ಇನ್ನೇನಪ್ಪ-ಆರುತಿಂಗಳ ಬಟ್ಟೆ ಆಯಿತಲ್ಲಾ?”

ಆ ಆರು ಬಟ್ಟೆಗಳನ್ನು ಒಂದಾದಮೇಲೆ ಒಂದರಂತೆ ಉಟ್ಟು ಮುಗಿಸುವರು. ಅವುಗಳಲ್ಲಿ ಒಂದಾದರೂ ನೀರನ್ನು ಕಂಡಿದಿಲ್ಲ.

ಅಷ್ಟರಲ್ಲಿ ಎಂದಾದರೊಂದು ದಿನ ಸಭೆಗೋ ಯಾರನ್ನೋ ದೊಡ್ಡ ಮನುಷ್ಯರನ್ನು ನೋಡುವುದಕ್ಕೋ ಹೋಗಬೇಕಾದ ಸಂದರ್ಭ ಬಂದಾಗ ಯಾವ ಪಂಚೆ ಉಡಬೇಕು ಎಂಬ ಪ್ರಶ್ನೆ ಬರುವುದು. ಆಗ ಉಟ್ಟು ಕೊಳೆಯಾಗಿತ್ತೆಂದು ಒಂದು ಕಡೆ ಒಟ್ಟು ಹಾಕಿದ್ದ ಪಂಚೆಗಳನ್ನೆಲ್ಲ ತಂದು ವರಸೆಯಾಗಿ ಗುಡ್ಡೆ ಹಾಕಿ ಆ ಗುಡ್ಡೆ ಸಾಲಿನ ಎದುರಿಗೆ ನಿಂತು "ಇದರಲ್ಲಿ ತೀರಾ ಕಡಮೆ ಕೊಳೆಯಾದದ್ದು ಯಾವುದು?" ಎಂದು ಹುಡುಕಿ, ಕೊಳೆಯಾದದ್ದನ್ನೆತ್ತಿ ಅದು ಚೊಕ್ಕಟವಾದದ್ದೆಂದು ಧರಿಸಿಕೊಳ್ಳುವುದು.

ಗೋಷ್ಠಿ

ವೆಂಕಟಾಚಾರ್ಯರು, ಬಾಲಸರಸ್ವತಿಗಳು, ವಿದ್ವಾನ್ ಗೋಪಾಲಯ್ಯನವರು, ಇನ್ನೊಬ್ಬ ಪಂಡಿತರು (ಅವರಿಗೂ ನನಗೂ ಹೆಚ್ಚು ಬಳಕೆ ಬೆಳೆಯದಿದ್ದದ್ದರಿಂದ ಅವರ ಹೆಸರು ಮರೆತುಹೋಗಿದೆ), ನಾನು-ಈ ನಾಲ್ವರೈವರು ಎರಡು ಮೂರು ವರ್ಷಗಳ ಕಾಲ ಪ್ರತಿದಿನವೂ ಒಂದು ಘಂಟೆಯ ಹೊತ್ತಾದರೂ ಜೊತೆಯಲ್ಲಿ ಇರುತ್ತಿದ್ದೆವು. ಅವರೆಲ್ಲ ವಿದ್ವಾಂಸರು; ಮತ್ತು ನನಗಿಂತ ಕೆಲವು ವರ್ಷ ದೊಡ್ಡವರು. ನಮ್ಮಗಳ ಮಾತುಕಥೆಗೆ ಗೊತ್ತಾದ ವಿಷಯವೇನೂ ಇರುತ್ತಿರಲಿಲ್ಲ. ಆಯಾ ಹೊತ್ತು ಏನೇನು ತೋರಿದರೆ ಅದದೇ ಮಾತು. ಬೇಳೆ ಹುಳಿಗೆ ಇರಬೇಕಾದ ತರತೀಪು, ತರಕಾರಿಗಳ ಪರಿಕವಣೆ, ಜಿಲೇಬಿಯು ರುಚಿಯೆ, ಲಾಡು ಹೆಚ್ಚು ರುಚಿಯೆ? ಊದುಬತ್ತಿಯಲ್ಲಿ ಯಾವುದು ಚೆನ್ನ? ರಾಗಪ್ರಸ್ತಾರ ಹೇಗಿರಬೇಕು? ಮಾಘಕವಿಯ ಪದಶಯ್ಯೆ-ಹೀಗೆ ಏನೆಂದರೆ ಅದು ವಿಷಯ. ರಾಜಕೀಯವೂ ಆಗಾಗ ಬರುತ್ತಿದ್ದದ್ದುಂಟು.

ಅಪರಾಹ್ಣ ವಿನೋದ

೧೯೦೭-೧೦ ರ ಸುಮಾರಿನಲ್ಲಿ ಚಿಕ್ಕಪೇಟೆಯಿಂದ ಮುನಿಸಿಪಲ್ ಪಾರ್ಕಿಗೆ ತಿರುಗುವ ಮೂಲೆಯಲ್ಲಿರುವ ಕಟ್ಟಡದಲ್ಲಿ ಕೆ. ಎಸ್. ಕೃಷ್ಣಯ್ಯರ್ ಅವರ ಐರಿಷ್ ಪ್ರೆಸ್ ಇತ್ತು. ಆಗ ಆ ಪ್ರೆಸ್ಸಿನಲ್ಲಿ 'ಮೈಸೂರು ಟೈಮ್ಸ್' ಎಂಬ ಇಂಗ್ಲಿಷ್ ವಾರಾರ್ಧಪತ್ರಿಕೆ ಅಚ್ಚಾಗುತ್ತಿತ್ತು. ನಾನು ಆ ಪತ್ರಿಕೆಯ ಸಹಾಯ ಸಂಪಾದಕನಾಗಿದ್ದ ಕಾರಣದಿಂದ ಪ್ರತಿದಿನವೂ ಅಲ್ಲಿರುತ್ತಿದ್ದೆ. ಆ ಕಟ್ಟಡ ವಿಸ್ತಾರವಾದದ್ದು. ಅದರ ಹಿತ್ತಲ ಕಡೆ ಬಯಲಿತ್ತು. ಒಂದು ಅಶ್ವತ್ಥಕಟ್ಟೆ, ಒಂದು ನಾಗರಸಾಲು, ಒಂದು ಮಂಟಪ, ಒಂದು ಪುಷ್ಕರಿಣಿ ಅಲ್ಲಿದ್ದವು. ಪ್ರೆಸ್ಸಿನ ಕೆಲಸಗಾರರು ಮಧ್ಯಾಹ್ನದ ಭೋಜನಕ್ಕಾಗಿ ಮನೆಗೆ ಹೋದಾಗಲೂ ಬೇರೆ ಬಿಡುವು ಕಾಲದಲ್ಲಿಯೂ ಈ ಜಾಗವೇ ನಮ್ಮ ಕಾರ್ಯಸ್ಥಾನ. ಅಲ್ಲಿ ನಾವು ನಾಲ್ಕೈದು ಮಂದಿಯೂ ಸೇರಿ ಆ ಕೊಳದ ಮೆಟ್ಟಲುಗಳ ಮೇಲೆ ಕುಳಿತು ನೀರಿನಲ್ಲಿ ಕಾಲು ಬಿಟ್ಟುಕೊಂಡು ಒಂದು ಒಂದೂವರೆ ಘಂಟೆಯ ಹೊತ್ತು ಹರಟುತ್ತಿದ್ದೆವು. ಈ ಹರಟೆಯ ಕಾಲದಲ್ಲಿ ಒಂದು ಪ್ರಸಂಗ ನಡೆಯಿತು.

ಒಂದು ಹಗರಣ

ನನಗೆ ಪದ್ಯದ ಗೀಳು ಚಿಕ್ಕಂದಿನಿಂದ ಬಂದ ವ್ಯಾಧಿ. ಶೃಂಗೇರಿ ಜಗದ್ಗುರುಗಳವರು ಕಾಲಟಿಯಿಂದ ಹಿಂತಿರುಗುತ್ತ ಮಾರ್ಗವಶಾತ್ ಬೆಂಗಳೂರಿಗೆ ಬಂದಾಗ ನಾನು ಮೂರು ನಾಲ್ಕು ಸಂಸ್ಕೃತ ಪದ್ಯಗಳನ್ನು ಹೊಸೆದಿದ್ದೆ. ಆ ಪದ್ಯಗಳನ್ನು ಮೇಲೆ ಹೇಳಿದ ಮಿತ್ರರು ಮೆಚ್ಚಿಕೊಂಡು ಅಚ್ಚುಮಾಡಿಸತಕ್ಕದ್ದೆಂದು ನಿರ್ಧರಿಸಿದರು. ಅವರೆಲ್ಲ ಸಂಸ್ಕೃತ ಪಂಡಿತರಾಗಿದ್ದದ್ದರಿಂದ ನಾನು ಅದಕ್ಕೆ ಹಿಗ್ಗಿದೆ. ಪದ್ಯಗಳನ್ನು ಅಚ್ಚುಮೊಳೆ ಜೋಡಿಸಲು ಪ್ರೆಸ್ಸಿಗೆ ಕೊಟ್ಟದ್ದಾಯಿತು. ನಾವು ಮನೆಗಳಿಗೆ ಹಿಂತಿರುಗಿದೆವು. ಆಗ ಸುಮಾರು ಹನ್ನೊಂದು ಘಂಟೆ.

ಅಚ್ಚಿನವರು ಮೊಳೆ ಜೋಡಿಸಿ ಪ್ರೂಫ್ ತೆಗೆದು ಇರಿಸಿದ್ದರು, ನಾವು ಮಧ್ಯಾಹ್ನ ನೋಡಲಿಕ್ಕಾಗಿ.

ಅಷ್ಟರಲ್ಲಿ ಆ ಪ್ರೆಸ್ಸಿಗೆ ವಿದ್ವಾನ್ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು [6] ದಯ ಮಾಡಿಸಿದರು. ಇವರ 'ವಿದ್ಯಾನಂದ' ಮಾಸಪತ್ರಿಕೆ ಅಲ್ಲಿ ಅಚ್ಚಾಗುತ್ತಿತ್ತು. ಅದರ ಪ್ರೂಫ್ ನೋಡಲು ಅವರು ಅಲ್ಲಿಗೆ ಬಂದರು. ಅಲ್ಲಿದ್ದ ಪ್ರೂಫನ್ನು ಕೈಗೆ ತೆಗೆದುಕೊಂಡು ಶಾಸ್ತ್ರಿಗಳು ತಿದ್ದಲು ಹೊರಟರಂತೆ. ಕೆಲಸಗಾರರು ಕೇಳಿದಾಗ, "ಈತ ನಮ್ಮ ಹುಡುಗ" ಎಂದು ವಿವರಣೆ ಕೊಟ್ಟು ತಿದ್ದಿದರು. ನನ್ನ ಪ್ರತಿ ಇದ್ದದ್ದು ಹೀಗೆ:

> ಜಯಶಂಕರ ಜಯಶಂಕರ
> ಗುರುಶೇಖರ ಭಗವನ್ ॥

ಇದನ್ನು ಶಾಸ್ತ್ರಿಗಳು ತಿದ್ದಿದ್ದದ್ದು ಹೀಗೆ:

> ಜಯಶಂಕರ ಜಯಶಂಕರ
> ವರದೇಶಿಕ ಭಗವನ್ ॥

ಆ ಮಧ್ಯಾಹ್ನ ಬಾಲಸರಸ್ವತಿಯವರು ವೆಂಕಟಾಚಾರ್ಯರು ಮೊದಲಾದ ಸ್ನೇಹಿತರು ನಾನು ನಿರೀಕ್ಷಿಸಿಕೊಂಡಿದ್ದಂತೆ ಪ್ರೆಸ್ಸಿಗೆ ಬಂದರು. ಆ ಪ್ರೂಫನ್ನು ನೋಡಿದರು. ನನ್ನ ಕಡೆಗೆ ತಿರುಗಿ ಕೇಳಿದರು:

ವೆಂ: "ನೀನು ಮಾಡಿದೆಯಾ ಈ ಬದಲಾವಣೆಯನ್ನು?"

ನಾನು: "ಅದು ನನ್ನ ಕೆಲಸವಲ್ಲ. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇಲ್ಲಿಗೆ ಬಂದಿದ್ದರಂತೆ. ಅವರು ನೋಡಿ ಹಾಗೆ ತಿದ್ದಿದ್ದಾರೆ. ಇದ್ದುಕೊಳ್ಳಲಿ."

ವೆಂ: "ಇದ್ದುಕೊಳ್ಳಲಿ? ಅದೇಕೆ?"

ಬಾ: "ಇರತಕ್ಕದ್ದೇ ಅಲ್ಲ. ನೀವು ಸುಮ್ಮನೆ ಕೂಡಿ?"

ಆ ಸಮಯದಲ್ಲಿ ನನಗೆ ಬೇರೆ ಕೆಲಸವಿದ್ದದ್ದರಿಂದ ಅವರನ್ನು ಅಲ್ಲಿಯೇ ಬಿಟ್ಟು ನಾನು ಮಹಡಿಯ ಮೇಲಕ್ಕೆ ಹೋದೆ.

ಆಮೇಲೆ ನಡೆದದ್ದು ಹೀಗೆ:

ಆ ನಾಲ್ವರೂ ಸಿದ್ದಿಕಟ್ಟೆಯಲ್ಲಿದ್ದ ದೊಡ್ಡಬೆಲೆ ಶಾಸ್ತ್ರಿಗಳ ಮನೆಗೆ ಹೋದರು. ಅಲ್ಲಿ ಎರಡು ಕಕ್ಷಿಗಳಿಗೂ ಜೋರಾಗಿ ವಾಗ್ವಾದ ನಡೆಯಿತೆಂದು ತೋರುತ್ತದೆ. ಮಧ್ಯಾಹ್ನ ಎರಡೂವರೆ ಘಂಟೆಯ ವೇಳೆಗೆ ಶಾಸ್ತ್ರಿಗಳನ್ನೂ ಕರೆದುಕೊಂಡು ನಾನಿದ್ದಲ್ಲಿಗೆ ಬಂದರು. ಶಾಸ್ತ್ರಿಗಳು ನನ್ನನ್ನು ನೋಡಿದೊಡನೆಯೇ.

"ಇದೇನಪ್ಪ ಪಡೆ ಕಳುಹಿಸಿಬಿಟ್ಟಿದ್ದೀ? ಇವರ ಕೈಗೆ ಸಿಕ್ಕಿದರೆ ನಾನು ಬದುಕಿಯೇನೆ?"

ವಿವರಣೆ ಕೊಡುತ್ತಾ ಹೇಳಿದರು:

"ನಾನು ಪದ್ಯಗಳನ್ನು ಓದಿದೆ. ಎಲ್ಲಾ ಚೆನ್ನಾಗಿತ್ತು. ಆದರೆ 'ಗುರುಶೇ–ಖರಭಗವನ್' ಎಂದು ಒಡೆದರೆ ಆಭಾಸವಾಗುತ್ತದೆ. ಯತಿಸ್ಥಾನ 'ಶೇ' ಆದಮೇಲೆ ಬರಬೇಕಾಗಿದೆಯಲ್ಲಾ! ಅದಕ್ಕಾಗಿ ತಿದ್ದಿದೆ."

ವೆಂಕಟಾಚಾರ್ಯರೂ ಬಾಲಸರಸ್ವತಿಗಳೂ ಕಣ್ಣುಗಳನ್ನು ವಿಕಟ ಮಾಡಿ,

"ಇದೇನು ತಿದ್ದಾವಣೆ? 'ವರದೇ-ಶಿಕಭಗವನ್' ಎಂದರೆ ಹೇಗೆ ಸರಿ ಹೋಗುತ್ತದೆ? ಶಂಕರಾಚಾರ್ಯರು ಸಿಖ್ಖರೆ?"

ಹೀಗೆಲ್ಲ ಆರ್ಭಟಿಸಿದರು.

ನಾನು ಎರಡು ಪಕ್ಷಗಳವರಿಗೂ ಕಾಲು ಮುಟ್ಟಿ ನಮಸ್ಕಾರ ಮಾಡಿ ವಿವಾದವನ್ನು ಅಲ್ಲಿಗೇ ಬಿಡಬೇಕೆಂದು ಕೇಳಿಕೊಂಡೆ. ನಾರಾಯಣಶಾಸ್ತ್ರಿಗಳು,

"ಇದೇನಪ್ಪಾ-ಇವರು ಇಂದ್ರಜಿತ್ತು ಕಾಳಗಕ್ಕೆ ಬಂದಹಾಗೆ ಬರುತ್ತಾರಲ್ಲ! ನನ್ನ ಯೋಗ ಚೆನ್ನಾಗಿತ್ತು. ಸದ್ಯ ಪ್ರಾಣ ತೆಗೆಯಲಿಲ್ಲ."

ಆಮೇಲೆ ನಗು. ನನ್ನ ಮನಸ್ಸಿನಲ್ಲಿ ಕೊಂಚ ಶಂಕೆ ಉಳಿದುಕೊಂಡಿದ್ದದ್ದರಿಂದ ಬ್ರಹ್ಮಶ್ರೀ ಛಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳವರಿಗೆ ಪದ್ಯ ತೋರಿಸಿ ನಡೆದದ್ದನ್ನು ಹೇಳಿದೆ. ಅವರು ಗಟ್ಟಿಯಾಗಿ ನಕ್ಕು ತಮ್ಮ ಮಗ ಕಾಶೀಪತಿಶಾಸ್ತ್ರಿಯನ್ನೂ ಶಿಷ್ಯ ಸುಂದರಶಾಸ್ತ್ರಿಗಳನ್ನೂ ಕರೆದು ಓದಿಹೇಳಿ

"ಗುರುಶೇಖರ-ಲೆಸ್ಸುಂದೆ?" ಎಂದರು.

ಇಂಥ ಪ್ರಸಂಗಗಳು ಇನ್ನೂ ಕೆಲವು ನಡೆದದ್ದುಂಟು.

ಬಾಲಸರಸ್ವತಿಯವರ ಅಭಿಮಾನ

ಬಾಲಸರಸ್ವತಿಗಳು ನನ್ನಲ್ಲಿ ತುಂಬ ಅಭಿಮಾನವಿಟ್ಟಿದ್ದರು. ನಾನು ಆ ಸುಮಾರಿನಲ್ಲಿ 'ವಂದೇ ಮಾತರಂ' ಎಂಬ ಲಘು ಪುಸ್ತಕವನ್ನು ಬರೆದಿದ್ದೆ. ಅದರಲ್ಲಿ ಬಂಕಿಮಚಂದ್ರ ಚಟರ್ಜಿಯವರ ಪ್ರಸಿದ್ಧ ರಾಷ್ಟ್ರಗೀತವಾದ 'ವಂದೇ ಮಾತರಂ' ಎಂಬ ಬಂಗಾಳಿ ಹಾಡನ್ನು ಸಂಸ್ಕೃತ ಆರ್ಯಾವೃತ್ತಗಳಲ್ಲಿ ಬರೆಯ ಹೊರಟಿದ್ದೆ. ಬಾಲಸರಸ್ವತಿಗಳಿಗೆ ಬಂಗಾಳಿ ಭಾಷೆ ಚೆನ್ನಾಗಿ ಬರುತ್ತಿತ್ತು. ಅವರು ನನ್ನ ಆ ಗೀತದ ಕೆಲಸಕ್ಕೆ ತುಂಬ ಪ್ರೋತ್ಸಾಹ ಕೊಟ್ಟರು.

ನಾನು ರಾಜಾ ರಾಮಮೋಹನರಾಯ್ ಅವರನ್ನು ಕುರಿತು ಒಂದು ಪುಸ್ತಕವನ್ನು ಬರೆದು ಅಚ್ಚುಮಾಡಿಸಿದೆ. ಅದನ್ನು ಬಾಲಸರಸ್ವತಿಗಳು ನೋಡಿ ಹೀಗೆ ಬರೆದರು:

ರಾಮಮೋಹನರಾಯಸ್ಯ ಹೃದ್ಯ ಕರ್ಣಾಟಕಭಾಷಯಾ ।
ವರ್ಣಿತಂ ಚಾರು ಚಾರಿತ್ರಂ ಮಯಾ ಸಾದರಮೀಕ್ಷಿತಂ ॥
ಕಥಾನಾಯಕಚಾರಿತ್ರಂ ವರ್ಣಿತಂ ನಾನಪೇಕ್ಷಿತಂ ।
ಉಪಕ್ರಮೋಪಸಂಹಾರಪ್ರಕ್ರಮಸ್ತು ಸತಾಂ ಮತಃ ॥
ಸರ್ವೈರಪಿ ಪರಿಗ್ರಾಹ್ಯಃ ಪ್ರಬಂಧೋಽಯಂ ವಿಶೇಷತಃ
ಮಹಾತ್ಮನೋ ಯದಾ ಭಾನ್ತಿ ಗುಣಾ ಲೋಕೋತ್ತರೋತ್ತರಾಃ ।
ಮಹಾಪುರುಷಸಂರಂಭಃ ಯಸ್ಯ ನ ಸ್ಯಾನ್ಮುದೇ ಪರಂ ॥

ಜೀವನೋಪಾಯ

ಬಾಲಸರಸ್ವತಿಗಳ ಕಡೆಕಡೆಯ ದಿನಗಳು ಅಷ್ಟೇನೂ ಸಂತೋಷಮಯವಾಗಿರಲಿಲ್ಲ. ಅವರು ಸಾಹಸಿಗಳು. ಏನೇನೋ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಕೆಂದು ಸಂಕಲ್ಪವಿಟ್ಟುಕೊಂಡಿದ್ದರು. ಅನೇಕ ಪತ್ತೇದಾರಿ ಕಥೆಗಳನ್ನು ಬರೆದು ಪ್ರಕಟಿಸಿದರು: 'ದುಷ್ಟಚತುಷ್ಟಯ' 'ಹೆಂಗಸು ಎಂದರೆ ಹೆಂಗಸು' ಇತ್ಯಾದಿ. ಇವು ಒಳ್ಳೆಯ ಸ್ವಾರಸ್ಯವುಳ್ಳ ಕಥೆಗಳು. ಚೆನ್ನಾಗಿ ಮಾರಾಟವೂ ಆಯಿತು. ಆದರೂ ಅವುಗಳ ಗುಣಕ್ಕೆ ತಕ್ಕ ಪ್ರತಿಫಲ ಬರಲಿಲ್ಲ. ಬಾಲಸರಸ್ವತಿಗಳು ಬಹುಜನರ ಮೆಚ್ಚಿಗೆ ಪಡೆದಿದ್ದರಾದ್ದರಿಂದ ಅವರ ಒಂದು ಪ್ರಯತ್ನವು ರೂಪಕ್ಕೆ ಬಂದಿತು. ಅದು 'ಗ್ರಂಥವ್ಯಾಖ್ಯಾನ ಮುದ್ರಣಾಲಯ'. ಅಲ್ಲಿ ಅವರು ಅನೇಕ ಪ್ರೌಢಗ್ರಂಥಗಳಿಗೆ ವ್ಯಾಖ್ಯಾನ ಬರೆದು ಪ್ರಕಟಿಸಬೇಕೆಂದು ಉದ್ದೇಶಿಸಿದ್ದರು. ಆದರೆ ಸಾಹಿತ್ಯಕಾರ್ಯಕ್ಕೂ ವ್ಯಾಪಾರನಿರ್ವಾಹಕ್ಕೂ ಬಹುದೂರವೆಂಬುದನ್ನು ಮನಸ್ಸಿಗೆ ತಂದುಕೊಳ್ಳಲಿಲ್ಲ. ವಾಕ್ಪಟುತ್ವದಿಂದ ಎಲ್ಲವನ್ನೂ ಸಾಧಿಸಲಾಗುವುದೆಂದು ತಿಳಿದದ್ದು ಅವರ ಭ್ರಾಂತಿ.

ಕಡೆಯಲ್ಲಿ ಒಂದು ದಿನ ನನ್ನ ಮನೆಗೆ ಬಂದರು. ಆಗ ನಾನೂ ಯಾವುದೋ ಕಾರಣ ಮನಸ್ಸು ಕುಗ್ಗಿದವನಾಗಿದ್ದೆ. ನಮ್ಮ ನಮ್ಮ ಕಷ್ಟಗಳನ್ನೂ ನಿರಾಶೆಗಳನ್ನೂ ಕುರಿತು ಮಾತನಾಡಿಕೊಂಡೆವು. ಆಗ ಬಾಲಸರಸ್ವತಿಗಳು ಹೀಗೆ ಹೇಳಿದರು:

"ಏನಯ್ಯ-ಆ ಹೊತ್ತು ಎಷ್ಟೋ ವರ್ಷಗಳ ಹಿಂದೆ, ದಿನದಿನವೂ ಮಟಮಟ ಮಧ್ಯಾಹ್ನ ಆ ಕೊಳದಲ್ಲಿ ನಿಂತುಕೊಂಡು ಮಾತನಾಡಿಕೊಳ್ಳುತ್ತಿದ್ದದ್ದನ್ನು ಮರೆತೆಯಾ? ಹಾಗೆ ಮಾಡಬೇಕು, ಹೀಗೆ ಮಾಡಬೇಕು-ಎಂದು ಪ್ಲಾನ್ ಹಾಕಿದೆವಲ್ಲ-ಹೀಗೆ ಮಾಡಿದರೆ ಹಾಗಾಗುತ್ತದೆ, ಹಾಗೆ ಮಾಡಿದರೆ ಹೀಗಾಗುತ್ತದೆ ಎಂದೆಲ್ಲ ಕಟ್ಟಿದೆವಲ್ಲ ಮನಸ್ಸಿನ ಉಪ್ಪರಿಗೆಗಳನ್ನ? ಈ ಹೊತ್ತು ವಿಧಿ ನಮ್ಮನ್ನು ಅಣಕಿಸಿ ಹೇಳುತ್ತಿದ್ದಾನೆ:

'ಸೂ-ಮಕ್ಕಳಿರಾ! ಆ ಹೊತ್ತು ಮಧ್ಯಾಹ್ನ ಸೂರ್ಯಸಾಕ್ಷಿಯಾಗಿ ಏನೇನೋ ಮಾಡಬೇಕೆಂದುಕೊಂಡಿರಲ್ಲ-ಈಗ ನಡೆಸಿ ಅವನ್ನೆಲ್ಲ.'

ನಾವು ಆ ಹೊತ್ತು ಮಾಡಿದ ಕರ್ಮ ಈಹೊತ್ತು ಬೆನ್ನಟ್ಟಿ ಬಂದಿದೆ."

ಬಾಲಸರಸ್ವತಿಗಳು ಈ ವೇಳೆಗೆ ತುಂಬ ಮುದುಕರಾಗಿದ್ದರು, ದುರ್ಬಲರಾಗಿದ್ದರು.

ಆ ವಿದ್ವದ್ಗೋಷ್ಠಿಯಲ್ಲಿ ವೆಂಕಟಾಚಾರ್ಯರು ಆ ವೇಳೆಗೆ ತೀರಿಕೊಂಡಿದ್ದರು. ಉಳಿದವರ ವಿಷಯ ನನಗೆ ತಿಳಿದುಬರಲಿಲ್ಲ.

೧೩ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳವರ ವಿದ್ವತ್ತೆ, ಸಹೃದಯತೆ

೧೮೯೮-೯೯ ರ ಸುಮಾರಿನಲ್ಲಿ ಒಂದು ದಿನ ನನ್ನ ಸಂಸ್ಕೃತ ಗುರುಗಳಾದ ಕಾಶಿ ರಾಘವೇಂದ್ರಾಚಾರ್ಯರವರು ತಮ್ಮ ಸುತ್ತಮುತ್ತ ಇದ್ದ ನಾಲ್ಕೈದು ಮಂದಿ ಶಿಷ್ಯರನ್ನು ಕುರಿತು ಹೀಗೆ ಹೇಳಿದರು:

"ಎಲಾ! ಇನ್ನು ನಾಲ್ಕೈದು ದಿವಸದೊಳಗಾಗಿ ವಿಶ್ವೇಶ್ವರಶಾಸ್ತ್ರಿಗಳವರು ಈ ಊರಿಗೆ ದಯಮಾಡಿಸುತ್ತಾರೆ, ಮಗನ ಮದುವೆಗಾಗಿ. ಅವರು ಬೆಂಗಳೂರಿನಿಂದ ಬರುತ್ತಾರೆ. ಮಹಾ ವಿದ್ವಾಂಸರು. ಅವರೆದುರಿಗೇನಾದರೂ ನಿಮ್ಮ ಚೇಷ್ಟೆ ಮಾಡೀರಿ! ಗುಡಿಯಾಗೋ ಮದುವೆಮನೆಯಾಗೋ ಏನಾದರೂ ಶಾಸ್ತ್ರವಿಚಾರ ಬಂದರೆ ನೀವು ಯಾರೂ ಆ ಪ್ರಸಕ್ತಿಗೆ ಬರಬೇಡಿ. ಬಾಯಿ ಮುಚ್ಚಿಕೊಂಡಿರಿ. ವಿಶ್ವೇಶ್ವರಶಾಸ್ತ್ರಿಗಳ ಮುಂದೆ ಬಾಲ ಬಿಚ್ಚಿದರೆ ಹುಲಿ ಬಾಯಿ ಹೊಕ್ಕಹಾಂಗೆ."

ನಾನು ಹುಡುಗ. ನನಗೆ ಯಾವ ಶಾಸ್ತ್ರದ ಗಂಧವೂ ಇರಲಿಲ್ಲ. ಮತ್ತು ವಿಶ್ವೇಶ್ವರಶಾಸ್ತ್ರಿಗಳ ಹೆಸರನ್ನು ಕೂಡ ಅದಕ್ಕೆ ಮುಂಚೆ ಕೇಳಿದ್ದವನಲ್ಲ. ಆದರೆ 'ಹುಲಿಯ ಬಾಯಿ' ಎಂಬ ಉಪಮಾನ ನನ್ನ ಮನಸ್ಸಿಗೆ ಹಿಡಿಯಿತು. ವ್ಯಕ್ತಿಯನ್ನು ನೋಡಬೇಕೆಂಬ ಕುತೂಹಲವುಂಟಾಯಿತು.

ಮೇಲೆ ಹೇಳಿದ ಮದುವೆ ಬಹು ಚೆನ್ನಾಗಿ ನಡೆಯಿತು. ವರನು ವಿಶ್ವೇಶ್ವರಶಾಸ್ತ್ರಿಗಳ ಹಿರಿಯ ಮಗ ಕಾಶೀಪತಿಶಾಸ್ತ್ರಿ. ಈತನೂ ಸಂಸ್ಕೃತ ಸಾಹಿತ್ಯದಲ್ಲಿ ವಿದ್ವಾಂಸರಾಗಿದ್ದರು. ಮತ್ತು ಇಂಜಿನಿಯರಿಂಗ್ ಪಾಸ್ ಮಾಡಿ ಕ್ರಮೇಣ ಮರಾಮತ್ ಇಲಾಖೆಯಲ್ಲಿ ಆಫೀಸರ್ ಹುದ್ದೆಯಲ್ಲಿದ್ದರು.

ಕನ್ಯೆ ನನಗೆ ಅಕ್ಕನಂತೆ ಇದ್ದಾಕೆ: ನನಗಿಂತ ಎರಡು ಮೂರು ವರ್ಷ ದೊಡ್ಡವಳು. ಲಕ್ಷ್ಮೀನರಸಮ್ಮನೆಂದು ಆಕೆಯ ಹೆಸರು. ಆಕೆಯ ತಂದೆ ಲಕ್ಷ್ಮೀನರಸಪ್ಪನವರೆಂಬ ಸ್ಕೂಲ್ ಮೇಷ್ಟರು. ತಾಯಿ ಶ್ರೀಮತಿ ಭವಾನಮ್ಮನವರು. ಅವರು ಆಚಾರನಿಷ್ಠರಾದ ಸಾತ್ತ್ವಿಕರು. ಊರಲ್ಲಿ ತುಂಬ ಮರ್ಯಾದೆ ಪಡೆದಿದ್ದವರು. ಅವರ ಮನೆಗೂ ನನ್ನ ಮನೆಗೂ ತುಂಬ ಸಮೀಪ; ಎರಡು ಮನೆಗಳಿಗೂ ತುಂಬಾ ಸ್ನೇಹ. ಲಕ್ಷ್ಮೀನರಸಪ್ಪನವರಿದ್ದ ಮನೆಯಲ್ಲಿದ್ದ

ಒಂದು ತುಳಸೀ ಗಿಡ ನನ್ನ ಜ್ಞಾಪಕದಲ್ಲಿ ನಿಂತಿದೆ. ಅದು ಒಂದು ಆಳೆತ್ತರ ಇತ್ತು. ಅದರ ಕೊಂಬೆಗಳು ಹೆಬ್ಬೆಟ್ಟಿನ ಗಾತ್ರವಿದ್ದು, ತುಳಸೀಮಣಿ ಕಡೆಯಲು ತಕ್ಕಷ್ಟು ದಪ್ಪವಾಗಿದ್ದವು. "ಈ ತುಳಸೀಗಿಡ ಇಷ್ಟು ಸೊಂಪಾಗಿ ಬೆಳೆದಿದೆಯಲ್ಲ-ಇದಕ್ಕೆ ಏನು ಮಾಡುತ್ತೀರಿ?" ಎಂದು ಯಾರಾದರೂ ಕೇಳುವರು. ಲಕ್ಷ್ಮೀನರಸಪ್ಪನವರು "ಅದಕ್ಕೆ ನಾವು ಮಾಡುವ ಪೋದಿ ಹಾಗಿದೆ" ಎನ್ನುವರು. ಅದೇನು ಪೋದಿಯೋ ಯಾರಿಗೂ ತಿಳಿಯದು. ತುಳಸೀಗಿಡ ಹಾಗೆ ಸೊಂಪಾಗಿ ಮರದಂತೆ ಬೆಳೆದಿದ್ದನ್ನು ನಾನು ಇನ್ನೆಲ್ಲಿಯೂ ಕಂಡಿಲ್ಲ.

ಇನ್ನೊಂದು ಉಪಕಥೆ ಸಂಗತವಾಗಿದೆ.

ಸುಬ್ಬರಾಮಯ್ಯನವರು

ಲಕ್ಷ್ಮೀನರಸಪ್ಪನವರ ಸೋದರಮಾವಂದಿರು ಸುಬ್ಬರಾಮಯ್ಯ (ರಾಮಸುಬ್ಬಯ್ಯ) ಎಂಬವರು ದೊಡ್ಡ ವಿದ್ವಾಂಸರಂತೆ. ಅವರು ಅರವತ್ತರ ಸುಮಾರಿನಲ್ಲಿದ್ದಾಗ ಪತ್ನೀವಿಯೋಗವಾಯಿತಂತೆ. ಅವರಿಗೆ ಮಕ್ಕಳಿರಲಿಲ್ಲ. ಸುಬ್ಬರಾಮಯ್ಯನವರು ತಮ್ಮ ಮನೆಯಲ್ಲಿದ್ದ ತಪ್ಪಲೆ ಬಿಂದಿಗೆ ಮೊದಲಾದ ಪಾತ್ರೆಗಳನ್ನೆಲ್ಲ ದೇವಸ್ಥಾನಗಳಿಗೂ ಸತ್ರಗಳಿಗೂ ಬಡಬ್ರಾಹ್ಮಣರಿಗೂ ದಾನಮಾಡಿ ಕೈತೊಳೆದುಕೊಂಡು ತಮ್ಮಲ್ಲಿ ಉಳಿದಿದ್ದ ಕೊಂಚ ನಗದನ್ನು ತೆಗೆದುಕೊಂಡು ಕಾಶಿಗೆ ಹೋಗಿ ಅಲ್ಲಿ ಕೊಂಚಕಾಲದ ಮೇಲೆ ಸಂನ್ಯಾಸ ತೆಗೆದುಕೊಂಡರಂತೆ. ಲಕ್ಷ್ಮೀನರಸಪ್ಪನವರು ತಮ್ಮನ್ನು ಸಾಕಿ ಬೆಳಸಿದ ಸೋದರಮಾವನ ಹಂಬಲವನ್ನು ಬಿಡಲಾರದೆ ಆಗಾಗ ಅವರಿಗೆ ಕಾಗದ ಬರೆದು ಬರಬೇಕೆಂದು ಬೇಡಿಕೊಳ್ಳುತ್ತಿದ್ದರಂತೆ. ಕಾಶಿಯಿಂದ ಆ ಸ್ವಾಮಿಗಳು ತಾವು ಹಾಗೆ ಬರತಕ್ಕದ್ದಲ್ಲವೆಂದೂ ಮಮತಾ ಬಂಧನಗಳು ತಮಗೆ ಯುಕ್ತವಲ್ಲವೆಂದೂ ಹೇಳಿ ಸಮಾಧಾನದ ಕಾಗದಗಳನ್ನು ಬರೆಯಿಸಿದರಂತೆ. ಲಕ್ಷ್ಮೀನರಸಪ್ಪನವರಿಗೆ ಅದರಿಂದ ಸಮಾಧಾನ ಬರಲಿಲ್ಲ. ಮತ್ತೆ ಮತ್ತೆ ಪೇಚಾಡಿ ಕಾಗದ ಬರೆದರು.

ಕಡೆಗೆ ಸ್ವಾಮಿಗಳೇ ಕನಿಕರಿಸಿ ಮುಳಬಾಗಲಿಗೆ ಬಂದರು. ಮೂರು ದಿನ ಸತ್ರದಲ್ಲಿ ತಂಗಿದ್ದರು. ಮೂರನೆಯ ದಿನ ರಾತ್ರಿ ಎಂದಿನಂತೆ ಮಲಗಿದರು; ನಾಲ್ಕನೆಯ ದಿನ ಬೆಳಗ್ಗೆ ಎಂದಿನಂತೆ ಏಳಲಿಲ್ಲ. ರಾತ್ರಿ ಯಾವಾಗಲೋ ಕಳೇಬರವನ್ನು ತ್ಯಜಿಸಿದ್ದರು. ಬಳಿಕ ಕಳೇಬರವನ್ನು ಮುಳಬಾಗಲು ಊರಿನ ಪೂರ್ವಕಡೆ ಸುಮಾರು ಅರ್ಧ ಮುಕ್ಕಾಲು ಮೈಲಿಯಾಚೆ ಇರುವ ಶಂಕರತೀರ್ಥವೆಂಬ ದೊಡ್ಡ ಪುಷ್ಕರಿಣಿಯ ದಕ್ಷಿಣ ಪಾರ್ಶದಲ್ಲಿ ಸಮಾಧಿ ಮಾಡಿದ್ದಾಯಿತು.

ಆ ಸಮಾಧಿಯ ಮೇಲೆ ಒಂದು ಮಣ್ಣು ದಿಬ್ಬ ಇದ್ದದ್ದನ್ನು ನಾನು ಕಂಡಿದ್ದೇನೆ. ಅದಕ್ಕೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ್ದೇನೆ. ಆ ದಿಬ್ಬದ ಪಕ್ಕದಲ್ಲಿಯೇ ಇನ್ನೊಂದು ವೃಂದಾವನವಿದೆ. ಅದು ಭಾಗವತ ಸಂಪ್ರದಾಯದ ಶ್ರೀ ಕೃಷ್ಣಾನಂದ ಸ್ವಾಮಿಗಳ ಮಠದ ಒಬ್ಬ ಯತೀಂದ್ರರದು.

***

ನಾನು ಹೇಳುತ್ತಿರುವ ಕಾಲದಲ್ಲಿ ಸಮಾಜದಲ್ಲಿ ಉತ್ತಮರೆನಿಸಿದವರು ಲಕ್ಷ್ಯದಲ್ಲಿರಿಸಿಕೊಂಡಿದ್ದದ್ದು ಐಶ್ವರ್ಯವನ್ನಲ್ಲ, ಈಶ್ವರಸನ್ನಿಧಿಯನ್ನು. ಲಕ್ಷ್ಮೀನರಸಪ್ಪನವರ ಸಂಬಳ ತಿಂಗಳಿಗೆ ಏಳು ರೂಪಾಯಿ ಇರಬಹುದು. ಅವರ ಮನಸ್ಸಿನ ನಿರ್ಮಲತೆಯೂ ಭೂತ ದಯೆಯೂ ಸಂತೋಷವೂ ಈ ಹೊತ್ತು ಐದು ಸಾವಿರ ಸಂಬಳ ಪಡೆಯುವವರಿಗೂ ದುರ್ಲಭವಾದದ್ದು.

ಹುಲಿಬಾಯಿ

ಈಗ ಮದುವೆ ಮನೆಗೆ ಹಿಂತಿರುಗೋಣ. ಅದು ಐದಾರು ದಿವಸದ ಹಬ್ಬ. ವಿಶ್ವೇಶ್ವರಶಾಸ್ತ್ರಿಗಳವರು ಮದುವೆ ಮನೆಯಲ್ಲಿಯೂ ಗುಡಿಯಲ್ಲಿಯೂ ಹೋದ ಕಡೆಯಲ್ಲೆಲ್ಲ ಸರಸವಾಗಿ ಸೌಮ್ಯವಾಗಿರುತ್ತಿದ್ದರು. ಎಲ್ಲರೊಡನೆಯೂ ಮೃದುವಾಗಿ ಮಾತನಾಡುವರು, ಅನೇಕ ಮಂದಿ ವಿದ್ವಾಂಸರು ಅವರನ್ನು ಕಂಡರು. ಅವರಲ್ಲಿ ಬಹುಮಂದಿ ಮಾಧ್ವರು. ಅನೇಕ ಶಾಸ್ತ್ರಪ್ರಸಂಗಗಳೂ ಬಂದಿದ್ದಿರಬೇಕು. ಆದರೆ ವಿಶ್ವೇಶ್ವರ ಶಾಸ್ತ್ರಿಗಳ ಹುಲಿಬಾಯಿ ಕಾಣಿಸಲಿಲ್ಲ. ನನಗೆ ಆಶ್ಚರ್ಯವಾಯಿತು. ಎಲ್ಲಿ ಹುಲಿಬಾಯಿ? ಎಲ್ಲಿ ಸಿಂಹ?

ಅಲ್ಲಿಂದ ಎಂಟು ಹತ್ತು ವರ್ಷ ಕಳೆಯಿತು. ೧೯೧೦ ರ ಸುಮಾರಿನಲ್ಲಿ ನಾನು ವಿಶ್ವೇಶ್ವರಶಾಸ್ತ್ರಿಗಳ ಬಳಿಗೆ ಹೋಗಿ ಅವರಲ್ಲಿ ಕಾವ್ಯಪಾಠ ಮಾಡಬೇಕೆಂಬ ಅಭಿಲಾಷೆಯನ್ನು ಬಿನ್ನಯಿಸಿದೆ. ಅವರು ಬಹು ಸಂತೋಷದಿಂದ ಒಪ್ಪಿದರು. ಅದೇ ವೇಳೆ ನಾನು ಅವರ ಔಟ್‌ಹೌಸಿನಲ್ಲಿ ವಾಸಮಾಡಲು ಅನುಮತಿ ಪಡೆದೆ. ಹೀಗೆ ಹತ್ತಿರವಿದ್ದದ್ದರಿಂದ ಪಾಠ ಸಾಗಲು ಅನುಕೂಲಿಸಿತು.

ಒಂದೆರಡು ವರ್ಷ ಕಳೆಯಿತು. ಒಂದು ದಿನ ಶಂಕರಮಠದಲ್ಲಿ ಯಾವುದೋ ವಿದ್ವತ್ಸದಸ್ಸು ಸೇರಿತು. ಅಲ್ಲಿ ಮಹಾಮಹೋಪಾಧ್ಯಾಯ ಸುಬ್ರಹ್ಮಣ್ಯಶಾಸ್ತ್ರಿಗಳೂ ವೈದ್ಯನಾಥ ಶಾಸ್ತ್ರಿಗಳೂ ನುಗ್ಗೇಹಳ್ಳಿ ತಿರುಮಲಾಚಾರ್ಯರೂ ಹರಿಯಾಚಾರ್ಯರೂ ಶ್ರೀನಿವಾಸಾಚಾರ್ಯರೂ ಇದ್ದರು. ವಿಶ್ವೇಶ್ವರಶಾಸ್ತ್ರಿಗಳೂ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳೂ ಹೊಸಕೋಟೆಯವರೂ ಇದ್ದರು. ಯಾವುದೋ ಒಂದು ಪ್ರಕರಣವನ್ನು ಯಾರೋ ಎತ್ತಿದರು. ಬಹುಶಃ ನುಗ್ಗೇಹಳ್ಳಿ ತಿರುಮಲಾಚಾರ್ಯರೆಂದು ಜ್ಞಾಪಕ. ಅದರ ಮೇಲೆ ಕೋಟಿ ಹಾಕಿದರು ಸುಬ್ಬಾಶಾಸ್ತ್ರಿಗಳು. ಅದರ ಮೇಲೆ ರಗಳೆ ಬೆಳೆಯಿತು. ಆಗ ವಿಶ್ವೇಶ್ವರಶಾಸ್ತ್ರಿಗಳು ವಾದದಲ್ಲಿ ಸೇರಿಕೊಂಡರು. ಆಗ ಕಾಣಿಸಿಕೊಂಡಿತು ಹುಲಿಬಾಯಿ. ಆ ಹೊತ್ತಿನ ವಾದಿ ಪ್ರತಿವಾದಿಗಳಲ್ಲಿ ಯಾರೋ ಒಬ್ಬರು ಪ್ರಯೋಗಿಸಿದ್ದ ಮಾತು ರೂಪದಲ್ಲಿ ಸಾಧುವಲ್ಲವೆಂದೂ ಅದನ್ನು ಕ್ಲೇಶಪಟ್ಟು ಸಮರ್ಥನೆ ಮಾಡಿದರೂ ಅದು ಅಪಾರ್ಥಕ್ಕೆ ಕಾರಣವಾಗುತ್ತದೆಂದೂ ವಿಶ್ವೇಶ್ವರಶಾಸ್ತ್ರಿಗಳು ಉತ್ತರ ಹೇಳಿದರು. ಎಲ್ಲ ಸಂಸ್ಕೃತದಲ್ಲಿ. ಈ ಉತ್ತರ ಹೇಳುವ ಅವಸರದಲ್ಲಿ ಅವರು ಕೊಟ್ಟ ಉದಾಹರಣೆಗಳು, ಅವರ ಧ್ವನಿ, ಅದರ ಧೋರಣೆ ಅದನ್ನು ನೋಡಿ ಎಲ್ಲರೂ ಬೆರಗಾದರು. ವಾಗ್ಧೋರಣೆ ಎಂದರೆ ಅದು, ಶಾಸ್ತ್ರದ ಮೇಲೆ ಅಧಿಕಾರವೆಂದರೆ ಅದು.

ಹೀಗೆ ಶಾಸ್ತ್ರದ ವಾದಪ್ರತಿವಾದಗಳು ಬಂದ ಹೊರತು ಮಿಕ್ಕ ಹೊತ್ತಿನಲ್ಲಿ ವಿಶ್ವೇಶ್ವರ ಶಾಸ್ತ್ರಿಗಳು ಹಸುಮಗುವಿನಂತೆ ಮೃದು. ನಗುನಗುತ್ತಿರುವರು. ಸುಲಭವಾಗಿ ಮಾತನಾಡುವರು. ಎಲ್ಲರೊಡನೆಯೂ ಬೆರೆಯುವರು. ಶಾಸ್ತ್ರದಲ್ಲಿ ಪ್ರಚಂಡರು; ಮನುಷ್ಯತ್ವದಲ್ಲಿ ಸಹೃದಯರು. ಸರ್ವದಾ ವಿನೀತರು.

ವಿಶ್ವೇಶ್ವರಶಾಸ್ತ್ರಿಗಳ ಉದ್ಯೋಗ

ವಿಶ್ವೇಶ್ವರಶಾಸ್ತ್ರಿಗಳ ಮನೆತನದ ಹೆಸರು ಛಪ್ಪಲ್ಲಿ ಎಂದು. ಆ ಮನೆತನದ ಶಾಖೆಗಳು ಮೂರುನಾಲ್ಕಿರುವಂತೆ ನನಗೆ ತಿಳಿದುಬಂದಿದೆ. ಆದರೆ ಅದು ಒಂದು ಊರಿನ ಹೆಸರೋ, ಅದು ಊರಾಗಿದ್ದ ಪಕ್ಷದಲ್ಲಿ ಎಲ್ಲಿದೆಯೋ ನಾನು ವಿಚಾರಿಸಿಲ್ಲ. ಶಾಸ್ತ್ರಿಗಳವರು ಬೆಂಗಳೂರಿಗೆ ಯಾವಾಗ ಬಂದರೋ ಯಾವ ಸಂದರ್ಭದಲ್ಲಿಯೋ, ಅದೂ ನನಗೆ ತಿಳಿಯದು. ಅವರ ವಿದ್ಯಾಗುರುಗಳ ಹೆಸರೂ ನನಗೆ ಗೊತ್ತಿಲ್ಲ. ಅವರು ೧೮೯೦ ಕ್ಕೆ ಮೊದಲೇ ಬೆಂಗಳೂರಿಗೆ ಬಂದಿದ್ದಿರಬೇಕು. ಆ ಕಾಲದಲ್ಲಿ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ ಇನ್ನೂ ಹುಟ್ಟಿರಲಿಲ್ಲ. ಮೊದಮೊದಲು ವಿಶ್ವೇಶ್ವರಶಾಸ್ತ್ರಿಗಳು ಕೆಲಮಂದಿ ಗೃಹಸ್ಥರ ಮನೆಗಳಲ್ಲಿ ಪಾಠ ಹೇಳುತ್ತಿದ್ದರು. ಅವರಲ್ಲಿ ಮುಖ್ಯರಾದವರು ವಿ. ಎನ್. ನರಸಿಂಹಯ್ಯಂಗಾರ್ಯರು ಮತ್ತು ಬಿ. ವೆಂಕಟಪತಯ್ಯಂಗಾರ್ಯರು. ಇದರ ಜೊತೆಗೆ ಭಾಷ್ಯಂ ತಿರುಮಲಾಚಾರ್ಯರು ಮೊದಲಾದವರ ಪ್ರಯತ್ನಗಳಿಂದ ತುಳಸೀತೋಟದಲ್ಲಿ ಪ್ರಾರಂಭವಾಗಿದ್ದ ಖಾಸಗಿ ಪಾಠಶಾಲೆಯಲ್ಲಿಯೂ ಶಾಸ್ತ್ರಿಗಳು ಉಪಾಧ್ಯಾಯರಾಗಿದ್ದರು. ಆ ಖಾಸಗಿ ಶಾಲೆಯನ್ನು ಸರಕಾರವು ತನ್ನ ಯಾಜಮಾನ್ಯಕ್ಕೆ ತೆಗೆದುಕೊಂಡಿತಂತೆ. ಅದೇ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಮೂಲರೂಪ. ಹಾಗೆ ಬದಲಾವಣೆ ನಡೆದು ಅಲ್ಲಿಂದ ಮುಂದಕ್ಕೆ ವಿಶ್ವೇಶ್ವರಶಾಸ್ತ್ರಿಗಳು ಸರಕಾರಿ ನೌಕರರಾದರು. ಅವರ ಕೈಗೆ ಹುಕುಂ ತಲಪಿದ ದಿವಸ ಆ ಸಂತೋಷವನ್ನು ಹೇಳಿಕೊಳ್ಳಬೇಕೆಂದು ಶಾಸ್ತ್ರಿಗಳು ವಿ. ಎನ್. ನರಸಿಂಹಯ್ಯಂಗಾರ್ಯರ ಮನೆಗೆ ಹೋದರಂತೆ. ಅಯ್ಯಂಗಾರ್ಯರು ಸಂತೋಷಪಟ್ಟು

> ಶಾಸ್ತ್ರಿಭಾವಮಪಾಕೃತ್ಯ
> ಮೇಸ್ತ್ರಿಭಾವಮುಪಾಕೃತಃ ॥

–ಎಂದು ಅಭಿನಂದಿಸಿದರಂತೆ. “ಇದುವರೆಗೂ ಶಾಸ್ತ್ರಿಗಳಾಗಿದ್ದಿರಿ. ಇನ್ನು ಮೇಲೆ ಮೇಸ್ತ್ರಿ”

ಇದಕ್ಕೆ ಎರಡರ್ಥ: ಸ್ಕೂಲ್ ಮೇಷ್ಟರೆಂದಾದರೂ ಆಗಬಹುದು; ಕೂಲಿಯಾಳುಗಳ ಮೇಲೆ ಉಸ್ತುವಾರಿ ನಡಸುವವನೆಂದಾದರೂ ಆಗಬಹುದು. ಇಂಥ ಕುಚೋದ್ಯಗಳನ್ನು ಮಾಡುವುದರಲ್ಲಿ ವಿ. ಎನ್. ನರಸಿಂಹಯ್ಯಂಗಾರ್ಯರು ಹೆಸರುವಾಸಿಯಾಗಿದ್ದರು.

ವಿ. ಎನ್. ನರಸಿಂಹಯ್ಯಂಗಾರ್ಯರು ಸ್ವತಂತ್ರ ಚರಿತ್ರೆಗೆ ತಕ್ಕವರು.

ವಿಶ್ವೇಶ್ವರಶಾಸ್ತ್ರಿಗಳು ಸಂಸ್ಕೃತ ಪಾಠಶಾಲೆಯ ಕೆಲಸದಿಂದ ಸೆಂಟ್ರಲ್ ಕಾಲೇಜಿಗೆ ಬಂದರು, ಸಂಸ್ಕೃತ ಪಂಡಿತರಾಗಿ.

ಬಹುಶಃ ಈ ಸುಮಾರಿನಲ್ಲಿ, ಆರ್ಕಾಟ್ ಶ್ರೀನಿವಾಸಾಚಾರ್ಲು ಅವರು ಮುಜರಾಯಿ ಇಲಾಖೆಯ ಮುಖ್ಯಸ್ಥರಾಗಿ ದೇವಸ್ಥಾನಗಳ ಆಡಳಿತವನ್ನು ಕ್ರಮಕ್ಕೆ ತರಲು ಪ್ರಯತ್ನಿಸುತ್ತಿದ್ದ ಕಾಲದಲ್ಲಿ ಅವರ ಬೇಡಿಕೆಯಂತೆ ವಿಶ್ವೇಶ್ವರಶಾಸ್ತ್ರಿಗಳು “ಶೈವಾಗಮ ಸಾರ” ಎಂಬ ಗ್ರಂಥವನ್ನು ಪ್ರಕಟನೆಗಾಗಿ ಪರಿಷ್ಕಾರ ಮಾಡಿಕೊಟ್ಟರು.

ಅವರಿಗಿಂತ ಹಿಂದೆ ಸೆಂಟ್ರಲ್ ಕಾಲೇಜಿನಲ್ಲಿ ಪಂಡಿತರಾಗಿದ್ದವರು ರಾಮಶೇಷ ಶಾಸ್ತ್ರಿಗಳೆಂಬವರು. ಅವರನ್ನು ಕುರಿತು ಹೇಳಬೇಕಾದ ಮಾತು ಒಂದಿದೆ.

ರಾಮಶೇಷಶಾಸ್ತ್ರಿಗಳು

ರಾಮಶೇಷಶಾಸ್ತ್ರಿಗಳ ವಿಷಯ ನನಗೇನೂ ತಿಳಿಯದು. ಅವರ ಶಿಷ್ಯರಲ್ಲೊಬ್ಬರಾಗಿದ್ದ ನವರತ್ನ ರಾಮರಾಯರು ನನಗೆ ಹೇಳಿದ ಒಂದು ಸಂಗತಿಯನ್ನು ಹೇಳುತ್ತೇನೆ.

ರಾಮಶೇಷಶಾಸ್ತ್ರಿಗಳು ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಘನವಿದ್ವಾಂಸರು. ಅವರು ಕಾವ್ಯಪಾಠ ಹೇಳುತ್ತಿದ್ದುದು ಬಹು ಸೊಗಸಂತೆ. ಕನ್ನಡದ ಪದ್ಯಗಳನ್ನೂ ವೃತ್ತಗಳನ್ನೂ ಬಹು ಮನೋಹರ ಶೈಲಿಯಲ್ಲಿ ಓದಿ ವಿವರಿಸುತ್ತಿದ್ದರಂತೆ. ಅವರು ಪಾಠ ಹೇಳುವಾಗ ಅದನ್ನು ಆಲಿಸಲು ಆ ತರಗತಿಗೆ ಸೇರದಿದ್ದ ಇತರ ವಿದ್ಯಾರ್ಥಿಗಳೂ ಪ್ರೊಫೆಸರುಗಳೂ ಸಹ ಕಿಟಕಿಗಳ ಮುಂದೆ ನಿಂತು ಕೇಳುತ್ತಿದ್ದರಂತೆ. ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರಾಗಿದ್ದ ಜೆ. ಜಿ. ಟೇಟ್‌ರವರು ಕೂಡ ಹಾಗೇ ಕೇಳಿ ಸಂತೋಷಿಸಿದ್ದುಂಟಂತೆ.

ಟೇಟ್ ಸಾಹೇಬರು ಕೊಂಚ ಕೊಂಚ ಕನ್ನಡ ಕಲಿತಿದ್ದರು. ಸಂಸ್ಕೃತ ಕೂಡ ಕಲಿಯಲು ಪ್ರಾರಂಭಿಸಿದ್ದರು.

ಒಂದು ದಿನ ಬೆಳಗ್ಗೆ ಕಾಲೇಜು. ರಾಮಶೇಷಶಾಸ್ತ್ರಿಗಳು ಕಾಲೇಜಿಗೆ ಬಂದಿದ್ದರು, ನಿಯಮಾನುಸಾರವಾಗಿ. ಆಗ ಅವರಿಗೆ ಕ್ಲಾಸು ಇರಲಿಲ್ಲ. ಬಿಡುವಾಗಿದ್ದದ್ದರಿಂದ ಅವರೂ ಮತ್ತಿಬ್ಬರು ಸಹೋಪಾಧ್ಯಾಯರುಗಳೂ ಕಾಲೇಜ್ ಕಟ್ಟಡದ ಮುಂದಣ ವರಾಂಡದಲ್ಲಿ ನಿಂತು ಏನೋ ಮಾತನಾಡುತ್ತಿದ್ದರು. ಆ ಹೊತ್ತಿಗೆ ಸರಿಯಾಗಿ ಟೇಟ್ ಸಾಹೇಬರ ಸವಾರಿ ಅಲ್ಲಿಗೆ ಬಂದಿತು. ಅವರೂ ಮಾತಿನಲ್ಲಿ ಸೇರಿದರು. ಐದು ನಿಮಿಷವಾದ ಬಳಿಕ ಟೇಟ್ ಸಾಹೇಬರು ತಾವು ಹೊರಡಲು ಅಪ್ಪಣೆ ಬೇಡಿದರು. ಆಗ ನಾಲ್ವರೈವರೊಡನೆಯೂ ಕೈ ಕುಲುಕಿದರು (ಷೇಕ್‌ಹ್ಯಾಂಡ್). ಹಾಗೆಯೇ ತಮ್ಮ ಕೈಯನ್ನು ರಾಮಶೇಷಶಾಸ್ತ್ರಿಗಳ ಕಡೆ ಚಾಚಿದರು.

ರಾ: "ದಯವಿಟ್ಟು ಮಾಫ್ ಮಾಡಬೇಕು. ನಿಮ್ಮ ಕೈಯನ್ನು ನಾನು ಮುಟ್ಟುವುದಿಲ್ಲ."

ಟೇ: (ಕನ್ನಡದಲ್ಲಿಯೇ) "ಅದು ಯಾಕೆ?"

ರಾ: "ನೀವು ಬಾಯಲ್ಲಿ ಚುಟ್ಟಾ ಇಟ್ಟುಕೊಂಡು ಅದನ್ನು ಮುಟ್ಟಿಕೊಂಡಿದ್ದೀರಿ ಅದು ಎಂಜಲು."

ಟೇಟ್ ಸಾಹೇಬರು ಕೂಡಲೆ ತಮ್ಮ ಬಾಯಲ್ಲಿದ್ದ ಚುಟ್ಟಾ ತುಂಡನ್ನು ಬಿಸಾಟು, ಕೋಣೆಯೊಳಕ್ಕೆ ಹೋಗಿ ಕೈತೊಳೆದುಕೊಂಡು ಬಂದು ಕೈ ಚಾಚಿದರು.

ಟೇ: (ಕನ್ನಡದಲ್ಲಿಯೇ) "ಈಗ ಆಗಬಹುದಲ್ಲ?"

ರಾ: "ಈಗಲೂ ಸಾಧ್ಯವಿಲ್ಲ, ಈ ಹೊತ್ತು ಅಮಾವಾಸ್ಯೆ. ನಾನು ಮನೆಗೆ ಹೋಗಿ ಸ್ನಾನಾದಿ ಶುದ್ಧಿಗಳನ್ನು ಮಾಡಿಕೊಂಡು ಪವಿತ್ರವಾದ ಕರ್ಮ ಮಾಡಬೇಕಾಗಿದೆ. ಆದ್ದರಿಂದ ನಿಮ್ಮನ್ನು ಮುಟ್ಟಲಾರೆ."

ಟೇ: "ಹಾಗಾದರೆ ನಾನು ನಿಮ್ಮ ಕೈ ಕುಲುಕುವುದು ಯಾವಾಗ? ಅದರಿಂದ ನನಗೆ ಸಂತೋಷವಾಗುತ್ತದೆ."

ರಾ: ನಿಮಗೆ ಸಂತೋಷವಾಗುವ ಕೆಲಸವನ್ನು ಮಾಡುವುದು ನನಗೆ ಸಂತೋಷ. ಇನ್ನೊಂದು ದಿನ ಹೀಗೆಯೇ ಬೆಳಗ್ಗೆ ಕಾಲೇಜಿರುವಾಗ ನಾನು ತಮ್ಮಲ್ಲಿ ಬಂದು ತಿಳಿಸುತ್ತೇನೆ. ಆ ದಿನ ತಾವು ಷೇಕ್‌ಹ್ಯಾಂಡ್ ಮಾಡಬಹುದು."

ಟೇಟ್ ಸಾಹೇಬರಿಗೆ ಇದರಿಂದ ತುಂಬ ಮೆಚ್ಚಿಕೆಯಾಯಿತು. ಅವರು ರಾಮಶೇಷಶಾಸ್ತ್ರಿಗಳ ಸ್ವವ್ರತನಿಷ್ಠೆಯನ್ನು ಪ್ರಶಂಸೆ ಮಾಡಿ ಶಿಷ್ಯರಿಗೆ ಹೇಳಿದರು.

ಮಂತ್ರಾಧಿಕಾರ

ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು ಸೆಂಟ್ರಲ್ ಕಾಲೇಜಿನಲ್ಲಿ ಸಂಸ್ಕೃತ ಸಾಹಿತ್ಯಾಧ್ಯಾಪಕರಾಗಿ ಬಹುಮಂದಿ ಶಿಷ್ಯರ ಕೃತಜ್ಞತೆಯನ್ನೂ ಗೌರವವನ್ನೂ ಸಂಪಾದಿಸಿದರು. ಅವರ ಕಾವ್ಯದ ಓದುಗಾರಿಕೆಯಲ್ಲಿ ಸಂಗೀತದ ಇಂಪೂ ಇರಲಿಲ್ಲ; ಕಂಠಮಾಧುರ್ಯವೂ ಇರಲಿಲ್ಲ. ಆದರೆ ಅವರ ವ್ಯಾಖ್ಯಾನ ವೈಖರಿ ಕಾಂತಿಯುಳ್ಳದ್ದು. ಅವರು ಪದಪದವನ್ನು ಬೇರೆ ಬೇರೆ ಬಿಡಿಸಿ ಪದದ ಜಾಯಮಾನವನ್ನು ಉದಾಹರಣೆಗಳಿಂದ ತೋರಿಸಿ, ಕವಿಯ ಆಶಯವನ್ನೂ ಅಂತರಂಗವನ್ನೂ ಮಂದಟ್ಟು ಮಾಡಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಇದಕ್ಕಿಂತ ದೊಡ್ಡ ಉಪಕಾರವೇನಿದ್ದೀತು?

ವಿಶ್ವೇಶ್ವರಶಾಸ್ತ್ರಿಗಳು ಆಚಾರನಿಷ್ಠರು ಮತ್ತು ಉದಾರಿಗಳು. ವರ್ಷೇ ವರ್ಷೇ ತಮ್ಮ ಮನೆಯಲ್ಲಿ ರಾಮೋತ್ಸವ ನಡಸುತ್ತಿದ್ದರು. ಇತರ ಸಂದರ್ಭಗಳಲ್ಲಿಯೂ ಇಂಥ ವಿಶೇಷ ಪೂಜೆ ಪಾರಾಯಣಗಳು ನಡೆಯುತ್ತಿದ್ದವು. ನಾನು ಒಂದು ಸಾರಿ ಕೇಳಿದೆ ಅವರನ್ನು:

ನಾನು: "ತಾವು ವಿದ್ವಾಂಸರು. ಆದರೆ ಮನೆಯಲ್ಲಿ ಶ್ರಾದ್ಧಾದಿ ಕರ್ಮಗಳು ನಡೆಯುವಾಗ ಬೇರೆ ಪುರೋಹಿತರನ್ನಿಟ್ಟುಕೊಳ್ಳುತ್ತೀರಿ. ಅದು ಏಕೆ?"

ವಿ: "ಪುರೋಹಿತನು ಒಂದು ಅವಶ್ಯವಾದ ಕರ್ಮಾಂಗ. ಮಂತ್ರಾಧಿಕಾರಿಯಾದ ಪುರೋಹಿತನ ಮನೆಯಲ್ಲಿ ಯಾವ ಕರ್ಮ ನಡೆಯಬೇಕಾದರೂ ಅವನೂ ಬೇರೊಬ್ಬ ಪುರೋಹಿತನನ್ನಿಟ್ಟುಕೊಳ್ಳಬೇಕು. ಅದೇ ಶಾಸ್ತ್ರ."

ಚಾಮರಾಜಪೇಟೆಯ ವಿದ್ವದ್ಗೋಷ್ಠಿ

ವಿಶ್ವೇಶ್ವರಶಾಸ್ತ್ರಿಗಳ ಮನೆಗೆ ವಿದ್ವಾಂಸರು ಬಹುಮಂದಿ ಬರುತ್ತಿದ್ದುದುಂಟು. ಹೊಸಕೋಟೆ ವೆಂಕಟರಾಮ ಶಾಸ್ತ್ರಿ, ನರಸಿಂಹಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು, ತಿರುಮಲಾಚಾರ್ಯರು, ಹರಿಯಾಚಾರ್ಯರು, ಗರಣಿ ಕೃಷ್ಣಾಚಾರ್ಯರು, ಮುತ್ತೂರು ನರಹರಿಶಾಸ್ತ್ರಿಗಳು, ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರು, ಮೊದಲಾದವರು ಮುಖ್ಯರು. ಇವರಲ್ಲೆಲ್ಲ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳವರಿಗೆ ವಿಶ್ವೇಶ್ವರಶಾಸ್ತ್ರಿಗಳವರಲ್ಲಿ ತುಂಬ ಸಲಿಗೆ. ವಿಶ್ವೇಶ್ವರಶಾಸ್ತ್ರಿಗಳು ಸಂಜೆ ವರಾಂಡದಲ್ಲಿ ಕೂಡುವರು. ಪಂಡಿತರು ಬಂದು ಸೇರುವರು. ಯಾವುದೋ ವ್ಯಾಕರಣ ವಿಚಾರ ಅಥವಾ ಅಲಂಕಾರಶಾಸ್ತ್ರ ವಿಚಾರ, ಅಥವಾ ಯಾವುದೋ ವ್ಯಾಖ್ಯಾನ ವಿವರ ಚರ್ಚೆಗೆ ಬರುವುದು. ಶಂಕರಶಾಸ್ತ್ರಿಗಳು ತಾವು ರಚಿಸಿದ್ದ ಪದ್ಯವನ್ನು ಹೇಳುವರು. ಎಲ್ಲರೂ ವಿನೋದದಿಂದ ಮಾತನಾಡುವರು.

ತಿರುವಾಡಿಯ ಪರಿಷತ್ತು

೧೯೧೧ ರ ಸುಮಾರಿನಲ್ಲಿ ದಕ್ಷಿಣದೇಶದ ತಿರುವಾಡಿ ಎಂಬಲ್ಲಿ ಒಂದು ವಿದ್ವತ್ಪರಿಷತ್ತು ನಡೆಯಿತು. ಹಿಂದೂ ಸಮಾಜದ ವಿಧಿಸಂಪ್ರದಾಯಗಳಲ್ಲಿ ಅವಶ್ಯವಾದ ಸುಧಾರಣೆಗಳು (Reforms) ಏನೆಂಬುದನ್ನು ಕುರಿತು ವಿಚಾರ ಮಾಡುವುದಕ್ಕಾಗಿ ಸೇರಿದ್ದದ್ದು ಆ ಪರಿಷತ್ತು. ವಿಶ್ವೇಶ್ವರಶಾಸ್ತ್ರಿಗಳೂ ಆ ಪರಿಷತ್ತಿಗೆ ದಯಮಾಡಿಸಿದರು. ಅಲ್ಲಿಂದ ಅವರು ವಾಪಸ್ ಬಂದ ದಿನ ಗಾಡಿಯಿಂದಿಳಿದ ಕೂಡಲೆ ನಾನು ಅವರಿಗೆ ಯಥಾಪ್ರಕಾರ ನಮಸ್ಕಾರ ಮಾಡಿದೆ. ಅವರು ಸಂತೋಷಚಿತ್ತರಾಗಿದ್ದರು. ಕುಶಲಪ್ರಶ್ನೆಗಳಾದ ಬಳಿಕ ನಾನು ಅವರನ್ನು ವಿದ್ವತ್ಪರಿಷತ್ತಿನ ವಿಷಯ ಪ್ರಶ್ನೆಮಾಡಿದೆ. ಅವರು ಹೇಳಿದ್ದು ಹೀಗೆ:

ವಿ: “ಪರಿಷತ್ತಿಗೆ ಮಹಾ ಮಹಾ ವಿದ್ವಾಂಸರು ಬಂದಿದ್ದರು. ಪ್ರೊಫೆಸರ್ ಮಳೂರು ರಂಗಾಚಾರ್ಯರು, ಪ್ರೊಫೆಸರ್ ಕುಪ್ಪುಸ್ವಾಮಿಶಾಸ್ತ್ರಿಗಳು, ಪ್ರೊಫೆಸರ್ ಸುಂದರರಾಮ ಅಯ್ಯರ್, ಯಾರೋ ಇಬ್ಬರು ಹೈಕೋರ್ಟ್ ಜಡ್ಜಿಗಳು, ವಕೀಲರುಗಳು ಆ ಸಭೆಯಲ್ಲಿದ್ದರು. ಅದರ ವಿಶೇಷವೇನೆಂದರೆ ಈ ಲೌಕಿಕ ವಿದ್ವಾಂಸರುಗಳಿಗೆ ನಮಗೆಲ್ಲ ಬರುವಷ್ಟು ಸಂಸ್ಕೃತ ಬರುತ್ತದೆ. ಶಾಸ್ತ್ರಗ್ರಂಥಗಳನ್ನು ಅವರೆಲ್ಲ ನಮ್ಮಂತೆಯೇ ನೋಡಿದ್ದಾರೆ. ಹೀಗೆ ಅವರಿಗೆ ನಮ್ಮ ಶಾಸ್ತ್ರದ ತಿಳಿವಳಿಕೆ ಇರುವುದಲ್ಲದೆ ನನ್ನಂಥ ವೈದಿಕರಿಗೆ ದುರ್ಲಭವಾದ ಲೋಕಪರಿಜ್ಞಾನವೂ ಅವರಿಗಿದೆ. ನಿಮ್ಮ ಕಾಲದ ಸೆನ್ಸಸ್ ಎನ್ನುತ್ತೀರಲ್ಲ-ಜನಸಂಖ್ಯೆ, ನಾನಾ ಮತಸ್ಥರ ಸಂಖ್ಯೆ-ಈ ಮೊದಲಾದ ಸಂಗತಿಗಳನ್ನು ನಾವೇನು ಬಲ್ಲೆವು? ಈಗ ಅನೇಕ ವಿಜ್ಞಾನ ಚಮತ್ಕಾರಗಳು ನಡೆಯುತ್ತಿವೆ. ಇದನ್ನು ಆ ಲೌಕಿಕರು ಅಷ್ಟಿಷ್ಟುಬಲ್ಲರು. ಹೀಗೆ ಶಾಸ್ತ್ರಪಾಂಡಿತ್ಯದ ದೃಷ್ಟಿಯಿಂದ ನೋಡಿದರೆ ಆ ಲೌಕಿಕರು ನಮಗಿಂತ ಕಡಮೆಯಿಲ್ಲ. ಒಂದಂಶದಲ್ಲಿ ನಮಗಿಂತ ಅವರು ಹೆಚ್ಚು. ಇನ್ನು ಧರ್ಮಶ್ರದ್ಧೆಯ ಮಾತೋ ಎಂದರೆ-ಈ ವಿಷಯದಲ್ಲಿ ಅವರು ಕಡಮೆ, ನಾವು ಹೆಚ್ಚು ಎಂದು ನಾವು ಹೇಳಿಕೊಳ್ಳುವುದು ಪ್ರಾಮಾಣಿಕವಾದೀತೆ? ರಂಗಾಚಾರ್ಯರು, ಸುಂದರರಾಮಯ್ಯರ್ ಮೊದಲಾದವರಿಗೆ ಧರ್ಮಶ್ರದ್ಧೆಯಲ್ಲಾಗಲಿ ಲೋಕಹಿತವಿಚಾರದಲ್ಲಾಗಲಿ ನ್ಯೂನತೆಯುಂಟೆಂದು ಯಾರು ಹೇಳಿಯಾರು?”

ನಾನು: “ಹಾಗಾದರೆ ಅವರು ಮಾಡಿದ ತೀರ್ಮಾನಗಳನ್ನು ವೈದಿಕರು ಅಂಗೀಕರಿಸಿದರಷ್ಟೆ?”

ವಿ: “ಅಲ್ಲಿ ಬಂದ ವಿಷಯಗಳೆಲ್ಲ ಶಾಸ್ತ್ರದ ದೃಷ್ಟಿಯಿಂದಲೂ ಯುಕ್ತಿಯ ದೃಷ್ಟಿಯಿಂದಲೂ ಸಾಧುವಾಗಿಯೇ ಇವೆ.”

ನಾನು: “ಹಾಗಾದರೆ ತಾವು ಅದನ್ನು ಒಪ್ಪಿದ್ದಾಯಿತಷ್ಟೆ?”

ವಿ: “ಕೆಲವು ವಿಷಯಗಳು ನನಗೆ ಅನ್ವಯಿಸತಕ್ಕವಲ್ಲ. ವಿಧವಾ ವಿವಾಹವನ್ನಾಗಲಿ ದ್ವಿತೀಯ ವಿವಾಹವನ್ನಾಗಲಿ ನಾನು ಮಾಡಿಕೊಳ್ಳುವ ವಯಸ್ಸೆ ನನಗೆ? ಇಂಥ ಕೆಲವು ಪ್ರಶ್ನೆಗಳು ವೈಯಕ್ತಿಕವಾಗಿ ನನ್ನನ್ನು ಮುಟ್ಟಲಾರವು. ಆದರೆ ಸಾಮಾನ್ಯವಾಗಿ ಆ ಪರಿಷತ್ತಿನ ಮನೋಭಾವವನ್ನೂ ವಿಚಾರ ಧೋರಣೆಯನ್ನೂ ಎಲ್ಲರೂ ಅಂಗೀಕರಿಸಿದ್ದೇವೆ. ಅದು ಯಾರಾದರೂ ಅಂಗೀಕರಿಸಬೇಕಾದದ್ದೇ!”

ಹೀಗೆ ವಿನಯಸಮನ್ವಿತವೂ ಉದಾರವೂ ಆದದ್ದು ಶಾಸ್ತ್ರಿಗಳ ಮನೋಭಾವ.

ಹೃದಯವೈಶಾಲ್ಯ

ಒಂದು ದಿನ ಮಧ್ಯಾಹ್ನ ನಾನು ಶಂಕರಶಾಸ್ತ್ರಿಗಳ ಮನೆಗೆ ಹೋದೆ. ಅವರು ಮನೆಯಿಂದ ಹೊರಡುವುದರಲ್ಲಿದ್ದರು. ನನ್ನನ್ನು ಜೊತೆಯಲ್ಲಿ ಬರುವಂತೆ ಕರೆದರು. ನಾನು "ಎಲ್ಲಿಗೆ?" ಎಂದು ಕೇಳಿದೆ. ಅವರು "ನಾನು ಕರೆದುಕೊಂಡು ಹೋಗುವ ಕಡೆಗೆ" ಎಂದರು. ಅವರಿಗೆ ನನ್ನಲ್ಲಿ ತುಂಬ ವಾತ್ಸಲ್ಯ, ಸಲಿಗೆ. ನಾನು ಸಂತೋಷದಿಂದ ಅವರ ಹಿಂದೆ ಹೊರಟೆ. ವಿಶ್ವೇಶ್ವರಶಾಸ್ತ್ರಿಗಳ ಮನೆಗೆ ಬರುವ ವೇಳೆಗೆ ಅವರೂ ಹೊರಟು ನಮ್ಮನ್ನು ನಿರೀಕ್ಷಿಸಿಕೊಂಡು ನಿಂತಿದ್ದರು. ಹೊಸಕೋಟೆಯವರೂ ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರೂ ಇತರ ವಿದ್ವಾಂಸರೂ ಸೇರಿದ್ದರು.

ಈ ಗುಂಪು ಚಾಮರಾಜಪೇಟೆಯ ಐದನೆಯ ಬೀದಿಯಲ್ಲಿ ಹೊರಟು ಪುಟ್ಟಣ್ಣ ಶೆಟ್ಟರವರ ಬಂಗಲೆಯ ಹಿಂದುಗಡೆಯ ರಸ್ತೆಯಲ್ಲಿರುವ ಅನಗೊಂಡಹಳ್ಳಿ ಸುಬ್ಬಣ್ಣನವರ ತೋಟದ ಬಳಿ ಬಂದಿತು. ಅಲ್ಲಿ ಒಂದು ಸಣ್ಣ ಶ್ರೀ ವಿಘ್ನೇಶ್ವರ ದೇವಾಲಯವಿದೆ.

ಶಂಕರಶಾಸ್ತ್ರಿಗಳು ದೇವಸ್ಥಾನದ ಬಾಗಿಲನ್ನು ಒಂದೆರಡು ಸಲ ಮೆಲ್ಲಗೆ ತಟ್ಟಿದರು. ಒಳಗಿನಿಂದ ಒಬ್ಬ ಸಂನ್ಯಾಸಿಗಳು ಬಂದು ಬಾಗಿಲು ತೆರೆದು ಸಂಸ್ಕೃತದಲ್ಲಿ ಎಲ್ಲರನ್ನೂ ಕರೆದರು.

ಆ ಸಂನ್ಯಾಸಿಯ ವಯಸ್ಸು ಮೂವತ್ತೈದು ನಲವತ್ತು ಇರಬಹುದು. ಕಾವಿ ಶಾಟಿಯನ್ನು ಹಾಸಿ ಅದರ ಮೇಲೆ ಮಲಗಿದ್ದಿರಬೇಕೆಂದು ತೋರುತ್ತದೆ. ತಲೆದಿಂಬಿನ ಕಡೆ ಮೂರು ನಾಲ್ಕು ಭಾರಿ ಪುಸ್ತಕಗಳಿದ್ದವು. ಆತನ ಮಾತಿನ ಧೋರಣೆಯಿಂದ ಅವರು ಬಂಗಾಳ ದೇಶದವರೆಂದು ತೋರಿತು. ಅವರು ಸಂಸ್ಕೃತ ಭಾಷೆಯಲ್ಲಿ ಮಾತು ಪ್ರಾರಂಭ ಮಾಡಿ ಸಂತೋಷವನ್ನು ಸೂಚಿಸಿದರು.

ಶಂಕರಶಾಸ್ತ್ರಿಗಳು ಸಂಸ್ಕೃತದಲ್ಲಿ ಉತ್ತರ ಹೇಳಿ "ನಾವೆಲ್ಲ ತಮ್ಮ ಅಮೃತವಾಣಿಯನ್ನು ಕೇಳುವುದಕ್ಕೆ ಬಂದಿದ್ದೇವೆ. ಯಾವ ವಿಷಯವನ್ನಾದರೂ ಕುರಿತು ನಮಗೆ ತಿಳಿವಳಿಕೆ ಕೊಡಬೇಕು" ಎಂದು ಬೇಡಿದರು. ಸ್ವಾಮಿಗಳು "ನನಗೆ ತಿಳಿದಿರುವುದು ಪರಿಮಿತವಾದದ್ದು. ಏನು ಹೇಳಲಿ?" ಎಂದರು. ಶಂಕರಶಾಸ್ತ್ರಿಗಳವರು "ಬ್ರಹ್ಮಸೂತ್ರದ ಆನಂದ ಮಯಾಧಿಕರಣದಲ್ಲಿ 'ಆನಂದಮಯೋಽಭ್ಯಾಸಾತ್' ಎಂಬ ಸೂತ್ರವುಂಟಷ್ಟೆ? ಅದರ ಮೇಲೆ ವ್ಯಾಖ್ಯಾನವಾಗಬಹುದು" ಎಂದು ಬೇಡಿದರು.

ಸ್ವಾಮಿಗಳು ಸುಮಾರು ಹದಿನೈದು ಇಪ್ಪತ್ತು ನಿಮಿಷ ಉಪನ್ಯಾಸ ಮಾಡಿದರು: ‘ಮಯಟ್’ ಶಬ್ದದ ವ್ಯಾಪ್ತಿ ತಾತ್ಪರ್ಯಗಳ ವಿಷಯ. ಆ ವಾಕ್ಸರಣಿಯಿಂದ ಸಭಿಕರೆಲ್ಲ ಮೈಮರೆತಂತಿದ್ದರು. “ಇಂದವಾಣಿಯನ್ನು ಕೇಳುವುದಕ್ಕಿಂತ ದೊಡ್ಡ ಭಾಗ್ಯವೇನಿದ್ದೀತು!” ಎಂದು ಮಾತನಾಡಿಕೊಂಡರು. ವಿಶ್ವೇಶ್ವರಶಾಸ್ತ್ರಿಗಳು ಅದುವರೆಗೂ ಮೂಕರಂತೆ ಇದ್ದವರು ಆಗ ಎದ್ದು ಮೈ ಮೇಲಿದ್ದ ಧೋತ್ರವನ್ನು ನಡುವಿಗೆ ಸುತ್ತಿ ಎರಡನೆಯ ಸಾರಿ ಸಾಷ್ಟಾಂಗ ನಮಸ್ಕಾರ ಮಾಡಿ ಹೀಗೆಂದರು:

“ನಮಗೆ ಈ ಹೊತ್ತು ಶ್ರೀಮಧ್ವಾಚಾರ್ಯರ ದರ್ಶನ ಸಾಕ್ಷಾತ್ತಾಗಿ ಅನುಭವವಾದಂತಿದೆ. ನಾವು ಧನ್ಯರಾದೆವು. ಶ್ರೀಗಳವರು ನಾಳೆ ನನ್ನಲ್ಲಿ ಭಿಕ್ಷೆಗೆ ದಯಮಾಡಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು.”

ಸ್ವಾಮಿಗಳು ತಾವು ತೀರ್ಥಯಾತ್ರೆಯಲ್ಲಿರುವುದಾಗಿಯೂ ಯಾವ ಗ್ರಾಮದಲ್ಲೂ ಒಂದು ರಾತ್ರಿಗಿಂತ ಹೆಚ್ಚು ಉಳಿಯಕೂಡದೆಂಬುದು ತಮ್ಮ ವ್ರತವೆಂಬುದಾಗಿಯೂ ತಿಳಿಸಿದರು.

ವಿಶ್ವೇಶ್ವರಶಾಸ್ತ್ರಿಗಳು, ಆ ವ್ರತಕ್ಕೆ ಭಂಗ ತಾರದಂತೆ ತಾವು ಪ್ರಾರ್ಥಿಸಿದ್ದಾಗಿಯೂ ಮಧ್ಯಾಹ್ನ ಭಿಕ್ಷೆಯಾದದ್ದರಿಂದ ಅನಂತರ ಪ್ರಯಾಣ ಬೆಳೆಸಬಹುದೆಂದೂ ವಿಜ್ಞಾಪಿಸಿದರು. ಅದರಂತೆ ಸ್ವಾಮಿಗಳು ನಡಸಿಕೊಟ್ಟರು. ನಮ್ಮ ವಿದ್ವಜ್ಜನರಿಗೆಲ್ಲ ಅದರಿಂದ ಬಹು ಆನಂದವಾಯಿತು.

ವಿದ್ವತ್ಪ್ರೇಮ

ಇನ್ನೊಂದು ದಿನ ಶಂಕರಪುರದ ದಕ್ಷಿಣ ಭಾಗದಿಂದ ನಾನು ಮಠದ ಬೀದಿಯಲ್ಲಿ ಬರುತ್ತಿದ್ದೆ. ಶಂಕರಮಠದ ಮುಂದಿನ ವರಾಂಡದಲ್ಲಿ ಒಂದು ಗೋಷ್ಠಿ ನೆರೆದಿತ್ತು. ಬೆಳಗ್ಗೆ ಸುಮಾರು ೧೦-೧೧ ಘಂಟೆ. ವಿಶ್ವೇಶ್ವರಶಾಸ್ತ್ರಿಗಳೂ ಶಂಕರ ಶಾಸ್ತ್ರಿಗಳೂ ಅಲ್ಲಿದ್ದರು. ಅದನ್ನು ಕಂಡು ನಾನೂ ಹೋದೆ. ವಿಶ್ವೇಶ್ವರಶಾಸ್ತ್ರಿಗಳು ಹೇಳಿದರು:

"ನೋಡಿ ಈತನನ್ನ, ಹುಟ್ಟು ಕುರುಡನಂತೆ. ಸಂಸ್ಕೃತದಲ್ಲಿ ಮಹಾವಿದ್ವಾಂಸನಂತೆ ತೋರುತ್ತಾನೆ. ಆತ ಇಂಡಿಯ ದೇಶದಲ್ಲೆಲ್ಲ ಪ್ರಯಾಣಮಾಡುತ್ತಿದ್ದಾನೆ. ಉದ್ದೇಶವೇನೆಂದರೆ, ಆರ್ಯಜನಕ್ಕೆ ಹಿಂದೂ ಎಂಬ ಹೆಸರು ಯುಕ್ತವಾದದ್ದಲ್ಲ. ಅದನ್ನು ತೊಡೆದುಹಾಕಿಸುವಂತೆ ಮಾಡಬೇಕೆಂದು ಈತನ ಪ್ರಯತ್ನ. ಹಿಂದೂ ಎಂಬ ಪದವು 'ಹಿಂಸ್' ಧಾತುವಿನಿಂದ ಬಂದಿದೆ; ನಮ್ಮ ಮೊದಲನೆಯ ಧರ್ಮ ಅಹಿಂಸೆ; ಇಂಥ ಜನಾಂಗಕ್ಕೆ 'ಹಿಂಸ್' ಧಾತುವಿನಿಂದ ಉತ್ಪನ್ನವಾದ ಹಿಂದೂ ಎಂಬ ಹೆಸರನ್ನಿಡುವುದು ಅಯಥಾರ್ಥ, ಆದದ್ದರಿಂದ ಅನ್ಯಾಯ. ಇದು ಹೂಣರು ಕ್ರಿಶ್ಚಿಯನರು ಮಾಡಿರುವ ಆಲೋಚನೆ. ಆದದ್ದರಿಂದ ನಾವೆಲ್ಲ ಪ್ರತಿಭಟಿಸಬೇಕಂತೆ."

ಶಾಸ್ತ್ರಿಗಳು ಕೊಟ್ಟ ಈ ವಿವರಣೆಯನ್ನು ಕೇಳಿ ನಾನೂ ಅಲ್ಲಿರಬೇಕೆನಿಸಿತು. ಆ ಮಹನೀಯನ ಸಂಸ್ಕೃತವಾಗ್ಝರಿಯನ್ನು ಕೇಳಿದೆ. ಆತನ ಮೈಮೇಲಿದ್ದದ್ದು ಕೊಳಕು ಜುಬ್ಬಾ. ಆತ ಉಟ್ಟಿದ್ದದ್ದು ಹರಕಲು ಬಟ್ಟೆ. ಈ ಮಹಾನುಭಾವ ಇಂಥ ಪಾಂಡಿತ್ಯವನ್ನು ಹೇಗೆ ಸಂಪಾದಿಸಿದ?-ಎಂಬುದೇ ನನ್ನ ಆಗಿನ ಅಚ್ಚರಿ. ಆತನನ್ನು ಕರೆದುಕೊಂಡು ಹೋಗುವುದಕ್ಕೂ ಸಹಾಯಕ್ಕೂ ಒಬ್ಬ ಆಳು ಇದ್ದ. ಈ ಸಿಬ್ಬಂದಿಯನ್ನು ಆತ ಹೇಗೆ ನಡಸುತ್ತಾನೆ? ಅದರ ವಿಚಾರಕ್ಕೆ ಪುರಸತ್ತಿಲ್ಲ. ಆ ರಾತ್ರಿಯೇ ಬೇರೊಂದು ಸ್ಥಳಕ್ಕೆ ಹೊರಡಬೇಕೆಂದಿದ್ದರು ಅವರು.

ಆಗ ಸುಮಾರು ಹನ್ನೊಂದು ಘಂಟೆಯಿರಬಹುದು. ವಿಶ್ವೇಶ್ವರಶಾಸ್ತ್ರಿಗಳು ಎದ್ದು ನಿಂತು ಕೈಮುಗಿದು ಆ ಮಹನೀಯನನ್ನು ತಮ್ಮ ಮನೆಗೆ ಭೋಜನಕ್ಕೆ ಆಹ್ವಾನಿಸಿದರು. ಆತ ಆ ಆತಿಥ್ಯವನ್ನು ಸ್ವೀಕರಿಸಿದ್ದಾಯಿತು. ಮುಂದೆ ಎಲ್ಲಿ ಹೋದನೋ ಗೊತ್ತಾಗಲಿಲ್ಲ.

***

ಈ ಮೇಲಿನ ಸಂದರ್ಭಗಳು ವಿಶ್ವೇಶ್ವರಶಾಸ್ತ್ರಿಗಳು ಎಂಥವರೆಂಬುದನ್ನು ತೋರಿಸುತ್ತವೆ. ಅವರು ಮಹಾ ವಿದ್ವಾಂಸರು ಎಂಬುದು ಯಥಾರ್ಥದಲ್ಲಿ ಅರ್ಧಾಂಶಕ್ಕಿಂತ ಕಡಮೆ. ಅವರು ಉದಾರಿಗಳು, ಸಹೃದಯರು, ಮಾನುಷಹಿತನಿಷ್ಠರು, ಮತ್ತು ಪಾವಿತ್ರ್ಯ ಪಕ್ಷಪಾತಿಗಳೆಂದು ಹೇಳಿದರೆ ಯಥಾರ್ಥದ ಸಮೀಪಕ್ಕೆ ಹೋದಂತೆ ಆದೀತು.

ವಿಶ್ವೇಶ್ವರಶಾಸ್ತ್ರಿಗಳಲ್ಲಿ ದಾಷ್ಟೀಕವಿರಲಿಲ್ಲ. ಅವರು ತುಂಬ ನಮ್ರರು. ದಿವಾನ್ ವಿ. ಪಿ. ಮಾಧವರಾಯರು ಶಾಸ್ತ್ರಿಗಳನ್ನು ಕುರಿತು ಅವರಿಗೇ ಹೇಳಿದಂತೆ, ಅವರಿಗೆ ಯಾಚನೆ ಮಾಡಲು ಸಹ ಬಾರದು. ಈ ಸಂಗತಿಯನ್ನು ವಿ. ಪಿ. ಮಾಧವರಾಯರನ್ನು ಕುರಿತ ಪ್ರಕರಣದಲ್ಲಿ [8] ವಿವರಿಸಿದ್ದೇನೆ.

ಚೊಕ್ಕವಾದ ರಾಜಮಾರ್ಗ

ನಾನು ‘ಮಣಿಮಂಜರೀಭೇದಿನಿ’ ಎಂಬ ಗ್ರಂಥವನ್ನು ನೋಡಬೇಕೆಂದು ಆಶೆಪಟ್ಟುಕೊಂಡಿದ್ದೆ. ಆದರೆ ಅದು ಅಂಗಡಿಗಳಲ್ಲೆಲ್ಲಿಯೂ ನನಗೆ ದೊರೆಯಲಿಲ್ಲ. ಒಂದು ಸಾರಿ ವಿಶ್ವೇಶ್ವರಶಾಸ್ತ್ರಿಗಳವರ ಮನೆಗೆ ಅವರ ಷಡ್ಡಕಂದಿರಾದ ಮುತ್ತೂರು ವಿದ್ವನ್ನರಹರಿ ಶಾಸ್ತ್ರಿಗಳು ದಯಮಾಡಿಸಿದ್ದರು. ಅವರು ಶಿಡ್ಲಘಟ್ಟದ ಕಡೆಯವರು. ಮತ್ತು ಶಿಡ್ಲಘಟ್ಟದಲ್ಲಿದ್ದ ನನ್ನ ಬಂಧುಗಳಿಗೆ ಬಳಕೆಯಾದ ಸ್ನೇಹಿತರು. ಈ ಸಂಬಂಧಗಳಿಂದ ನರಹರಿಶಾಸ್ತ್ರಿಗಳವರಲ್ಲಿ ನನಗೆ ಬಳಕೆ ಹೆಚ್ಚಾಗಿತ್ತು. ಅವರಲ್ಲಿ ನಾನು ನನ್ನ ಮನೋರಥವನ್ನು ಹೇಳಿಕೊಂಡೆ. ಅವರು ಆ ಗ್ರಂಥವನ್ನು ಸಂಪಾದಿಸಿಕೊಡುವುದಾಗಿ ಹೇಳಿದರು.

ಕೆಲವು ತಿಂಗಳು ಕಳೆದ ಮೇಲೆ ಮತ್ತೊಂದು ಸಾರಿ ಅವರು ಬಂದಾಗ ಅವರನ್ನು ಕೇಳಿದೆ, ಪುಸ್ತಕ ಯಾವಾಗ ಬರುತ್ತದೆಂದು. ಅವರು “ತಂದುಕೊಡುತ್ತೇನೆ” “ತಂದು ಕೊಡುತ್ತೇನೆ” ಎಂದು ಹೇಳುತ್ತಿದ್ದರು. ಇದು ಮೂರು ನಾಲ್ಕು ಸಾರಿ ಆದಮೇಲೆ ಇನ್ನೊಂದು ಸಾರಿ ವಿಶ್ವೇಶ್ವರಶಾಸ್ತ್ರಿಗಳೂ ನಾನೂ ಕುಳಿತಿದ್ದೆವು, ನರಹರಿಶಾಸ್ತ್ರಿಗಳವರ ಸವಾರಿಯೂ ಬಂತು. ನಾನು ಆತುರಪಟ್ಟೆ. ನರಹರಿಶಾಸ್ತ್ರಿಗಳವರನ್ನು “ಪುಸ್ತಕ ಎಲ್ಲಿ?” ಎಂದು ಮತ್ತೆ ಕೇಳಿದೆ. ಅವರು “ಬರುತ್ತದೆ ತಡಿ” ಎಂದರು. ಬೇರೆ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದು ಮುಕ್ಕಾಲು ಘಂಟೆ ಕಳೆದ ಬಳಿಕ ನರಹರಿಶಾಸ್ತ್ರಿಗಳು ಬೇರೆಲ್ಲೋ ಹೋಗಬೇಕೆಂದು ಹೇಳಿ ಹೊರಟರು.

ವಿಶ್ವೇಶ್ವರಶಾಸ್ತ್ರಿಗಳು ಆಗ ನನ್ನನ್ನು ಕೇಳಿದರು:

ವಿ: “ನಿಮಗೆ ಏನು ಪುಸ್ತಕ ಬೇಕು? ಅವರನ್ನು ಕೇಳಿದಿರಲ್ಲ?”

ನಾನು: ನನಗೆ ‘ಮಣಿಮಂಜರೀಭೇದಿನಿ’ ನೋಡಬೇಕೆಂದು ಮನಸ್ಸಾಯಿತು. ಅವರಲ್ಲಿ ಹೇಳಿದ್ದೆ.”

ವಿ: “ಹಾಗಂದರೆ ಏನು? ಅದೇನು ಗ್ರಂಥ?”

ನಾ: “ಮಾಧ್ವರಲ್ಲಿ ಮಣಿಮಂಜರಿ ಎಂಬ ಮತಗ್ರಂಥ ಒಂದುಂಟು. ಅದರಲ್ಲಿ ಶಾಂಕರಮತಸ್ಥರ ಅವಹೇಳನವಿದೆ. ಅದಕ್ಕೆ ಪ್ರತ್ಯುತ್ತರವಾಗಿ ಯಾರೋ ಅದ್ವೈತಿಗಳು

‘ಮಣಿಮಂಜರೀಭೇದಿನಿ’ ಯನ್ನು ಬರೆದಿದ್ದಾರೆ.”

ವಿ: (ತೆಲುಗಿನಲ್ಲಿ) “ನಾವು ಅಂಥ ಕ್ಷುದ್ರಗ್ರಂಥಗಳನ್ನು ಓದಬಹುದೆ? ನಮಗೇಕೆ ಅದು? ನೀವು ಭಾಷ್ಯ ಒಂದಷ್ಟು ನೋಡಿದ್ದೀರಲ್ಲಾ! ನಾವು ಓದಬೇಕಾದದ್ದು ಭಾಷ್ಯಗಳನ್ನ, ಕ್ಷುದ್ರಗ್ರಂಥಗಳನ್ನು ನೋಡಬಹುದೆ?”

ಒಂದು ವ್ಯಾಖ್ಯೆ

ಇನ್ನೊಂದು ದಿನ ನನಗೆ ಕಾಮಂದಕ ನೀತಿಶಾಸ್ತ್ರ ಗ್ರಂಥದ ಹಸ್ತಲಿಖಿತ ಪ್ರತಿಯೊಂದು ಸಿಕ್ಕಿತು. ಆ ಸಂತೋಷವನ್ನು ಶಾಸ್ತ್ರಿಗಳವರಿಗೆ ಅರಿಕೆ ಮಾಡಿದೆ. ಅವರಿಗೆ ತುಂಬಾ ಉತ್ಸಾಹವಾಯಿತು. "ಕೊಂಚ ಓದಿ, ನೋಡೋಣ" ಎಂದರು. ನಾನು ಮೊದಲನೆಯ ಶ್ಲೋಕವನ್ನು ಓದಿದೆ, ಹೀಗೆ:

ಯಸ್ಯ ಪ್ರಸಾದಾದ್ಭುವನಂ
ಶಾಶ್ವತೇ ಪಥಿ ತಿಷ್ಠತಿ ।
ದೇವಸ್ಸ ಜಯತಿ ಶ್ರೀಮಾನ್
ದಂಡಧಾರೋ ಮಹೀಪತಿಃ ॥

ಈ ಪದ್ಯದ ಶೈಲಿಯಿಂದ ಶಾಸ್ತ್ರಿಗಳ ಉತ್ಸಾಹ ಕೆರಳಿತು. "ಎಂಥ ಪದ್ಯ! ಎಂಥ ಗಂಭೀರಶೈಲಿ! ಎಷ್ಟು ಸಾಧುವಾಗಿದೆ!" ಎಂದು ಮೊದಲಾಗಿ ಪ್ರಶಂಸೆ ಮಾಡಿ 'ದಂಡಧಾರಃ' ಎಂಬ ಪದದ ಮೇಲೆ ವಿಸ್ತಾರವಾಗಿ ಟೀಕೆ ಮಾಡಿದರು. "ಲೋಕದ ಬಹು ಭಾಗ ದುಷ್ಟತನದ್ದು. ರಾಜನಿಗೆ ಮೊದಲನೆಯ ಕರ್ತವ್ಯ ದುಷ್ಟನಿಗ್ರಹ. ದುಷ್ಟರನ್ನು ನಿಗ್ರಹಿಸಿದ ಮೇಲೆ ಶಿಷ್ಟಪರಿಪಾಲನೆ. ದುಷ್ಟನಿಗ್ರಹಕ್ಕೆ ಬೇಕಾದದ್ದು ದಂಡ. ದಂಡವಿಲ್ಲದೆ ದುಷ್ಟರನ್ನು ಹತೋಟಿಯಲ್ಲಿಡಲಾಗುವುದಿಲ್ಲ. ದುಷ್ಟರನ್ನು ತಡೆಯದಿದ್ದರೆ ರಾಜ್ಯವೇ ಇಲ್ಲ. ಆದದ್ದರಿಂದ ರಾಜ್ಯಕ್ಕೆ ಮೊದಲು ಬೇಕಾದ ಸಾಧನ ದಂಡ. ಅದಾದಮೇಲೆ ಮಿಕ್ಕದ್ದೆಲ್ಲ. 'ಭಯಾದ್ಭೋಗಾಯ ಕಲ್ಪತೇ.' ಮೊದಲು ದುಷ್ಟರಿಗೆ ಭಯೋತ್ಪಾದನೆಯಾದರೆ ಆಮೇಲೆ ಸಜ್ಜನರಿಗೆ ಬದುಕು, ಭೋಗ ಎಲ್ಲ. ಆದದ್ದರಿಂದ ನೀತಿಕಾರನು ಮೊದಲು ದಂಡವನ್ನು ಸ್ಮರಿಸಿರುವುದು ಅತ್ಯಂತ ಸಾಧುವಾಗಿದೆ."

ಶಾಸ್ತ್ರಿಗಳವರು ಈ ವ್ಯಾಖ್ಯಾನ ಮಾಡುವ ಕಾಲಕ್ಕೆ ಗಾಂಧಿಯವರು ಪ್ರಸಿದ್ಧರಾಗಿರಲಿಲ್ಲ. ಗೀತಾದಿ ಶಾಸ್ತ್ರಗಳಲ್ಲಿರುವ 'ಅಹಿಂಸಾ' ಎಂಬ ಪದಕ್ಕೆ 'ಅರಾಜಕ' ಎಂದು ಅರ್ಥ ಮಾಡುವ ಜನ ಇನ್ನೂ ಇರಲಿಲ್ಲ. ಅರಾಜಕದ ಪ್ರಚಾರಕರು ಲೋಕದಲ್ಲಿ ಮುಂದೆ ಹುಟ್ಟಿಯಾರೆಂಬ ಶಂಕೆ ಶಾಸ್ತ್ರಿಗಳ ಮನಸ್ಸಿಗೆ ಹೊಳೆದಿರಲಿಲ್ಲ. ಈ ಹೊತ್ತಿನ ಪ್ರಪಂಚ ಶಾಸ್ತ್ರಿಗಳದಲ್ಲ.

೧೪ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳು

ನಾನು ಇಷ್ಟದಿಂದ ಆಶ್ರಯಕ್ಕಾಗಿ ಹೋದ ಸಂಸ್ಕೃತ ವಿದ್ವಾಂಸರುಗಳಲ್ಲಿ ಅತ್ಯಂತ ಪ್ರೀತಿಯಿಂದ ನನ್ನನ್ನು ಕಂಡವರು ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳು. ನನಗೆ ಅವರಲ್ಲಿ ಇದ್ದಷ್ಟು ಸಲಿಗೆ ಮತ್ತಾವ ವಿದ್ವಾಂಸರಲ್ಲೂ ಇರಲಿಲ್ಲ. ಮೊದಲಿನಿಂದ ಅವರು ನನ್ನನ್ನು ತಮ್ಮವನೆಂಬಂತೆ ಕಂಡು ವಾತ್ಸಲ್ಯ ತೋರಿದರು.

ನಾನು ಅವರ ಬಳಿಗೆ ಹೋಗುವುದಕ್ಕೆ ಮುಂಚೆ ಅವರ ವಿಷಯದಲ್ಲಿ ಗೌರವ ಬುದ್ಧಿಯುಳ್ಳವನಾಗಿದ್ದೆ. ಕಾರಣಗಳು ಎರಡು:

1. ವಿದ್ಯಾರಣ್ಯ ಮುನಿಗಳ ಪಂಚದಶೀ ಗ್ರಂಥವನ್ನು ಡಾ ॥ ಎಂ. ಶ್ರೀನಿವಾಸರಾಯರೂ ಕೆ. ಎ. ಕೃಷ್ಣಸ್ವಾಮಿ ಅಯ್ಯರ್ ಅವರೂ ಸೇರಿ ಇಂಗ್ಲಿಷಿಗೆ ಭಾಷಾಂತರ ಮಾಡಿ ಪ್ರಕಟಿಸಿದ್ದರು. ಆ ಕಾರ್ಯದಲ್ಲಿ ಅವರು ತಮಗೆ ವಿದ್ವಾನ್ ಶಂಕರಶಾಸ್ತ್ರಿಗಳವರಿಂದ ಬಹು ಸಹಾಯ ದೊರೆಯಿತೆಂದು ಕೃತಜ್ಞತೆ ಹೇಳಿದ್ದಾರೆ. ಇದನ್ನು ನಾನು ಕೃಷ್ಣಸ್ವಾಮಿ ಅಯ್ಯರ್ ಅವರಲ್ಲಿ ಪ್ರಸ್ತಾವಿಸಿದಾಗ ಅವರು ಶಂಕರಶಾಸ್ತ್ರಿಗಳವರ ಮನಸ್ಸು ಎಷ್ಟು ನೂತನಭಾವಗ್ರಾಹಿಯಾದದ್ದು, ಪ್ರಕೃತ ಪ್ರಪಂಚದ ಬುದ್ಧಿಗತಿಯನ್ನು ಹೇಗೆ ಸಹಾನುಭೂತಿಯಿಂದ ಗ್ರಹಿಸಬಲ್ಲದ್ದು-ಎಂಬುದನ್ನು ಹೇಳಿದ್ದರು. ಹೀಗೆ ನನಗೆ ಶಂಕರಶಾಸ್ತ್ರಿಗಳ ವಿಷಯದಲ್ಲಿ ತುಂಬ ಕುತೂಹಲವುಂಟಾಗಿತ್ತು.
2. ಆಗ ಚಾಮರಾಜಪೇಟೆಯಲ್ಲಿ ಶ್ರೀ ರಾಮೇಶ್ವರ ದೇವಸ್ಥಾನ ಪ್ರತಿಷ್ಠೆಯಾದ ಹೊಸತು. ಸಂಜೆ ಅಲ್ಲಿ ದೀಪಾರಾಧನೆಯಾಗುತ್ತಿತ್ತು. ಆ ವೇಳೆಗೆ ಅಲ್ಲಿಯ ಅರ್ಚಕರು “ಚೂರ್ಣಿಕಾಮವಧಾರಯ” “ಸ್ತೋತ್ರಪಾಠಮವಧಾರಯ” ಎಂದು ಹೇಳಿದಾಗ ಇಬ್ಬರು ಜೊತೆಗೂಡಿ ಶ್ಲೋಕ ಹೇಳುತ್ತಿದ್ದರು. ನಾನು ಅಲ್ಲಿ ಮೊದಲು ಕೇಳಿದ ಶ್ಲೋಕ “ಸಾನಂದಂ ನಂದಿಹಸ್ತಾತ್.” ಅದನ್ನು ಕೇಳಿ ನನಗೆ ವಾಸ್ತವವಾಗಿ ರೋಮಾಂಚನವಾಯಿತು. ಹೀಗೆ ಶ್ಲೋಕ ಹೇಳುವವರಿರುತ್ತಾರೆಯೆ! ಎಂದುಕೊಂಡೆ. ಆ ಇಬ್ಬರು ಮಹನೀಯರು ಅಣ್ಣ ತಮ್ಮಂದಿರಾದ ಶಂಕರಶಾಸ್ತ್ರಿಗಳು, ರಾಮಶೇಷಶಾಸ್ತ್ರಿಗಳು.

ನಾನು ಶಂಕರಶಾಸ್ತ್ರಿಗಳವರಲ್ಲಿ ಅತ್ಯಂತ ಆದರವುಳ್ಳವನಾದದ್ದಕ್ಕೆ ಅದೂ ಒಂದು ಕಾರಣ.

ಪ್ರವಚನ-ವ್ಯಾಖ್ಯಾನ

ಶ್ಲೋಕ ಹೇಳಿದಂತೆಯೇ ಆ ಅಣ್ಣ ತಮ್ಮಂದಿರು ಪುರಾಣ ಹೇಳುತ್ತಿದ್ದದ್ದೂ ಉಂಟು. ರಾಮೇಶ್ವರ ದೇವಸ್ಥಾನದಲ್ಲಿ ಭಾಗವತ ಪುರಾಣ ನಡೆಯಿತು. ರಾಮಶೇಷಶಾಸ್ತ್ರಿಗಳು ಓದುವರು; ಶಂಕರಶಾಸ್ತ್ರಿಗಳು ವ್ಯಾಖ್ಯಾನ ಮಾಡುವರು.

ಒಂದು ದಿನ ಶ್ರೀಕೃಷ್ಣಾವತಾರ ಘಟ್ಟದಲ್ಲಿ

> ಏಕಾಯನೋಽಸೌ ದ್ವಿಫಲಸ್ತ್ರಿಮೂಲಃ
> ಚತೂರಸಃ ಪಂಚಶಿಫಷ್ಷಡಾತ್ಮಾ।
> ಸಪ್ತತ್ವಗಷ್ಟಾವಿಟಪೋ ನವಾಕ್ಷೋ
> ದಶಚ್ಛದೋ ದ್ವಿಖಗೋ ಹ್ಯಾದಿವೃಕ್ಷಃ ॥
> ತ್ವಮೇಕ ಏವಾಸ್ಯ ಸತಃ ಪ್ರಸೂತಿಃ
> ತ್ವಂ ಸನ್ನಿಧಾನಂ ತ್ವಮನುಗ್ರಹಶ್ಚ।
> ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ
> ಪಶ್ಯಂತಿ ನಾನಾ ನ ವಿಪಶ್ಚಿತೋ ಯೇ ॥

ಈ ಪದ್ಯವನ್ನು ರಾಮಶೇಷಶಾಸ್ತ್ರಿಗಳು ರಾಗವಿನ್ಯಾಸದಿಂದ ಓದಿದ್ದು ನನಗೆ ಚೆನ್ನಾಗಿ ನೆನಪಿದೆ. ಅದಕ್ಕಿಂತ ನನ್ನ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಮಾಡಿದ್ದು ಶಂಕರ ಶಾಸ್ತ್ರಿಗಳ ವ್ಯಾಖ್ಯಾನವೈಖರಿ.

ಶಾಸ್ತ್ರಿಗಳವರು ಪದ ಪದವನ್ನು ಬಿಡಿಸಿ ಅದರ ಅಭಿಪ್ರಾಯಕ್ಕೆ ಸಂವಾದಿಯಾದ ಉಪನಿಷದ್ವಾಕ್ಯಗಳನ್ನು ಉದಾಹರಿಸಿ, ಶಾಸ್ತ್ರದಿಂದಲೂ ಯುಕ್ತಿಯಿಂದಲೂ ತತ್ತ್ವ ಪ್ರತಿಪಾದನೆ ಮಾಡಿದರು. ಅದರಲ್ಲಿ "ಪಶ್ಯಂತಿ ನಾನಾ ನ+ವಿಪಶ್ಚಿತಃ..." ಎಂದೂ "ಪಶ್ಯಂತಿ ನಾನಾ+ನವಿಪಶ್ಚಿತಃ" ಎಂದೂ ವಾಕ್ಯ ವಿಭಜನೆಯ ರೀತಿಯನ್ನು ವಿವರಿಸಿ ಎರಡು ಅರ್ಥವೈಶಿಷ್ಟ್ಯಗಳನ್ನೂ ಸ್ಪಷ್ಟಪಡಿಸಿದರು. ಆ ಶೈಲಿ, ಅರ್ಥವಿವರಣೆಯ ಧೋರಣೆ, ಹೃದಯದಲ್ಲಿದ್ದ ನಿಶ್ಚಯದ ಪ್ರಸ್ಫೂರ್ತಿ-ಇವು ನನಗೆ ಅದ್ಭುತವೆನಿಸಿತು.

ಆಗಿನ ಇಂಥ ಸಭೆಗಳಲ್ಲಿ ವಿದ್ವಜ್ಜನ ಬಹುಜನ ಇರುತ್ತಿದ್ದರು. ಕಡೂರು ವೆಂಕಟಸುಬ್ಬಯ್ಯನವರು, ಅಮೃತ ಮಹಲ್ ತಿಮ್ಮಪ್ಪಯ್ಯನವರು, ಚೌಬೀನೆ ಸುಬ್ಬರಾಯರು, ಅನಗೊಂಡಹಳ್ಳಿ ಸುಬ್ಬಣ್ಣನವರು-ಇವರೇ ಮೊದಲಾದ ಬಹುಮಂದಿ ಗಣ್ಯ ಜನರು ಸಂಜೆ ಸಂಜೆಯೂ ಉತ್ಸಾಹದಿಂದ ಬಂದು ಸೇರುತ್ತಿದ್ದರು. ಈ ಸಭೆಗಳಲ್ಲಿ

ಮಹಾ ವಿದ್ವಾಂಸರಾದ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು, ಹರಿಯಪ್ಪಾಚಾರ್ಯರು ಮೊದಲಾದವರೂ ಇರುತ್ತಿದ್ದರು. ಶ್ರೀಮದ್ ರಾಮಾಯಣದಲ್ಲಿ ವಾಲ್ಮೀಕಿಗಳು ಅಯೋಧ್ಯಾಪುರ ವರ್ಣನೆಯಲ್ಲಿ ಅಲ್ಲಿಯ ಜನವನ್ನು

ಸಮಾಜೋತ್ಸವಶಾಲಿನಃ

ಎಂದು ಒಂದು ಸಲವಲ್ಲ, ಎರಡು ಸಲವಲ್ಲ, ನಾಲ್ಕಾರು ಸಲ ಪ್ರಶಂಸೆ ಮಾಡಿದ್ದಾರೆ. ಆ ಸಮಾಜೋತ್ಸವವೆಂಬುದು ಕಣ್ಣಿಗೆ ಕಾಣುತ್ತಿದ್ದ ಕಾಲ ನಾನು ಮೇಲೆ ಹೇಳುತ್ತಿರುವುದು.

ಸತ್ಸಂಗ

ಶಂಕರಶಾಸ್ತ್ರಿಗಳವರು ಬಹುಕಾಲ ಬೆಂಗಳೂರು ಕಂಟೋನ್ಮೆಂಟಿನ ರಾವ್‌ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ ಹೈಸ್ಕೂಲಿನಲ್ಲಿ ಸಂಸ್ಕೃತ ಬೋಧಕರಾಗಿದ್ದರು. ಆ ಕಾಲದಲ್ಲಿ ಸೀತಾರಾಮಶಾಸ್ತ್ರಿಗಳೆಂಬುವರು ಅದೇ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದರು; ಮತ್ತು ನನ್ನ ಪೂಜ್ಯ ಬಂಧುವಾದ ಮೊಟ್ಟನಹಳ್ಳಿ ವೆಂಕಪ್ಪಯ್ಯನವರು ಇಂಗ್ಲಿಷ್ ಉಪಾಧ್ಯಾಯರಾಗಿದ್ದರು. ಆಗ ನಾನು ಬಹುಮಟ್ಟಿಗೆ ನಿರುದ್ಯೋಗಿಯಾಗಿದ್ದ ಕಾರಣದಿಂದ ಮಧ್ಯಾಹ್ನ ನಾಲ್ಕೂವರೆ ಘಂಟೆಯ ವೇಳೆಗೆ ಚಾಮರಾಜಪೇಟೆಯಿಂದ ಮೇಲೆ ಹೇಳಿದ ಹೈಸ್ಕೂಲಿಗೆ ಹೋಗಿ ಅಲ್ಲಿ ಆ ಮೂವರು ಹಿರಿಯರನ್ನೂ ಕಂಡು ಅವರೊಡನೆ ಸಿಟಿಗೆ ಹಿಂತಿರುಗುತ್ತಿದ್ದೆ. ಆಗ ದಾರಿ ನಡೆಯುವಾಗ ನಮ್ಮ ನಾಲ್ವರ ಮಾತುಕಥೆಗಳು ಸಂತೋಷದಿಂದ ಸಾಗುತ್ತಿದ್ದುವು. ಕಬ್ಬನ್ ಪಾರ್ಕಿಗೆ ಬಂದಾಗ ಮ್ಯೂಸಿಯಮ್ಮಿನ ಹಿಂದುಗಡೆ ಸಾಲುಮರಗಳು ವಿಸ್ತಾರವಾಗಿ ತಂಪಾಗಿರುತ್ತಿದ್ದವು. ನಾವು ಆ ನೆರಳಿನಲ್ಲಿ ಒಂದೆರಡು ಘಳಿಗೆ ಕುಳಿತು ಕಾವ್ಯಾಲಾಪದಿಂದಲೂ ಅಲ್ಪ ಸ್ವಲ್ಪ ಗಾನದಿಂದಲೂ ಆಯಾಸ ಪರಿಹಾರ ಮಾಡಿಕೊಳ್ಳುತ್ತಿದ್ದೆವು. ವೆಂಕಪ್ಪಯ್ಯ ಸಂಗೀತಾಭ್ಯಾಸಿಯೆಂದು ಬೇರೆ ಕಡೆ ಹೇಳಿದ್ದೇನೆ. ಈ ಕಾರಣದಿಂದ ಆತನಿಗೂ ಶಂಕರ ಶಾಸ್ತ್ರಿಗಳಿಗೂ ತುಂಬಾ ಹೊಂದಾಣಿಕೆ. ವೆಂಕಪ್ಪಯ್ಯ ಯಾವುದಾದರೊಂದು ರಾಗ ಎತ್ತುವರು. ಶಂಕರಶಾಸ್ತ್ರಿಗಳು ಒಂದು ಪದ್ಯವನ್ನೆತ್ತುವರು. ಇಬ್ಬರೂ ಸೇರಿ ಅದನ್ನು ಹಾಡುವರು. ಆಮೇಲೆ ಅರ್ಥವಿಚಾರ. ಇದರಲ್ಲಿ ಸೀತಾರಾಮಶಾಸ್ತ್ರಿಗಳೂ ಸೇರುವರು. ತಕರಾರು ಕಾವೇರುವುದು. ವೆಂಕಪ್ಪಯ್ಯ ಇಂಗ್ಲಿಷಿನಿಂದ ಒಂದೆರಡು ಉದಾಹರಣೆ ಕೊಡುವರು. ತಟಕ್ಕನೆ ಸಂಜೆಯಾಯಿತೆಂದು ಎಲ್ಲರಿಗೂ ಜ್ಞಾಪಕ ಬರುವುದು. ನಾವು ನಾಲ್ವರೂ ನಡೆದು ನಮ್ಮ ನಮ್ಮ ಸ್ಥಾನಗಳಿಗೆ ಹೋಗುತ್ತಿದ್ದೆವು.

ಹೀಗೆ ನಡೆದದ್ದು ಒಂದು ದಿನವಲ್ಲ, ಒಂದು ತಿಂಗಳಲ್ಲ; ಎರಡು ಮೂರು ವರ್ಷಗಳು. ಆ ಪೈಕಿ ಈಗ ಮೂವರೂ ಇಲ್ಲ.

ಸಾಹಿತ್ಯರಚನೆ

ಶಂಕರಶಾಸ್ತ್ರಿಗಳು ಪದ್ಯಗದ್ಯ ರಚನಾ ಸಾಮರ್ಥ್ಯವಿದ್ದವರು. ಆದರೂ ಅವರು ಯಾವ ಗ್ರಂಥವನ್ನೂ ಬರೆದಿಲ್ಲ. ಬರೆಯಬೇಕೆಂಬ ಪ್ರವೃತ್ತಿಯೂ ಇದ್ದಂತೆ ನನಗೆ ತೋರಲಿಲ್ಲ. ಸಾಮಾನ್ಯವಾಗಿ ನಮ್ಮ ಆ ಕಾಲದ ವಿದ್ವಾಂಸರೆಲ್ಲ ಗ್ರಂಥ ಲೇಖನದ ಗೀಳಿಗೆ ಸಿಕ್ಕಿರಲಿಲ್ಲ. ವಿಶ್ವೇಶ್ವರಶಾಸ್ತ್ರಿಗಳು ಒಂದು ಪದ್ಯವನ್ನಾದರೂ ಬರೆದಿದ್ದಂತೆ ನನಗೆ ತಿಳಿದಿಲ್ಲ. ಚಿಕ್ಕವರಿಗೆ ಚಪಲ ಬಂದಾಗ ಏನಾದರೂ ಬರೆದು ಅದನ್ನು ತೋರಿಸಿದರೆ ಸಂತೋಷಪಟ್ಟು ಅಷ್ಟಕ್ಕೆ ಬಿಡುತ್ತಿದ್ದರು. ಮಹಾಮಹೋಪಾಧ್ಯಾಯ ವಿದ್ಯಾನಿಧಿ ವಿರೂಪಾಕ್ಷಶಾಸ್ತ್ರಿಗಳು ಅಷ್ಟು ದೊಡ್ಡ ದಿಗ್ದಂತಿ ಪಂಡಿತರೆಂದು ಹೆಸರುವಾಸಿಯಾಗಿದ್ದರೂ ಗ್ರಂಥಲೇಖನ ಕಾರ್ಯಕ್ಕೆ ಕೈಹಾಕಿದವರಲ್ಲ. ಆ ಜನಕ್ಕೆ ಸಾಮಾನ್ಯವಾಗಿ ಆ ಚಪಲವಿರಲಿಲ್ಲ. ತಾವು ಶಾಸ್ತ್ರವನ್ನು ಚೆನ್ನಾಗಿ ತಿಳಿದುಕೊಳ್ಳುವುದು; ಅದನ್ನು ಚೆನ್ನಾಗಿ ತಿಳಿಯಹೇಳುವುದು-ಇಷ್ಟು ಮಾಡಿದರೆ ತಮ್ಮ ಕೆಲಸ ಮುಗಿಯಿತೆಂದು ಅವರು ಭಾವಿಸಿದ್ದರು.

ಶಂಕರಶಾಸ್ತ್ರಿಗಳು ಕೊಂಚ ಕೊಂಚ ಪದ್ಯರಚನೆ ಮಾಡುತ್ತಿದ್ದದ್ದುಂಟು. ಅದು "ಶಾಕಾಯ ವಾ ಸ್ಯಾತ್ ಲವಣಾಯ ವಾ ಸ್ಯಾತ್." ಪೇಟೆಯ ಪುಸ್ತಕದಂಗಡಿಗಳವರಿಗೆ ಕೆಲವು ನಾಟಕಗಳನ್ನು ಬರೆದುಕೊಟ್ಟಿದ್ದರು: ಸಾನಂದ ಗಣೇಶ, ಇಂದ್ರಸಭಾ, ಪಾಂಡವ ವಿಜಯ ಇತ್ಯಾದಿ. ಇವುಗಳನ್ನು ಮಹಾಗ್ರಂಥಗಳೆಂದು ಅವರೇನೂ ತಿಳಿದುಕೊಂಡಿರಲಿಲ್ಲ. ಒಂದು ಸಾರಿ ನಾನು ಈ ಗ್ರಂಥಗಳನ್ನು ಕೊಂಚ ಲಘುವಾಗಿ ಹಾಸ್ಯ ಮಾಡಿದಾಗ ಅವರು "ಅಡಿಗೆಮನೆಯಲ್ಲಿ ಒಲೆ ಉರಿಯಬೇಕಲ್ಲಯ್ಯ! ನಿನಗೆ ಬೇಕಾದರೆ ಇನ್ನೂ ಒಂದೆರಡು ಬರೆದುಕೊಡುತ್ತೇನೆ, ಏನು ನಷ್ಟ?" ಎಂದರು. ಈ ಲೇಖನದಿಂದ ಅವರಿಗೆ ಬರುತ್ತಿದ್ದದ್ದು ಐದು ಹತ್ತು ರೂಪಾಯಿ, ಅಷ್ಟೆ.

ಕಾವ್ಯಶೈಲಿ

ಸಂಸ್ಕೃತದಲ್ಲಿ ಶಂಕರಶಾಸ್ತ್ರಿಗಳದು ಒಳ್ಳೆಯ ಕಾವ್ಯಶೈಲಿ. ಶಬ್ದಾಲಂಕಾರ ಅರ್ಥಾಲಂಕಾರಗಳೆರಡೂ ಅವರಿಗೆ ವಿಧೇಯವಾಗಿದ್ದವು. ಶ್ರೀಮದ್ಯುವರಾಜರ ವಿವಾಹ ಸಮಯದಲ್ಲಿ ಒಂದಷ್ಟು ಪದ್ಯಗಳನ್ನು ಬರೆದಿದ್ದರು. ಅವುಗಳಲ್ಲಿ ಒಂದು ನನ್ನ ಜ್ಞಾಪಕದಲ್ಲಿದೆ:

> ಪರಿಷದಿಯಂ ಧಾರ್ಮಿಕಜನ-
> ಗೋತ್ರೋದ್ಧಾರಾನುರಾಗೀ ಸಕ್ಷತ್ರಾ ॥
> ನ ಸಮಾಽನಯಾ ಸುಧರ್ಮಾ
> ಸ ಪುಣ್ಯಜನಗೋತ್ರಭಿತ್ ಸ ನಕ್ಷತ್ರಾ ॥

ಇದು ಶಬ್ದಾಲಂಕಾರ. ಇದಕ್ಕೆ ಪ್ರತಿಫಲ ಶಾಲುಜೋಡಿ ಮೊದಲಾದ ಖಿಲ್ಲತ್ತು.

ಶೃಂಗೇರಿ ಜಗದ್ಗುರುಗಳು ಬೆಂಗಳೂರಿಗೆ ದಯಮಾಡಿಸಿದ್ದಾಗ ಸುಮಾರು ಇಪ್ಪತ್ತನಾಲ್ಕು ಪದ್ಯಗಳ ಮಾಲಿಕೆಯನ್ನು ಗುರುಚರಣದಲ್ಲಿ ಸಮರ್ಪಿಸಿದರು. ಆ ಪದ್ಯಗಳ ಶೈಲಿ ಪ್ರೌಢವಾದದ್ದು. ಅದನ್ನು ಮಹಾಸಭೆಯಲ್ಲಿ ಶಾಸ್ತ್ರಿಗಳವರು ಓದಿದಾಗ ನಾನು ಅವರ ಬಳಿಯಲ್ಲಿಯೇ ನಿಂತಿದ್ದೆ. ಒಂದು ಪದ್ಯವನ್ನು ಓದಿ ಮುಗಿಸಿದಾಗ ಸನ್ನಿಧಾನದಲ್ಲಿದ್ದ ಯಾರೋ ಒಬ್ಬರು-ಬಹುಶಃ ಶ್ರೀಕಂಠ ಶಾಸ್ತ್ರಿಗಳು (ತೆಲುಗಿನಲ್ಲಿ) “ಇನ್ನೊಂದು ಸಾರಿ ಅದನ್ನು ಓದಿ” ಎಂದರು. ಸ್ವಾಮಿಗಳವರು “ಚೆನ್ನಾಗಿದೆಯಲ್ಲ!” ಎಂದರು. ಶಾಸ್ತ್ರಿಗಳವರು ಮತ್ತೊಮ್ಮೆ ಆ ಪದ್ಯವನ್ನು ಓದಿದರು. ಅದನ್ನು ಕೇಳಿದವರು ಸೊಗಸಾಗಿದೆಯೆಂದರು. ನನ್ನ ಜ್ಞಾಪಕದಲ್ಲಿ ನಿಂತಿರುವುದು ಒಂದು ಪದ್ಯ.

> ತೀರ್ಥೇನ ತೀರ್ಥಶೋಷಃ
> ಕ್ವಾಪಿ ನ ದೃಷ್ಟೋ ನ ಶ್ರುತೋಽಪಿ ಮಯಾ ॥
> ಲೋಕಗುರುದತ್ತ ತೀರ್ಥಾತ್
> ಭವಾಬ್ಧಿತೀರ್ಥಂ ವಿಲೀಯತೇ ಚಿತ್ರಂ ॥

ಇನ್ನೊಂದು ಪದ್ಯದ ಒಂದೆರಡು ಪದಗಳು ಜ್ಞಾಪಕದಲ್ಲಿವೆ.

ಚಿನ್ಮೂರ್ತಿರಾಸಾದಿತಪುಣ್ಯಕೀರ್ತಿಃ
ಯಾ ಶಾಂತಮೂರ್ತಿಸ್ತಪಸಾಂ ಪ್ರಪೂರ್ತಿಃ ॥

ಇಂಥದು ಅವರ ಶಬ್ದಾಲಂಕಾರ.

ಶಂಕರಶಾಸ್ತ್ರಿಗಳು ಲಘು ಹಾಸ್ಯಪ್ರಿಯರು. ಅವರ ಪಕ್ಕದ ಮನೆಯ ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರನ್ನೂ ಕೃಷ್ಣಾಚಾರ್ಯರೆಂಬವರನ್ನೂ ಕೊಂಚ ಲೇವಡಿ ಮಾಡುವರು. ಅವರಿಬ್ಬರೂ ಸಂಸ್ಕೃತ ವಿದ್ವಾಂಸರುಗಳೇ. ಮುಂಗೋಪಿಗಳಾದದ್ದರಿಂದ ಬೇಗ ಕೆರಳುವರು. ಶಾಸ್ತ್ರಿಗಳು ಕೊಂಚ ನಕ್ಕು ಅವರನ್ನು ಸಮಾಧಾನಪಡಿಸುವರು. ವೆಂಕಟರಮಣಯ್ಯನವರು ಯಾವುದೋ ಒಂದು ಸಾರ್ವಜನಿಕ ಸಂದರ್ಭದಲ್ಲಿ ಕನ್ನಡದಲ್ಲಿ ಕೆಲವು ಪ್ರಶಂಸಾ ಪದ್ಯಗಳನ್ನು ಬರೆದಿದ್ದರು. ಅದರ ಒಂದು ಚರಣ ಹೀಗೆ:

ಮುದದಿಂ ಮಾಧವ ಮಂತ್ರಿ ಚೂತವನದೊಳ್
ಪುಟ್ಟಣ್ಣ ಸತ್ಕೋಕಿಲಂ ॥

ಶಂಕರಶಾಸ್ತ್ರಿಗಳು ಇದನ್ನು ಬಾಯಿಂದ ನುಡಿದು ವೆಂಕಟರಮಣಯ್ಯನವರನ್ನು ಚೇಡಿಸುವರು. ಆತ ಮುಖವನ್ನು ಮುಳ್ಳುಮಾಡಿಕೊಳ್ಳುವರು. ಶಾಸ್ತ್ರಿಗಳು ಸಮಾಧಾನಪಡಿಸಿ ನಗಿಸುವರು. ಕೃಷ್ಣಾಚಾರ್ಯರಿಗೆ 'ಭಲ್ಲೂಕಾಚಾರ್ಯ' ರೆಂದು ಹೆಸರಿಟ್ಟಿದ್ದರು. ಇದೆಲ್ಲ ಬರಿಯ ವಿನೋದ. ಶಂಕರಶಾಸ್ತ್ರಿಗಳಿಗೆ ಯಾರಲ್ಲಿಯೂ ದ್ವೇಷವಿರಲಿಲ್ಲ, ಅವರನ್ನು ಯಾರೂ ದ್ವೇಷಿಸಿದವರಿಲ್ಲ. ಅವರನ್ನು ಬಲ್ಲವರೆಲ್ಲ ಅವರಲ್ಲಿ ನಯ ವಿನಯ ಭಕ್ತಿಗಳನ್ನು ಮನಸಾರೆ ತೋರುತ್ತಿದ್ದರು.

ಶಂಕರಶಾಸ್ತ್ರಿಗಳು ತೀರಿಕೊಂಡಾಗ (೧೯೧೨–೧೩) ವಾರ್ಧಕ್ಯಕ್ಕೆ ಬಂದಿರಲಿಲ್ಲ. ಅವರ ಹಿರಿಯ ಮಗ ಸುಬ್ರಹ್ಮಣ್ಯಶಾಸ್ತ್ರಿಗಳು ಆಗ್ಗೆ ಆರೇಳು ವರ್ಷದವರೆಂದು ನನ್ನ ಜ್ಞಾಪಕ.

೧೫ ಮಹಾದೇವಶಾಸ್ತ್ರಿಗಳು, ರಾಮಶೇಷಶಾಸ್ತ್ರಿಗಳು

ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳ ಅಣ್ಣಂದಿರು ಮಹಾದೇವಶಾಸ್ತ್ರಿಗಳು. ಇವರೂ ಸಂಗೀತ ಸಾಹಿತ್ಯಗಳಲ್ಲಿ ಪರಿಣತರು. ಇವರ ಮನೆಯಲ್ಲಿ ಏಕಾದಶಿ ಏಕಾದಶಿಯೂ ಭಜನೆಯಾಗುತ್ತಿತ್ತು. ಈ ಸಂದರ್ಭದಲ್ಲಿ ಭಜನೆಯೆಂದರೆ ಸಂಗೀತ.

ಮೋಟಗಾನಹಳ್ಳಿಯವರ ಪೂರ್ವಿಕರು ವಿದ್ವಾಂಸರು, ರಸಿಕರು, ಗಾಯಕರು. ಅವರ ಪೈಕಿ ಅಭಿನವ ಕಾಳಿದಾಸ ಎಂಬ ಬಿರುದನ್ನು ಪಡೆದಿದ್ದವರು ಒಬ್ಬ ಮಹಾದೇವಶಾಸ್ತ್ರಿಗಳು. ಇವರೂ ಇವರ ಮಕ್ಕಳು ಮೊಮ್ಮಕ್ಕಳೂ ಸಂಸ್ಕೃತದಲ್ಲಿ ಗೇಯಕೃತಿಗಳನ್ನು ರಚಿಸಿದ್ದವರು. ನಮ್ಮ ಮಹಾದೇವಶಾಸ್ತ್ರಿಗಳ ಮನೆಯಲ್ಲಿ ನಡೆಯುತ್ತಿದ್ದ ಭಜನೆಯಲ್ಲಿ ಆ ಪೂರ್ವಿಕರ ಗೀತಗಳನ್ನು ಹಾಡುತ್ತಿದ್ದರು. ಅಣ್ಣತಮ್ಮಂದಿರು ಮೂವರೂ ಸೇರಿ ಹಾಡುವರು. ಆಗಾಗ ಅವರಲ್ಲಿ ಕೊಂಚ ಚರ್ಚೆ ಏಳುವುದು: ಒಂದಾನೊಂದು ರಾಗದ ಗಮಕ ಪ್ರಯೋಗಗಳನ್ನು ಕುರಿತು. ಇಲ್ಲಿಯ ಸಾಹಿತ್ಯಭಾವಕ್ಕೆ ಈ ಗಮಕಕ್ಕಿಂತ ಇನ್ನೊಂದು ಗಮಕ ಚೆನ್ನಾಗಿ ಹೊಂದುತ್ತದೆ; ಈ ಧಾಟಿಗಿಂತ ಅದು ಸೊಗಸು-ಹೀಗೆ. ತಕರಾರು ಸೂಚನೆಯಾದಾಗ ಮಹದೇವಶಾಸ್ತ್ರಿಗಳ ಬಾಯಿಂದ ಬಂದ ಮಾತು ತಕರಾರನ್ನು ಮುಗಿಸುತ್ತಿತ್ತು. ಆ ಮೂರು ಮಂದಿ ಅಣ್ಣತಮ್ಮಂದಿರಲ್ಲಿ ದರ್ಶನೀಯವಾದ ಆಕಾರ ಮಹಾದೇವಶಾಸ್ತ್ರಿಗಳದು. ಆಳು ಎತ್ತರ. ಸಾಮಾನ್ಯವಾಗಿ ಯಾವಾಗಲೂ ಮಂದಸ್ಮಿತ. ಮಿತವಾಗಿ ಮಾತು. ಆದರೆ ಕಣ್ಣ ನೋಟ ಹಸ್ತಮುದ್ರಿಕೆಗಳಲ್ಲಿ ಅವರ ಮನೋಭಾವ ಚೆನ್ನಾಗಿ ಹೊರಪಡುತ್ತಿತ್ತು.

ಮಹಾದೇವಶಾಸ್ತ್ರಿಗಳು ಆಯುರ್ವೇದ ವಿದ್ವಾಂಸರೂ ಹೌದು. ಆದರೆ ಕರಾಟ ಹಿಡಿದು ತಿರುಗುತ್ತಿದ್ದವರಲ್ಲ; ತಮ್ಮ ಮನೆಗೆ ಚಿಕಿತ್ಸೆ ಬೇಡಿ ಬಂದ ಕೆಲವರಿಗೆ ಔಷಧ ಕೊಡುತ್ತಿದ್ದರು.

ಮಾತಿನ ನಯ

ಮಾತುಕಥೆಯಲ್ಲಿ ಮಹಾದೇವಶಾಸ್ತ್ರಿಗಳು ನಾಜೂಕಿನವರು. ಔಷಧಕ್ಕಾಗಿ ಬಂದವರಿಗೆ ಮಾತ್ರೆ ತೆಯ್ದು ಕೊಡುವುದಕ್ಕಾಗಿ ಸಾಣೆಯಕಲ್ಲು ಬೇಕಾದಾಗ ಅವರ ಭಾರ್ಯೆಗೆ ಕೇಳಿಸುವಂತೆ (ತೆಲುಗಿನಲ್ಲಿ) “ಗಂಧಪುರಾಯಿ ತ್ಯಾನಿ” (ಗಂಧದಕಲ್ಲು ತರಲಿ) ಎಂದು

ಹೇಳುವರು. ಇದು ವಿಧ್ಯರ್ಥಕವಾದ ಪ್ರಾರ್ಥನೆ. ನಾನು ಪರಿಹಾಸಕ್ಕಾಗಿ "ನಿಮ್ಮ ವಾಕ್ಯದಲ್ಲಿ ಕರ್ತೃಪದವೇ ಇಲ್ಲವಲ್ಲ!" ಎಂದೆ. ಶಾಸ್ತ್ರಿಗಳು "ಈಗ ನೋಡುತ್ತಿರು, ಕರ್ತೃ ಬರುತ್ತದೆ" ಎಂದರು.

ಹೀಗೆ ಅವರ ಮಾತಿನಲ್ಲಿ ನವುರೂ ಸರಸತೆಯೂ ತುಂಬಿರುತ್ತಿತ್ತು.

ಮಹಾದೇವಶಾಸ್ತ್ರಿಗಳು, ಶಂಕರಶಾಸ್ತ್ರಿಗಳು, ರಾಮಶೇಷಶಾಸ್ತ್ರಿಗಳು-ಈ ಮೂವರಲ್ಲಿಯೂ ನನಗೆ ಸಲುಗೆಯಿತ್ತು. ಮೂವರೂ ನನ್ನನ್ನು ಪ್ರೀತಿ ಮಮತೆಗಳಿಂದ ಕಾಣುತ್ತಿದ್ದರು.

ರಾಮಶೇಷಶಾಸ್ತ್ರಿಗಳು

ರಾಮಶೇಷಶಾಸ್ತ್ರಿಗಳು ಬೆಂಗಳೂರಿನ ಆರ್ಯ ಬಾಲಿಕಾ ಪಾಠಶಾಲೆಯಲ್ಲಿ ಕೆಲವು ಕಾಲ ಸಂಸ್ಕೃತ ಪಂಡಿತರಾಗಿದ್ದು ಬಳಿಕ ಮೈಸೂರಿನ ಮಹಾರಾಣಿ ಕಾಲೇಜಿಗೆ ಪಂಡಿತರಾಗಿ ತೆರಳಿದರು. ಅಲ್ಲಿ ಕೆಲವು ಕಾಲದ ಬಳಿಕ ಆಸ್ಥಾನ ವಿದ್ವಾಂಸರೂ ಆದರು.

ಇವರಿಗೂ ಸಂಗೀತದ ಪರಿಚಯವುಂಟು. ಕಾವ್ಯವಾಚನದಲ್ಲಿ ಪರಿಣತರು.

ಇವರು ಮುದ್ರಾರಾಕ್ಷಸ ನಾಟಕವನ್ನೂ ಮುಕುಂದಾನಂದ ಭಾಷಣವನ್ನೂ ಸಂಸ್ಕೃತದಿಂದ ಕನ್ನಡಕ್ಕೆ ಪರಿವರ್ತನೆ ಮಾಡಿದರು. ಅದಕ್ಕಿಂತ ದೊಡ್ಡದಾದ ಅವರ ಕಾರ್ಯ ಕನ್ನಡ ಭಾಗವತದ ಪ್ರತಿಪದ ಟೀಕಾಸಮೇತವಾದ ಅನುವಾದದ ಪ್ರಕಟನೆ. ಈ ಕಾರ್ಯದಲ್ಲಿ ಅವರಿಗೆ ಬುದ್ಧಿಶ್ರಮ, ದೇಹಶ್ರಮಗಳಾದದ್ದಲ್ಲದೆ ಹಣದ ಚಿಂತೆಯೂ ಉಂಟಾಯಿತು. ಶಾಸ್ತ್ರಕಾರ್ಯದಲ್ಲಿ ಅವರಿಗೆ ಅಣ್ಣಂದಿರಾದ ಶಂಕರಶಾಸ್ತ್ರಿಗಳವರ ಸಹಾಯ ಪ್ರೋತ್ಸಾಹಗಳು ಬೆಂಬಲವಾಗಿದ್ದವು. ಹಣದ ವಿಚಾರದಲ್ಲಿ ಇಬ್ಬರೂ ಪುರಂದರದಾಸರು.

ಒಂದು ತಕರಾರು

ಭಾಗವತ ಪುಸ್ತಕ ಅಚ್ಚಾಗುತ್ತಿದ್ದದ್ದು ಕೃಷ್ಣಯ್ಯರ್ ಅವರ ಐರಿಷ್ ಪ್ರೆಸ್ಸಿನಲ್ಲಿ. ನನ್ನ 'ಕರ್ಣಾಟಕ' ಪತ್ರಿಕೆ ಆಗುತ್ತಿದ್ದದ್ದೂ ಅಲ್ಲಿಯೇ. ಹೀಗೆ ಅವರೂ ನಾನೂ ಪದೇ ಪದೇ ಕಲೆಯುತ್ತಿದ್ದೆವು.

ಒಂದು ದಿನ ನಾನು ಬರಿಯ ತಮಾಷೆಗಾಗಿ ಒಂದು ತಕರಾರು ಹೂಡಿದೆ.

"ಶಾಸ್ತ್ರಿಗಳೆ, ಶ್ರೀಮದ್ಭಾಗವತವು ವೇದವ್ಯಾಸಕೃತವೆಂದಲ್ಲವೆ ನೀವು ಹೇಳುವುದು? ಆ ವಿಷಯದಲ್ಲಿ ನನಗೆ ಸಂದೇಹವಿದೆ. ಭಾಗವತದ ಕಾವ್ಯಶೈಲಿ ವೇದವ್ಯಾಸರದಲ್ಲ. ಭಾಗವತವು ಬೋಪದೇವನೆಂಬ ವ್ಯಾಕರಣವಿದ್ವಾಂಸನ ಕೃತಿ. ಈ ವಿಚಾರದಲ್ಲಿ ಪ್ರಾಚೀನರಲ್ಲಿಯೇ ಸಂದೇಹವಿದೆ. ಅದಕ್ಕೆ ಸಂಬಂಧಪಟ್ಟ ವಾದವಿವಾದ ಗ್ರಂಥಗಳು ಇವೆಯಲ್ಲವೆ! 'ದುರ್ಜನ ಮುಖಥಪೇತಿಕಾ' 'ಅತಿದುರ್ಜನ ಮುಖ ಮಹಾಥಪೇತಿಕಾ' ಮೊದಲಾದವು. ಇದನ್ನೆಲ್ಲ ಕುರಿತು ನಾನು ಒಂದು ಪ್ರಬಂಧ ಬರೆಯಬೇಕೆಂದಿದ್ದೇನೆ."

ಶಾಸ್ತ್ರಿಗಳು: (ತೆಲುಗಿನಲ್ಲಿ) "ಅಯ್ಯ, ನನ್ನ ಗ್ರಂಥಕಾರ್ಯ ಮುಗಿಯಲಿ. ಪುಸ್ತಕ ಖರ್ಚಾಗಲಿ. ಆಮೇಲೆ ನೀನು ಏನು ಬೇಕಾದರೂ ಮಾಡಿಕೊ. ಬ್ರಾಹ್ಮಣನ ಬಾಯಿಗೆ ಮಣ್ಣು ಹಾಕಬೇಡವಯ್ಯ!"

ನಾನು ನಕ್ಕು ಸುಮ್ಮನಾದೆ.

"ಶಾಸ್ತ್ರಿಗಳೆ, ನಿಮ್ಮ ಕಾರ್ಯ ಸಂಪೂರ್ಣವಾಗಿ ಚೆನ್ನಾಗಿ ನಡೆಯಬೇಕೆಂದು ನನಗೂ ತುಂಬಾ ಆಸೆಯಿದೆ. ಗ್ರಂಥಕರ್ತೃ ಯಾರಾದರೇನು! ಗ್ರಂಥ ಎಂಥಾದ್ದು! ಅದನ್ನಲ್ಲವೆ ನಾವು ನೋಡಬೇಕಾದದ್ದು?"

ಶಾಸ್ತ್ರಿಗಳಿಗೆ ಸಮಾಧಾನವಾಯಿತು. ಕಡೆಯವರೆಗೂ ನನಗೆ ಅವರ ಸ್ನೇಹದ ಸಂತೋಷ ದೊರೆತಿತ್ತು.

ಹಾಸ್ಯಶೀಲತೆ

ರಾಮಶೇಷಶಾಸ್ತ್ರಿಗಳು ಅವರ ಅಣ್ಣಂದಿರಾದ ಶಂಕರಶಾಸ್ತ್ರಿಗಳಂತೆಯೇ ಕೊಂಚ ಹಾಸ್ಯಶೀಲರು. ಒಂದು ದಿನ ಬೆಳಗ್ಗೆ ಚಿಕ್ಕಪೇಟೆಯಲ್ಲಿ ವಾಜಪೇಯದವರ ಪುಸ್ತಕದಂಗಡಿಯಲ್ಲಿ ನಾವಿಬ್ಬರೂ ಕುಳಿತಿದ್ದಾಗ ಕನ್ನಡ ನವ್ಯಕಾವ್ಯದ ಪ್ರಸ್ತಾವ ಬಂದಿತು. ನಾನು ಆಗ ಶಂಕರಪುರದಲ್ಲಿ ವಾಸವಾಗಿದ್ದೆ. ನನ್ನ ಮನೆಯ ಹತ್ತಿರದ ಪಾಠಶಾಲೆಯಲ್ಲಿ ಹೇಳಿಕೊಡುತ್ತಿದ್ದ ಹಾಡಿನ ಒಂದು ಪಂಕ್ತಿಯನ್ನು ನಾನು ಉದಾಹರಣೆಯಾಗಿ ಹೇಳಿದೆ:

ಅಲ್ಲಿ ನೋಡು ಗಣಪನ

ನಾನು ಕಡೆಯ ನುಡಿಯನ್ನು ಹೇಳಿದ ಕೂಡಲೆ ರಾಮಶೇಷಶಾಸ್ತ್ರಿಗಳು

ಇಲ್ಲಿ ನೋಡು ಹೆಗ್ಗಣ

ಎಂದರು. ಅಲ್ಲಿದ್ದವರೆಲ್ಲ ನಕ್ಕರು. ಶಾಸ್ತ್ರಿಗಳು ಹೇಳಿದರು:

"ಏಕಯ್ಯ ನಗುತ್ತೀರಿ! ಗಣೇಶನಿದ್ದಮೇಲೆ ವಾಹನ ಇರಬೇಡವೆ! ಒಳ್ಳೆಯ ಕವಿತ್ವದ ಲಕ್ಷಣ ಅದಲ್ಲವೆ!"

ಈ ವಿಷಯವನ್ನು ಕುರಿತು ನಾನು ಏನನ್ನೂ ಹೇಳತಕ್ಕದ್ದಲ್ಲವೆಂದು ತಿಳಿದುಕೊಂಡಿದ್ದೇನೆ. ಇಂಗ್ಲಿಷಿನಲ್ಲಿ ಒಂದು ಗಾದೆಯುಂಟು: ಗಾಜಿನ ಮನೆಯ ಒಳಗಡೆ ಇರುವವರು ಯಾರ ಮೇಲೂ ಕಲ್ಲೆಸೆಯಬಾರದು.

***

ಶಂಕರಶಾಸ್ತ್ರಿಗಳೂ ರಾಮಶೇಷಶಾಸ್ತ್ರಿಗಳೂ ಹೇಳುವ ಪುರಾಣ ಕೇಳಲು ಬಹುಮಂದಿ ಆಶೆಪಟ್ಟು ಬರುತ್ತಿದ್ದರು. ನಗರ್ತರಪೇಟೆಯಲ್ಲಿ ಒಂದು ದೇವಸ್ಥಾನದಲ್ಲಿ ಅವರು ಪುರಾಣ ಹೇಳುತ್ತಿದ್ದದ್ದನ್ನು ನಾನು ಬಲ್ಲೆ.

ಆ ಮಟ್ಟದ ವಿದ್ವಾಂಸರು ಹಾಗೆ ರಸಿಕರೂ ಸುಲಭರೂ ಆದವರು ಈಗ ಬೆಂಗಳೂರಿನಲ್ಲಿ ಯಾರಿದ್ದಾರೋ!

೧೬ ಚಾಮರಾಜಪೇಟೆಯ ಹಲವರು ವಿದ್ವಾಂಸರು

ವೆಂಕಟರಮಣಯ್ಯನವರು

ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರ ಹೆಸರನ್ನು ಹಿಂದೆ ಸ್ಮರಿಸಿದೆ. ಅವರು ಮೇಲ್ದರ್ಜೆಯ ವಿದ್ವಾಂಸರೆನ್ನಲು ಯಾರೂ ಹಿಂಜರಿಯಲಾರರು. ಅವರಲ್ಲಿ ಇಂಗ್ಲಿಷ್ ಮೊದಲಾದ ಆಧುನಿಕ ವಿದ್ಯಾಸಂಪತ್ತೂ ಸಮ್ಮಿಳಿತವಾಗಿತ್ತು.

ಅವರು ಕೆಲವು ವರ್ಷ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ ಮೊದಲು ಉಪಾಧ್ಯಾಯರಾಗಿದ್ದು ಆಮೇಲೆ ಅಧ್ಯಕ್ಷರಾಗಿದ್ದರು. ಅನಂತರ ಸಂಸ್ಕೃತ ಪಾಠಶಾಲೆಗಳ ಇನ್‌ಸ್ಪೆಕ್ಟರಾಗಿದ್ದರು. ಅವರಲ್ಲಿ ಹೇಳಬಹುದಾಗಿದ್ದ ದೋಷ ಮುಂಗೋಪವೆಂಬುದೊಂದೇ. ಮುಂಗೋಪಿಗಳಾದರೂ ಅವರು ತುಂಬಾ ಕರುಣಾಳುಗಳು.

ಇವರು ಸಂಸ್ಕೃತದಲ್ಲಿ ಕೆಲವು ಸ್ತೋತ್ರಗಳನ್ನೂ ಕೆಲವು ಗ್ರಂಥಗಳನ್ನೂ ಬರೆದಿದ್ದಾರೆ. ಅವರ ಸಂಸ್ಕೃತ ಗ್ರಂಥಗಳಲ್ಲಿ ಒಂದು 'ಕಮಲಾವಿಜಯನಾಟಕ' ಎಂಬುದು. ಇದು ಟೆನ್ನಿಸನ್ ಕವಿಯ 'ದಿ ಕಪ್' ಎಂಬ ನಾಟಕದ ಸಂಸ್ಕೃತಾನುವಾದ. ಇಂಗ್ಲಿಷಿನ (Physics) ಭೌತಶಾಸ್ತ್ರದ ಕೆಲವು ತತ್ತ್ವಗಳಿಗೂ ಸನಾತನ ಧರ್ಮಶಾಸ್ತ್ರದ ಕೆಲವು ತತ್ತ್ವಗಳಿಗೂ ಇರುವ ಸಾಮ್ಯವನ್ನು ತೋರಿಸುವ 'ಸನಾತನವಿಜ್ಞಾನಸಮುದಯಃ' ಎಂಬ ಒಂದು ಸಂಸ್ಕೃತ ಪ್ರಬಂಧವನ್ನೂ 'ಸರ್ವಸಮವೃತ್ತ' ಎಂಬ ಛಂದಶ್ಶಾಸ್ತ್ರ ಗ್ರಂಥವನ್ನೂ ಬರೆದಿದ್ದಾರೆ.

ಅವರ ರಚನೆಯಲ್ಲಿ ನನಗೆ ಈಗ ಜ್ಞಾಪಕವಿರುವ ಒಂದು ಪದ್ಯ ಹೀಗೆ:

> ಪರಬ್ರಹ್ಮತತ್ತ್ವಂ ಜಗಜ್ಜೀವತತ್ತ್ವಂ
> ತಪೋಯೋಗಗಮ್ಯಂ ವಿಕಾರಾದಿಶೂನ್ಯಂ ।
> ವಿಭುಂ ವಿಶ್ವರೂಪಂ ಶಿವಂ ಶಾಂತರೂಪಂ
> ಸದಾನಂದದಂ ಸಚ್ಚಿದಾನಂದಮೀಡೇ ॥

ಇದು ಶೃಂಗೇರಿ ಗುರುಗಳ ಸನ್ನಿಧಾನದಲ್ಲಿ ಅರ್ಪಿಸಿದ ಪಂಚರತ್ನದಲ್ಲಿ ಒಂದು ಶ್ಲೋಕ.

ಹೊಸಕೋಟೆ ವೆಂಕಟರಾಮಶಾಸ್ತ್ರಿಗಳು

ಚಾಮರಾಜಪೇಟೆಯಲ್ಲಿ ಆ ಕಾಲದಲ್ಲಿ ಹೆಸರುವಾಸಿಯಾಗಿದ್ದ ಮತ್ತೊಬ್ಬ ವಿದ್ವಾಂಸರು ಹೊಸಕೋಟೆ ವೆಂಕಟರಾಮಶಾಸ್ತ್ರಿಗಳು. ಇವರು ವೆಸ್ಲಿಯನ್ ಹೈಸ್ಕೂಲಿನಲ್ಲಿ ಪಂಡಿತರು. ರೆವಿನ್ಯೂ ಕಮಿಷನರ್ ಆಗಿದ್ದ ರಾಜಸೇವಾಪ್ರಸಕ್ತ ಎಸ್. ಹಿರಿಯಣ್ಣಯ್ಯನವರು ವೆಂಕಟರಾಮಶಾಸ್ತ್ರಿಗಳ ಶಿಷ್ಯರಂತೆ. ಅವರು ಶಾಸ್ತ್ರಿಗಳ ಪಾಂಡಿತ್ಯವನ್ನೂ ಪಾಠಕ್ರಮವನ್ನೂ ಮೆಚ್ಚಿಕೆಯಿಂದ ಸ್ಮರಿಸುತ್ತಿದ್ದುದನ್ನು ನಾನು ಕೇಳಿದ್ದೇನೆ.

ವೆಂಕಟರಾಮಶಾಸ್ತ್ರಿಗಳು ನನಗೆ ಹೇಳಿದ ಒಂದು ಸಂದರ್ಭ ಕುತೂಹಲಕರವಾದದ್ದು. ಅದು ಹೀಗೆ.

೧೯೦೭ ರ ಸುಮಾರಿನಲ್ಲಿ ಶ್ರೀ ಶೃಂಗೇರಿಯ ಜಗದ್ಗುರುಗಳವರು ಕಾಲಟಿಗೆ ಹೊರಟವರಾಗಿ ಮಾರ್ಗವಶದಿಂದ ಬೆಂಗಳೂರಿಗೆ ಚಿತ್ತೈಸಿದ್ದರಷ್ಟೆ. ಆಗ ಬೆಂಗಳೂರು ಪುರಜನರು ತೋರಿಸಿದ ಉತ್ಸಾಹ ಸಂಭ್ರಮಗಳನ್ನು ನಾನು ಎಂದೂ ಮರೆಯುವಂತಿಲ್ಲ. ಮೈಸೂರು ಬ್ಯಾಂಕ್ ಕಟ್ಟಡದ ಸಮೀಪದಲ್ಲಿ ಧೂಳಿಪಾದಪೂಜೆ ನಡೆಯಿತು. ಮಠಮುದ್ರೆ ಹೊಸ ಕೋಟೆ ವೆಂಕಟರಾಮಶಾಸ್ತ್ರಿಗಳು ಪಾದಪೂಜೆ ನಡಸುತ್ತಿದ್ದರು. ಸ್ವಾಮಿಗಳು ನಗುಮುಖದಿಂದ ವೆಂಕಟರಾಮಶಾಸ್ತ್ರಿಗಳವರ ಕಡೆ ತಿರುಗಿ ತೋರುಬೆರಳಿನಿಂದ ತಮ್ಮ ಕಣ್ಣನ್ನು ನಿರ್ದೇಶಿಸಿ ತೆಲುಗಿನಲ್ಲಿ ಕೇಳಿದರು:

ಸ್ವಾ: “ಜ್ಞಾಪಕವಿದೆಯೆ?”

ವೆಂ: (ನಗುತ್ತ) “ಅದನ್ನು ಈ ಜನ್ಮದಲ್ಲಿ ಮರೆಯಲಾಗುತ್ತದೆಯೆ?”

ಪೂರ್ವಕಥೆ

ಕಥೆ ಹೀಗೆ: ಸ್ವಾಮಿಗಳವರು ಬಾಲ್ಯದಲ್ಲಿ ಅವರ ಅಣ್ಣಂದಿರು ವಿದ್ವಾನ್ ಲಕ್ಷ್ಮೀ ನರಸಿಂಹಶಾಸ್ತ್ರಿಗಳವರ ಪೋಷಣೆಯಲ್ಲಿ ಬೆಳೆದವರು. ಅವರಿಬ್ಬರೂ ದಿಗ್ದಂತಿ ವಿದ್ವಾಂಸರಾದ ಕುಣಿಗಲ್ ರಾಮಶಾಸ್ತ್ರಿಗಳವರ ಮಕ್ಕಳು. ತಂದೆ ತೀರಿಕೊಂಡ ಮೇಲೆ ಲಕ್ಷ್ಮೀ ನರಸಿಂಹಶಾಸ್ತ್ರಿಗಳು ತಮ್ಮನನ್ನು ಸಾಕಿದರು. ಬಾಲಕನಿಗೆ ಶಿವಸ್ವಾಮಿ ಎಂದು ಹೆಸರು. ಹೊಸಕೋಟೆ ವೆಂಕಟರಾಮಶಾಸ್ತ್ರಿಗಳು ಲಕ್ಷ್ಮೀನರಸಿಂಹಶಾಸ್ತ್ರಿಗಳ ಮನೆಯಲ್ಲಿ ವಿದ್ಯಾರ್ಥಿಯಾಗಿದ್ದರು. ಅಲ್ಲಿಯೇ ಭೋಜನ ವಸತಿ. ಬಾಲಕ ಶಿವಸ್ವಾಮಿಯ ವರ್ಷ ವರ್ಧಂತಿಯ ದಿವಸ ಲಕ್ಷ್ಮೀನರಸಿಂಹಶಾಸ್ತ್ರಿಗಳು ಹತ್ತು ಮಂದಿ ಬ್ರಾಹ್ಮಣರನ್ನು ಭೋಜನಕ್ಕೆ ಕರೆದಿದ್ದರು. ಅಂದು ಉದ್ದಿಷ್ಟವಾಗಿದ್ದ ಭಕ್ಷ್ಯಗಳಲ್ಲಿ ಆಂಬೊಡೆ ಒಂದು. ಆಂಬೊಡೆಗಾಗಿ ಬೇಳೆ ರುಬ್ಬುವ ಕೆಲಸವನ್ನು ವೆಂಕಟರಾಮಶಾಸ್ತ್ರಿಗಳಿಗೆ ಒಪ್ಪಿಸಿದ್ದರು. ವೆಂಕಟರಾಮಶಾಸ್ತ್ರಿಗಳು ಒರಳ ಮುಂದೆ ಕುಳಿತು ನೆನೆದಿದ್ದ ಕಡಲೆಬೇಳೆ ಮೊದಲಾದ ಪದಾರ್ಥಗಳು, ತೆಂಗಿನಕಾಯಿ ಚೂರುಗಳು ಜೊತೆಗೆ ಹಸಿಮೆಣಸಿನಕಾಯಿ ರಾಶಿಯನ್ನೂ ಒರಳ ಸುತ್ತ ಇಟ್ಟು ಅಣಿಮಾಡಿಕೊಂಡು, ರುಬ್ಬುಗಲ್ಲನ್ನು ಒರಳಿನೊಳಕ್ಕೆ ಧಡೀರೆಂದು ಬಿಟ್ಟರು. ಆಗ ಬಾಲಕ ಶಿವಸ್ವಾಮಿ ಇದೇನು ವಿನೋದವೋ ನೋಡೋವೆಂದು ಅಲ್ಲಿ ನಿಂತಿದ್ದ. ರುಬ್ಬುಗಲ್ಲು ಒರಳಿನೊಳಕ್ಕೆ ಬಿದ್ದ ರಭಸದಲ್ಲಿ ಒಂದು ಮೆಣಸಿನಕಾಯಿ ತುಣುಕುಸಿಡಿದು ಶಿವಸ್ವಾಮಿಯ ಕಣ್ಣಿಗೆ ಬಿತ್ತು. ಮಗು ಅರಚಿತು. ಸುತ್ತ ಇದ್ದವರು ಬಂದು ಕಣ್ಣಿಗೆ ಹಾಲು ಹಾಕಿ ಮಗುವನ್ನು ಸಮಜಾಯಿಷಿ ಮಾಡಿದರು. ವೆಂಕಟರಾಮಶಾಸ್ತ್ರಿಗಳಿಗೆ ತುಂಬ ಭಯವಾಯಿತು. ಲಕ್ಷ್ಮೀನರಸಿಂಹಶಾಸ್ತ್ರಿಗಳು ಇದನ್ನು ಕೇಳಿ ನಕ್ಕು ಶಾಸ್ತ್ರಿಗಳ ಬೆನ್ನು ತಟ್ಟಿ ಅವರಿಗೆ ಅಭಯ ಹೇಳಿದರು.

ನಾನು ಮೇಲೆ ಹೇಳಿದ ದಿವಸದ ವೇಳೆಗೆ ಅದು ಸುಮಾರು ಅರವತ್ತು ವರ್ಷ ಹಿಂದಿನ ಮಾತು. ವೆಂಕಟರಾಮಶಾಸ್ತ್ರಿಗಳು ತುಂಬ ಮುದುಕರಾಗಿದ್ದರು. ಅಷ್ಟು ಕಾಲವಾಗಿದ್ದರೂ ಸ್ವಾಮಿಗಳವರು ಅದನ್ನು ಜ್ಞಾಪಕದಲ್ಲಿರಿಸಿಕೊಂಡಿದ್ದದ್ದಲ್ಲದೆ ಮನುಷ್ಯರ ಗುರುತನ್ನೂ ನೆನಪಿನಲ್ಲಿಟ್ಟುಕೊಂಡು ಗುರುತುಹಿಡಿದರು.

***

ವೆಂಕಟರಾಮಶಾಸ್ತ್ರಿಗಳು ಸಾತ್ತ್ವಿಕರು.

ಅವರ ತಮ್ಮಂದಿರು ನರಸಿಂಹಶಾಸ್ತ್ರಿಗಳೂ ಹಾಗೆಯೇ ತುಂಬ ಸಾತ್ತ್ವಿಕರು. ಅವರು ಯಾವುದೋ ಸ್ಕೂಲಿನಲ್ಲಿ ಪಂಡಿತರಾಗಿದ್ದರು.

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು

ವಿದ್ವಾನ್ ಸುಬ್ರಹ್ಮಣ್ಯಶಾಸ್ತ್ರಿಗಳ ಜ್ಞಾಪಕ ನನಗೆ ಈಗಲೂ ಹೃದಯದ್ರಾವಕವಾಗಿದೆ. ಅವರು ವಿನಯಸಂಪನ್ನರು, ಕಾವ್ಯಹೃದಯರು. ಕನ್ನಡದಲ್ಲಿ ಮಾಲವಿಕಾಗ್ನಿ ಮಿತ್ರ ನಾಟಕವನ್ನೂ 'ಜಯಚಾಮರಾಜೇಂದ್ರ ಗ್ರಂಥಮಾಲೆ' ಗಾಗಿ ಸ್ಕಾಂದ ಮಹಾಪುರಾಣವನ್ನೂ ಲಲಿತೋಪಾಖ್ಯಾನವನ್ನೂ ಅನುವಾದಿಸಿದ್ದಾರೆ. ಸಂಸ್ಕೃತ ನಾಟಕಕಥಾ ಸಂಗ್ರಹವನ್ನೂ ಬರೆದಿದ್ದಾರೆ.

ಅವರ ಶೈಲಿ ಲಲಿತವಾಗಿ, ರಸವತ್ತಾದದ್ದಾಗಿದೆ. ಲಲಿತೋಪಾಖ್ಯಾನ ಗ್ರಂಥಾನುವಾದಕ್ಕಾಗಿ ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರಿಂದ ಶಾಸ್ತ್ರಿಗಳು ಪ್ರಶಸ್ತಿ ಗೌರವವನ್ನು ಪಡೆದರು.

ಶಾಸ್ತ್ರಿಗಳ ಗಮಕ ಕಲೆ

ಶ್ರೀಮದ್ರಾಮಾಯಣ ಕಾವ್ಯವನ್ನು ಸುಬ್ರಹ್ಮಣ್ಯಶಾಸ್ತ್ರಿಗಳಂತೆ ಹೃದಯಸ್ಪರ್ಶಿಯಾಗಿ ವಾಚನ ಮಾಡಬಲ್ಲವರನ್ನು ನಾನು ಈಗಲೂ ಹುಡುಕುತ್ತಲೇ ಇದ್ದೇನೆ. ಅವರ ಒಂದು ದಿನದ ರಾಮಾಯಣ ವಾಚನ ೧೯೩೦ ರ ಸುಮಾರಿನಲ್ಲಿ ನಡೆದದ್ದು ಈಗಲೂ ನನ್ನ ಮನಸ್ಸಿನಲ್ಲಿ ನಿಂತಿದೆ. ಅದು ಸುಂದರಕಾಂಡದಲ್ಲಿ ಆಂಜನೇಯಸ್ವಾಮಿ ಸೀತಾದೇವಿಯ ದರ್ಶನ ಮಾಡಿದಾಗ ಆಡಿದ ಮಾತು.

> ಕೌನು ಪದ್ಮಪಲಾಶಾಕ್ಷಿ ಕ್ಲಿಷ್ಟಕೌಶೇಯವಾಸಿನಿ ।
> ದ್ರುಮಸ್ಯ ಶಾಖಾಮಾಲಂಬ್ಯ ತಿಷ್ಠಸಿ ತ್ವಮನಿಂದಿತೇ ॥

ಇಲ್ಲಿ ಹತ್ತು ಹನ್ನೆರಡು ಪದ್ಯಗಳನ್ನು ಹತ್ತು ಹನ್ನೆರಡು ರಾಗಗಳಲ್ಲಿ ಓದಿದರು. ಅದರ ವಿಶೇಷ ರಾಗಗಳಲ್ಲಿದ್ದದ್ದು ಮಾತ್ರವಲ್ಲ, ಶ್ಲೋಕದ ಪದಗಳನ್ನು ಬಿಡಿಸಿ ಬಿಡಿಸಿ ಅನ್ವಯಗಳನ್ನು ತೋರಿಸಿ ಅರ್ಥವನ್ನು ಸ್ಪಷ್ಟ ಮಾಡಿದ್ದು. ಓದುವವರ ಗಂಟಲಿನಲ್ಲಿ ಗದ್ಗದ; ಕೇಳುವವರ ಎದೆಗಳಲ್ಲಿ ಗದ್ಗದ.

ಇನ್ನೊಂದು ಸಾರಿ ಭರತನಿಗೆ ಪಾದುಕಾಪ್ರದಾನ ಮಾಡಿದ ಪ್ರಕರಣ. ಮತ್ತೊಂದು ಸಾರಿ ಶ್ರೀರಾಮನು ಸೀತಾಸಮೇತನಾಗಿ ಬಂದು ಭರತನಿಗೆ ದರ್ಶನ ಕೊಟ್ಟ ಪ್ರಕರಣ.

ಹೀಗೆ ಎಷ್ಟೋ ಪ್ರಕರಣಗಳು ಜ್ಞಾಪಕಕ್ಕೆ ಬರುತ್ತವೆ.

ಶಾಸ್ತ್ರಿಗಳು ಕೆಲವು ಕಾಲ ಚಿಕ್ಕಪೇಟೆ ಅನಂತಶಾಸ್ತ್ರಿಗಳವರಲ್ಲಿ ಸಂಗೀತ ಪಾಠ ಮಾಡಿದ್ದರಂತೆ.

ಸುಬ್ರಹ್ಮಣ್ಯಶಾಸ್ತ್ರಿಗಳು ಪ್ರತಿಪದ ಟೀಕಾ ತಾತ್ಪರ್ಯ ಸಮೇತವಾದ ವಾಲ್ಮೀಕಿ ರಾಮಾಯಣ ಪ್ರಕಟನೆಯ ಒಂದಾನೊಂದು ಪ್ರಯತ್ನದಲ್ಲಿ ಸೇರಿದ್ದರು. ಆದರೆ ಅದರಲ್ಲಿ ಅವರ ಭಾಗ ಹೆಚ್ಚಿನದಾಗಲು ಅವಕಾಶವಾಗಲಿಲ್ಲ.

ಸುಬ್ರಹ್ಮಣ್ಯಶಾಸ್ತ್ರಿಗಳು ಮಾತುಕತೆಗಳಲ್ಲಿ ಸರಸಿಗಳು. ಸ್ನೇಹತತ್ಪರರು. ಆಚಾರ ವ್ಯವಹಾರಗಳಲ್ಲಿ ಪರಿಶುದ್ಧರು. ನಾನು ಕಷ್ಟಕಾಲದಲ್ಲಿ ಸ್ಮರಿಸಿಕೊಳ್ಳಬಹುದಾದಂಥವರು.

೧೭ ವೈದಿಕರ ಸಹೃದಯತೆ

ಕುಣಿಗಲ ರಾಮಶಾಸ್ತ್ರಿಗಳು [7] ಒಮ್ಮೆ ರಾಮೇಶ್ವರಕ್ಕೆ ಯಾತ್ರೆ ಹೊರಟರು. ಆ ಯಾತ್ರೆಗೆ ತಕ್ಕ ಸೌಕರ್ಯಗಳನ್ನೆಲ್ಲ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹಾರಾಜರವರು ಒದಗಿಸಿಕೊಟ್ಟಿದ್ದರು. ಪಾಚಕ ಪರಿಚಾರಕ ವರ್ಗ, ಒಂದು ಮೇನಾ, ಅದನ್ನು ಹೊರುವ ಬೋಯಿಗಳು–ಈ ಪರಿವಾರವೆಲ್ಲ ಇತ್ತು. ಮತ್ತು ಶಾಸ್ತ್ರಿಗಳವರು ಮಾರ್ಗವಶಾತ್ ತಲಪಿ ತಂಗಬೇಕಾದ ಸ್ಥಳಗಳ ಅಧಿಕಾರಿಗಳಿಗೆ ರಹದಾರಿಯೂ, ಸಾಮಾನು ಸರಂಜಾಮು ಸರಬರಾಜಿಗಾಗಿ ಹುಕುಂನಾಮೆಗಳೂ ಹೊರಟಿದ್ದವು. ಹೀಗೆ ಗೊತ್ತಾದ ಸಿಬ್ಬಂದಿಯೊಡನೆಯೂ ಆಪ್ತಶಿಷ್ಯರೊಡನೆಯೂ ಶಾಸ್ತ್ರಿಗಳ ಪ್ರಯಾಣ ಸಾಗಿತು.

ರಾಜುಶಾಸ್ತ್ರಿಗಳು

ಅವರ ಮಾರ್ಗದಲ್ಲಿ ಮಾಯೂರ (ಮಾಯಾವರಂ) ಎಂಬ ದೊಡ್ಡ ಊರು. ಅದು ತಮಿಳುನಾಡಿನಲ್ಲಿ ಪ್ರಸಿದ್ಧವಾದದ್ದು. ಅಲ್ಲಿ ಮಹಾಮಹೋಪಾಧ್ಯಾಯ ಮನ್ನಾರಗುಡಿ ರಾಜುಶಾಸ್ತ್ರಿಗಳೆಂಬವರು ಪ್ರಸಿದ್ಧರಾಗಿದ್ದರು. ಅವರು ವೃದ್ಧರು. ‘ಕುಲಪತಿ’ ಎನ್ನಿಸಿಕೊಂಡಿದ್ದರು. ಕುಲಪತಿ ಎಂದರೆ ನೂರು ಮಂದಿ ವಿದ್ಯಾರ್ಥಿಗಳನ್ನು ತಮ್ಮ ಆಶ್ರಯದಲ್ಲಿರಿಸಿಕೊಂಡು ಅವರಿಗೆ ಅನ್ನವಸ್ತ್ರಗಳನ್ನು ಕೊಟ್ಟು ವಿದ್ಯಾದಾನ ಮಾಡುವ ವಿದ್ವಾಂಸರು. ಅಂಥವರು ರಾಜುಶಾಸ್ತ್ರಿಗಳು. ಅವರು ಮಹಾಪ್ರಸಿದ್ಧರಾದ ಅಪ್ಪಯ್ಯದೀಕ್ಷಿತರ ವಂಶಸ್ಥರು.

ಕುಣಿಗಲ ರಾಮಶಾಸ್ತ್ರಿಗಳು ಮಾಯಾವರದ ಸಮೀಪದಲ್ಲಿ ಹೋಗುತ್ತಿದ್ದಾಗ ಈ ರಾಜುಶಾಸ್ತ್ರಿಗಳು ಆ ಯಾತ್ರಿಕ ಸಮೂಹದಲ್ಲಿ ಸೇರಿಕೊಂಡರು. ಆದರೆ ತಾವು ಯಾರೆಂಬುದನ್ನು ತಿಳಿಯಪಡಿಸಲಿಲ್ಲ. ಮೇನಾದಲ್ಲಿ ರಾಮಶಾಸ್ತ್ರಿಗಳು ಪ್ರಯಾಣಮಾಡುತ್ತಿದ್ದರು. ಆ ಮೇನೆಯ ಪಕ್ಕದಲ್ಲಿ ರಾಜುಶಾಸ್ತ್ರಿಗಳು ಕೈಕಟ್ಟಿಕೊಂಡು ಕಾಲುನಡಿಗೆಯಿಂದ ನಡೆದು ಬರುತ್ತಿದ್ದರು. ಭೋಜನವಸತಿಗಳಿಗಾಗಿಯೂ ರಾಜುಶಾಸ್ತ್ರಿಗಳು ರಾಮಶಾಸ್ತ್ರಿಗಳ ಬಿಡಾರವನ್ನು ಬೇಡಲಿಲ್ಲ. ಎಲ್ಲಿಯೋ ಭೋಜನ ಮಾಡಿಕೊಂಡು ಪ್ರಯಾಣದ ವೇಳೆಗೆ ಸಿದ್ಧರಾಗಿ ಬಂದು ಮಾತುಕಥೆಯಿಲ್ಲದೆ ಮೌನದಿಂದ ಮೇನಾದ ಪಕ್ಕದಲ್ಲಿರುತ್ತಿದ್ದರು.

ಶಿಷ್ಯರ ಕೌತುಕ

ಇದನ್ನು ರಾಜುಶಾಸ್ತ್ರಿಗಳ ಶಿಷ್ಯರು ಕಂಡರು. ಹೀಗೆ ಎರಡು ಮೂರು ದಿನ ಕಳೆದ ಮೇಲೆ ಶಿಷ್ಯರಿಗೆ ಅಸಮಾಧಾನವಾಯಿತು. ರೋಷವೂ ಬಂದಿತು. “ನಮ್ಮ ಗುರುಗಳು ಮಹಾಮಹೋಪಾಧ್ಯಾಯರು, ಸಕಲಶಾಸ್ತ್ರಪಾರಂಗತರು, ಕುಲಪತಿಗಳು. ಇಂಥ ಮಹನೀಯರು ಮೇನಾದ ಪಕ್ಕದಲ್ಲಿ ಅನಾಮಧೇಯರಂತೆ ನಡೆಯುತ್ತಿರುವುದೆ? ಆ ಮೇನಾದಲ್ಲಿ ಕುಳಿತ ಮನುಷ್ಯ ಎಂಥ ಉದ್ಧತನಾಗಿರಬೇಕು? ರಾಜುಶಾಸ್ತ್ರಿಗಳು ವೃದ್ಧರು. ಆತ ವೃದ್ಧನಲ್ಲ. ವೃದ್ಧರಾದವರನ್ನು ನಡೆಯಿಸಬಾರದು ಎಂಬಷ್ಟು ಮರ್ಯಾದೆ ಕೂಡ ಇಲ್ಲವಲ್ಲ ಆತನಿಗೆ? ಆತ ಒಂದು ಮಾತನ್ನು ಕೂಡ ಆಡಿಸಲಿಲ್ಲವಲ್ಲ? ಇಂಥ ದುರಹಂಕಾರಿಯನ್ನು ಅನುಸರಿಸಿಕೊಂಡು ನಮ್ಮ ಗುರುಗಳು ಸಂಚಾರಮಾಡುತ್ತಿದ್ದಾರಲ್ಲ! ಇದು ನಮಗೆ ಅಪಮಾನ. ನಾವು ಇದನ್ನು ಸಹಿಸತಕ್ಕದ್ದಲ್ಲ” -ಎಂಬೀ ರೀತಿಯಾಗಿ ಶಿಷ್ಯರು ರಾಜುಶಾಸ್ತ್ರಿಗಳಿಗೆ ಕೇಳಿಸುವಂತೆ ರೇಗಿ ಕೂಗಾಡಿದರು. ರಾಜುಶಾಸ್ತ್ರಿಗಳಾದರೋ ಕೊಂಚ ನಕ್ಕು ಶಿಷ್ಯರಿಗೆ ಹೇಳಿದರು ಹೀಗೆ:

ಜ್ಞಾನಪಿಪಾಸೆ

“ಅಯ್ಯಾ, ಮೇನಾದಲ್ಲಿರುವಾತ ಮಹಾವಿದ್ವಾಂಸ. ನಾನು ಆತನಲ್ಲಿ ವಿದ್ಯೆ ಕಲಿಯುವುದಕ್ಕಾಗಿ ಬಂದಿದ್ದೇನೆ. ಈ ಸಂಗತಿ ಆತನಿಗೆ ಇನ್ನೂ ತಿಳಿಯದು. ದಾರಿಯಲ್ಲಿ ಮೇನಾ ಹೋಗುತ್ತಿರುವಾಗ ದಾರಿಹೋಕರು ನಾಲ್ಕಾರು ಮಂದಿ ಅದು ಏನೋ ವಿಶೇಷವೆಂದು ಭಾವಿಸಿ ಮೇನಾ ಜೊತೆಯಲ್ಲಿ ಹತ್ತು ಹೆಜ್ಜೆ ಹಾಕುವುದು ಉಂಟಷ್ಟೆ? ಹೀಗೆ ಏನೋ ಒಂದು ಅರ್ಥವಿಲ್ಲದ ಕುತುಕದಿಂದ ದಾರಿತುಳಿಯುವ ಸಂಗಡಿಗರಲ್ಲಿ ಇವನೂ ಒಬ್ಬನಿರಬಹುದು ಎಂದು ರಾಮಶಾಸ್ತ್ರಿಗಳು ಭಾವಿಸುವುದು ಸಹಜ ತಾನೆ? ಈಗ ಆತನನ್ನು ನೋಡಿರುವುದು ಎರಡು ದಿನ ಮಾತ್ರ. ಇನ್ನೊಂದೆರಡು ದಿನ ತಾಳ್ಮೆಯಿಂದಿರಿ; ನಿಮಗೇ ತಿಳಿಯುತ್ತದೆ, ಆತನ ಯೋಗ್ಯತೆ. ಆತ ನಡಿಯಾ (ನವದ್ವೀಪ) ಪ್ರಾಂತಕ್ಕೆ ಹೋಗಿ ನವೀನ ನ್ಯಾಯಪ್ರಕ್ರಿಯೆಯನ್ನು ವ್ಯಾಸಂಗಮಾಡಿ ಬಂದಿದ್ದಾರೆ. ನವೀನ ನ್ಯಾಯ ಪ್ರಕ್ರಿಯೆ ನನಗೆ ತಿಳಿದದ್ದಲ್ಲ. ನಾನು ಪ್ರಾಚೀನನ್ಯಾಯದವನು. ನವೀನನ್ಯಾಯಶಾಸ್ತ್ರವನ್ನು ಕಲಿಯುವುದಕ್ಕಾಗಿ ಬಂಗಾಳ ದೇಶಕ್ಕೆ ಹೋಗಲು ಈಗ ನನಗೆ ತಕ್ಕ ವಯಸ್ಸಲ್ಲ. ನಾನು ಏನಿದ್ದರೂ ಇಲ್ಲಿಗೆ ಅಲ್ಲಿಂದ ಬಂದ ವಿದ್ವಾಂಸರನ್ನಾಶ್ರಯಿಸಿಯೇ ಶಾಸ್ತ್ರಜ್ಞಾನ ಸಂಪಾದಿಸಬೇಕಾಗಿದೆ. ಈ ಲಾಭಕ್ಕಾಗಿ ನಾನು ರಾಮಶಾಸ್ತ್ರಿಗಳವರನ್ನು ಅನುಸರಿಸುತ್ತಿದ್ದೇನೆ. ಇದರಲ್ಲಿ ಅಪಮಾನದ ಸಂಗತಿ ಕೊಂಚವೂ ಇಲ್ಲ. ನೀವು ಕೊಂಚ ತಾಳ್ಮೆಯಿಂದಿದ್ದು ನೋಡಿ.”

ಪರಿಚಯ

ರಾಜುಶಾಸ್ತ್ರಿಗಳವರ ಶಿಷ್ಯರು ಈ ಉಪದೇಶವನ್ನು ತಾತ್ಕಾಲಿಕವಾಗಿ ಗ್ರಹಿಸಿದರು.

ಇದಾದ ಮಾರನೆಯ ದಿನ ಅಥವಾ ಮೂರನೆಯ ದಿನ ರಾಜುಶಾಸ್ತ್ರಿಗಳವರು ಯಥಾ ಪ್ರಕಾರವಾಗಿ ರಾಮಶಾಸ್ತ್ರಿಗಳ ಮೇನಾ ಪಕ್ಕದಲ್ಲಿ ನಡೆದು ಹೊರಟರು. ಆಗ ದಾರಿಯಲ್ಲೊಂದು ಕಡೆ ರಾಮಶಾಸ್ತ್ರಿಗಳವರು ಮೇನಾವನ್ನು ನಿಲ್ಲಿಸಿ ರಾಜುಶಾಸ್ತ್ರಿಗಳನ್ನು ಕುರಿತು ಕೇಳಿದರು:

ರಾಮಶಾಸ್ತ್ರಿಗಳು: “ತಾವು ಯಾರು?”

ರಾಜುಶಾಸ್ತ್ರಿಗಳು: “ನಾನು ರಾಜುಶಾಸ್ತ್ರಿ. ಮನ್ನಾರಗುಡಿಯವನು. ತಮ್ಮಲ್ಲಿ ಶಾಸ್ತ್ರಭಿಕ್ಷೆ ಬೇಡಲು ಬಂದಿದ್ದೇನೆ.”

ಈ ಮಾತನ್ನು ಕೇಳಿದೊಡನೆಯೇ ರಾಮಶಾಸ್ತ್ರಿಗಳು ಮೇನಾದಿಂದಿಳಿದು ರಾಜುಶಾಸ್ತ್ರಿಗಳ ಪಾದಗಳನ್ನು ಹಿಡಿದು ಸಾಷ್ಟಾಂಗ ನಮಸ್ಕಾರ ಮಾಡಿ, ಸಂಪ್ರದಾಯಕ್ರಮದಂತೆ ಪ್ರವರ ಹೇಳಿ “ಅಹಂ ಭೋ ಅಭಿವಾದಯೇ” ಎಂದರು. ಉಳಿದದ್ದನ್ನು ವಾಚಕರು ಊಹಿಸಬಹುದು.

ಕುಶಲಪ್ರಶ್ನೆಗಳಾದ ಬಳಿಕ ಮತ್ತೆ ಪ್ರಯಾಣವನ್ನಾರಂಭಿಸುವಾಗ ರಾಮಶಾಸ್ತ್ರಿಗಳು ರಾಜುಶಾಸ್ತ್ರಿಗಳವರನ್ನು ಮೊದಲು ಮೇನಾದಲ್ಲಿ ಕೂಡಬೇಕೆಂದು ಹೇಳಿದರು. ರಾಜುಶಾಸ್ತ್ರಿಗಳು ಹಾಗೆ ಬೇಡವೆಂದಾಗ ರಾಮಶಾಸ್ತ್ರಿಗಳು ತಾವು ಒಬ್ಬರೇ ಮೇನಾದಲ್ಲಿ ಇನ್ನು ಕೂಡತಕ್ಕವರಲ್ಲವೆಂದೂ ರಾಜುಶಾಸ್ತ್ರಿಗಳು ಕೂಡದಿದ್ದರೆ ಮಿಕ್ಕ ಯಾತ್ರೆಯೆಲ್ಲ ಕಾಲು ನಡಿಗೆಯಿಂದಲೇ ಆಗಬೇಕಾಗುತ್ತದೆಂದೂ ಖಂಡಿತವಾದ ಧ್ವನಿಯಲ್ಲಿ ಹೇಳಿದರು. ಅದನ್ನು ರಾಜುಶಾಸ್ತ್ರಿಗಳು ಮನ್ನಿಸಿದರು.

ವಿದ್ವಾಂಸರಿಬ್ಬರೂ ಮೇನಾದಲ್ಲಿ ಕುಳಿತು ಶಾಸ್ತ್ರವಾದಗಳನ್ನು ನಡೆಸುತ್ತಾ ರಾಮೇಶ್ವರಕ್ಕೆ ಹೋಗಿ ಅಲ್ಲಿ ಕ್ಷೇತ್ರವಾಸಮಾಡಿ, ಅನಂತರ ಹಾಗೆಯೇ ಮೇನಾದಲ್ಲಿ ಅಲ್ಲಿಂದ ಹಿಂತಿರುಗಿದರು. ಬರುವಾಗ ರಾಮಶಾಸ್ತ್ರಿಗಳವರು ಮಾಯಾವರಕ್ಕೆ ಬಂದು ಅಲ್ಲಿ ರಾಜುಶಾಸ್ತ್ರಿಗಳ ಮನೆಯಲ್ಲಿ ಎರಡು ದಿನ ಅತಿಥಿಗಳಾಗಿದ್ದು ಸಂತೋಷಪಟ್ಟು ಬಳಿಕ ಮೈಸೂರಿಗೆ ಹಿಂತಿರುಗಿದರು.

ಇದು ಪೂರ್ವಕಾಲದ ವಿದ್ವಾಂಸರ ದಾರಿ.

ನನಗೆ ಈ ಸಂಗತಿಯನ್ನು ಹೇಳಿದವರು ರೈ॥ ಆ ॥ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರು

ವಿರೂಪಾಕ್ಷಶಾಸ್ತ್ರಿಗಳು–ವೈದ್ಯನಾಥ ಶಾಸ್ತ್ರಿಗಳು

೧೯೨೨ರ ಸುಮಾರಿನಲ್ಲಿ ಹಾನಗಲ್ ವಿರೂಪಾಕ್ಷಶಾಸ್ತ್ರಿಗಳವರು ಬೆಂಗಳೂರಿನ ಶಂಕರಮಠದ ಪಾಠಶಾಲೆಯಲ್ಲಿ ವಿದ್ವಾಂಸರಾಗಿದ್ದರು. ಅದ್ವೈತ ವೇದಾಂತ ಅವರ ಪಾಠ ವಿಷಯ. ಆಗ ಅವರೊಡನೆ ಸಹಾಧ್ಯಾಪಕರಾಗಿದ್ದವರು ಮೀಮಾಂಸಾಕಂಠೀರವ ವೈದ್ಯನಾಥಶಾಸ್ತ್ರಿಗಳವರು. ಇವರ ಪಾಠವಿಷಯ ಪೂರ್ವಮೀಮಾಂಸಾ.

ಇವರಿಬ್ಬರೂ ದಿಗ್ದಂತಿವರ್ಗಕ್ಕೆ ಸೇರತಕ್ಕವರು. ಅವರವರ ಶಾಸ್ತ್ರಗಳಲ್ಲಿ ಮಹೋನ್ನತರಾಗಿದ್ದದ್ದು ಮಾತ್ರವಲ್ಲದೆ, ತರ್ಕ ವ್ಯಾಕರಣ ಸಾಹಿತ್ಯಗಳಲ್ಲಿಯೂ ವೇದದಲ್ಲಿಯೂ ಇಬ್ಬರೂ ಪಾಂಡಿತ್ಯಸಂಪನ್ನರಾಗಿದ್ದವರು. ಅವರನ್ನು ಹಿಮಾಲಯ ಪರ್ವತಶ್ರೇಣಿಯ ಕಾಂಚನಗಂಗಾ ಗೌರೀಶಂಕರ ಶಿಖರಗಳೆಂದು ಗಣಿಸಬಹುದು. ಇಬ್ಬರಿಗೂ ಪರಸ್ಪರ ಗಾಢವಾದ ಮೈತ್ರಿ; ಪ್ರೀತಿ ಗೌರವಗಳು. ವಿರೂಪಾಕ್ಷಶಾಸ್ತ್ರಿಗಳವರಲ್ಲಿ ಯಾವುದಾದರೊಂದು ಶಾಸ್ತ್ರಪ್ರಸಂಗ ಬಂದಾಗ “ನಮ್ಮ ಮೀಮಾಂಸಾಕಂಠೀರವರನ್ನು ಕೇಳೋಣ” ಎಂದು ಅವರಿಗೆ ಹೇಳಿಕಳುಹಿಸುವರು. ವೈದ್ಯನಾಥಶಾಸ್ತ್ರಿಗಳವರಲ್ಲಿ ತರ್ಕವೆದ್ದಾಗ “ನಮ್ಮ ತರ್ಕಪಂಚಾನನರನ್ನು ಕೇಳೋಣ” ಎನ್ನುವರು. ಈ ಅವರ ಮೈತ್ರಿಯನ್ನು ನೋಡುವುದೇ ಒಂದು ಸಂತೋಷ.

೧೮ ವಿರೂಪಾಕ್ಷಶಾಸ್ತ್ರಿಗಳ ಸಂಪ್ರದಾಯಶ್ರದ್ಧೆ, ವ್ಯಾಸಂಗನಿಷ್ಠೆ

ವಿರೂಪಾಕ್ಷಶಾಸ್ತ್ರಿಗಳವರು ಪ್ರೌಢವಿದ್ಯಾರ್ಥಿಯಾಗಿದ್ದಾಗ ದಿವಾನ್ ಸರ್. ಕೆ. ಶೇಷಾದ್ರಿ ಅಯ್ಯರ್ರವರ ಮನೆಯಲ್ಲಿ ಪುರಾಣ ಪ್ರವಚನ ನಡಸುತ್ತಿದ್ದು ಅವರ ಮೆಚ್ಚಿಕೆಯನ್ನು ಸಂಪಾದಿಸಿ, ಅವರ ಶಿಫಾರಸಿನಿಂದ ಶ್ರೀ ಶೃಂಗೇರಿ ಜಗದ್ಗುರುಗಳವರ ಅನುಗ್ರಹಕ್ಕೆ ಪಾತ್ರರಾದ ಸಂಗತಿಯನ್ನೂ, ಆಗ ತರ್ಕಶಾಸ್ತ್ರದಿಂದ ವೇದಾಂತಶಾಸ್ತ್ರಕ್ಕೆ ತಿರುಗಿ ಗುರುಸನ್ನಿಧಾನದಲ್ಲಿ ವೇದಾಂತಶಾಸ್ತ್ರಪಾರಂಗತರಾದದ್ದನ್ನೂ ಬೇರೆ ಕಡೆ ಸ್ಮರಿಸಿದ್ದೇನೆ. [9]

ವಿರೂಪಾಕ್ಷಶಾಸ್ತ್ರಿಗಳ ವೈದುಷ್ಯವನ್ನೂ ಭಕ್ತಿಶ್ರದ್ಧೆಗಳನ್ನೂ ಕುರಿತು ನಾನು ಅದಕ್ಕೆ ಮೊದಲೇ ಕೇಳಿದ್ದೆ. ಶಾಸ್ತ್ರಿಗಳು ಪಾಠಪ್ರವಚನ ವಿಷಯದಲ್ಲಿ ಪರಮ ಪ್ರಾಮಾಣಿಕರು ಮತ್ತು ಸದಾಚಾರಸಂಪನ್ನರು. ಶಾಸ್ತ್ರಬೋಧನೆಯಲ್ಲಿ ಅವರ ಕ್ರಮವು ಪರಿಷ್ಕಾರವಾದದ್ದು. ಹೀಗೆಂದು ನನಗೆ ಬಹುಮಂದಿ ಹೇಳಿದ್ದರು.

ಭಾಷ್ಯಶಾಂತಿ

ಆ ಕಾಲದಲ್ಲಿ ಶಂಕರಮಠದಲ್ಲಿ ಬೆಳಗ್ಗೆ ಆತ್ಮಸಂತುಷ್ಟಿಗಾಗಿ ವೇದಾಂತ ವ್ಯಾಸಂಗ ಮಾಡುವ ಲೌಕಿಕರಿಗಾಗಿ ಒಂದು ಗೋಷ್ಠಿ ನಡೆಯುತ್ತಿತ್ತು. ಈ ಗೋಷ್ಠಿಯಲ್ಲಿ ಪಾಠವು ಗಹನವಾದ ಶಾಸ್ತ್ರಪ್ರಸಂಗಗಳಿಗೆ ಹೋಗದೆ ಸಾಮಾನ್ಯಾಕಾರದಲ್ಲಿ ನಡೆಯುತ್ತಿತ್ತು. ಈ ಗೋಷ್ಠಿಗೆ ಕ್ರಮವಾಗಿ ಹೋಗುತ್ತಿದ್ದವರ ಪೈಕಿ ಬಿ. ವಿ. ಲಕ್ಷ್ಮಣರಾಯರು ಒಬ್ಬರು. ಅವರ ಮನೆ ನನ್ನ ಮನೆಗೆ ಬಹು ಸಮೀಪವಾಗಿತ್ತು. ಅವರು ವೇದಾಂತಶ್ರದ್ಧೆಯುಳ್ಳವರು ಮತ್ತು ಶಿಷ್ಯರು. ಅವರು ನನ್ನನ್ನು ಶಾಸ್ತ್ರಿಗಳ ಬಳಿಗೆ ಹೋಗಬೇಕೆಂದು ಪದೇ ಪದೇ ಪ್ರೋತ್ಸಾಹಿಸುತ್ತಿದ್ದರು. ಲಕ್ಷ್ಮಣರಾಯರ ಕೃಪೆಯಿಂದ ನನಗೆ ಶಾಸ್ತ್ರಿಗಳವರು ಭಾಷ್ಯಶಾಂತಿ ಮಾಡಿಸುವಂತೆ ಏರ್ಪಾಟಾಯಿತು. ಆ ದಿನ ಬೆಳಗ್ಗೆ ನಾನು ಮಡಿಯುಟ್ಟು ಪೂಜಾದ್ರವ್ಯಗಳನ್ನು ತೆಗೆದುಕೊಂಡು ಶಂಕರಮಠದ ಅಗ್ರಹಾರದಲ್ಲಿದ್ದ ಶಾಸ್ತ್ರಿಗಳವರ ಮನೆಗೆ ಹೋದೆ. ಶಾಸ್ತ್ರಿಗಳು ದೇವತಾರ್ಚನೆಯಲ್ಲಿದ್ದರು. ನಾನು ಸಾಷ್ಟಾಂಗ ಪ್ರಣಾಮ ಮಾಡಿ, ನಾನು ತೆಗೆದುಕೊಂಡು ಹೋಗಿದ್ದ ಪೂಜಾದ್ರವ್ಯಗಳ ತಟ್ಟೆಯನ್ನು ಶಾಸ್ತ್ರಿಗಳವರಿಗೆ

ಒಪ್ಪಿಸಿ ಅವರ ಆಜ್ಞೆಯಂತೆ ಕುಳಿತುಕೊಂಡೆ. ಶಾಸ್ತ್ರಿಗಳವರು ಕಾಯಿ, ಹಣ್ಣು, ಹೂಗಳನ್ನು ತೆಗೆದಿರಿಸಿಕೊಂಡು ಕೇಳಿದರು:

ವಿ: "ಇದೇನು ತಾಂಬೂಲದಾಗೆ ಇಟ್ಟಿರೋಣಾಗ್ಯದಲ್ಲ?"

ನಾನು: "ಅಲ್ಪ ದಕ್ಷಿಣೆ."

ವಿ: "ಅದನ್ನ ತಗೊಂಬೋ ಸಂಪ್ರದಾಯ ಇಲ್ಲವಲ್ಲ? ಅದನ್ನು ಹಿಂದಕ್ಕೆ ತಗೊಂಬೋಣಾಗಲಿ."

ನಾನು: "ಅರ್ಪಣೆಮಾಡಿದ್ದನ್ನು ಹಿಂದಕ್ಕೆ ತಗೊಂಬೋ ಸಂಪ್ರದಾಯ ಇಲ್ಲವಲ್ಲ?"

ವಿರೂಪಾಕ್ಷಶಾಸ್ತ್ರಿಗಳು ಕೊಂಚ ನಕ್ಕು, ಒಬ್ಬ ಶಿಷ್ಯನನ್ನು ಕರೆದು ಹೇಳಿದರು:

"ಎಲಾ, ಇದನ್ನು ಪಾವಲಿ ಮಾಡಿಸಿ ಪಾಠಶಾಲೆಯಾಗೆ ಯಾರಾದರೂ ಬ್ರಾಹ್ಮಣರಿಗೆ ಹಂಚಿಬಿಡು-ಪಾವಲಿ, ಪಾವಲಿ."

ಹಾಗೆ ಇಪ್ಪತ್ತು ಮಂದಿ ಬ್ರಾಹ್ಮಣರಿಗೆ ದಕ್ಷಿಣೆ ಹಂಚಲಾಯಿತು.

ಪಾಠಶ್ರದ್ಧೆ

ಇದು ಸ್ವಭಾವಾಭಿವ್ಯಕ್ತಿ. ಶಾಸ್ತ್ರಿಗಳ ಮನೆಯಲ್ಲಿ ಯಾವಾಗಲೂ ಇಬ್ಬರು ಮೂವರು ವಿದ್ಯಾರ್ಥಿಗಳಿರುತ್ತಿದ್ದರು. ಶಾಸ್ತ್ರಿಗಳಿಗೆ ಪತ್ನೀವಿಯೋಗವಾಗಿ ಬಹುಕಾಲವಾಗಿತ್ತು. ಶಾಸ್ತ್ರಿಗಳ ಸ್ನಾನಕಾಲದಲ್ಲಿಯೂ ಭೋಜನಕಾಲದಲ್ಲಿಯೂ ಪಾಠ ನಡೆಯುತ್ತಲೇ ಇರುತ್ತಿತ್ತು. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಸ್ನಾನಕಾಲದಲ್ಲಿ ವ್ಯಾಕರಣ ಪಾಠ, ಭೋಜನಕಾಲದಲ್ಲಿ ಕಠಿನಗ್ರಂಥಗಳಾದ ಜಾಗದೀಶೀ ಗಾದಾಧರಿ—ಈ ತರ್ಕಗ್ರಂಥಗಳ ಪಾಠವಾಗುತ್ತಿತ್ತು.

ಶಾಸ್ತ್ರಿಗಳವರಿಗೆ ಅಚ್ಚಾದ ಪುಸ್ತಕಗಳ ವಿಷಯದಲ್ಲಿ ಆದರವಿರಲಿಲ್ಲ. ಅವರಿಗೆ ಎಲ್ಲ ಗ್ರಂಥವೂ ಮುಖಸ್ಥವಾಗಿರಬೇಕು. ಒಮ್ಮೊಮ್ಮೆ ನಾನು ಪುಸ್ತಕ ಹಿಡಿದಿದ್ದನ್ನು ನೋಡಿ, "ಏನು, ತಾವು ಪ್ರೆಂಟು ಹಿಡಿಯೋಣಾಗುತ್ತದಲ್ಲ?" ಎನ್ನುವರು.

ಒಂದು ದಿನ ಅವರು ಭೋಜನಮಾಡುತ್ತಿದ್ದಾಗ ತುತ್ತುತುತ್ತಿಗೂ ನಡುವೆ ಅದ್ವೈತ ಸಿದ್ಧಿ ಗ್ರಂಥದ ಪ್ರವಚನ ನಡೆಯುತ್ತಿತ್ತು. ನಾನು ಅಚ್ಚಾದ ಪುಸ್ತಕವನ್ನು ಕೈಯಲ್ಲಿ ಹಿಡಿದಿದ್ದೆ. ಅದರಲ್ಲಿ ಅಚ್ಚಿನ ತಪ್ಪುಗಳಿದ್ದವು. ನಾನು ತಡಬಡಿಸುತ್ತಿದ್ದೆ. ಅಲ್ಲಿ ಏನೋ ಅಕ್ಷರಸ್ಖಾಲಿತ್ಯವಿತ್ತು. ಇದು ಶಾಸ್ತ್ರಿಗಳಿಗೆ ಒಳ್ಳೆಯ ಅವಕಾಶವಾಯಿತು.

"ನೋಡಿದಿರಾ! ಇದಕ್ಕೋಸ್ಕರವೇ ನಾನು ಪ್ರೆಂಟು ಬೇಡ ಅಂಬೋದು."

ನಾವೆಲ್ಲ ನಕ್ಕೆವು.

***

ಪ್ರೆಂಟು ಪುಸ್ತಕದಲ್ಲಿ ಅವರಿಗೆ ಆದರವಿಲ್ಲದಿದ್ದರೂ ಪುಸ್ತಕದ ವಿಷಯದಲ್ಲಿ ದೊಡ್ಡ ಗೌರವ. ಒಮ್ಮೆ ಪಾಠ ನಡೆಯುತ್ತಿದ್ದಾಗ ಕೈಯಲ್ಲಿ ಪುಸ್ತಕ ಹಿಡಿದು ಹಿಡಿದು ಬೇಸರ ಬಂದು ನೆಲದ ಮೇಲೆ ಪುಸ್ತಕವನ್ನಿಟ್ಟೆ. ಪಾಠ ನಿಂತಿತು. ಶಾಸ್ತ್ರಿಗಳು ಮೌನವಾಗಿದ್ದರು. ಅದರ ಅರ್ಥವನ್ನು ನಾನು ಊಹಿಸಲಾರದೆ ತಲೆಯೆತ್ತಿ ಅವರ ಕಡೆ ನೋಡಿದೆ. ಆಗ ಅವರು ಹೇಳಿದರು:

"ಆ ಗ್ರಂಥವನ್ನು ಕೈಯಾಗೆ ತಗೊಂಬೋಣವಾಗಲಿ. ಅಥವಾ ಮಣಿಯ ಮೇಲೆ ಇಡೋಣವಾಗಲಿ. ನಾಳೆಯಿಂದ ಒಂದು ವ್ಯಾಸಪೀಠದ ಮೇಲೆ ಇಡುವುದಾಗಲಿ. ಗ್ರಂಥ ನೆಲದ ಮೇಲಿಟ್ಟರೆ ಪಾಠ ನಿಂತುಹೋಗ್ತದೆ."

***

ನನಗೆ ಒಬ್ಬ ಸ್ನೇಹಿತರಿಂದ ಒಂದು ಅಪೂರ್ವ ಗ್ರಂಥ ದೊರೆಯಿತು. ಅದರ ಹೆಸರು ತತ್ತ್ವಕೌಸ್ತುಭ. ಅದು ಮಹಾನುಭಾವರಾದ ಭಟ್ಟೋಜಿ ದೀಕ್ಷಿತರ ಕೃತಿ. ಅವರ ಶಬ್ದ ಕೌಸ್ತುಭವೆಂಬ ವ್ಯಾಕರಣಗ್ರಂಥ ಪ್ರಸಿದ್ಧವಾದದ್ದು. ಅದಕ್ಕೆ ಜೊತೆ ತತ್ತ್ವಕೌಸ್ತುಭ. ಆದರೆ ಆ ಕಾಲಕ್ಕೆ ತತ್ತ್ವಕೌಸ್ತುಭ ಗ್ರಂಥ ಅಚ್ಚಾಗಿದ್ದಂತೆ ನನಗೆ ತಿಳಿದುಬರಲಿಲ್ಲ. ನನ್ನ ಕೈಗೆ ಬಂದಿದ್ದದ್ದು ಕೈಬರಹ ಗ್ರಂಥ. ಈ ಸಂಗತಿಯನ್ನು ನಾನು ಶಾಸ್ತ್ರಿಗಳವರಲ್ಲಿ ಅರಿಕೆ ಮಾಡಿದೆ. ಅವರು ಗ್ರಂಥ ನೋಡಬೇಕೆಂದು ಕುತೂಹಲಪಟ್ಟರು. ನಾನು ಪುಸ್ತಕವನ್ನು ಅವರ ಮುಂದೆ ಹಿಡಿದೆ. ಅವರು ಅದನ್ನು ಕಣ್ಣಿನಿಂದ ನೋಡಿ ಕೇಳಿದರು:

“ಅದಕ್ಕೇನು ಬೆನ್ನಾಗೆ ಅರಿವಿ ಹಾಕ್ಯದೆ? ಅಲ್ಲಿ ದೂರ ಇಟ್ಟುಬಿಡೋಣವಾಗಲಿ. ನಾನು ಮೈಲಿಗಿ ಉಟ್ಟ ಮೇಲೆ ಅದನ್ನು ನೋಡುತ್ತೇನೆ.”

(‘ಅರಿವಿ’ ಎಂದರೆ ಬಟ್ಟೆ-ರಟ್ಟಿನ ಬಟ್ಟೆ.)

ಅದರಂತೆ ಗ್ರಂಥವನ್ನು ಆಮೂಲಾಗ್ರವಾಗಿ ಓದಿ ಸಂತೋಷಪಟ್ಟು ನನಗೆ ಹಿಂದಕ್ಕೆ ಕೊಟ್ಟರು.

ಅಂಗಡಿ ಲೆಕ್ಕ

ವಿರೂಪಾಕ್ಷಶಾಸ್ತ್ರಿಗಳವರಿಗೆ ಶಂಕರಮಠದಲ್ಲಿ ದೊರೆಯುತ್ತಿದ್ದ ಸಂಬಳ ತಿಂಗಳಿಗೆ ಎಂಭತ್ತು ರೂಪಾಯಿ ಎಂದು ನನ್ನ ಜ್ಞಾಪಕ. ಅವರು ಆ ಹಣವನ್ನು ಕೈಯಿಂದ ಮುಟ್ಟಿದವರಲ್ಲ. ಮಠದ ಕಾರ್ಯಾಲಯದಲ್ಲಿ ಬಟವಾಡೆಯ ಪುಸ್ತಕದಲ್ಲಿ ದೇವನಾಗರಿ ಅಕ್ಷರದಲ್ಲಿ 'ಹಾನಗಲ್ ವಿರೂಪಾಕ್ಷಶಾಸ್ತ್ರೀ' ಎಂದು ರುಜು ಮಾಡುವರು. ಅದೇ ದಿವಸ ಅವರ ಮನೆಯ ಸಮೀಪದಲ್ಲಿದ್ದ ಅಂಗಡಿ ಕೃಷ್ಣಪ್ಪನವರನ್ನು ಕಂಡು ತಮ್ಮ ಸಂಬಳವನ್ನು ಮಠದ ಕಾರ್ಯಾಲಯದಿಂದ ತಂದುಕೊಂಡು ಲೆಕ್ಕಕ್ಕೆ ಸೇರಿಸಿಕೊಳ್ಳತಕ್ಕದ್ದೆಂದು ಹೇಳುವರು. ಮೂರು ನಾಲ್ಕು ತಿಂಗಳಿಗೊಮ್ಮೆ ಎಂದೋ ಕೃಷ್ಣಪ್ಪನವರನ್ನು ಕಂಡಾಗ ಕೇಳುವರು:

ವಿ: "ಏನು? ನಮ್ಮ ಲೆಕ್ಕ ಹ್ಯಾಂಗದೆ?"

ಕೃ: "ಹೆಚ್ಚು ಬಾಕಿ ಏನೂ ಇಲ್ಲ. ಎಂಟು ಹತ್ತು ರೂಪಾಯಿ ಇರಬಹುದು ಅಷ್ಟೆ."

ವಿ: "ಓಹೋ! ಇನ್ನೇನು ದಸರಾ ಬರುತ್ತದಲ್ಲ-ಆಗ ಪರೀಕ್ಷೆಗೆ ಹೋಗಬೇಕಾಗ್ತದೆ. ಆ ಸಂಭಾವನಿ ಬಂದರೆ ಬಾಕಿ ತೀರಬಹುದು."

ಕೃಷ್ಣಪ್ಪನವರಿಗೆ ಈ ಭರವಸೆ ಅನವಶ್ಯವಾಗಿತ್ತು. ಅವರು ನಕ್ಕು ಭಕ್ತಿಯಿಂದ

"ಏನೂ ಚಿಂತೆಯಿಲ್ಲ"

ಎನ್ನುವರು.

ಪ್ರಯಾಣ

ಶಾಸ್ತ್ರಿಗಳು ವರ್ಷವರ್ಷವೂ ಶೃಂಗೇರಿಗೊಂದು ಸಲ, ಕಾಲಟಿಗೆ ಒಂದು ಸಲ ಹೋಗಬೇಕಾಗಿಬರುತ್ತಿತ್ತು. ಆ ಪ್ರಯಾಣದ ದಿವಸಕ್ಕೆ ಒಂದು ವಾರ ಹಿಂದೆ ನನಗೆ ವಿಷಯವನ್ನು ತಿಳಿಸುತ್ತಿದ್ದರು. ನಾನು ಆಗಿನ ರೈಲ್ವೆ ಪೊಲೀಸ್ ಮುಖ್ಯಸ್ಥರಾದ ರಾವ್ ಸಾಹೇಬ್ ಕೆ. ಶ್ರೀನಿವಾಸನ್ ಅವರಿಗೆ ಕೋರಿಕೆ ಸಲ್ಲಿಸುತ್ತಿದ್ದೆ. ಅದರಂತೆ ಅವರು ಅರಸೀಕೆರೆಯ ಸ್ಟೇಷನ್ ಮಾಸ್ಟರಿಗೆ ವರ್ತಮಾನ ಕೊಡುತ್ತಿದ್ದರು. ಬೆಂಗಳೂರಿನ ಗಾಡಿ ಅರಸೀಕೆರೆಗೆ ಸಂಜೆ ಸುಮಾರು ಆರು ಘಂಟೆಗೆ ತಲಪುತ್ತಿತ್ತು. ಆ ಹೊತ್ತಿಗೆ ಸರಿಯಾಗಿ ಒಬ್ಬ ಆಳು ಗಾಡಿಯ ಬಳಿಗೆ ಬಂದು ಶಾಸ್ತ್ರಿಗಳಿಗೆ ಮುಖ ತೋರಿಸುವನು. ಶಾಸ್ತ್ರಿಗಳು ಕೂಡಲೆ ಗಾಡಿಯಿಂದಿಳಿದು ಆ ಆಳಿನ ಜೊತೆಯಲ್ಲಿ ಹೋಗುವರು-ಆ ಸಮೀಪದಲ್ಲಿದ್ದ ಬಾವಿಯ ಬಳಿಗೆ. ಆ ಆಳು ಒಂದು ಬಿಂದಿಗೆಯನ್ನೂ, ಒಂದು ಹಗ್ಗವನ್ನೂ, ಒಂದು ತಂಬಿಗೆಯನ್ನೂ, ಒಂದಷ್ಟು ಹುಣಿಸೆ ಹಣ್ಣನ್ನೂ, ಒಂದಷ್ಟು ಮೃತ್ತಿಕೆಯನ್ನೂ ಸಿದ್ಧವಾಗಿರಿಸಿರುತ್ತಿದ್ದ. ಶಾಸ್ತ್ರಿಗಳು ನೀರು ಸೇದಿ ಪಾತ್ರೆಗಳನ್ನು ಶುದ್ಧಿ ಮಾಡಿ, ಮತ್ತೆ ನೀರು ಸೇದಿ ಸಂಧ್ಯಾವಂದನೆ ಮಾಡುವರು. ಅರ್ಘ್ಯಪ್ರದಾನವಾದ ಕೂಡಲೆ ಗಾಡಿಯಲ್ಲಿ ತಮ್ಮ ಜಾಗಕ್ಕೆ ಹಿಂತಿರುಗುವರು. ಈ ಸಾಯಂಸಂಧ್ಯಾವಿಧಿ ತಪ್ಪದೆ ನಡೆಯುತ್ತಿತ್ತು. ಈ ಉಪಕಾರಕ್ಕಾಗಿ ಎಲ್ಲರ ಮೇಲೂ ಹೊಗಳಿಕೆ ಹೊರೆಸುತ್ತಿದ್ದರು-ಬಾಯಿತುಂಬಾ ಹೊಗಳಿಕೆ.

ಸೂತ್ರಭಾಷ್ಯ ಪಾಠ

ಶಾಸ್ತ್ರಿಗಳವರನ್ನು ನಾನು ಬ್ರಹ್ಮಸೂತ್ರಭಾಷ್ಯ ಪಾಠವಾಗಬೇಕೆಂದು ಬೇಡಿಕೊಂಡಿದ್ದೆ. ಹಾಗೆಯೇ ಅದುವರೆಗೂ ನಾನು ನೋಡದೆ ಇದ್ದ ಎರಡು ಮೂರು ಉಪನಿಷದ್ಭಾಷ್ಯ ಪಾಠವನ್ನೂ ಬೇಡಿ, ಈ ಶಾಸ್ತ್ರವ್ಯಾಸಂಗಕ್ಕಾಗಿ ನಾನು ಎರಡು ವರ್ಷ ಮೀಸಲಾಗಿಟ್ಟಿದ್ದೇನೆಂದು ಬಿನ್ನಯಿಸಿದೆ. ಅವರು ಅಷ್ಟು ಕಾಲ ಸಾಕಾಗಲಾರದೆಂದರು. ನಾನು “ಎರಡು ವರ್ಷ ನಡೆಯಲಿ: ಬೇಕಾದರೆ ಇನ್ನೂ ಆರು ತಿಂಗಳು ನಡಸೋಣವಂತೆ” ಎಂದೆ. ಪ್ರತಿ ದಿನವೂ ಬೆಳಗ್ಗೆ ಎಂಟೂವರೆಯಿಂದ ಹನ್ನೊಂದರವರೆಗೆ ಉಪನಿಷದ್ಭಾಷ್ಯ; ಮಧ್ಯಾಹ್ನ ಮೂರೂವರೆಯಿಂದ ಆರರವರೆಗೆ ಸೂತ್ರಭಾಷ್ಯ. ಇದು ಸಾಮಾನ್ಯವಾದ ವೇಳಾಪಟ್ಟಿಕೆ. ಎಷ್ಟೋ ದಿನ ಇದು ನಡೆಯಲಾಗಲಿಲ್ಲ.

ವೀರಕೇಸರಿ ಸೀತಾರಾಮಶಾಸ್ತ್ರಿಗಳು

ಸೂತ್ರಭಾಷ್ಯ ಪಾಠದ ಕಾಲದಲ್ಲಿ ಬ್ರಹ್ಮಶ್ರೀ ವೇದಮೂರ್ತಿ ವೀರಕೇಸರಿ ಸೀತಾ ರಾಮಶಾಸ್ತ್ರಿಗಳವರು ಕೆಲವು ಕಾಲ ನನಗೆ ಸಹಾಧ್ಯಾಯಿಗಳಾಗಿ ಉಪಕರಿಸಿದರೆಂಬುದನ್ನು ಇಲ್ಲಿ ಸ್ಮರಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಆ ಸುಮಾರಿನಲ್ಲಿ ಅವರು ಕನ್ನಡದಲ್ಲಿ ಒಂದು ತರ್ಕ ಬಾಲಬೋಧಿನಿಯನ್ನು ಬರೆದಿದ್ದರು. ಅದರ ಕೆಲವು ಭಾಗಗಳನ್ನು ನನಗೆ ಓದಿ ಹೇಳಿದ್ದರು. ಆ ಗ್ರಂಥವನ್ನು ಅವರು ಪೂರ್ತಿಮಾಡಿ ಪ್ರಕಟಮಾಡಿದರೆ ಬಹು ಉಪಕಾರವಾಗುವುದೆಂದು ಅವರಿಗೆ ವಿಜ್ಞಾಪನೆ ಮಾಡಿದ್ದೆ. ನಮ್ಮ ಜನದಲ್ಲಿರುವ ನೂರಾರು ತಪ್ಪು ಭಾವನೆಗಳು ನಮ್ಮ ಇಂದಿನ ರಾಜಕೀಯ ದುಃಸ್ಥಿತಿಗೂ, ಆರ್ಥಿಕ ಅವ್ಯವಸ್ಥೆಗೂ ಮೂಲಕಾರಣಗಳಾಗಿವೆ. ದೇಶದ ಜನಜೀವನವನ್ನು ಚೊಕ್ಕಟಪಡಿಸಬೇಕೆನ್ನುವವರು ನಮ್ಮ ಜನಕ್ಕೆ ಮೊದಲು ಕಾರ್ಯಕಾರಣವಿವೇಕದ ಅಭ್ಯಾಸವನ್ನು ಮಾಡಿಸಬೇಕು. ಅಂಥ ವಿವೇಕದ ಅಭ್ಯಾಸಕ್ಕೆ ಸಾಧಕವಾಗತಕ್ಕದ್ದು ತರ್ಕಶಾಸ್ತ್ರ.

ತರ್ಕಪಾಂಡಿತ್ಯ

ವಿರೂಪಾಕ್ಷಶಾಸ್ತ್ರಿಗಳು ತರ್ಕದಲ್ಲಿ ಉದ್ದಾಮ ಪಂಡಿತರೆಂದು ದೇಶದೇಶಗಳಲ್ಲೂ ಪ್ರಖ್ಯಾತಿ ಪಡೆದಿದ್ದವರು.

ಅವರಿಗೆ ತರ್ಕಶಾಸ್ತ್ರದಲ್ಲಿ ಎಷ್ಟು ಮಟ್ಟಿನ ಸೌಲಭ್ಯವೂ, ಅಧಿಕಾರವೂ ಬಂದಿತ್ತೆಂಬುದನ್ನು ಒಂದು ಸಂಗತಿಯಿಂದ ಊಹಿಸಬಹುದು. ವೇದಾಂತಶಾಸ್ತ್ರ ಪಾಠಹೇಳುತ್ತಿದ್ದ ಕಾಲದಲ್ಲಿ ಸಾಂಖ್ಯ, ವೈಶೇಷಿಕ ಮೊದಲಾದ ಭಿನ್ನ ಭಿನ್ನ ಮತಗಳ ವಾದಗಳು ಪರಾಮರ್ಶೆಗೆ ಬರುತ್ತಿದ್ದವಷ್ಟೆ. ಶಾಸ್ತ್ರಿಗಳವರು ಆ ನಾನಾ ಮತಗಳನ್ನು ಬೇರೆಬೇರೆಯಾಗಿ ಪ್ರಸ್ತಾವಿಸಿ,

“ನಮ್ಮ ಮತದಲ್ಲಿ, ಎಂದರೆ ತಾರ್ಕಿಕಮತದಲ್ಲಲ್ಲ, ವೇದಾಂತಮತದಲ್ಲಿ...” ಎಂದು ವಿವರಣೆ ಕೊಡುತ್ತಿದ್ದರು. ಮೊದಮೊದಲು ಅವರಿಗೆ ಪ್ರಸಿದ್ಧಿ ಇದ್ದದ್ದು ತಾರ್ಕಿಕರೆಂದು, ಆದದ್ದರಿಂದಲೇ ‘ತರ್ಕಪಂಚಾನನ’ ಎಂಬ ಬಿರುದು. ಜಗದ್ಗುರುಗಳ ಪ್ರಭಾವದಿಂದ ತರ್ಕಕ್ಕಿದ್ದ ಸ್ಥಾನ ವೇದಾಂತಕ್ಕೆ ದೊರೆಯಿತು.

ಔಚಿತ್ಯ

ವಿರೂಪಾಕ್ಷಶಾಸ್ತ್ರಿಗಳವರು ಎಲ್ಲ ವಿಷಯಗಳಲ್ಲಿಯೂ ಪ್ರಾಮಾಣಿಕರು. ಮತ್ತು ಪರಿಶುದ್ಧವೃತ್ತರು. ಅಹಂಕಾರದಿಂದಲಾಗಲಿ ಮಾತ್ಸರ್ಯಕ್ರೋಧಗಳಿಂದಾಗಲಿ ಮಾತನಾಡುವವರಲ್ಲ. ತಮ್ಮ ಅಂತರಂಗದಲ್ಲಿದ್ದ ಸತ್ಯವನ್ನು ನುಡಿಯಬೇಕು, ನಿರ್ಭೀತರಾಗಿ ನುಡಿಯಬೇಕು-ಇದು ಅವರ ಸ್ವಭಾವ. ಸತ್ಯವಚನದ ಪ್ರಸಕ್ತಿಯಲ್ಲಿ ಅವರು ಬೇರೆ ಯಾವ ಅಧಿಕಾರಕ್ಕೂ ತಲೆಬಾಗರು. ಇದನ್ನು ಎಲ್ಲರೂ ತಿಳಿದುಕೊಂಡಿದ್ದದ್ದರಿಂದ ಅವರ ವಿಷಯದಲ್ಲಿ ಯಾರಿಗೂ ಅಸಮಾಧಾನ ಬರುತ್ತಿರಲಿಲ್ಲ. ಎಲ್ಲರೂ ಭಕ್ತಿಗೌರವಗಳನ್ನಿರಿಸಿಕೊಂಡಿದ್ದರು.

ಶಾಸ್ತ್ರಿಗಳವರು ಸಮಸ್ತರಲ್ಲಿಯೂ ಅನುಕಂಪೆಯಿದ್ದವರು. ತಮ್ಮ ವೈಯಕ್ತಿಕ ಜೀವನದಲ್ಲಿ ಅವರು ಬಡತನವನ್ನು ಕಂಡಿದ್ದವರು, ಕಷ್ಟಕಾರ್ಪಣ್ಯಗಳನ್ನು ಕಂಡಿದ್ದವರು, ರೋಗವಿಯೋಗಗಳನ್ನು ಕಂಡಿದ್ದವರು. ಅವರ ಮನಸ್ಸು ಹೀಗೆ ಮೃದುವಾಗಿ ಕೋಮಲವಾಗಿತ್ತು. ನನ್ನ ಪಾಠಕ್ಕೆ ಬೆಳಗ್ಗೆ ಎಂಟೂವರೆ ಘಂಟೆಯೆಂದು ಗೊತ್ತುಮಾಡಿದ್ದರಷ್ಟೆ. ಒಂದೊಂದು ಸಾರಿ ನಾನು ಆ ಹೊತ್ತಿಗೆ ಸರಿಯಾಗಿ ಮಠಕ್ಕೆ ಹೋದಾಗ ಶಾಸ್ತ್ರಿಗಳು ಅಲ್ಲಿಗೆ ದಯಮಾಡಿಸಲಾಗುತ್ತಿರಲಿಲ್ಲ. ಒಂದೊಂದು ದಿನ ಅರ್ಧ ಘಂಟೆ ಮುಕ್ಕಾಲು ಘಂಟೆ ತಡವಾಗಿಬಿಡುತ್ತಿತ್ತು. ಹಾಗೆ ತುಂಬಾ ತಡವಾದ ಒಂದು ದಿನ ಅವರು ಹೇಳಿದರು:

“ನೋಡ್ರೀ, ನಾವು ಮನಿ ಮನಿ ಅಂತೇವು. ಅದರಾಗೆ ಯಾರು ಹ್ಯಾಂಗಾದರೂ ಹೋಗಲಿ, ಏನಾದರೂ ಮಾಡಿಕೊಳ್ಳಲಿ ಎಂದು ನೋಡಗದ ಹಾಂಗಿದ್ದು ಬಿಟ್ಟರೆ ಅದು ಮನಿ, ಆಗ ಎಲ್ಲರಿಗೂ ಸಮಾಧಾನ. ಹಾಂಗಲ್ಲದೆ ಒಂದು ಸಾರಿ ಇದು ಮಡಿ, ಇದು ಮೈಲಿಗಿ ಎಂದು ಧರ್ಮವಿಚಾರ ಯಾರಿಗಾದರೂ ಹೇಳಿದಿರೆಂದರೆ ಅದು ಮನಿಯಲ್ಲ, ಹುಚ್ಚಾಸ್ಪತ್ರಿ.”

ಒಂದೊಂದು ಸಾರಿ ಅವರಿಗೂ ಇಂಥ ಅನುಭವ ಆಗುತ್ತಿತ್ತೆಂದು ತೋರುತ್ತದೆ.

ಗುರುವಂದನೆ

ಪಾಠಕ್ಕೆ ನಾವು ಸೇರಿದಾಗ ಮೊದಲು ಶಾಸ್ತ್ರಿಗಳವರು ಬಂದ ಕೂಡಲೆ

“ಗುರುವಂದನೆ ಮಾಡೋಣಾಯಿತೆ?” ಎಂದು ಕೇಳುವರು. ನಾನು “ಆಯಿತು” ಎಂದು ಹೇಳಿದರೆ ಅವರಿಗೆ ತೃಪ್ತಿಯಿಲ್ಲ.

“ಇನ್ನೊಂದು ಸಾರಿ ಮಾಡಿಬಿಡೋಣು-ದೋಷವಿಲ್ಲ” ಎನ್ನುವರು. ಆಗ ಅವರೂ ಸೇರಿ ಹತ್ತು ಹನ್ನೆರಡು ಸಾರಿ ಸಾಷ್ಟಾಂಗ ಪ್ರಣಾಮ-ಗುರುಗಳ ಚಿತ್ರಪಟದ ಮುಂದೆ. ಅವರ ಪರಿಭಾಷೆಯಲ್ಲಿ “ಒಂದು ಸಲ” ಎಂದರೆ ಹನ್ನೆರಡು ಸಲ. ಆಗ ನಾನು ದೊಣ್ಣೆಯಾಗಿರಲಿಲ್ಲ. ಆದರೂ ಶಾಸ್ತ್ರಿಗಳವರ ವಂದನ ಕ್ರಮ ಕೊಂಚ ದೇಹಪ್ರಯಾಸದ್ದೇ. ಆದರೆ ಆ ಪ್ರಯಾಸ ಅವರಿಗೆ ಆದಂತೆ ತೋರುತ್ತಿರಲಿಲ್ಲ. ಪಾಠ ಮುಗಿದ ಮೇಲೆ ಮತ್ತೆ ಗುರುವಂದನೆ. ಅನಧ್ಯಯನದ ದಿನಗಳು ಸನ್ನಿಹಿತವಾದಾಗ ಅದಕ್ಕೆ ಮುಂಚೆ ಮಂಗಲ ಪಾಠ; ವಿಶೇಷಗುರುವಂದನೆ! ನನಗೆ ಕೈಕಾಲು ಸೋತುಹೋಗುತ್ತಿತ್ತು.

ಗುರುವಂದನವಾದ ಮೇಲೆ, ಪಾಠಪ್ರಾರಂಭದಲ್ಲಿ ಪ್ರತಿದಿನವೂ “ಸಂಧ್ಯಾವಂದನೆ ಆಗ್ಯದೆಯಷ್ಟೆ?” ಅನಂತರ ಗುರುವಂದನದ ಪ್ರಶ್ನೆ. ಆಮೇಲೆ

ವಿ: “ನಿನ್ನೆ ಆದ ಪಾಠ ಬಾಯಿಗೆ ಗಟ್ಟಿಮಾಡೋಣಾಗ್ಯದೆ ತಾನೆ.”

ನಾನು: “ಸುಮಸುಮಾರಾಗಿ ನೋಡಿಕೊಂಡಿದ್ದೇನೆ.”

ವಿ: “ಈ ಹೊತ್ತಿನ ಪಾಠ ವಾಕ್ಯಗಳನ್ನು ನೋಡಿರೋಣಾಗ್ಯದೆಯಷ್ಟೆ?”

ನಾನು: “ಒಂದೆರಡು ಸಲ ನೋಡಿದ್ದೇನೆ.”

ಆಮೇಲೆ ಪಾಠಕ್ಕೆ ಪ್ರಾರಂಭ.

ನನ್ನ ಕಷ್ಟ

ಹೀಗೆ ಹಿಂದಿನ ಪಾಠ ಮುಂದಿನ ಪಾಠದ ವಿಷಯದಲ್ಲಿ ನಾಲ್ಕೈದು ಸಾರಿ ಪ್ರಶ್ನೆ ಮಾಡಿದ ಮೇಲೆ ಒಂದು ದಿನ ನಾನು ನಿಜ ಹೇಳಿಬಿಡಬೇಕೆಂದು ಮನಸ್ಸು ಮಾಡಿದೆ. ನಾನು ಹೇಳಿದೆ;

“ಈ ಶಾಸ್ತ್ರವನ್ನು ನಾನು ಅದಕ್ಕೆ ಅಧಿಕಾರಿಯಾಗಬೇಕೆಂದು ವ್ಯಾಸಂಗ ಮಾಡುವವನಲ್ಲ. ನನಗೆ ದಿಗ್ದರ್ಶನದಷ್ಟು ಪರಿಚಯವಾದರೆ ತೃಪ್ತಿ. ಶಾಸ್ತ್ರ ಪ್ರಕ್ರಿಯೆಯ ಸ್ಥೂಲ ಪರಿಚಯ ನನಗಾದರೆ ಅದೇ ಭಾಗ್ಯ. ನನ್ನ ಕಸಬು ಬೇರೆ. ನಾನು ರಾಜಕೀಯದಲ್ಲಿರತಕ್ಕವನು; ಪತ್ರಿಕೋದ್ಯೋಗಿ. ನನ್ನ ಜೀವಿಕೆಗೆ ಅವಶ್ಯವಾದ ಶಾಸ್ತ್ರಗಳು ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳು. ಆ ಶಾಸ್ತ್ರಗಳಲ್ಲಿ ಹೊಸಹೊಸ ಪ್ರಕರಣಗಳು ಬರುತ್ತಿವೆ. ವಾರವಾರವೂ ಹೊಸ ಹೊಸ ಗ್ರಂಥಗಳೂ ಹುಟ್ಟುತ್ತಿವೆ. ನಾನು ಅವುಗಳನ್ನು ಓದಬೇಕು. ನಾನು ವೇದಾಂತಶಾಸ್ತ್ರವನ್ನು ಪಂಡಿತನಂತೆ ಸ್ವಾಧೀನಪಡಿಸಿಕೊಳ್ಳುವುದು ಅಸಾಧ್ಯ. ನನಗೆ ಆ ಆಶೆಯೇ ಇಲ್ಲ.”

ಶಾಸ್ತ್ರಿಗಳವರು ತಾಳ್ಮೆಯಿಂದ ಇದನ್ನು ಕೇಳಿದರು. ಕನಿಕರಿಸಿದರು; “ಆದಷ್ಟು ಬೇಗ ಮಾಡೋಣ” ಎಂದರು.

ಆದರೆ ಆಮೇಲೂ ಗುರುವಂದನೆಯ ನಿಯಮವನ್ನಾಗಲಿ, ಪ್ರಶ್ನೆಗಳ ನಿಯಮವನ್ನಾಗಲಿ ಸಡಿಲಮಾಡಲಿಲ್ಲ. ಅವರ ಪದ್ಧತಿಯಂತೆಯೇ ಅವರು ನಡೆದರು.

ನನ್ನ ಗೃಹಕೃತ್ಯದಲ್ಲಿ ಯಾವುದೋ ಒಂದು ವಿಘಾತ ಬಂದ ಕಾರಣದಿಂದ ನಾನು ಕೊಂಚ ಕಾಲ ಅವರಲ್ಲಿ ಹೋಗಲಾಗಲಿಲ್ಲ. ಅದನ್ನು ಬಿಟ್ಟರೆ ಅವರಿಗೆ ನನ್ನ ವಿಷಯದಲ್ಲಿ ಒಂದೇ ರೀತಿಯ ಅಭಿಮಾನವಿತ್ತು.

ಪಾಠಧೋರಣೆ

ಶಾಸ್ತ್ರಿಗಳವರ ಪಾಠಧೋರಣೆಯನ್ನು ನಾನು ಹೇಗೆ ವರ್ಣಿಸಲಾದೀತು?

ಸ್ಫೂರ್ಜದ್ಗಂಗಾಪ್ರವಾಹಾನುಕರಣಮಮಲೋ ಭಾರತೀತೀರ್ಥ ಏಷಃ

ಎಂಬ ಪೂರ್ವಿಕರ ವಾಕ್ಯವೊಂದನ್ನು ಜ್ಞಾಪಕಕ್ಕೆ ತರುತ್ತಿತ್ತು. ಕನ್ನಡದಲ್ಲಿ ವಿವರಣೆ ಹೇಳುವರು. ನಡುನಡುವೆ ಇಂಗ್ಲಿಷ್ ಮಾತುಗಳನ್ನೂ ಬಳಸುವರು. ರೈಲು ಪ್ರಯಾಣ ಮೊದಲಾದ ಪರಿಚಿತ ಸಂದರ್ಭಗಳಿಂದ ದೃಷ್ಟಾಂತ ಕೊಡುವರು. ಕಾವ್ಯಗಳಿಂದ ಉದಾಹರಣೆ ಕೊಡುವರು.

ಒಂದು ಸಾರಿ ಮಾಯಾಸ್ವರೂಪವನ್ನು ಕುರಿತು ಹೇಳುವಾಗ ಚಂಪೂಭಾರತದ ಒಂದು ವಾಕ್ಯವನ್ನು ಉದಾಹರಿಸಿದರು:

“ದ್ರೌಪದಿಗೆ ನಡು ಎಂಬ ಅಂಗವಿತ್ತೆಂಬುದನ್ನು ಅನುಮಾನ (Inference) ದಿಂದ ಹೇಳಬೇಕಾಗಿದೆ. ದೇಹದ ಮೇಲಣ ಅರ್ಧವೂ ಕೆಳಗಿನ ಅರ್ಧಭಾಗವೂ ಕೂಡ ಬರುತ್ತಿದ್ದವು. ಆದದ್ದರಿಂದ ಆ ಶಿರೋಭಾಗ ಪಾದಭಾಗಗಳೆರಡೂ ಒಂದೇ ಒಡಲಿಗೆ ಸೇರಿದವು. ಅವೆರಡನ್ನೂ ಒಟ್ಟುಗೂಡಿಸುವ ಅವಯವ ಒಂದು ಇದ್ದಿರಲೇಬೇಕು-ಎಂದು ನಾವು ಅನ್ವಯವ್ಯತಿರೇಕತರ್ಕದಿಂದ ಅನುಮಾನಿಸುತ್ತೇವೆ. ನಡು ಎಂಬುದಿತ್ತೋ ಇಲ್ಲವೋ! ಅಂಥ ಬಡ ನಡು. ಮಾಯಾ ವಿಚಾರವೂ ಹಾಗೆಯೇ. ಅದು ಇದೆಯೋ? ಇಲ್ಲ. ಇಲ್ಲವೋ? ಇದೆ. ಹೀಗೆ.”

ಶಾಸ್ತ್ರಿಗಳ ಪ್ರವಚನರೀತಿಗೆ ಇದು ಒಂದು ಸಣ್ಣ ಮಾದರಿ.

ಶಾಸ್ತ್ರಿಗಳು ಎಲ್ಲ ಕಾವ್ಯಗಳನ್ನೂ ಪುರಾಣಗಳನ್ನೂ ನೋಡಿದ್ದವರು. ಇದರ ಜೊತೆಗೆ ಬಹು ವಿದ್ವತ್ಸಂಪರ್ಕದಿಂದ ಸಂಪ್ರದಾಯ ಮರ್ಯಾದೆಗಳನ್ನು ತಿಳಿದುಕೊಂಡಿದ್ದವರು. ಅಧ್ಯಯನಕ್ಕೆ ಕುಳಿತಾಗ ಇವರು ಘನಪಾಠಿಗಳೆಂದೇ ತೋರುತ್ತಿತ್ತು. ಅಷ್ಟು ಶುದ್ಧವಾಗಿತ್ತು ಅವರ ಕಂಠಸ್ವರ ಮತ್ತು ಉದಾತ್ತನುದಾತ್ತಾದಿಗಳ ಉಚ್ಚಾರ.

ಒಂದು ಉಪಮಾನ

ವಿರೂಪಾಕ್ಷಶಾಸ್ತ್ರಿಗಳು ಪಾಠದ ಅವಸರದಲ್ಲಿ ಉದಾಹರಣೆಗಾಗಿ ವಿನೋದದ ಕಥೆಗಳನ್ನು ಹೇಳುತ್ತಿದ್ದದ್ದುಂಟು. ವಿರಕ್ತಿಯನ್ನು ಕುರಿತು ಹೀಗೆ ಹೇಳುತ್ತಿದ್ದರು:

“ನೋಡ್ರಿ, ನನಗೆ ಯಾವುದೋ ಕಾರಣದಿಂದ ಹೊಟ್ಟೆ ಭಾರವಾಗಿ ಗುಡ ಗುಡ ಅಂತಿರುತ್ತದೆ. ಆಗ ತೋರುತ್ತದೆ, ಕೊಂಚ ವಿರೇಚಕ ತೆಗೆದುಕೊಂಡರೆ ಜಡ್ಡು ಹೋಗಿ ಮೈ ಹಗುರವಾಗುತ್ತದೆ-ಎಂದು. ಆಗ ‘ಈ ಹೊತ್ತು ಬುಧವಾರ, ಪುರಸತ್ತಾಗಿದೆ-’ ಎಂದು ಒಂದು ಚಟಾಕು ಹರಳೆಣ್ಣೆ ಕುಡಿಯೋಣ. ಅನಂತರ ವಿರೇಚನಕ್ಕಾಗಿ ಕಾದಿರೋಣ. ಘಂಟೆ ಒಂಭತ್ತು ಹತ್ತಾದರೂ ಹಾಗೆಯೇ ಇರುವುದಾಗುತ್ತದೆ. ಎಣ್ಣೆ ಹೊಟ್ಟೆಯಾಗೆ ಗುಡುಪ್ಪೆಂದು ಕೂತುಬಿಟ್ಟಿರ್ತದೆ. ಘಂಟೆ ಹನ್ನೊಂದಾಯಿತೆನ್ನಿ. ಆಗ ಅಂದು ಕೋತೇವು: ‘ಇದು ಹೀಗಾಗೋದಿಲ್ಲ. ಸ್ನಾನಮಾಡಿ ಸಂಧ್ಯಾ ಮುಗಿಸಿ ಭೋಜನ ಮಾಡಿದರೆ ಆ ಶಾಖದಿಂದ ದೇಹದೊಳಗಿನ ಕಶ್ಮಲ ಕರಗಿ ಆ ಭಾರದಿಂದ ಜಾರಿ ಬಿದ್ದೀತು’ – ಅಂತ. ನಾವು ಇಷ್ಟೆಲ್ಲ ಯೋಚನೆ ಮಾಡಿ ಸ್ನಾನ ಮಾಡಿ ಮೈ ಒರಸಿಕೊಂಡು ಸಂಧ್ಯಾವಂದನೆಗೆ ಕೂಡಬೇಕು ಅಂತ ಮಡಿಯುಟ್ಟು ಕಚ್ಚೆ ತೀಡುತ್ತಿರುವ ಕಾಲದಲ್ಲಿ ಬಂದು ಬಿಡ್ತದೆ ನೋಡ್ರಿ-ಮಾಡಿದ ಸ್ನಾನವೆಲ್ಲ ವ್ಯರ್ಥ!

“ವಿರಕ್ತಿ ಎಂಬುದೂ ಹೀಗೆಯೇ. ಸಂಸಾರ, ನಿಷ್ಠುರ, ಸಾಲ, ಮುಜಗರ ಇದೆಲ್ಲ ಅನುಭವಿಸಿ, ‘ಸಾಕಪ್ಪ ಸಂಸಾರ’ ಅನ್ನಿಸುತ್ತದೆ. ಆಗ ಹೋಗಿ ಗುರುಗಳವರಲ್ಲಿ ಬೇಡಿ, ಕಾಷಾಯ ಬೇಕೆಂದು ತಲೆ ಮುಂಡನ ಮಾಡಿಸಿಕೋತಾ ಇರುವ ಕಾಲಕ್ಕೆ ಬಂದುಬಿಡ್ತದೆ ದಾರಾಪುತ್ರಾದಿಗಳ ಚಿಂತಿ. ‘ಎಲಾ ಇಷ್ಟು ಒಳ್ಳೆ ಹೆಂಡತಿಮಕ್ಕಳನ್ನು ಬಿಟ್ಟು ಹೋಗಬೇಕಲ್ಲ-ನನ್ನ ಮಕ್ಕಳು ಎಂಥ ಬುದ್ಧಿವಂತರು!-ಇವರನ್ನು ಯಾಕೆ ಬಿಟ್ಟುಹೋಗಬೇಕು!’ ಆರು ತಿಂಗಳ ವೈರಾಗ್ಯ ಒಂದು ಕ್ಷಣದಲ್ಲಿ ಬಿಟ್ಟುಹೋಗ್ತದೆ.

“ಆದದ್ದರಿಂದ ನಮ್ಮ ವೈರಾಗ್ಯಗಳನ್ನು ನೆಚ್ಚತಕ್ಕದಲ್ಲ. ಸಾಲ, ಕಷ್ಟ ಎಂದರೆ ವೈರಾಗ್ಯ ಬರುತ್ತದೆ. ಒಳ್ಳೆಯ ಸೀರೆ ನೋಡಿದರೆ ವೈರಾಗ್ಯ ಹಾರಿಹೋಗ್ತದೆ.

“ಇದನ್ನು ತಿಳಿದೇ ದೊಡ್ಡ ಗುರುಗಳು (ಶೃಂಗೇರಿ ಸನ್ನಿಧಾನದವರು) ಯಾರಿಗೂ ಸಂನ್ಯಾಸ ಕೊಡುತ್ತಿರಲಿಲ್ಲ. ಯಾರಾದರೂ ಬಂದು ಸಂನ್ಯಾಸ ಬೇಕೆಂದು ಕೇಳಿದರೆ, ‘ಸಂನ್ಯಾಸಿಗಳ ಹಾಗೆ ಇದ್ದು ಬಿಡ್ರಲಾ. ಅದನ್ನು ಕೊಡೋದೇನು? ಅದು ಕೊಡುವ ವಸ್ತುವಲ್ಲ. ಮಠದಾಗೆ ಭೋಜನಮಾಡ್ರಿ. ಶಾರದಮ್ಮನವರ ಸೇವೆ ಮಾಡ್ರಿ. ಪುರಾಣ ಶ್ರವಣ ಮಾಡ್ರಿ.

ನಿಶ್ಚಿಂತರಾಗಿದ್ದು ಬಿಡ್ರಿ. ಅದೇ ತಾನೆ ಸಂನ್ಯಾಸ?' ಎನ್ನುತ್ತಿದ್ದರು. ಇನ್ನೂ ಬಲವಂತವಾಗಿ ಯಾರಾದರೂ ಕೇಳಿದರೆ 'ಬೇಗ ಬಂದ ವೈರಾಗ್ಯವನ್ನು ನಂಬತಕ್ಕದಲ್ಲ' ಎನ್ನುವರು.

"ಆದದ್ದರಿಂದ ವೈರಾಗ್ಯಕ್ಕಾಗಿ ಆತುರಪಡಬಾರದು. ಬಂದ ವೈರಾಗ್ಯ ದೃಢವಾಗಿ ಬಹುಕಾಲ ಇರುತ್ತದೆಯೆ?-ಎಂದು ನೋಡಬೇಕು."

ಬಿರುದು

ವಿರೂಪಾಕ್ಷಶಾಸ್ತ್ರಿಗಳವರಿಗೆ ಇಂಡಿಯ ಸರಕಾರದವರು 'ಮಹಾಮಹೋಪಾಧ್ಯಾಯ' ಎಂಬ ಬಿರುದನ್ನು ಕೊಟ್ಟರು. ನಮ್ಮ ಮಹಾರಾಜರು 'ವಿದ್ಯಾನಿಧಿ' ಎಂಬ ಬಿರುದನ್ನು ಕೊಟ್ಟರು. ಅದರಿಂದ ನಮಗೆಲ್ಲ ಆಗಿದ್ದ ಸಂತೋಷವನ್ನು ಪ್ರಕಟಪಡಿಸಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ಒಂದು ಸತ್ಕಾರಸಮಿತಿಯನ್ನು ಮಾಡಿಕೊಂಡೆವು. ಹಿಂದೆ ಸ್ಮರಿಸಿರುವ ಬಿ. ವಿ. ಲಕ್ಷ್ಮಣರಾಯರು ಆ ಸಮಿತಿಯಲ್ಲಿ ಮುಖ್ಯರಾಗಿದ್ದರು. ಬಹುಮಾನಸಭೆ ಗೊತ್ತಾಗಿದ್ದದ್ದು ಒಂದು ಭಾನುವಾರ ಮಧ್ಯಾಹ್ನ ಐದು ಘಂಟೆಗೆಂದು.

ಶಾಸ್ತ್ರಿಗಳ ತಕರಾರು

ಅಂದು ಸುಮಾರು ನಾಲ್ಕು ಘಂಟೆಯ ವೇಳೆಗೆ ನಮ್ಮಲ್ಲಿ ಕೆಲ ಮಂದಿ ಶಂಕರಮಠಕ್ಕೆ ಬಂದೆವು. ಅಲ್ಲಿ ನಡೆಯಬೇಕಾಗಿದ್ದ ಏರ್ಪಾಟುಗಳನ್ನು ನೋಡಿಕೊಂಡು, ಶಾಸ್ತ್ರಿಗಳನ್ನು ಒಂದು ಸಲ ಎಚ್ಚರಿಸಿ ಬರೋಣವೆಂದು ಅವರ ಮನೆಗೆ ಹೋದೆವು. ಶಾಸ್ತ್ರಿಗಳೊಡನೆ ನಾವು ಮೊದಲು ಈ ಪ್ರಸ್ತಾವವನ್ನೆತ್ತಿದ್ದಾಗ ನಮ್ಮ ಈ ಸಂಕಲ್ಪಕ್ಕೆ ಅವರು ಒಪ್ಪಿರಲಿಲ್ಲ. ಏನೇನೋ ತಕರಾರು ಹೇಳಿದ್ದರು. ನಾವು ಬಹುವಿಧವಾಗಿ ಒತ್ತಾಯ ಮಾಡಿದ ಮೇಲೆ "ನೋಡೋಣ" ಎಂದಿದ್ದರು.

ಆದದ್ದರಿಂದ ಆಸಾಮಿಯನ್ನು ಖಾತರಿ ಮಾಡಿಕೊಳ್ಳೋಣವೆಂದು ನಮ್ಮ ತವಕ.

ಮನೆಯಲ್ಲಿ ಹೋಗಿ ವಿಚಾರಿಸಿದರೆ ಶಾಸ್ತ್ರಿಗಳಿಲ್ಲ. "ಬಹಳ ಹೊತ್ತಾಯಿತು ಹೋಗಿ" ಎಂದರು. ನಾವೇನು ಮಾಡತಕ್ಕದ್ದು? ಎಲ್ಲೆಲ್ಲಿಯೋ ಹುಡುಕಿ ಸುತ್ತಾಡಿದೆವು. ನಾಲ್ಕೂ ಮುಕ್ಕಾಲು ಘಂಟೆಯಾಯಿತು. ಕೊನೆಗೆ ಪತ್ತೆ ಮಾಡಿದೆವು. ಶಾಸ್ತ್ರಿಗಳು ಗುರುದೇವಾಲಯದ ಪಶ್ಚಿಮ ಭಾಗದಲ್ಲಿ ಚರಂಡಿ ಪಕ್ಕದ ಹುಲ್ಲಿನ ಮೇಲೆ ಕುಳಿತಿದ್ದಾರೆ! ನಾವು ಕೇಳಿದೆವು;

"ಏನು ಇಲ್ಲಿ?"

"ಗುರುಗಳು ದಯಮಾಡಿಸುತ್ತಾರೆ. ಅದಕ್ಕಾಗಿ."

"ನಮ್ಮ ಗುರುಗಳಿದ್ದಾರಲ್ಲ!" ಎಂದು ನಾವು ಸಮಾಧಾನಪಟ್ಟೆವು. ಹತ್ತು ನಿಮಿಷದ ತರುವಾಯ ಹೊರಕ್ಕೆ ಬಂದು ನೋಡಿದೆವು. ಶಾಸ್ತ್ರಿಗಳಿರಲಿಲ್ಲ. ಮತ್ತೆ ಯೋಚನೆ ಮಾಡಿದೆವು. ಅವರು ತಮ್ಮ ಗುರುಗಳೆಂದು ಹೇಳಿದವರು ಯಾರೆಂಬುದು ನಮಗೆ ತಿಳಿಯಲಿಲ್ಲ. ಆದದ್ದಾಯಿತೆಂದು ಕಾರಿನಲ್ಲಿ ಕುಳಿತು ಚಾಮರಾಜಪೇಟೆಯ ಐದನೆಯ ರಸ್ತೆಯಲ್ಲಿ ತಿರುಗಿದೆವು. ಅಲ್ಲಿ ಅಡ್ಡರಸ್ತೆಯ ಸಮೀಪದಲ್ಲಿ ನಮ್ಮ ಗುರುಗಳು ಬೇಗ ಬೇಗ ಹೆಜ್ಜೆ ಹಾಕುತ್ತಿದ್ದರು. ನಾವು ಕೇಳಿದೆವು:

ನಾ: "ಎಲ್ಲಿಗೆ ಪ್ರಯಾಣ?"

ಶಾ: "ನಮ್ಮ ಗುರುಗಳ ಮನೆಗೆ."

ನಾವು: ಯಾರು ತಮ್ಮ ಗುರುಗಳು?"

ಶಾ: "ವಿದ್ವಾಂಸರು-ನುಗ್ಗೆಹಳ್ಳಿ ತಿರುಮಲಾಚಾರ್ಯರು."

ನಾವು ನುಗ್ಗೆಹಳ್ಳಿ ತಿರುಮಲಾಚಾರ್ಯರವರನ್ನೂ ವಿರೂಪಾಕ್ಷಶಾಸ್ತ್ರಿಗಳವರನ್ನೂ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಮಠಕ್ಕೆ ಬಂದೆವು. ಅಲ್ಲಿ ವಿರೂಪಾಕ್ಷಶಾಸ್ತ್ರಿಗಳವರಿಗಾಗಿ ಒಂದು ಪೀಠವನ್ನು ಅಣಿಮಾಡಿದ್ದೆವು. ಅದರ ಮೇಲೆ ಒಂದು ಸಣ್ಣ ರತ್ನಗಂಬಳಿ ಹಾಸಿದ್ದೆವು. ವಿರೂಪಾಕ್ಷಶಾಸ್ತ್ರಿಗಳವರು ಆ ಪೀಠದಲ್ಲಿ ನುಗ್ಗೆಹಳ್ಳಿ ತಿರುಮಲಾಚಾರ್ಯರನ್ನು ಕೂಡಿಸಿ ಗುರುವಂದನಕ್ಕೆ ಉಪಕ್ರಮ ಮಾಡಿದರು. ಆ ವಂದನಕ್ರಮವನ್ನು ಹಿಂದೆ ಪ್ರಸ್ತಾವಿಸಿದ್ದೇನೆ. ಆಮೇಲೆ ಮಠದ ಉಗ್ರಾಣದಲ್ಲಿ ಹುಡುಕಿ ಬೇರೊಂದು ಮಣೆ ತರಲು ಕೆಲವು ನಿಮಿಷ ಬೇಕಾಯಿತು, ಶಾಸ್ತ್ರಿಗಳವರು ಆ ಇನ್ನೊಂದು ಮಣೆಯ ಮೇಲೆ ಕುಳಿತರು.

ಆಮೇಲೆ ಭಾಷಣಗಳು ನಡೆದವು.

ಪ್ರತ್ಯುತ್ತರ

ಶಾಸ್ತ್ರಿಗಳವರು ಪ್ರತ್ಯುತ್ತರ ಹೇಳುವಾಗ ಹೀಗೆಂದರು:

“ತಾವೆಲ್ಲ ಬಹು ಸಂತೋಷಪಟ್ಟಿದ್ದೀರಿ. ನನಗೂ ಬಹು ಸಂತೋಷ. ‘ನೀ ವಿದ್ಯಾ ನಿಧಿ’, ‘ನೀ ಮಹಾಮಹೋಪಾಧ್ಯಾಯ’ ಎಂದರೆ ಯಾರಿಗೆ ತಾನೆ ಸಂತೋಷವಾಗಲಿಕ್ಕಿಲ್ಲ? ಇದನ್ನು ನಮ್ಮ ಮಹಾರಾಜರು ಕೊಟ್ಟಿದ್ದಾರೆ: ಸಾರ್ವಭೌಮ ಸರಕಾರದವರು ಕೊಟ್ಟಿದ್ದಾರೆ. ಇದೆಲ್ಲ ಸಂತೋಷಪಡಬೇಕಾದ ವಿಷಯವೇ. ಆದರೆ ಇನ್ನೊಬ್ಬ ಮಹಾರಾಜ ಇದ್ದಾನಲ್ಲ...ಸಾರ್ವಭೌಮರಿಗಿಂತ ದೊಡ್ಡ ರಾಜ- ‘ಧರ್ಮರಾಜಃ ಪಿತೃಪತಿಃ’ ಎಂದು? ಎಂದೋ ಒಂದು ದಿನ ಅಲ್ಲಿಗೆ ಹೋಗಬೇಕಾಗುತ್ತದಲ್ಲ. ಆಗ ಅವ ಕೇಳ್ಯಾನು-

‘ಎಲಾ! ಅವ ಕೊಟ್ಟ, ನೀ ತೊಗೊಂಡಿ! ಯಾವ ವಿದ್ಯಾಕ್ಕೆ ನಿಧಿಯೋ ನೀನು?’ - ಅಂತ ಕೇಳುತಾನಲ್ಲ-ಆಗ ನಾವು ಏನು ಹೇಳಬೇಕು?”

ಎಲ್ಲ ಮುಗಿದ ಮೇಲೆ ಶಾಸ್ತ್ರಿಗಳನ್ನು ಅವರ ಮನೆಗೆ ಕರೆದುಕೊಂಡುಹೋಗಿ ಬಿಡತಕ್ಕದ್ದೆಂದು ನಾವೆಲ್ಲ ಅವರ ಸಂಗಡ ಹೋದೆವು. ಅವರ ಮನೆಯಲ್ಲಿ ಹೆಣ್ಣು ಮಕ್ಕಳು ಮನೆಯ ಮುಂದೆ ರಂಗೋಲಿಯಿಟ್ಟು ಶಾಸ್ತ್ರಿಗಳವರಿಗೆ ಆರತಿ ಮಾಡಲು ಸಿದ್ಧಪಡಿಸಿಕೊಂಡಿದ್ದರು. ಶಾಸ್ತ್ರಿಗಳವರು ಆ ಸಮಯದಲ್ಲಿ ತಮ್ಮ ಪಕ್ಕದಲ್ಲಿ ನಿಂತಿದ್ದ ವೈದ್ಯನಾಥಶಾಸ್ತ್ರಿಗಳವರನ್ನು ರಟ್ಟೆಹಿಡಿದು ಸೆಳೆದು ಆ ರಂಗೋಲಿ ಮಣೆಯ ಮೇಲೆ ನಿಲ್ಲಿಸಿದರು. ವೈದ್ಯನಾಥಶಾಸ್ತ್ರಿಗಳವರು ನಗುತ್ತ

ವೈ: “ಒಂದು ಕ್ಷಣ ಹೇಳಿದ ಮಾತು ಕೇಳಬಾರದೆ? ನಿಮ್ಮ ಹೆಣ್ಣುಮಕ್ಕಳಲ್ಲವೆ ಅವರು?”

ವಿ: “ಅವರನ್ನು ನೀವೂ ಹೆಣ್ಣುಮಕ್ಕಳಂತೆ ನೋಡತಕ್ಕವರು ತಾನೆ?”

ಹೀಗೆ ನಿರ್ಬಂಧದಲ್ಲಿ ನಮ್ಮ ಸತ್ಕಾರಪ್ರಯತ್ನ ಮುಕ್ತಾಯವಾಯಿತು.

ಮಾಲವೀಯರ ಭೇಟಿ

೧೯೨೬–೨೭ರಲ್ಲಿ ಮಹನೀಯರಾದ ಪಂಡಿತ ಮದನಮೋಹನ ಮಾಲವೀಯರು ಮೈಸೂರಿಗೆ ಅತಿಥಿಯಾಗಿ ಬಂದಿದ್ದರು. ಅವರು ಹಿಂದೂ ಸಮಾಜದಲ್ಲಿ ಅವಶ್ಯವಾಗಿ ನಡೆಯಬೇಕೆಂದು ಭಾವಿಸಿಕೊಂಡಿದ್ದ ಒಂದು ಸುಧಾರಣೆಯನ್ನು ಕುರಿತು ಮೈಸೂರು ವಿದ್ವಾಂಸರಲ್ಲಿ ಸಮಾಲೋಚನೆ ನಡಸಬೇಕೆಂದು ಉದ್ದೇಶಿಸಿದ್ದರು. ಅದಕ್ಕಾಗಿ ಒಂದು ದಿನ ಸಂಜೆ ನಾಲ್ಕು ಘಂಟೆಯ ವೇಳೆಗೆ ಶ್ರೀಪರಕಾಲಮಠದಲ್ಲಿ ಒಂದು ಮಹಾಸಭೆ ಸೇರಿತು. ಆ ಸಭೆಗೆ ಶ್ರೀ ಸ್ವಾಮಿಗಳವರು ಅಧ್ಯಕ್ಷರಾಗಿದ್ದರು. ವಿರೂಪಾಕ್ಷಶಾಸ್ತ್ರಿಗಳು ಮೊದಲಾದ ಮಹಾವಿದ್ವನ್ಮಂಡಲಿ ಸೇರಿತ್ತು. ಲೌಕಿಕರಲ್ಲಿ ದಿವಾನ್ ಸರ್ ಮಿರ್ಜಾ ಅವರು, ಎ. ಸುಬ್ರಹ್ಮಣ್ಯ ಅಯ್ಯರ್, ವಿ. ಸುಬ್ರಹ್ಮಣ್ಯಯ್ಯರ್ ಮೊದಲಾದ ಗಣ್ಯ ವ್ಯಕ್ತಿಗಳು ಬಹುಮಂದಿ ಇದ್ದರು. ಆ ಸಭೆಯಲ್ಲಿ ಪಂಡಿತ ಮಾಲವೀಯರವರು ಪ್ರತಿಪಾದಿಸಿದ ವಿಷಯ ಹೀಗೆ:

ಹಿಂದೂ ಸಮಾಜ ದುರ್ಬಲವಾಗುತ್ತಿದೆ. ಈ ಪ್ರಜಾಯುಗದಲ್ಲಿ ಸಂಖ್ಯಾ ಬಲಕ್ಕೆ ಹೆಚ್ಚು ಗಣನೆಯುಂಟು. ರಾಜ್ಯದ ಎಲ್ಲ ವಿಷಯಗಳಲ್ಲಿಯೂ ಸಂಖ್ಯಾಧಿಕ್ಯದಂತೆ ನಿರ್ಣಯಗಳಾಗುತ್ತವೆ. ಹೀಗಿರುವುದರಿಂದ ಹಿಂದೂ ಸಮಾಜವು ತನ್ನ ಸಂಖ್ಯಾಬಲವನ್ನು ಕಾಪಾಡಿಕೊಳ್ಳುವುದು ಅದರ ಯೋಗಕ್ಷೇಮಗಳಿಗೆ ತುಂಬ ಅವಶ್ಯ.

ಆದರೆ ಹಿಂದೂಗಳಲ್ಲಿ ಬಹುಮಂದಿ ಮುಸಲ್ಮಾನ್, ಕ್ರೈಸ್ತ ಮೊದಲಾದ ಅನ್ಯಮತಗಳ ಪ್ರಚಾರಕರ ಪ್ರೋತ್ಸಾಹಕ್ಕೂ ಸಿಕ್ಕಿ ಮತಾಂತರಗಳನ್ನು ಸೇರುತ್ತಿದ್ದಾರೆ. ಹೀಗೆ ಹಿಂದೂ ಸಮಾಜಕ್ಕೆ ಸಂಖ್ಯಾಬಲ ನಷ್ಟವಾಗುತ್ತಿದೆ. ಹಿಂದೂ ಸಮಾಜವನ್ನು ಬಿಟ್ಟು ಹೋಗುತ್ತಿರುವವರಲ್ಲಿ ಪಂಚಮರೆನಿಸಿಕೊಂಡ (ಹರಿಜನವೆಂಬ) ಜಾತಿಯವರು ಹೆಚ್ಚು. ಆ ಜಾತಿಯ ಜನರಿಗೆ ಉತ್ತಮವರ್ಣದವರು ಯಾವ ವಿಧವಾದ ಸಹಾಯವನ್ನೂ ಕೊಡುತ್ತಿಲ್ಲ. ಆ ಜನಕ್ಕೆ ತಮ್ಮ ಮತವೇನೆಂಬುದೇ ತಿಳಿಯದು. ಅವರಿಗೆ ತಿಳಿವಳಿಕೆ ಕೊಡಲು ಬ್ರಾಹ್ಮಣ ಸಂಸ್ಥೆಗಳಲ್ಲಿ ಮಠಗಳಾವುವೂ ಯಾವ ಏರ್ಪಾಟನ್ನೂ ಇಟ್ಟಿಲ್ಲ.

ಹರಿಜನರೇ ಏಕೆ, ಇತರ ವರ್ಣಗಳವರಿಗೂ ನಮ್ಮ ಉತ್ತಮ ವರ್ಣದವರು ಮತ ಸಂಬಂಧವಾದ ಯಾವ ದೀಕ್ಷೆ, ಸಂಸ್ಕಾರಗಳನ್ನೂ ಏರ್ಪಡಿಸಿಲ್ಲ. ಹೀಗೆ ಮತಸಂಸ್ಕಾರವಿಲ್ಲದವರು ಸನಾತನ ಧರ್ಮದ ಮಹತ್ತ್ವವನ್ನು ಕಾಣದೆ ತಮ್ಮ ಮತದಲ್ಲಿ ಏನೂ ತಿರುಳಿಲ್ಲವೆಂದು ಭ್ರಾಂತಿಪಟ್ಟು ಮತಾಂತರಗಳಿಗೆ ಸೇರುವುದು ಅಪರೂಪವಲ್ಲ.

ಈ ವಿಷಮ ಪರಿಸ್ಥಿತಿಯಲ್ಲಿ ಹಿಂದೂ ಜನರು ತಮ್ಮ ಧರ್ಮವನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ಕೆಲವು ಏರ್ಪಾಟುಗಳನ್ನು ನಡಸುವುದು ಈಗ ತೀರ ಅವಶ್ಯವಾಗಿದೆ. ಶ್ರೀ ಮಠದಂಥ ಸಂಸ್ಥೆಗಳವರು ಈ ಕಾರ್ಯವನ್ನು ಕೈಗೊಳ್ಳಬೇಕು.

ಮಾಲವೀಯರ ಸೂಚನೆಗಳು

1. ಇಂಥ ಧರ್ಮಪೀಠದಿಂದ ನಿಯುಕ್ತರಾದ ಕೆಲಮಂದಿ ವಿದ್ವಾಂಸರು ಎಲ್ಲ ಬ್ರಾಹ್ಮಣೇತರ ವರ್ಗಗಳಿಗೂ ಒಂದು ಮತಸಂಸ್ಕಾರವನ್ನು ಮಾಡಿಸಿ ದೀಕ್ಷೆ ಕೊಡಲು ಸಿದ್ಧರಾಗಬೇಕು.
2. ಯಾವ ಹಿಂದೂ ಮನುಷ್ಯ-ಗಂಡಸಾಗಲಿ ಹೆಂಗಸಾಗಲಿ-ಸಂಸ್ಕಾರಬೇಕೆಂದು ಬಯಸುತ್ತಾನೋ ಆತನಿಗೆ ಒಂದು ಗೊತ್ತಾದ ಕ್ರಮದಲ್ಲಿ ಸಂಸ್ಕಾರ ಮಾಡಿಸತಕ್ಕದ್ದು.
3. ಒಂದು ಶುಭದಿನವನ್ನು ಗೊತ್ತು ಮಾಡಿ-ಶ್ರೀರಾಮನವಮಿ, ಕೃಷ್ಣಾಷ್ಟಮಿ, ಶಿವರಾತ್ರಿ, ದುರ್ಗಾಷ್ಟಮಿ, ಮಹಾನವಮಿ-ಇಂಥ ಒಂದು ದಿವಸ ಸಂಸ್ಕಾರಾಪೇಕ್ಷಿಗಳು ಒಂದು ಪವಿತ್ರ ಕ್ಷೇತ್ರದಲ್ಲಿ ಸೇರತಕ್ಕದು.
4. ಅವರು ಅಂದು ನದಿಯಲ್ಲಿಯೋ ಕೆರೆಯಲ್ಲಿಯೋ ಸ್ನಾನಮಾಡಿ ಮಡಿಬಟ್ಟೆಗಳನ್ನು ಉಟ್ಟು ಅವರ ಮನೆಯ ಸಂಪ್ರದಾಯದಂತೆ ಮತ್ತು ಅವರವರ ಇಷ್ಟದಂತೆ ವಿಭೂತಿಯನ್ನೋ ನಾಮವನ್ನೋ ಧರಿಸಿ ಗೊತ್ತಾದ ಸ್ಥಳಕ್ಕೆ ಬರತಕ್ಕದ್ದು.
5. ಅಲ್ಲಿ ನಿಯುಕ್ತರಾದವರು ಆ ಭಕ್ತಜನರಿಂದ ಕಲಶವಿಡಿಸಿ ಪೂಜೆಮಾಡಿಸಿ ಪ್ರದಕ್ಷಿಣ ನಮಸ್ಕಾರ ಮಾಡಿಸತಕ್ಕದು.
6. ಅನಂತರ ಅವರಿಂದ ಹನ್ನೆರಡು ಸೂರ್ಯನಮಸ್ಕಾರಗಳನ್ನು ಮಾಡಿಸತಕ್ಕದ್ದು.
7. ಇದಾದ ಮೇಲೆ ನಿಯುಕ್ತನಾದ ಬ್ರಾಹ್ಮಣನು ಆ ಜನರನ್ನು ಒಬ್ಬೊಬ್ಬರನ್ನಾಗಿ ಕರೆದು ಅವರಿಗೆ ಶ್ರೀರಾಮತಾರಕಮಂತ್ರವನ್ನೋ ಶಿವಪಂಚಾಕ್ಷರಿಯನ್ನೋ ಶ್ರೀಮನ್ನಾರಾಯಣ ಅಷ್ಟಾಕ್ಷರಿಯನ್ನೋ ಹೇಳಿಕೊಟ್ಟು, ಅವರ ಬಾಯಿಂದ ಮೂರು ಮೂರು ಸಲ ಹೇಳಿಸತಕ್ಕದ್ದು. ಇದೇ ಉಪದೇಶ.
8. ಇದಾದನಂತರ ಆ ಭಕ್ತರು ತಮ್ಮತಮ್ಮ ಕಲಶಗಳನ್ನು ಕೈಯಲ್ಲಿ ಹಿಡಿದು ಊರಿನ ಗುಡಿಗೆ ಹೋಗಿ, ಪ್ರದಕ್ಷಿಣೆ ಮಾಡಿ ಮಂಗಳಾರತಿ ಮಾಡಿಸಿ ಪ್ರಸಾದ ತೆಗೆದುಕೊಳ್ಳತಕ್ಕದ್ದು.
9. ಆಮೇಲೆ ಅವರು ಮನೆಗೆ ಹೋಗಿ ಆ ದಿನದ ಮಟ್ಟಿಗಾದರೂ ಮದ್ಯ ಮಾಂಸಗಳನ್ನು ಮುಟ್ಟದೆ ನಿಯಮದಿಂದ ಇರತಕ್ಕದ್ದು.
10. ಬಳಿಕ ಅವರು ಪ್ರತಿ ದಿನವು ಬೆಳಗ್ಗೆ ಅಥವಾ ಸಂಜೆ ತಮ್ಮ ಮನೆಯಲ್ಲಿ ದೇವರ ಪಟದ ಮುಂದೆ ದೀಪ ಹಚ್ಚಿ ಕುಳಿತು, ತಮಗೆ ಉಪದೇಶವಾಗಿದ್ದ ಮಂತ್ರವನ್ನು ಹತ್ತುಸಲ ಜಪಿಸತಕ್ಕದ್ದು.

ಇಷ್ಟು ಮಾತ್ರದ ಸಂಸ್ಕಾರದೀಕ್ಷೆಯನ್ನಾದರೂ ನಮ್ಮ ಮಠಗಳು ಎಲ್ಲ ಹಿಂದೂ ಜನವರ್ಗಗಳಿಗೂ ಕೊಡಿಸುವ ವ್ಯವಸ್ಥೆ ಮಾಡಿದರೆ ಆಗ ಆ ಜನಕ್ಕೆ ಹಿಂದೂಮತ ತಮ್ಮದೆಂಬ ಅಭಿಮಾನವೂ ಹಿಂದೂ ಸಮಾಜ ತಮ್ಮದೆಂಬ ಮಮತೆಯೂ ಉಂಟಾಗುತ್ತದೆ. ಆಗ ಸಮಾಜದ ಮೇಲ್ದರ್ಜೆಗಳಿಗೂ ಕೆಳದರ್ಜೆಗಳಿಗೂ ಒಂದು ಅಭಿಮಾನದ ಸಂಬಂಧವೇರ್ಪಡುತ್ತದೆ. ಹಾಗಾದಮೇಲೆ ಹಿಂದೂಧರ್ಮದ ವಿಷಯದಲ್ಲಿ ಅನ್ಯಮತಸ್ಥರು ನಡಸುತ್ತಿರುವ ಧಾಳಿ ತಗ್ಗುತ್ತದೆ. ಮೇಲಾಗಿ ಎಲ್ಲ ವರ್ಣಗಳವರಿಗೂ ಒಂದು ಆತ್ಮೋದ್ಧಾರದ ಉಪಾಯ ಲಭ್ಯವಾಗುತ್ತದೆ.

***

ಈ ಸುಧಾರಣೆಯನ್ನು ಪಂಡಿತ ಮಾಲವೀಯರು ಲಲಿತವಾದ ಸಂಸ್ಕೃತ ಭಾಷೆಯಲ್ಲಿ ಪ್ರತಿಪಾದನೆ ಮಾಡಿದರು. ಮತ್ತು ತಮ್ಮ ಸೂಚನೆಗಳನ್ನು ಅನುಕೂಲವಾದ ಶ್ರುತಿಸ್ಮೃತಿ ಪುರಾಣವಾಕ್ಯಗಳನ್ನು ಉದಾಹರಿಸಿ ಬಲಪಡಿಸಿದರು. ಆ ಉಪನ್ಯಾಸವು ವಿಷಯದಲ್ಲಿ ಗಂಭೀರವಾಗಿ, ರೀತಿಯಲ್ಲಿ ವಿನಯಸಂಪನ್ನವಾಗಿ, ಕ್ರಮದಲ್ಲಿ ಯುಕ್ತಿಯುಕ್ತವಾಗಿ, ಎಲ್ಲರಿಗೂ ಹೃದಯಂಗಮವಾಗಿತ್ತು.

ಉಪನ್ಯಾಸವಾದ ಮೇಲೆ ಮಾಲವೀಯರು ನನ್ನ ಕಡೆ ತಿರುಗಿ ತಾವು ಸಂಗ್ರಹ ಮಾಡಿದ್ದ ಸಂಸ್ಕೃತವಾಕ್ಯಗಳ ಸಂಕಲನವನ್ನು ನಾನು ಕನ್ನಡದಲ್ಲಿ ಪ್ರಕಟಿಸಬೇಕೆಂದು ಸಲಹೆ ಕೊಟ್ಟರು. ಆದರೆ ಆ ವಾಕ್ಯಗಳ ಮೂಲವನ್ನು ಅವರು ನನಗೆ ಕಳುಹಿಸಲಾಗಲಿಲ್ಲ. ಅವರ ನೂರಾರು ಹವ್ಯಾಸಗಳ ಗದ್ದಲದಲ್ಲಿ ಈ ಉದ್ದೇಶ ಹಿಂದಕ್ಕೆ ಬಿತ್ತು. ಅದು ಬೇರೆ ವಿಷಯ.

ವಿವಾದ

ಆ ದಿನ ಭಾಷಣದ ನಂತರ ಪಂಡಿತರುಗಳು ಮಾತನಾಡಿದರು. ಅವರಲ್ಲಿ ವಿರೂಪಾಕ್ಷಶಾಸ್ತ್ರಿಗಳು ಮುಖ್ಯರು. ಇವರು ಮಾಲವೀಯರ ಉಪನ್ಯಾಸವನ್ನು ಅವಧಾನವಿಟ್ಟು ಕೇಳಿದರು. ಮಾಲವೀಯರನ್ನೇ ದಿಟ್ಟಿಸಿ ನೋಡುತ್ತಿದ್ದರು. ಮಾಲವೀಯರು ಎಲ್ಲಿ ಶಾಸ್ತ್ರ ಸಂಪ್ರದಾಯಗಳಿಗೆ ಧಕ್ಕೆತರುವ ಸುಧಾರಣೆಗಳನ್ನು ಹೇಳಿಯಾರೋ ಎಂದು ಶಾಸ್ತ್ರಿಗಳಿಗೆ ಮನಸ್ಸಿನಲ್ಲಿ ಶಂಕೆ. “ಮಾಲವೀಯರು ಹೇಳಿದ್ದು ದೊಡ್ಡ ವಿಷಯ. ಲೋಕಕಾರುಣ್ಯದ ವಿಷಯ. ಅವರು ಹೇಳಿದ್ದೆಲ್ಲ ವಿಚಾರ ಮಾಡಬೇಕಾದದ್ದು” ಎಂದು ಮುಂತಾಗಿ ಶ್ಲಾಘನೆ ಮಾಡಿದರು. ಸಂಸ್ಕಾರದ ಅವಶ್ಯಕತೆಯನ್ನು ಶಾಸ್ತ್ರಿಗಳು ವಿರೋಧಿಸಲಿಲ್ಲ. ಆದರೆ ಮಾಲವೀಯರು ತಮ್ಮ ಉಪನ್ಯಾಸದಲ್ಲಿ

“ಸಂಸ್ಕಾರ ಪಡೆದ ಬ್ರಾಹ್ಮಣೇತರ ಜನರು ಶುಭದಿನಗಳಲ್ಲಿ, ಪುಣ್ಯದಿನಗಳಲ್ಲಿ ತಮಗೆ ಬಿಡುವಾದ ದಿನಗಳಲ್ಲಿ, ಭಾನುವಾರ, ಅಥವಾ ಸೋಮವಾರ ರಾಮಾಯಣವನ್ನೋ ಮಹಾಭಾರತವನ್ನೋ-ಓದಬೇಕು, ಅಥವಾ ಕೇಳಬೇಕು.” ಎಂದು ಹೇಳುತ್ತಿದ್ದಾಗ ಶಾಸ್ತ್ರಿಗಳವರು ಅದಕ್ಕೆ ಪ್ರವೇಶಿಸಿ, “ಶೋತವ್ಯಂ-ಬ್ರಾಹ್ಮಣಮುಖೇನ ಶ್ರೋತವ್ಯಂ” ಎಂದರು. “ಬ್ರಾಹ್ಮಣಮುಖೇನ” ಎಂಬ ಮಾತನ್ನು ಒತ್ತೊತ್ತಿ ಹೇಳುತ್ತಿದ್ದರು.

ಅಂದು ಶ್ರೀ ಪರಕಾಲ ಮಠದ ಸ್ವಾಮಿಗಳವರು ಮೊದಲಿನಿಂದ ಕಡೆಯವರೆಗೂ ಪ್ರಸನ್ನರಾಗಿದ್ದರು. ವಿಷಯ ಬಹು ಮುಖ್ಯವಾದದ್ದೆಂದು ಅವಶ್ಯವಾಗಿ ಪರ್ಯಾಲೋಚನೆ ಪಡೆಯತಕ್ಕದ್ದೆಂದು ಸಮಾಧಾನವಚನಗಳನ್ನಾಡಿ ಸಭೆಯನ್ನು ಮುಕ್ತಾಯ ಮಾಡಿದರು.

ಸ್ವಸ್ತಿ

ನಮ್ಮ ಶಾಸ್ತ್ರಿಗಳವರಿಗಾದರೋ ಮನಸ್ಸಿನಲ್ಲಿ ಶಂಕೆ ಬಾಧಿಸುತ್ತಿತ್ತು. ಮಾಲವೀಯರು ಪ್ರಭಾವಶಾಲಿಯಾದ ಸಾರ್ವಜನಿಕ ಪುರುಷರು. ಅಂಥವರು ಪುರಾತನ ಸಂಪ್ರದಾಯಗಳಿಗೆ ಕುಠಾರಪ್ರಾಯರಾದಾರೇನೋ ಎಂದು ಶಂಕೆ. ಅವರ ಮನಸ್ಸು ಹೀಗೆ ಉದ್ವಿಗ್ನವಾಗಿದ್ದಾಗ ಒಂದು ಪದ್ಯ ಹೇಳಿದರು:

ಮಾಲವ್ಯೋ ಮಹಿತಾನ್ವಯೋ ಮದನಜಿದ್ವರ್ಣಾಶ್ರಮಾಚಾರಯೋ-
ರ್ಭೇತ್ತೇತಿ ಪ್ರಥಿತಿರ್ನವಾಽಸ್ತು ಭುವನೇ ಶ್ರೀದೇಶಿಕಾನುಗ್ರಹಾತ್ ॥
ಯದ್ಯಪ್ಯತ್ರ ಕಲೌ ಬಲೀಯಸಿ ವೃಥಾ ಧರ್ಮಾಚ್ಚ್ಯವಂತೇ ಜನಾಃ
ತಾನಪ್ಯಧ್ವನಿ ಸದ್ಭಿರಾದೃತತಮೇ ಸಂಚಾಲಯತ್ವನ್ವಹಂ ॥

ಮೇಲಿನ ಅರ್ಧದ ಅರ್ಥ ಹೀಗೆ: "ಮಾಲವೀಯರು ಮಹನೀಯ ವಂಶದಲ್ಲಿ ಹುಟ್ಟಿದವರು; ಮನ್ಮಥನನು ಗೆದ್ದವರು (ಮದನಮೋಹನ-ಮದನಜಿತ್). ಇಂಥವರು ವರ್ಣಾಶ್ರಮಾಚಾರಗಳ ವ್ಯವಸ್ಥೆಯನ್ನು ಒಡೆದರು ಎಂಬ ಅಪಕೀರ್ತಿ ಇವರಿಗೆ ಬಾರದಿರಲಿ-ಸದ್ಗುರುಕೃಪೆಯಿಂದ."

***

ವಿರೂಪಾಕ್ಷಶಾಸ್ತ್ರಿಗಳು ಮೈಸೂರು ಸರಕಾರದ ಗೋರಕ್ಷಣ ವಿಚಾರ ಸಮಿತಿಗೆ ವಿಶೇಷಜ್ಞರಾಗಿ ಸಾಕ್ಷ್ಯ ಕೊಟ್ಟ ಸಂಗತಿಯನ್ನು ಬೇರೆ ಕಡೆ ಸ್ಮರಿಸಿದ್ದೇನೆ.

ಶೈಲಿ

ವಿರೂಪಾಕ್ಷಶಾಸ್ತ್ರಿಗಳವರಿಗೆ ಗ್ರಂಥಕರ್ತನಾಗಬೇಕೆಂಬ ಚಪಲ ಬಂದಿದ್ದಂತೆ ತೋರುವುದಿಲ್ಲ. ನನಗೆ ತಿಳಿದಮಟ್ಟಿಗೆ ಅವರು ರಚಿಸಿದ ಪದ್ಯಗಳು ಎರಡೇ. ಈ ಮೇಲಿನದೊಂದು. ಇನ್ನೊಂದು ಅವರು ಪೂರ್ವಮೀಮಾಂಸಾಭಾಷ್ಯಕ್ಕೆ ಬರೆದ ಪೀಠಿಕೆಯಲ್ಲಿನ ಗುರುವಂದನ ಶ್ಲೋಕ. ಜೈಮಿನಿಯ ಸೂತ್ರಗಳ ಮೇಲೆ ಶಬರಸ್ವಾಮಿಗಳು ರಚಿಸಿರುವ ಭಾಷ್ಯವನ್ನು ಪುಣೆಯ ಆನಂದಾಶ್ರಮದವರು ಪ್ರಕಟಪಡಿಸಿದರು. ಅದು ಬಹು ದೊಡ್ಡ ಗ್ರಂಥ. ಅದನ್ನು ಪರಿಷ್ಕಾರಪಡಿಸಿ ಟೀಕೆ ಟಿಪ್ಪಣಿಗಳನ್ನೊದಗಿಸಿ ಸಂಪಾದನ ಮಾಡಿದವರು ಹಿಂದೆ ಹೇಳಿದ ಮೀಮಾಂಸಾಕಂಠೀರವ ವೈದ್ಯನಾಥಶಾಸ್ತ್ರಿಗಳು. ಈ ಉದ್ಗ್ರಂಥಕ್ಕೆ ವಿರೂಪಾಕ್ಷಶಾಸ್ತ್ರಿಗಳವರಿಂದ ಒಂದು ಮುನ್ನುಡಿಯನ್ನು ಬರೆಯಿಸಿದರು. ಅದರಲ್ಲಿ ತೋರುತ್ತದೆ ಶಾಸ್ತ್ರಿಗಳ ಗದ್ಯಶೈಲಿ ಎಷ್ಟು ಮನೋಹರವಾದದ್ದೆಂದು.

ವಿದ್ಯಾರ್ಥಿದಶೆಯಲ್ಲಿ

ವಿರೂಪಾಕ್ಷಶಾಸ್ತ್ರಿಗಳವರು ಸ್ವವಿಷಯವನ್ನು ಹೇಳುತ್ತಿದ್ದದ್ದು ತುಂಬ ಅಪರೂಪ. ಅದಕ್ಕೆ ಅವರಿಗೆ ಪುರಸತ್ತೂ ಇರಲಿಲ್ಲ. ಪ್ರಾಸ್ತಾವಿಕವಾಗಿ, ಬಹುಮಟ್ಟಿಗೆ ಉದಾಹರಣೆಗಾಗಿ ಅವಶ್ಯವಾದಾಗ ಒಂದೆರಡು ಮಾತು ಹೇಳುತ್ತಿದ್ದರು.

ವಿದ್ಯಾರ್ಥಿದಶೆಯಲ್ಲಿ ಅವರು ಸಿದ್ದಿಕಟ್ಟೆಯಲ್ಲಿ ಪೂರ್ಣಯ್ಯನವರ ಸತ್ರದ ಹತ್ತಿರ ಎಲ್ಲೋ ವಾಸವಾಗಿದ್ದರಂತೆ. ಆಗ ಆ ಪ್ರದೇಶದಲ್ಲಿ ಬ್ರಾಹ್ಮಣರ ಅಗ್ರಹಾರ ಇತ್ತು. ಈಗ ಅದೆಲ್ಲ ಬದಲಾಯಿಸಿ ಹೋಗಿದೆ. ಹಿಂದಿನ ಕಾಲದಲ್ಲಿ ಪೂರ್ಣಯ್ಯನವರ ಸತ್ರದಲ್ಲಿಯೂ ವಾಸುದೇವಶಾಸ್ತ್ರಿಗಳ ಮನೆಯಲ್ಲಿಯೂ ಬೇರೆ ಒಂದೆರಡು ಕಡೆಯೂ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಭೋಜನವಿಡುವ ಏರ್ಪಾಟಿತ್ತು. ಅಂಥ ಒಂದು ಕಡೆ ಶಾಸ್ತ್ರಿಗಳು ಭೋಜನ ಮಾಡಿ ಆ ಸಮೀಪದಲ್ಲಿಯೇ ಒಂದು ಮನೆಯಲ್ಲಿ ವಾಸವಿದ್ದರು. ಆಗ್ಗೆ ಶಾಸ್ತ್ರಿಗಳು ಇನ್ನೂ ಅವಿವಾಹಿತರು. ಅವರು ಇದ್ದ ಮನೆಯಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ಬಾಡಿಗೆ ತಿಂಗಳಿಗೆ ಒಂದು ಪಾವಲಿ. ಎಲೆಕ್ಟ್ರಿಕ್ ದೀಪವೆಂಬುದು ಇನ್ನೂ ಬಂದಿರಲಿಲ್ಲ. ಆಗ ರಾತ್ರಿ ಗ್ರಂಥವ್ಯಾಸಂಗಕ್ಕಾಗಿ ಶಾಸ್ತ್ರಿಗಳು ಮಾಡಿಕೊಂಡಿದ್ದ ಏರ್ಪಾಟು ಈಗಿನವರು ಕೇಳಬೇಕಾದದ್ದು.

ಓದಿಗೆ ಕೂಡುವ ಹೊತ್ತಿನಲ್ಲಿ ಒಂದು ಮಣ್ಣುಹಣತೆಯಲ್ಲಿ ಕೊಂಚ ಎಣ್ಣೆ ಹಾಕಿ ಬತ್ತಿ ನೆನೆಸಿ ಅದನ್ನು ಆ ಮನೆಯೊಳಗಿನ ಮನೆಯವರಿಟ್ಟಿದ್ದ ದೇವರ ನಂದಾದೀಪದಿಂದ ಹೊತ್ತಿಸಿಕೊಳ್ಳುವರು. ಹಾಗೆ ಆದ ಬೆಳಕಿನಲ್ಲಿ ತಾಳೆಯೋಲೆಯ ಪುಸ್ತಕವನ್ನು ತೆರೆದು ಓಲೆಯ ಒಂದು ಪಕ್ಕವನ್ನು ಎರಡು ಮೂರು ಸಲ ಓದುವರು. ಆಗ ಪ್ರಿಂಟು ಇರಲಿಲ್ಲ. ತಾಳೆಯೋಲೆಯ ಒಂದು ಪಕ್ಕದಲ್ಲಿ ಸುಮಾರು ಎಂಟು ಹತ್ತು ಪಂಕ್ತಿ ಮೋಡಿ ಬರಹ ಇರುತ್ತಿತ್ತು. ಶಾಸ್ತ್ರಿಗಳು ಅಷ್ಟನ್ನು ಮೊದಲಿನಿಂದ ಕಡೆಯವರೆಗೆ ಒಂದು ಬಾರಿ ಓದುವರು. ಆಮೇಲೆ ಇನ್ನೊಂದು ಬಾರಿ. ಆಮೇಲೆ ಬಹುಶಃ ಇನ್ನೂ ಒಂದು ಬಾರಿ. ಹೀಗೆ ಎರಡು ಮೂರು ಸಲ ಓದಿದಷ್ಟರಲ್ಲಿ ಗ್ರಂಥವಾಕ್ಯಗಳು ಬಾಯಿಗೊದಗುತ್ತಿದ್ದವು. ಈಗ ಅವರು ದೀಪವನ್ನು ಆರಿಸುವರು. ಬೀದಿಗೆ ಬಂದು ಗ್ರಂಥವಾಕ್ಯಗಳನ್ನು ಬಾಯಿಂದ ನುಡಿಯುತ್ತ ಈ ಕಡೆಯಿಂದ ಆ ಕಡೆಗೂ ಆ ಕಡೆಯಿಂದ ಈ ಕಡೆಗೂ ಶತಪಥ ತುಳಿಯುವರು. ಆಗ ಅವರ ಮನಸ್ಸಿಗೆ ಗ್ರಂಥ ಸ್ವಾಧೀನವಾಯಿತೆಂದು ದೃಢಪಡುವುದು. ಅದಾದಾಗ ಅವರು ಮತ್ತೆ ತಮ್ಮ ಕೋಣೆಯೊಳಕ್ಕೆ ಹೋಗಿ, ಹಣತೆಯನ್ನು ನಂದಾ ದೀಪದಿಂದ ಮತ್ತೆ ಹಚ್ಚಿಕೊಂಡು ಬರುವರು. ಎಣ್ಣೆಯ ವೆಚ್ಚವನ್ನೂ ಬೆಂಕಿಕಡ್ಡಿಯ ವೆಚ್ಚವನ್ನೂ

ಉಳಿಸುವುದಕ್ಕಾಗಿ ಈ ಏರ್ಪಾಟು. ಈಗ ಓಲೆಯ ಎರಡನೆಯ ಪುಟ. ಅದನ್ನೂ ಹೀಗೆಯೇ ಗಟ್ಟಿ ಮಾಡುವರು. ಅದೂ ಸ್ವಾಧೀನವಾಯಿತೆಂದರೆ ಆಗ ಮತ್ತೊಂದು ಓಲೆಯ ಮುಂದಿನ ಪುಟ. ಆಮೇಲೆ ಹಿಂದಿನ ಪುಟ. ಹೀಗೆ ಅವರ ಗ್ರಂಥ ವ್ಯಾಸಂಗ.

ಸ್ವಸಂಬೋಧನೆ

ಒಂದಾನೊಂದು ಪುಟದ ವಿಷಯವನ್ನು ಬಾಯಿಂದ ನುಡಿದುಕೊಂಡು ಶತಪಥ ನಡೆಯುತ್ತಿದ್ದಾಗ ಗ್ರಂಥವಾಕ್ಯ ನೆನಪಿಗೆ ಬರಲಿಲ್ಲವೆನ್ನಿ. ಆಗ ಶಾಸ್ತ್ರಿಗಳವರು ಬಲಗೈಯಿಂದ ತಮ್ಮ ಮೂಗನ್ನು ಹಿಡಿದುಕೊಂಡು ಎರಡು ಕೆನ್ನೆಗಳ ಮೇಲೂ ಘಟೀರೆಂದು ಬಡಿದುಕೊಳ್ಳುವರು. ಗ್ರಂಥವಾಕ್ಯವು ತಪ್ಪದೆ ಸರಾಗವಾಗಿ ಬಾಯಿಗೆ ಬಂದಾಗ ಶಾಸ್ತ್ರಿಗಳವರು.

"ಎಲಾ ವಾಮನ! ಏನು ವಿದ್ವಾಂಸನಾಗಿಬಿಟ್ಯೋ!" ಎಂದು ತಮ್ಮನ್ನು ತಾವೇ ಪ್ರೋತ್ಸಾಹಿಸಿಕೊಳ್ಳುವರು. ಹಾಗಲ್ಲದೆ ಹೋದಾಗ

"ಎಲಾ ವಾಮನ! ಏನು ಮೂರ್ಖ ಹುಟ್ಟಿದೆಯೋ" ಎಂದು ತಮ್ಮನ್ನು ತಾವೇ ದಂಡಿಸಿಕೊಳ್ಳುವರು.

ಹೇಗೆ ಮನುಷ್ಯನು ತನ್ನೊಳಗಿನ ಮೌಢ್ಯದಿಂದ ತಾನು ತಾನಲ್ಲದೆ ಬೇರೆ ಯಾರೋ ಎಂಬಂತೆ ನಡೆದುಕೊಳ್ಳುತ್ತಾನೆ ಎಂಬುದನ್ನು ನಿದರ್ಶನಪಡಿಸುವುದಕ್ಕಾಗಿ ವೇದಾಂತ ಪಾಠಕಾಲದಲ್ಲಿ ಹೇಳಿದ ಕಥೆ ಇದು.

ಸಾಂಪ್ರದಾಯಿಕತೆ

ಶಾಸ್ತ್ರಿಗಳವರು ಶಾಸ್ತ್ರಕರ್ಮ ಸದಾಚಾರಗಳ ವಿಷಯದಲ್ಲಿ ಶ್ರದ್ಧೆಯೇ ಮೂರ್ತೀಭವಿಸಿದಂತೆ ನಡೆದುಕೊಳ್ಳುತ್ತಿದ್ದರು. ದಿನ ದಿನ ಮೂರು ಹೊತ್ತು ಮನೆಯಲ್ಲಿ ಪೂಜೆ. ಸೋಮವಾರ ಏಕಾದಶವಾರ ರುದ್ರಾಭಿಷೇಕ. ಭಾನುವಾರ ಸೂರ್ಯನಮಸ್ಕಾರ. ಯಾವ ಯಾವುದೋ ವ್ರತಗಳು. ಹೀಗಾಗಿ ಅವರಿಗೆ ಬಹುಮಟ್ಟಿಗೆ ಒಪ್ಪೊತ್ತಿನ ಊಟ.

ಒಂದು ದಿನ ಪಾಠಕಾಲದಲ್ಲಿ ಭಾಷ್ಯದ "ಅವಿದ್ಯಾವದ್ವಿಷಯಾನಿ ಶಾಸ್ತ್ರಾಣಿ" ಎಂಬ ವಾಕ್ಯವನ್ನು ಕುರಿತು ಅರ್ಧ ಘಂಟೆಯ ಕಾಲ ಉಪನ್ಯಾಸ ಮಾಡಿದರು. ಆ ಸಮಯದಲ್ಲಿ "ಆತ್ಮವಸ್ತು ಪರಮ ಶುದ್ಧವಾದದ್ದು", "ನಿತ್ಯ ಶುದ್ಧ ಬುದ್ಧ ಮುಕ್ತಸ್ವಭಾವ" ವಾದದ್ದು, "ನ ಶಾಸ್ತಾನ ಶಾಸ್ತ್ರಂ" ಇತ್ಯಾದಿ ವಾಕ್ಯಗಳನ್ನು ಉದಾಹರಿಸಿ ಪರತತ್ತ್ವದ ಸ್ವರೂಪವನ್ನು ಹೇಳಿ, ಕೇಳಿದವರಿಗೆ ಪುಲಕಾಂಕನವನ್ನುಂಟುಮಾಡಿದರು. ಮಾರನೆಯ ದಿನ ನಾನು ಯಥಾಪ್ರಕಾರ ಪಾಠಕ್ಕಾಗಿ ಹೋದಾಗ ಅವರ ಮನೆಯವರು;

"ಶಾಸ್ತ್ರಿಗಳು ನಿನ್ನೆ ರಾತ್ರಿಯೇ ಊರಿಗೆ ಯಜ್ಞಕ್ಕೋಸ್ಕರ ದಯಮಾಡಿಸಿದರು. ಬರಲು ಎರಡು ಮೂರುದಿನ ಆದೀತು"

-ಎಂದು ಹೇಳಿದರು. ನಾನು ಶಾಸ್ತ್ರಿಗಳವರನ್ನು ಮತ್ತೆ ಕಂಡಾಗ ಈ ವಿಚಾರವನ್ನು ಎತ್ತಿದೆ. ಅವರು ನಗುಮುಖದಿಂದ ಹೇಳಿದರು:

"ಹೌದು ಹೌದು. ಆ ಹೊತ್ತು ಹೇಳಿದ್ದೆಲ್ಲ ಜ್ಞಾನಿಗಳಿಗೆ ಸಂಬಂಧಪಟ್ಟದ್ದು. ಅದು ಸದಾಶಿವಬ್ರಹ್ಮೇಂದ್ರರಂಥವರಿಗೆ ಅನ್ವಯಿಸತಕ್ಕದ್ದು. ನಾವು ಇನ್ನೂ ಕರ್ಮಪ್ರಪಂಚದಲ್ಲೇ ಇದ್ದೇವಲ್ಲ? ಪುಣ್ಯಕರ್ಮದಿಂದ ಮನಸ್ಸು ಪರಿಪಕ್ವವಾದ ಮೇಲೆ ಬರುವ ಸ್ಥಿತಿ ಅದು. ಈಗ ಕರ್ಮ ಮಾಡೋಣು!"

ಶ್ರೌತಕರ್ಮನಿಷ್ಠೆ

ಶಾಸ್ತ್ರಿಗಳವರ ಸಮೀಪಬಂಧುಗಳೊಬ್ಬರು ಸೋಮಯಾಜಿಗಳು. ಶಾಸ್ತ್ರಿಗಳವರ ಆಶ್ರಯದಲ್ಲಿ ಆ ಬಂಧುಗಳು ಬೆಂಗಳೂರು ಶಂಕರಮಠದ ಆವರಣದಲ್ಲಿ ಒಂದು ಯಾಗ ಮಾಡಿದರು. ನಾನು ಹೋಗಿ ನೋಡಿದೆ. ಆ ಯಾಗ ಪ್ರಾರಂಭಕ್ಕೆ ಹದಿನೈದು ದಿನ ಹಿಂದೆ ಅದಕ್ಕಾಗಿ ದ್ರವ್ಯಸಹಾಯ ಸಂಪಾದಿಸಿಕೊಡಬೇಕೆಂದು ನನಗೆ ಶಾಸ್ತ್ರಿಗಳು ಆಜ್ಞೆ ಮಾಡಿದರು. ನಾನು ಹೇಳಿದೆ:

"ನನ್ನ ಸ್ನೇಹಿತರು ದ್ರವ್ಯಸಹಾಯ ಮಾಡಬಲ್ಲವರು ದೇಶಾಂತರ ಸಂಚಾರ ಮಾಡಿರುವರು; ಸಮುದ್ರಯಾನ ಮಾಡಿ ಬಂದವರಾಯಿತಲ್ಲ?"

ಶಾ: "ಇದರಿಂದ ಆ ಸಮಸ್ತಪಾಪಗಳೂ ಪರಿಹಾರವಾಗಿಬಿಡ್ತದೆ."

ಹೀಗೆ ಸಮಾಧಾನ ಹೇಳಿದರು.

"ಈ ಕಾಲದವರದು ಮತ್ತೊಂದು ಶಂಕಾ ಉಂಟಲ್ಲ-ಪ್ರಾಣಿಹಿಂಸೆ ಆಗ್ತದೆ, ಇತ್ಯಾದಿಯಾಗಿ. ಅದೂ ಅಸಂಗತಭಾವನಾ, ಪಶುವಿಗೆ ಸ್ವರ್ಗಾದಿಲೋಕ ಪ್ರಾಪ್ತವಾಗ್ತದೆ. ಅದಕ್ಕೆ ಹಿರಣ್ಯಶೃಂಗ ಬರುತ್ತದೆ. ಹಿಂಸೆಗೆ ಬದಲಾಗಿ ಉಪಕಾರವೇ ಆಗ್ತದೆ."

ಅದು ಅವರ ನಂಬಿಕೆ. ನಂಬಿಕೆಯೆಂಬುದು ಪರಮಪೂಜ್ಯವಸ್ತು. ಅನೇಕರು ಸಂದೇಹಪಟ್ಟಿದ್ದನ್ನು ಶಾಸ್ತ್ರಿಗಳು ದೃಢವಾಗಿ ನಂಬಿ ಆ ದಾರ್ಢ್ಯವನ್ನು ತ್ರಿಕರಣಶುದ್ಧಿಯಿಂದ ನಡೆದರಲ್ಲ-ಅದರ ವಿಷಯದಲ್ಲಿ ನನ್ನ ಗೌರವ. ಅದಕ್ಕೆ ಮನ್ನಣೆ.

ಒಂದು ಪ್ರಕರಣ

ಒಂದು ದಿನ ಮಧ್ಯಾಹ್ನ ಸುಮಾರು ಮೂರು ಘಂಟೆ. ನಾನು ಪಾಠಕ್ಕಾಗಿ ಶಂಕರ ಮಠದ ದಕ್ಷಿಣಪಾರ್ಶ್ವದಲ್ಲಿರುವ ಸತ್ರದ ಬಳಿ ಪದ್ಧತಿಯಂತೆ ನಿಂತಿದ್ದೆ. ಅಂದು ಮೈಸೂರು ವಿದ್ಯಾ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಗಿದ್ದ ಬಿ. ದಾಸಪ್ಪನವರು ಮಾರ್ಗವಶಾತ್ ಹೋಗುತ್ತಿದ್ದವರು ನನ್ನನ್ನು ಕಂಡು ಹತ್ತಿರ ಬಂದರು. ಅವರು ಇಂಗ್ಲಿಷ್ ಸಾಹಿತ್ಯದಲ್ಲಿ ಮಹಾ ವಿದ್ವಾಂಸರು. ನನ್ನ ಬಾಲ್ಯದಿಂದ ನನ್ನನ್ನು ಬಲ್ಲವರು. ಅವರು ಮಹಾರಾಜ ಕಾಲೇಜ್ ಹಾಸ್ಟೆಲಿನ ವಾರ್ಡನ್ ಅಧಿಕಾರಿಯಾಗಿದ್ದಾಗ ನಾನು ಆ ಹಾಸ್ಟೆಲಿನಲ್ಲಿದ್ದೆ. ಅಷ್ಟೇ ಅಲ್ಲದೆ ನನ್ನ ತಂದೆಯ ಅಪೇಕ್ಷೆಯ ಮೇರೆಗೆ ನನಗೆ ಮೈಸೂರಿನಲ್ಲಿ ಗಾರ್ಡಿಯನ್ನಿನಂತೆ ಇದ್ದವರು ದಾಸಪ್ಪನವರು. ಅವರ ಮನೆಗೆ ನಾನು ವಾರ ವಾರವೂ ಹೋಗುತ್ತಿದ್ದೆ. ಅಂದಿನಿಂದ ಅವರಿಗೆ ನನ್ನಲ್ಲಿ ತುಂಬ ವಿಶ್ವಾಸ. ನನ್ನಿಂದ ಷೇಕ್‌ಸ್ಪಿಯರ್, ಗಿಬ್ಬನ್ ಮೊದಲಾದ ಉದ್ಗ್ರಂಥಗಳನ್ನು ಓದಿಸುತ್ತಿದ್ದರು. ಈ ಹಳೆಯ ವಾತ್ಸಲ್ಯದಿಂದ ಅವರು ನನ್ನನ್ನು ಕೇಳಿದರು:

ದಾ: “ಇದೇನು ಇಲ್ಲಿದ್ದೀ?”

ನಾನು “ಪಾಠಕ್ಕಾಗಿ” ಎಂದು ವಿಷಯವನ್ನು ಕೊಂಚ ಹೇಳಿದೆ. ದಾಸಪ್ಪನವರು “ಸಂತೋಷ. ನಾನು ಶಾಸ್ತ್ರಿಗಳನ್ನು ನೋಡಬೇಕೆಂದುಕೊಳ್ಳುತ್ತಿದ್ದೆ. ಈಗ ಒಳ್ಳೆಯ ಸಮಯವೇ ಆಯಿತು” ಎಂದು ನಿಂತರು. ಒಂದೆರಡು ನಿಮಿಷಗಳೊಳಗಾಗಿ ಶಾಸ್ತ್ರಿಗಳು ಅಲ್ಲಿಗೆ ಚಿತ್ತೈಸಿದರು. ನಮಸ್ಕಾರ ಪ್ರತಿನಮಸ್ಕಾರಗಳಾದ ಮೇಲೆ ದಾಸಪ್ಪನವರು ಹೇಳಿದರು:

ದಾ: “ಒಂದು ಪದದ ಅರ್ಥವನ್ನು ತಮ್ಮಲ್ಲಿ ಕೇಳಿ ತಿಳಿದುಕೊಳ್ಳಬೇಕೆಂದು ಕುತೂಹಲವಿತ್ತು.”

ವಿ: “ಏನದು? ಅಪ್ಪಣೆ ಮಾಡೋಣವಾಗಲಿ.”

ದಾ: “ ‘ಸುಮೃಡೀಕಾ ಸರಸ್ವತಿ’ ಎಂದು ಬರುತ್ತದಲ್ಲ ವೇದದಲ್ಲಿ. ‘ಸುಮೃಡೀಕಾ’ ಎಂದರೆ ಏನು ಅಭಿಪ್ರಾಯ?”

ವಿ: “ಆಫೀಸಿಗೆ ಹೊರಟಹಾಂಗದೆ ಯಜಮಾನರು?”

ಹೀಗೆ ಶಾಸ್ತ್ರಿಗಳು ವಿಷಯಾಂತರಕ್ಕೆ ತಿರುಗಿದರು.

ದಾ: "ನಾನು ಹೇಳಿದ್ದು-"

ವಿ: "ಏನು ನಡೆದುಕೊಂಡೇ ಹೋಗ್ತಿರೋಣಾಗ್ಯದಲ್ಲ-ಈ ಬಿಸಿಲಾಗೆ?"

ದಾ: "ಏನೋ ಹೊರಟೆ ಹಾಗೇ ಯೋಚನೆ ಮಾಡುತ್ತ. ಸುಮ್ಮ..."

ವಿ: "ಆಫೀಸಿಗೆ ಹೊತ್ತಾಗ್ತದಲ್ಲ."

ದಾ: "ಹೊತ್ತು ಸ್ವಲ್ಪ ಸರಿಮಾಡಿಕೊಳ್ಳುತ್ತೇನೆ. ಸುಮ್ಮ..."

ಇಷ್ಟು ಹೊತ್ತಿಗೆ ಶಾಸ್ತ್ರಿಗಳ ಸಹನೆ ಮುಗಿದಿತ್ತು. ಅವರು ದಾಸಪ್ಪನವರ ಕಡೆ ತಿರುಗಿ ಕೈಬೆಟ್ಟಿನಿಂದ ಅವರ ಕಾಲಕಡೆ ತೋರಿಸಿ ಹೇಳಿದರು:

"ಕಾಲಾಗೆ ಅದು ಇರುವ ಕಾಲಕ್ಕೆ ಬಾಯಾಗೆ ವೇದಾಕ್ಷರ ಬರತಕ್ಕದ್ದಲ್ಲ."

ದಾಸಪ್ಪನವರು: "ಇಂಗ್ಲೆಂಡಿನವರೂ ಜರ್ಮನಿಯವರೂ ವೇದವನ್ನೋದಿ ನಮಗೆ ಭಾಷಾಂತರ ಮಾಡಿಕೊಟ್ಟಿದ್ದಾರಲ್ಲ?"

ವಿ: "ಅದು ಇರಬಹುದು. ತಾವೆಲ್ಲ ಬೈಬಲ್ ಮೊದಲಾದ ಅವರ ಗ್ರಂಥಗಳನ್ನು ನೋಡೋಣಾಗ್ತದಲ್ಲ. ವಾಕ್ಯ ಅವರಿಗೆ ಅರ್ಥವಾಗಬಹುದು. ಪೂಜ್ಯ ಬುದ್ಧಿ ಉಂಟೋ? ಆ ಬಿಳಿ ಜನಕ್ಕೆ ನಮ್ಮ ವೇದವಾಕ್ಯದ ಅರ್ಥವಾಗಬಹುದು. ಅಥವಾ ಅರ್ಥವಾಯಿತೆಂಬ ಭ್ರಾಂತಿ ಇರಬಹುದು. ಪೂಜ್ಯಬುದ್ಧಿ ಉಂಟೊ?"

ಆಚಾರ ಪರಿಪಾಲನೆ

ಶಾಸ್ತ್ರಿಗಳವರು ಕೊಂಚ ಬೆಳಸಿದರು, ಹೀಗೆ:

“ತಾವೆಲ್ಲ ದೊಡ್ಡ ದೊಡ್ಡ ಉದ್ಯೋಗಗಳಲ್ಲಿರೋಣಾಗ್ಯದೆ. ನಾವು ತಮ್ಮಂಥವರನ್ನು ನೋಡಲಿಕ್ಕೆ ಕಛೇರಿಗೆ ಬಂದರೆ ಅದಕ್ಕೆ ಒಂದು ಉಡುಪಿನ ಮರ್ಯಾದಿ, ಎಲ್ಲಿ ಕೂಡಬೇಕು, ಎಲ್ಲಿ ನಿಲ್ಲಬೇಕು-ಎಂಬೀ ಮರ್ಯಾದಿಗಳುಂಟು. ಅರಮನೆಗೆ ಹೋಗುವಾಗ ತಲೆಗೆ ಹೇಗೆ ಶಾಲು ಸುತ್ತಬೇಕು, ಎಂಥ ಧೋತ್ರ ಉಡಬೇಕು-ಇತ್ಯಾದಿ ಮರ್ಯಾದಿಗಳುಂಟು. ಲೌಕಿಕ ವಿಷಯಗಳಲ್ಲೇ ಹೀಗಿರಲಿಕ್ಕಾಗಿ, ಪರಬ್ರಹ್ಮಪ್ರತಿಪಾದಕವಾದ ವೇದಕ್ಕೆ ಮರ್ಯಾದೆ ಬೇಡವೊ? ಆಚಾರ್ಯ ಸನ್ನಿಧಿಗೆ ದಯಮಾಡಿಸುವಾಗ ಪಾದರಕ್ಷೆ ಮೊದಲಾದವನ್ನು ದೂರದಾಗೆ ಬಿಡಬೇಕಷ್ಟೆ?”

ಹೀಗೆಲ್ಲ ವಾದ ಹೇಳಿದರು. ದಾಸಪ್ಪನವರು ವಿನಯದಿಂದಲೂ ಸಂತೋಷದಿಂದಲೂ ಅದನ್ನು ಕೇಳಿ ಅಂಗೀಕರಿಸಿ ತಾವು ಮತ್ತೊಮ್ಮೆ ಮಡಿಯಲ್ಲಿ ಬಂದು ಶಾಸ್ತ್ರಿಗಳವರನ್ನು ಕೇಳುವುದಾಗಿ ಹೇಳಿದರು.

ದಾಸಪ್ಪನವರು ವೇದಶಾಸ್ತ್ರಗಳಲ್ಲಿ ಅತ್ಯಂತ ಶ್ರದ್ಧೆಯುಳ್ಳವರು. ಅವರು ಶೃಂಗೇರಿಯ ಸನ್ನಿಧಾನದಲ್ಲಿ ಅನುಗ್ರಹಕ್ಕೆ ಪಾತ್ರರಾಗಿದ್ದವರು. ಅವರಿಗೆ ಶಾಂಕರಭಾಷ್ಯದ ಹತ್ತಾರು ಭಾಗಗಳು ಮುಖಸ್ಥವಾಗಿದ್ದವು. ಸರ್ವದಾ ಪರತತ್ತ್ವಚಿಂತನೆಯಲ್ಲಿ ಮಗ್ನರಾಗಿರುತ್ತಿದ್ದರು. ಅವರು ಪದೇ ಪದೇ ಶೃಂಗೇರಿಗೆ ಹೋಗುತ್ತಿದ್ದ ಕಾರಣದಿಂದಲೂ ಗುರುಗಳ ಕಟಾಕ್ಷಕ್ಕೆ ಪಾತ್ರರಾಗಿದ್ದ ಕಾರಣದಿಂದಲೂ ಶಾಸ್ತ್ರಪ್ರಸಂಗದಲ್ಲಿ ಕುತೂಹಲವುಳ್ಳವರಾಗಿದ್ದ ಕಾರಣದಿಂದಲೂ ಅವರಲ್ಲಿ ವಿರೂಪಾಕ್ಷಶಾಸ್ತ್ರಿಗಳವರಿಗೂ ಸ್ನೇಹವಿತ್ತು. ಆ ಸಲುಗೆಯಿಂದ ನಡೆದದ್ದು ಮೇಲಿನ ಮಾತುಕಥೆ.

ಶಾಸ್ತ್ರಿಗಳವರ ದರ್ಶನಕ್ಕಾಗಿ ಬಹುಮಂದಿ ಬರುತ್ತಿದ್ದರು. ಹಾಗೆ ಬಂದವರು ಶಾಸ್ತ್ರಿಗಳವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಆಗ ಶಾಸ್ತ್ರಿಗಳವರು ಆಶೀರ್ವಾದ ಮಾಡುತ್ತಿದ್ದದ್ದು ಹೀಗೆ:

“ಭಗವತಿ ವಾಸುದೇವೇ ಅವಿಚ್ಛಿನ್ನಾ ಭಕ್ತಿರಸ್ತು.”

೧೯ ಉಪಸಂಹಾರ

ಈ ಲೇಖನಮಾಲೆಯಲ್ಲಿ ಚಿತ್ರಿಸಿರುವ ಸಮಾಜಚಿತ್ರಗಳು ವಿಶೇಷವಾಗಿ ವೈದಿಕ ಬ್ರಾಹ್ಮಣರಿಗೆ ಸಂಬಂಧಪಟ್ಟವು. ಪೂರ್ವಕಾಲದ ವೈದಿಕ ಮಂಡಲಿ ನಮ್ಮ ದೇಶದ ಸಂಪತ್ತಿನಲ್ಲಿ ಒಂದು ಬಹು ಮುಖ್ಯವಾದ ಭಾಗವೆಂದು ನಾನು ಎಣಿಸಿದ್ದೇನೆ. ಮತ್ತು ಹಾಗೆ ಅಭಿಪ್ರಾಯವುಳ್ಳವರು ನೂರಾರು ಮಂದಿ ಈಗಲೂ ಇದ್ದಾರೆಂದು ನಂಬಿಕೊಂಡಿದ್ದೇನೆ.

ನಮ್ಮ ದೇಶದ ಸಂಪತ್ತು ಇರುವುದು ನಮ್ಮ ವೇದ ಶಾಸ್ತ್ರಗಳಲ್ಲಿಯೇ ಹೊರತು ಬೇರೆ ಕಡೆಯಲ್ಲ. ಯುದ್ಧಸಾಮಗ್ರಿಯ ವಿಷಯದಲ್ಲಿಯೂ, ಯಂತ್ರಕಾರ್ಖಾನೆಗಳ ವಿಷಯದಲ್ಲಿಯೂ, ಕೆರೆ ಕಾಲುವೆ ಕಟ್ಟಡಗಳ ವಿಷಯದಲ್ಲಿಯೂ ಇನ್ನೂ ಬೇರೆ ಬಗೆಯ ನಾಲ್ಕಾರು ಲೌಕಿಕ ಸಂಪತ್ತುಗಳ ವಿಷಯದಲ್ಲಿಯೂ ನಮ್ಮ ದೇಶ ಪ್ರಸಿದ್ಧವಾಗಬೇಕೆಂದೂ ಪ್ರಗತಿ ಪಡೆಯಬೇಕೆಂದೂ ಸಮಸ್ತ ಭಾರತೀಯರೂ ಆಶೆಪಟ್ಟುಕೊಂಡಿದ್ದಾರೆ. ಅದು ಸ್ವಾಭಾವಿಕವಾದದ್ದೂ ಹೌದು, ನ್ಯಾಯವಾದದ್ದೂ ಹೌದು. ಈ ಬಗೆಯ ಭೌತ ಸಂಪತ್ತಿನ ಸಂಪಾದನೆ ಒಂದು ದೊಡ್ಡ ಪೌರುಷಸಿದ್ಧಿಯೆನ್ನಲು ಯಾವ ಅಭ್ಯಂತರವೂ ಇಲ್ಲ. ಆದರೆ ಈ ಭೌತ ಸಂಪತ್ಸಾಧನೆಯಲ್ಲಿ ಇಂಡಿಯ ದೇಶವು ಎಷ್ಟು ಮುಂದುವರಿದರೂ ಅದಕ್ಕೆ ಸ್ಪರ್ಧಿಗಳಾದವರು ಎಷ್ಟೋ ದೇಶಗಳವರಿರುತ್ತಾರೆ. ಇಂಡಿಯವು ಭೌತ ಸಾಹಸಗಳಲ್ಲಿ ಇಂಗ್ಲೆಂಡು ಜರ್ಮನಿ ಅಮೆರಿಕ ರಷ್ಯಗಳಿಗೆ ಎಂದಾದರೂ ಸಮಾನವಾದೀತೆಂದು ನಾವು ಆಶೆಪಟ್ಟುಕೊಳ್ಳುವುದೇ ಮಹಾ ಸಾಹಸವೆಂದು ನನಗನಿಸುತ್ತದೆ. ನಾವು ಪ್ರಯತ್ನ ಪಡಬೇಕಾದದ್ದು ಕರ್ತವ್ಯ; ಪ್ರಯತ್ನಪಡೋಣ. ಆದರೆ, ಅಗ್ರಸ್ಥಾನ ನಮಗೇ ದೊರೆತೀತೆಂದು ಆಶೆಯಿಟ್ಟುಕೊಳ್ಳುವುದು ಒಂದು ಅತಿವಾದವೆಂದೇ ನನಗೆ ತೋರುತ್ತದೆ.

ಆದರೆ ಇಂಥಾ ಸ್ಪರ್ಧಾಭಯಕ್ಕೆ ಎಡೆಕೊಡದ ಕ್ಷೇತ್ರವೆಂದರೆ, ಸಂಸ್ಕೃತಿ. ಅದರಲ್ಲಿಯೂ ಆಧ್ಯಾತ್ಮಿಕ ಸಂಸ್ಕೃತಿ. ಈ ಆಧ್ಯಾತ್ಮಿಕ ಸಂಸ್ಕೃತಿಯೇ ಇಂಡಿಯದೇಶದ ಸಂಪತ್ತಿನಲ್ಲಿ ಪರಮ ಶ್ರೇಷ್ಠವಾದ ಭಾಗ. ಈ ಆಧ್ಯಾತ್ಮಿಕ ಸಂಸ್ಕೃತಿಯನ್ನು ಗಣಿಸದೆ ಬಿಟ್ಟರೆ ಬೇರೆ ಯಾವ ವಿಷಯದಲ್ಲಿಯೂ ಇಂಡಿಯವು ಹೆಮ್ಮೆ ಪಡುವಂತಿಲ್ಲ. ಹೆಮ್ಮೆಯ ಮಾತು ಹಾಗಿರಲಿ, ಇಂಡಿಯವು ಲೋಕಪ್ರಯೋಜಕವಾಗುವ ದಾರಿಯಿಲ್ಲ. ವೈಜ್ಞಾನಿಕ ಸಾಹಸದಿಂದಲೂ ವ್ಯಾಪಾರ ಸಾಹಸದಿಂದಲೂ ಶಿಲ್ಪಸಮೃದ್ಧಿಯಲ್ಲಿಯೂ ದ್ರವ್ಯಸಮೃದ್ಧಿಯಲ್ಲಿಯೂ ಇಂಡಿಯದೇಶ ಈಗಿಗಿಂತ ನೂರು ಮೈಲಿ ಮುಂದೆ ಹೋಗಬಹುದು, ಸಾವಿರ ಮೈಲಿ

ಮುಂದೆ ಹೋಗಬಹುದು. ಈ ಪ್ರಗತಿ ಎಷ್ಟು ನಡೆದರೂ ಅದು ಇತರ ದೇಶಗಳಿಗೂ ಸಾಧ್ಯವಾದದ್ದು. ಇಂಡಿಯವೂ ಇತರ ದೇಶಗಳಂತೆಯೇ ಎಂದಾಯಿತು.

ತರೋಣ ತೆರೋಣ ತಿಂಬೋಣ,
ಮಲಗೋಣ ಮತ್ತೇಳೋಣ.

-ಹೀಗೆ ಸಂಗ್ರಹವಾಗಿ ಹೇಳಿದ್ದಾರೆ ದಾಸರು ಬಹಿರಂಗಜೀವನ ಸ್ವಾರಸ್ಯಗಳನ್ನ. ಅದು ಎಲ್ಲ ದೇಶಗಳಿಗೂ ಉಂಟಾದದ್ದೇ. ಅದು ಮನುಷ್ಯಲೋಕಕ್ಕೆ ಮಾತ್ರವೇಕೆ, ಪಶುಲೋಕಕ್ಕೂ ಅನ್ವಯಿಸತಕ್ಕದ್ದೇ.

ಮುಖ್ಯಾಂಶ

ಮನುಷ್ಯನ ಮೇಲ್ಮೆ ಏನಿದ್ದರೂ ಅವನ ಅಂತರಂಗಜೀವನದಲ್ಲಿ ಇರತಕ್ಕದ್ದು. ಈ ಅಂತರಂಗಜೀವನದ ಒಂದು ಉನ್ನತಿಯೇ ಸಂಸ್ಕೃತಿ. ಸಂಸ್ಕೃತಿಯ ಮುಖ್ಯಾಂಶ ಆಧ್ಯಾತ್ಮಿಕ ಪ್ರಭೆ, ಆಧ್ಯಾತ್ಮಿಕ ಸೌರಭ. ಈ ಆಧ್ಯಾತ್ಮಿಕ ಸಂಸ್ಕೃತಿಯ ತತ್ತ್ವಗಳನ್ನೂ ಪ್ರಯೋಗ ರೂಪಗಳನ್ನೂ ಪ್ರಕಾಶಪಡಿಸುವ ವಿದ್ಯೆಯೇ ವೇದಶಾಸ್ತ್ರಗಳು. ವೇದಶಾಸ್ತ್ರಗಳ ಸಾರವೇ ರಾಮಾಯಣ ಭಾರತಾದಿ ಕಾವ್ಯಗಳಲ್ಲಿಯೂ ಮನುಸ್ಮೃತ್ಯಾದಿ ನಿಬಂಧಗಳಲ್ಲಿಯೂ ರಘುವಂಶ ನಳಚರಿತ್ರೆ ಮೊದಲಾದ ಕಾವ್ಯಗಳಲ್ಲಿಯೂ ಪುರಾಣ ಪುಣ್ಯಕಥೆಗಳಲ್ಲಿಯೂ ನೂರಾರು ನದಿಗಳಾಗಿ, ಕಾಲುವೆಗಳಾಗಿ ಪ್ರವಹಿಸುತ್ತಿದೆ. ಹೀಗೆ ಯಾರು ನಮ್ಮ ದೇಶದ ಆಧ್ಯಾತ್ಮಿಕ ಸಂಸ್ಕೃತಿಯ ವಿದ್ಯೆಯನ್ನು ಅದಕ್ಕೆ ಅಂಗಭೂತವಾದ ಕಲೆಗಳನ್ನೂ ಸಂಪ್ರದಾಯ ರೂಢಿಗಳನ್ನೂ ಅನೂಚಾನವಾಗಿ ಕಾಪಾಡಿಕೊಂಡು ಬಂದಿರುತ್ತಾರೋ ಅವರು ದೇಶದ ಸಂಸ್ಕೃತಿ ಸಂಪತ್ತಿನ ಮೂಲನಿಧಿಯನ್ನು ಕಾಪಾಡಿದವರಾಗುತ್ತಾರೆ. ಅವರೇ ಭಾರತೀಯ ಸಂಸ್ಕೃತಿಯ ಜೀವಾಳ.

ಅಂಥವರು ಈಗ್ಗೆ ಐವತ್ತು ಅರವತ್ತು ವರ್ಷಗಳ ಹಿಂದೆ ಹೇಗೆ ಜೀವನ ನಡಸುತ್ತಿದ್ದರು, ನವನಾಗರಿಕತೆಯ ಆಕರ್ಷಣೆಗಳನ್ನು ಹೇಗೆ ತಪ್ಪಿಸಿಕೊಂಡಿದ್ದರು, ಹೇಗೆ ಅವರು ಸ್ವಲ್ಪದರಲ್ಲಿ ಬಹುವನ್ನು ಕಂಡು ತೃಪ್ತರಾಗಿದ್ದರು, ಮತ್ತು ಹೇಗೆ ಸ್ವಧರ್ಮ ನಿಷ್ಠರಾಗಿದ್ದರು–ಎಂಬುದನ್ನು ಕೊಂಚಮಟ್ಟಿಗೆ ದಿಗ್ದರ್ಶನ ಮಾಡಿಸಲು ಈ ಲೇಖನಗಳಿಂದ ಸಹಾಯವಾದರೆ, ನಾನು ಕೃತಾರ್ಥನಾದೆನೆಂದು ತೃಪ್ತಿಪಡಬಹುದು.

ಇಂಥ ಸರಳವೂ ನಿರ್ಮಲವೂ ಮತ್ತು ನಿರುಪದ್ರವವೂ ಆದ ಜೀವನವನ್ನು ನಡಸಿಕೊಂಡಿರುವ ವೈದಿಕರೂ ಶಾಸ್ತ್ರಿಗಳೂ ಈಗಲೂ ಅಲ್ಲಲ್ಲಿರಬಹುದು. ಉತ್ತರ

ಕರ್ಣಾಟಕದ ಗೋಕರ್ಣ ಪ್ರಾಂತದಲ್ಲಿ ಅಂಥ ವೈದಿಕ ಮಹನೀಯರು ಈಗಲೂ ಇದ್ದಾರೆಂದು ನಾನು ಕೇಳಿ ಸಂತೋಷಪಟ್ಟಿದ್ದೇನೆ. ಆದರೆ ಅಂಥವರು ನಮ್ಮ ದೇಶದಲ್ಲಿ ಇನ್ನೆಷ್ಟು ವರ್ಷ, ಇನ್ನೆಷ್ಟು ದಶಮಾನಗಳು ಇರಲಾದೀತು? ಈ ಹೊತ್ತಿನ ಜೀವನಸಂದರ್ಭಗಳು ಅವರಿಗೆ ಪ್ರತಿಕೂಲವಾಗಿಲ್ಲವೆ?-ಎಂಬ ಶಂಕೆ ನನ್ನ ಮನಸ್ಸನ್ನು ಪದೇ ಪದೇ ಒತ್ತುತ್ತದೆ. ಈಗಲೇ ನಮ್ಮ ಗ್ರಾಮಾಂತರಗಳಲ್ಲಿ ವೈದಿಕ ಮನೆತನಗಳ ಸಂಖ್ಯೆ ಇಳಿದು ಹೋಗಿದೆಯೆಂದು ಕೇಳುತ್ತಿದ್ದೇನೆ. ಬಹು ಸಾಮಾನ್ಯವಾದ ದೇವತಾಕಾರ್ಯ ಪೈತೃಕ ಕಾರ್ಯಗಳನ್ನು ನಡಸಲು ಸಮರ್ಥರಾದ ಪುರೋಹಿತರು ನೂರಾರು ದೊಡ್ಡ ಗ್ರಾಮಗಳಲ್ಲಿಯೇ ಇಲ್ಲವೆಂದು ಕೇಳುತ್ತಿದ್ದೇನೆ. ಇದು ಸಂಸ್ಕೃತಿಯಲ್ಲಿ ವಿಶ್ವಾಸವಿರುವ ಜನಕ್ಕೆ ತುಂಬ ವಿಷಾದಕರವಾದ ಸಂಗತಿ. ಅಧ್ಯಾತ್ಮವಿದ್ಯೆಯ ಪ್ರಾಚುರ್ಯ ಕಡಮೆಯಾಗುತ್ತಿದೆ. ವೇದಾಧ್ಯಯನ ಕ್ಷೀಣವಾಗುತ್ತಿದೆ. ಸಾಂಗವಾಗಿ ಅಧ್ಯಯನ ಮಾಡಿದ ಘನಪಾಠಿಗಳ ಸಂಖ್ಯೆ ನಮ್ಮ ದೇಶದಲ್ಲಿ ಒಂದು ಕೈ ಬೆರಳಿನಿಂದ ಎಣಿಸುವಷ್ಟು ಕೂಡ ಇಲ್ಲ. ಹೀಗೆ ಭರತ ಖಂಡಕ್ಕೆ ಯಾವ ವಿದ್ಯಾಸಂಪತ್ತು ಪ್ರಾಣಸ್ವರೂಪವಾದದ್ದೋ, ಯಾವುದು ನಮ್ಮ ದೇಶಕ್ಕೆ ಆತ್ಮಪ್ರಾಯವಾದದ್ದೋ ಅದು ಲುಪ್ತವಾಗುತ್ತಿದೆ.

ಪರಿಹಾರ

ಈ ಲೋಪವನ್ನು ಪರಿಹಾರ ಮಾಡುವುದು ಹೇಗೆ?

ಈ ಲೋಪವನ್ನು ಪರಿಹಾರ ಮಾಡಬೇಕೆಂದು ಮನಸ್ಸುಳ್ಳವರು ಯಾರು? ಮೊದಲು ಅವರನ್ನು ನಾವು ಕಂಡುಹಿಡಿದರೆ ಅವರು ಏನು ಮಾಡಲಾದೀತೆಂಬುದನ್ನು ಆಮೇಲೆ ಚಿಂತಿಸಬಹುದು.

ನನಗೆ ತೋರಿದ ಒಂದೆರಡು ಆಲೋಚನೆಗಳನ್ನು ಇಲ್ಲಿ ವಿಜ್ಞಾಪನೆ ಮಾಡುತ್ತೇನೆ:

1. ಮೊದಲು ಆಗಬೇಕಾಗಿರುವುದು ವೈದಿಕರ ಮನೋನಿಶ್ಚಯ. ಅವರು ತಮಗೆ ಎಷ್ಟು ಕಷ್ಟ ಬರಲಿ, ಎಷ್ಟು ದಾರಿದ್ರ್ಯ ಬರಲಿ, ತಮ್ಮ ಕುಲವಿದ್ಯೆಯನ್ನು ತಾವು ಎಂದಿಗೂ ಕೈ ಬಿಡತಕ್ಕವರಲ್ಲವೆಂದು ಪ್ರತಿಜ್ಞೆ ತೊಡಬೇಕು.
2. ವೇದಶಾಸ್ತ್ರಗಳ ವಿಷಯದಲ್ಲಿಯೂ ವೈದಿಕ ಬ್ರಾಹ್ಮಣರ ವಿಷಯದಲ್ಲಿಯೂ ಅಲಕ್ಷ್ಯ ಮಾಡುವುದಿಲ್ಲವೆಂದೂ, ಅವಹೇಳನ ಮಾಡುವುದಿಲ್ಲವೆಂದೂ ಇತರ ಜನ, ಅದರಲ್ಲಿಯೂ ಬ್ರಾಹ್ಮಣರು ಪ್ರತಿಜ್ಞೆ ತೊಡಬೇಕು.
3. ವೈದಿಕರು ಸರಕಾರದಿಂದಲೂ ಅಧಿಕಾರಿಗಳಿಂದಲೂ ಸಹಾಯ ಬೇಡುವುದನ್ನು ಪೂರ್ತಿಯಾಗಿ ಬಿಡಬೇಕು.

4. ವೈದಿಕರಿಗೆ ಸರಕಾರದ ವಿಷಯದಲ್ಲಿ ವಿರೋಧವು ಸರ್ವಥಾ ಇಲ್ಲ. ಸರಕಾರವು ಚೆನ್ನಾಗಿ ನಡೆಯಬೇಕೆಂಬುದೇ ವೇದ ಶಾಸ್ತ್ರಗಳ ನಿರಂತರ ಪ್ರಾರ್ಥನೆ.

    “ಕಲ್ಪತೇ ಹ ವೈ ತತ್ರ ಪ್ರಜಾಭ್ಯೋ ಯೋಗಕ್ಷೇಮಃ.”

    ಆದರೆ ಮಂತ್ರಿಗಳಲ್ಲಿಯೂ ಇತರ ಪ್ರಬಲ ಜನರಲ್ಲಿಯೂ ವೈದಿಕರು ಯಾಚನೆಗಾಗಿ ಹೋಗತಕ್ಕದ್ದಲ್ಲ. ಅವರು ಉಪಸರ್ಪಣೆ ಮಾಡುವುದರಿಂದ ತಾವು ಹಣವಂತರಿಗೆ ವಿಧೇಯರಾಗತಕ್ಕವರೆಂದು ಸೂಚನೆಯಾಗುತ್ತದೆ. ಈ ಬಗೆಯ ದೈನ್ಯವು ಯಾರಿಗೂ ಒಳ್ಳೆಯದಲ್ಲ; ವೈದಿಕರಿಗಂತೂ ಅದು ತೀರಾ ಅಯುಕ್ತ.

5. ಈ ಹೊತ್ತಿನ ಕಷ್ಟ ಪರಿಸ್ಥಿತಿಯಲ್ಲಿ ಬ್ರಾಹ್ಮಣರಿಗೆ ಜೀವನೋಪಾಯದ ಚಿಂತೆ ಬಹುವಾಗಿರುವುದು ಸ್ವಾಭಾವಿಕ. ಈ ಚಿಂತೆಯನ್ನು ಪರಿಹರಿಸಿಕೊಳ್ಳುವ ಪ್ರಯತ್ನದಲ್ಲಿ ಬ್ರಾಹ್ಮಣರು ಕುಲಧರ್ಮವನ್ನು ಬಿಡತಕ್ಕದ್ದಲ್ಲ. ಎಷ್ಟು ಮಾತ್ರ ಸಾಧ್ಯವೋ ಅಷ್ಟು

ಮಟ್ಟಿಗಾದರೂ ಕುಲವಿದ್ಯೆಯನ್ನು ಕಾಪಾಡಿಕೊಳ್ಳತಕ್ಕದ್ದು. ಕಛೇರಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ಬಹುಶಃ ಸಂಜೆಯ ಕಾಲ ಅವರದಾಗಿಯೇ ಇರುತ್ತದೆ. ಸಂಜೆ ಮನೆಗೆ ಬೇಗನೆ ಬಂದು, ಮಾರನೆಯ ದಿನ ಕೆಲಸಕ್ಕೆ ಹೋಗುವವರೆಗೂ ಇರುವ ಬಿಡುವಿನ ಹೊತ್ತನ್ನು ಅವರು ನಿಯಮದಿಂದ ಅಧ್ಯಯನಾದಿ ಕಾರ್ಯಗಳಿಗೆ ವಿನಿಯೋಗಿಸಬೇಕು. ಈ ಕಾಲ ಕೊಂಚದ್ದು. ಅದರಲ್ಲಿ ಸಾಧ್ಯವಾಗಬಹುದಾದದ್ದೂ ಕೊಂಚ. ಹಾಗಿದ್ದರೂ ಆ ಕೊಂಚವನ್ನು ವ್ರತಬುದ್ಧಿಯಿಂದ ನಡಸಬೇಕು.

6. ಲೌಕಿಕ ವೃತ್ತಿಗಳಲ್ಲಿರುವ ಬ್ರಾಹ್ಮಣರು ಸಹ ಈ ನಿಯಮವನ್ನು ಹಿಡಿದು ಆದಷ್ಟು ಮಟ್ಟಿಗೆ ಸದಾಚಾರ ಸಂಪ್ರದಾಯಗಳನ್ನು ಕಾಪಾಡಬೇಕು. ಮನೆಯ ವಾತಾವರಣ ಬ್ರಾಹ್ಮಣ ವಾತಾವರಣವಾಗಬೇಕು.
7. ನಮ್ಮ ಪುರೋಹಿತರುಗಳು ವೈದಿಕ ಕರ್ಮದ ವಿಷಯದಲ್ಲಿ ಪ್ರೋತ್ಸಾಹ ಕೊಡಬೇಕು. ಹಾಗೆಂದರೆ, ಮುಖ್ಯವಾಗಿ ತಮ್ಮ ದಕ್ಷಿಣೆಯ ಭಾಗವನ್ನು ಬೆಳಸಬಾರದು. ಇಲ್ಲಿಯೇ ವೈದಿಕರಿಗೆ ಬರುವ ಅಪಕೀರ್ತಿ. ಈ ಅಪಕೀರ್ತಿಗೆ ಕಾರಣವಿರುವುದನ್ನು ನಾನು ಸ್ವಂತವಾಗಿ ನಾಲ್ಕಾರುಕಡೆ ಕಂಡಿದ್ದೇನೆ. ಒಂದಾನೊಂದು ಮದುವೆಯ ಸಂದರ್ಭದಲ್ಲಿ ಪುರೋಹಿತರು 'ಫಲದೇವತಾ' ಎಂಬ ಹೆಸರಿನಲ್ಲಿ ಐದು ಸೇರು ಅಕ್ಕಿ, ಐದು ತೆಂಗಿನಕಾಯಿ, ಐದು ತಾಂಬೂಲ, ಐದು ರೂಪಾಯಿ ಇಷ್ಟನ್ನು ತರಿಸಿ, ಆ 'ಫಲದೇವತೆ' ಗೆ ನೈವೇದ್ಯ ಮಾಡಲು ಇನ್ನೈದು ರೂಪಾಯಿ ದಕ್ಷಿಣೆಯನ್ನು ತನ್ನಿರೆಂದು ಗೃಹಸ್ಥರಿಗೆ ಹೇಳಿದ್ದನ್ನು ನಾನು ನೋಡಿದೆ. ಆ ಪುರೋಹಿತರು ನನ್ನನ್ನು ಬಲ್ಲವರು. ಆದರೆ ಆ ಮದುವೆಯ ಸಂದರ್ಭದಲ್ಲಿ ನಾನು ಮಂಟಪದಲ್ಲಿದ್ದದ್ದನ್ನು ಅವರು ಕಂಡಿರಲಿಲ್ಲ. ಗೃಹಸ್ಥರು ಎರಡನೆಯ ಸಾರಿಯ ಫಲದಕ್ಷಿಣೆಗಳನ್ನು ತರುವ ಪ್ರಯತ್ನದಲ್ಲಿದ್ದಾಗ ಪುರೋಹಿತರ ದೃಷ್ಟಿ ನನ್ನ ಮೇಲೆ ಬಿತ್ತು. ಆಗ ಪುರೋಹಿತರು ನನ್ನ ಬಳಿ ಬಂದು ತಪ್ಪಾಯಿತೆಂದು ಅಂಗಲಾಚಿದರು. ಹೇಗೋ ಸಮಜಾಯಿಷಿ ಮಾಡಿದೆ. ಇದಕ್ಕೆ ಪ್ರತಿಯಾಗಿ ಒಬ್ಬಾನೊಬ್ಬ ಮನುಷ್ಯ ತನ್ನ ತಂದೆಯ ತದ್ದಿನ ಮಾಡಬೇಕಾಗಿದೆಯೆಂದೂ ತನಗೆ ಗತಿಯಿಲ್ಲವೆಂದೂ ನನ್ನ ಮತ್ತೊಬ್ಬ ವೈದಿಕ ಸ್ನೇಹಿತರಿಗೆ ಹೇಳಿಕೊಂಡಾಗ ಅವರು, "ಅಯ್ಯ, ಪವಿತ್ರಕರ್ತವ್ಯವನ್ನು ಬಿಡತಕ್ಕದ್ದಲ್ಲ. ನನ್ನ ಮನೆಗೆ ಬಾ. ನಾನೇ ಹುಗ್ಗಿಪಾಯಸ ಮಾಡಿಸಿ ಬ್ರಾಹ್ಮಣ ಭೋಜನ ಮಾಡಿಸುತ್ತೇನೆ" –ಎಂದು ಹೇಳಿ ಸ್ವಂತ ವೆಚ್ಚದಿಂದ ಕರ್ಮ ಮಾಡಿಸಿದರು. ಇಂಥಾದ್ದನ್ನೂ ಬಲ್ಲೆ. ಆದದ್ದರಿಂದ ವೈದಿಕಸಮಸ್ತರನ್ನೂ ನಾನು ಆಕ್ಷೇಪಣೆ ಮಾಡುವವನಲ್ಲ. ಅವರಲ್ಲಿ ಸದ್ಬ್ರಾಹ್ಮಣರೆಷ್ಟೋ ಮಂದಿ ಇದ್ದಾರೆ. ಇಂಥ ನೂರು ಮಂದಿಯಿಂದ ಆಗುವ ಪುಣ್ಯಪ್ರಭಾವವನ್ನು ಯಾರೋ ಐದು ಮಂದಿಯ ಅಪಕಾರ್ಯ ತೊಡೆದುಹಾಕಿಬಿಡುತ್ತದೆ. ವೈದಿಕರು ದಕ್ಷಿಣೆಯಲ್ಲಿ ಆತುರವುಳ್ಳವರೆಂಬ ಅಪವಾದದಿಂದ 'ಪ್ರೀಸ್ಟ್‌ಕ್ರ್ಯಾಫ್ಟ್' ಪುರೋಹಿತ ಕೈವಾಡ ಮೊದಲಾದ ಕೆಟ್ಟ

ಮಾತುಗಳು ಹುಟ್ಟಿವೆ. ಇಂಥ ಅಪವಾದವನ್ನು ತೊಲಗಿಸುವುದು ಶ್ರದ್ಧಾಳುಗಳ ಮೊದಲನೆಯ ಕೆಲಸ. ಅದಕ್ಕೆ ಸಹಾಯಕವಾಗಬೇಕಾದವರು ವೈದಿಕರು. ಅವರು ಮದುವೆ ಮುಂಜಿ ಮೊದಲಾದ ಸಂದರ್ಭಗಳಲ್ಲಿಯೂ ಇತರ ಕರ್ಮಪ್ರಸಕ್ತಿಯಲ್ಲಿಯೂ ಹಣದ ಅಂಶವನ್ನು ಕೂಡಿದ ಮಟ್ಟಿಗೂ ಕಡಮೆ ಮಾಡಬೇಕು. ಅವಶ್ಯವಾದ ಕರ್ಮ ನಡೆಯಲಿ, ಆದರೆ ವೆಚ್ಚ ಹೆಚ್ಚದಿರಲಿ.

8. ಇದಕ್ಕೆ ಅಂಟಿಕೊಂಡಂತೆ ಒಂದು ಕರ್ತವ್ಯವಿದೆ-ಲೌಕಿಕರಿಗೆ ಸಂಬಂಧಪಟ್ಟದ್ದು, ಲೌಕಿಕರು ದಾನ ದಕ್ಷಿಣೆಗಳನ್ನು ಕೊಡುವಾಗ ಮುಕ್ತಹಸ್ತರಾಗಿರಬೇಕು. ಘಂಟೆಗಿಷ್ಟು, ಅರ್ಧ ಘಂಟೆಗಿಷ್ಟು, ಎಂದು ಲೆಕ್ಕ ಮಾಡಬಾರದು. ತಮ್ಮ ಶಕ್ತಿಯಿದ್ದಷ್ಟು ಪೂರ್ತಿಯಾಗಿ, ಇನ್ನೂ ಹೇಳಬೇಕಾದರೆ, ಶಕ್ತಿಮೀರಿ, ಪುರೋಹಿತರಿಗೂ ವೈದಿಕರಿಗೂ ಔದಾರ್ಯ ತೋರಿಸಬೇಕು.

ಒಂದು ಪ್ರಸಂಗ

ರೈ ॥ ಆ ॥ ಶ್ರೀನಿವಾಸಶಾಸ್ತ್ರಿಗಳವರು ಒಂದು ಸಾರಿ ಬೆಂಗಳೂರಿನಲ್ಲಿದ್ದಾಗ ಅವರನ್ನು ಒಂದು ಮದುವೆಯ ಮನೆಗೆ ಭೋಜನಕ್ಕಾಗಿ ಕರೆದಿದ್ದರು. ಹಾಗೆ ಕರೆದಿದ್ದವರು ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರಾಗಿದ್ದ ಡಿ. ವೆಂಕಟರಾಮಯ್ಯನವರು. ವೆಂಕಟರಾಮಯ್ಯನವರಿಗೂ ಶ್ರೀನಿವಾಸಶಾಸ್ತ್ರಿಗಳಿಗೂ ಗಾಢವಾದ ಸ್ನೇಹ. ಇಬ್ಬರೂ ಮದರಾಸಿನಲ್ಲಿ ಎಲ್. ಡಿ. ಪರೀಕ್ಷೆಗಾಗಿ ಸಹಪಾಠಿಗಳಾಗಿದ್ದವರು. ಮೇಲೆ ಪ್ರಸ್ತಾವಿಸಿದ ದಿವಸ ಬಹು ಮಂದಿ ವಿದ್ಯಾವಂತರು ಅತಿಥಿಗಳಾಗಿ ಬಂದಿದ್ದರು. ಭೋಜನಾನಂತರ ತಾಂಬೂಲ ವಿತರಣೆಯ ಕಾಲದಲ್ಲಿ ಮಾತುಕಥೆ ನಡೆಯುತ್ತಿತ್ತು. ಈ ದಿವಸಕ್ಕೆ ಕೆಲವು ವಾರಗಳ ಹಿಂದೆ ಪಂಡಿತಮಂಡಳಿಯ ವಾರ್ಷಿಕ ಸಭೆ ಸೇರಿದ್ದಾಗ ಶಾಸ್ತ್ರಿಗಳು ಅಲ್ಲಿ ಉಪನ್ಯಾಸಮಾಡಿ ನಮ್ಮ ಪಂಡಿತವರ್ಗದ ಸಂಪ್ರದಾಯಶರಣತೆಯನ್ನು ಆಕ್ಷೇಪಿಸಿ ಅವರು ಸ್ವತಂತ್ರ ವಿಚಾರಿಗಳಾಗಬೇಕೆಂದು ಸೂಚನೆ ಮಾಡಿದ್ದರು. ಅವರದು ಒಟ್ಟಿನಲ್ಲಿ ಸಮಾಜ ಸುಧಾರಣೆಯ ಮನೋಭಾವ.

ಬಹುಶಃ ಈ ಸಂಗತಿಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದ ಒಬ್ಬಾನೊಬ್ಬ ಮಹನೀಯರು ಪುರೋಹಿತರನ್ನು ಕುರಿತು ಆಕ್ಷೇಪಣೆಯ ಮಾತನ್ನಾಡಿದರು. ಆಕ್ಷೇಪಣೆ ಮಾಡಿದ ದೊಡ್ಡ ಮನುಷ್ಯರು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಗೆದ್ದು ಮೇಲಧಿಕಾರ ಗಳಿಸಿದ್ದವರು. ಆಗ್ಗೆ ಅವರು ಸರಕಾರದ ಸೆಕ್ರೆಟರಿ ಪದವಿಗೆ ಬಂದಿದ್ದರು. ಅವರು ವೈದಿಕರನ್ನು ಕುರಿತು ಆಡಿದ ಮಾತಿಗೆ ಶಾಸ್ತ್ರಿಗಳು ಹೇಳಿದ್ದು ಹೀಗೆ:

"ಅಯ್ಯಾ, ನೀವು ಆಗಾಗ ಕ್ಷೌರ ಮಾಡಿಸಿಕೊಳ್ಳುತ್ತೀರಲ್ಲ-ಕ್ಷೌರಿಕನಿಗೆ ಏನು ಕೊಡುತ್ತೀರಿ?"

"ಕ್ಷೌರಕ್ಕೆ ನಾಲ್ಕಾಣೆ."

"ನಿಮ್ಮ ಮನೆಯಲ್ಲಿ ಪೂಜೆ ಮಾಡಿಸಲಿಕ್ಕಾಗಿ ಬರುವ ಪುರೋಹಿತರಿಗೆ ಏನು ಕೊಡುತ್ತೀರಿ?"

"ನಾಲ್ಕಾಣೆ."

"ಏನಯ್ಯ-ನಿಮ್ಮ ಮಾತಿನ ಅಸಾಮಂಜಸ್ಯ ನಿಮಗೆ ಹೊಳೆಯಲಿಲ್ಲವೆ? ನಿಮ್ಮಿಂದ ನಾಲ್ಕಾಣೆ ತೆಗೆದುಕೊಂಡು ಕ್ಷೌರಿಕ ಏನೂ ತಿಳಿಯದವನಾದರೂ ಒಪ್ಪಿಕೊಳ್ಳುತ್ತೀರಿ. ಅವನು

ಕೊಳಕನಾಗಿದ್ದರೂ ಒಪ್ಪಿಕೊಳ್ಳುತ್ತೀರಿ. ಅದೇ ನಾಲ್ಕಾಣೆ ತೆಗೆದುಕೊಳ್ಳುವವನು ಬ್ರಾಹ್ಮಣನಾದರೆ ಅವನಿಗೆ ಇದು ಬಾರದು, ಅದು ತಿಳಿಯದು, ಅವನು ಹಾಗಿದ್ದಾನೆ, ಹೀಗಿಲ್ಲ-ಎಂದು ಎನ್ನುತ್ತೀರಲ್ಲ? ಇದು ನ್ಯಾಯವೊ?

"ವೈದಿಕ ಬ್ರಾಹ್ಮಣನಿಗೆ ಮೊದಲು ಉಪಪತ್ತಿ ಉಂಟುಮಾಡಿ, ಅವನಿಗೆ ಹೊಟ್ಟೆಯ ತುಂಬ ಊಟ, ಮೈಮುಚ್ಚ ಬಟ್ಟೆ-ಇಷ್ಟನ್ನು ಕೊಡುವ ಯೋಚನೆ ಏನಾದರೂ ಮಾಡಿದ್ದೀರಾ? ಅಂಥ ಯೋಚನೆಯನ್ನು ಮನಸ್ಸಿಗೆ ತೆಗೆದುಕೊಳ್ಳುವುದಕ್ಕೆ ಮುಂಚೆ, ಅವನು ಶಾಸ್ತ್ರಪಾರಂಗತನಾಗಿರಬೇಕು, ಮಂತ್ರಾರ್ಥವನ್ನು ತಿಳಿದವನಾಗಿರಬೇಕು, ಕರ್ಮ ರಹಸ್ಯವನ್ನರಿತವನಾಗಿರಬೇಕು-ಎಂದೆಲ್ಲ ಹೇಳುವುದಕ್ಕೆ ನಿಮಗೆ ಬಾಯುಂಟೆ?

"ಹೋಗಲಿ. ನೀವು ತಿಳಿದುಕೊಂಡಿದ್ದೀರೋ ನಿಮ್ಮ ಮತತತ್ತ್ವಗಳನ್ನ? ಈಗ ದೇವರು ನಿಮಗೆ ಅನುಕೂಲ ಮಾಡಿದ್ದಾನೆ. ಒಳ್ಳೆಯ ಹುದ್ದೆಯಲ್ಲಿದ್ದೀರಿ. ಇಂಗ್ಲೀಷಿನಲ್ಲಿಯೂ ವಿಜ್ಞಾನದಲ್ಲಿಯೂ ಯೋಗ್ಯತೆ ಸಂಪಾದಿಸಿದ್ದೀರಿ. ಕೈ ತುಂಬ ಸಂಬಳ ಬರುತ್ತದೆ. ಹೀಗಿರುವಾಗ ನೀವು ಮತವಿಚಾರಕ್ಕೆ ಎಷ್ಟು ಕಾಲ ಕೊಟ್ಟಿದ್ದೀರಿ? ಅಯ್ಯಾ, ನೀವು ಕ್ಷೌರಕ್ಕೆ ಕೊಡುವಷ್ಟು ಕಾಲವನ್ನು ಮತವ್ಯಾಸಂಗಕ್ಕೆ ಕೊಡುತ್ತಿದ್ದೀರೊ? ವೈದಿಕರೇನೋ ಅರ್ಥಜ್ಞಾನವಿಲ್ಲದವರು; ನಿಮಗೆ ಅರ್ಥಜ್ಞಾನ ಸಂಪಾದಿಸಿಕೊಳ್ಳಲು ಈಗ ಅವಕಾಶವಿದೆಯಲ್ಲ? ಈ ಅವಕಾಶವನ್ನು ಹೇಗೆ ಉಪಯೋಗಪಡಿಸಿಕೊಳ್ಳುತ್ತಿದ್ದೀರಿ?"

ಈ ರೀತಿ ಹೊರಟಿತು ಶಾಸ್ತ್ರಿಗಳ ವಾಕ್ಪ್ರವಾಹ. ನಮ್ಮ ಸ್ನೇಹಿತರು ಸುಸ್ತುಬಿದ್ದು ಹೋದರು. ತಾಂಬೂಲ ಸಭೆ ಮುಗಿಯಿತು.

***

ಇದುವರೆಗೆ ವೈಯಕ್ತಿಕವಾದ ವರ್ತನೆಯನ್ನು ಕುರಿತು ಹೇಳಿದ್ದಾಯಿತು. ಸಾಮುದಾಯಿಕವಾಗಿ ಆಗಬೇಕಾದ ಕೆಲಸ ಮುಖ್ಯವಾದದ್ದಿದೆ. ಅದು ವಿಶೇಷವಾಗಿ ನಮ್ಮ ಮಠಾಧೀಶರುಗಳಿಂದ ಆಗಬೇಕಾದದ್ದು. ಪ್ರತಿಯೊಂದು ಮಠದವರೂ ವರ್ಷಕ್ಕೊಂದು ಸಾರಿ ಸಭೆ ಸೇರಿಸಿ ಸಂಭಾವನೆ ಕೊಡಬೇಕಾದದ್ದು-ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಸಹ. ಇದು ಬಹು ಮುಖ್ಯವಾದ ಕೆಲಸ. ಕಂಚಿ ಕಾಮಕೋಟಿ ಪೀಠದ ಗುರುಗಳವರು ಇಂಥ ಕಾರ್ಯವನ್ನು ಕೆಲ ವರ್ಷಗಳಿಂದ ಕ್ರಮವಾಗಿ ನಡಸಿಕೊಂಡು ಬರುತ್ತಿದ್ದಾರೆ. ಅಷ್ಟೇ ಅಲ್ಲದೆ ವೇದಾಧ್ಯಯನ ನಿರತರಾಗಿರುವವರಿಗೆ ಜೀವಿಕೆಗಾಗಿ ಒಂದು ನಿಧಿಯನ್ನು ಕೊಟ್ಟು ಅದರಿಂದ ಅವರು ಜಮೀನಿನ ರೂಪದಲ್ಲಿಯೋ ಬೇರೆ ರೀತಿಯಲ್ಲಿಯೋ ಆದಾಯ

ಸಂಪಾದನೆ ಮಾಡಿಕೊಂಡು ನಿರುಪಾಧಿಕ ಜೀವನದಿಂದ ವೇದಪ್ರಚಾರ ಮಾಡತಕ್ಕದ್ದೆಂದು ನಿಯಮ.

ಸರಕಾರದಿಂದ ವೇದವಿದ್ಯೆಯ ಬಗೆಗೆ ಸಹಾಯ ಪ್ರೋತ್ಸಾಹಗಳನ್ನು ನಿರೀಕ್ಷಿಸಬಾರದು. ಇಂದಿನ ಸರಕಾರಗಳು ರಾಜ ಮಹಾರಾಜರುಗಳ ಸರಕಾರಗಳಲ್ಲ. ಇಂದಿನ ಸರಕಾರಗಳಲ್ಲಿ ನಾನಾ ಜಾತಿಗಳ ಜನ ಸೇರಿಕೊಂಡಿರುತ್ತಾರೆ. ಅವರಲ್ಲಿ ವೇದಶ್ರದ್ಧೆಯಿಲ್ಲದವರು ಪ್ರಬಲರಾಗಿದ್ದಾರೆ. ಅಂಥ ಸರಕಾರಗಳಿಂದ ಸಹಾಯವನ್ನು ತೆಗೆದುಕೊಳ್ಳುವುದರಿಂದ ಅನ್ಯಮತೀಯರೂ ಸುಧಾರಣಾಕರ್ತರೂ ವೈದಿಕ ಮತವ್ಯವಸ್ಥೆ ಸಮಾಜ ವ್ಯವಸ್ಥೆಗಳಲ್ಲಿ ತಲೆ ಹಾಕಿಕೊಂಡು ಬರಲು ಅವಕಾಶವಾದೀತು.

ಪ್ರತಿಕೂಲ

ಹೀಗೆ ಒಟ್ಟಿನ ಮೇಲೆ ಸದ್ಯದ ಪರಿಸ್ಥಿತಿ ಬಹುಭಾಗದಲ್ಲಿ ಪ್ರತಿಕೂಲವಾಗಿದೆ. ಇನ್ನು ಮುಂದಿನ ದೇಶಪರಿಸ್ಥಿತಿಯಲ್ಲಿ ಜೀವನದ ಶುಚಿತೆಗೂ ಸರಳತೆಗೂ ಶಾಂತಿಗೂ ಅವಕಾಶ ಬರುಬರುತ್ತ ಇನ್ನೂ ಕಡಮೆಯಾಗುತ್ತದೆ. ಭಾರತ ಸಂಸ್ಕೃತಿ ಎಂಬ ಮಾತಿನ ಘೋಷಣೆಯೂ ಸಂಸ್ಕೃತಾಭಿವೃದ್ಧಿಗಾಗಿ ಎಂಬ ಕಟ್ಟಡಗಳ ನಿರ್ಮಾಣವೂ ಎಷ್ಟು ಅತಿಶಯವಾಗಿ ಸಾಗಿದರೂ ವೇದಶಾಸ್ತ್ರಗಳ ವಿಷಯದಲ್ಲಿ ಸರಕಾರದ ಸಹಾನುಭೂತಿ ಇದ್ದೀತೆಂದು ನಿರೀಕ್ಷಿಸುವುದು ಅಸಾಧ್ಯ ತೋರುತ್ತದೆ. ವೇದಶಾಸ್ತ್ರಗಳು ಸ್ವತಂತ್ರವಾಗಿ ಜನದ ನೈಜವಾದ ಭಕ್ತ್ಯುತ್ಸಾಹಗಳಿಂದ ಪೋಷಣೆ ಪಡೆದು ಬೆಳೆಯಬೇಕು. ಇದಕ್ಕೆ ದಾರಿಗಳನ್ನು ಭಾರತ ಸಂಸ್ಕೃತಿಯ ಅಭಿಮಾನಿಗಳೆಲ್ಲ ಪರ್ಯಾಲೋಚಿಸಬೇಕು.

ವೇದ ಶಾಸ್ತ್ರಗಳ ಹಿತಚಿಂತನೆಯು ಬ್ರಾಹ್ಮಣವರ್ಗಕ್ಕೆ ಮಾತ್ರ ಸಂಬಂಧಪಟ್ಟದ್ದೆಂದೂ ಅದು ಇತರ ವರ್ಣಗಳಿಗೆ ಬೇಕಾದದ್ದಲ್ಲವೆಂದೂ ಯಾರೂ ಭಾವಿಸತಕ್ಕದ್ದಲ್ಲ. ವೇದ ಶಾಸ್ತ್ರಗಳ ಸಂರಕ್ಷಣೆ ಸಮಸ್ತ ಹಿಂದೂ ಜನಾಂಗಕ್ಕೂ ಸೇರಿದ ಕರ್ತವ್ಯ. ವೈದಿಕ ಸಂಸ್ಕೃತಿಯು ಎಲ್ಲ ಹಿಂದೂ ವರ್ಣಗಳಿಗೂ ಏಕಪ್ರಕಾರವಾಗಿ ಸೇರಿರುವ ಸ್ವತ್ತು. ಹಿಂದೂ ಸಮಾಜಕ್ಕೇ ಏಕೆ, ಸಮಸ್ತ ದೇಶಗಳಿಗೂ ವೈದಿಕ ಸಂಸ್ಕೃತಿಯು ಅತ್ಯಂತ ಮೌಲ್ಯವುಳ್ಳ ಸಂಪತ್ತು. ವೈದಿಕ ಬ್ರಾಹ್ಮಣನೇನಿದ್ದರೂ ಈ ವಿಷಯದಲ್ಲಿ ಟ್ರಸ್ಟೀ-ನ್ಯಾಸಪಾಲಕನಂತೆ ಇರುತ್ತಾನೆ. ಅವನು ಇತರರ ಪ್ರಯೋಜನಕ್ಕಾಗಿ ತನ್ನ ವಿದ್ಯೆ ಸಂಪ್ರದಾಯಗಳನ್ನು ಕಾಪಾಡಿಕೊಂಡಿರಬೇಕಾದವನು. ಸಮಸ್ತ ಹಿಂದೂ ಸಮಾಜದ ಪ್ರಯೋಜನಕ್ಕೋಸ್ಕರ ನಾನಾ ಹಿಂದೂ ಜಾತಿಗಳ ಹಿತಾರ್ಥವಾಗಿ, ಸಮಸ್ತ ಲೋಕಹಿತಾರ್ಥವಾಗಿ ಆಗಬೇಕಾದದ್ದು ಬ್ರಾಹ್ಮಣಸಂರಕ್ಷಣೆ.

1 ಡಿ.ವಿ.ಜಿ. ಕೃತಿಶ್ರೇಣಿ-೬, ಪುಟ ೯೮-೧೦೩

2 ಡಿ.ವಿ.ಜಿ. ಕೃತಿಶ್ರೇಣಿ ೬, ಪುಟ ೯೮-೧೦೩

3 ಡಿ.ವಿ.ಜಿ. ಕೃತಿಶ್ರೇಣಿ-೬, ಪುಟ ೨೧೧

4 ಡಿ.ವಿ.ಜಿ. ಕೃತಿಶ್ರೇಣಿ: ೬, ಪುಟ ೧೦೨-೧೦೩

5 ಡಿ.ವಿ.ಜಿ. ಕೃತಿಶ್ರೇಣಿ: ೬, ಪುಟ ೭೪-೭೮.

6 ಅಧ್ಯಾಯ ೧೧, ಪುಟ ೩೧೦-೩೧೧

7 ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ-ಎಂ. ಎಸ್. ಪುಟ್ಟಣ್ಣನವರಿಂದ. (ಕಾವ್ಯಾಲಯ, ಮೈಸೂರು, ೧೯೫೨, ಪುಟ ೬೫)

8 ಪುಟ ೬೦.

9 ಪುಟ ೩೮.